
# ಇತಿಹಾಸ ಮತ್ತು ನಾಗರಿಕಶಾಸ್ತ್ರ



**ಆರನೆಯ ಇಯತ್ತೆ**











# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಮಂಜೂರಿ ಕ್ರಮಾಂಕ: ಮರಾಶೈಸಂಪ್ರಪ/ಅವಿವಿ/ಶಿಪ್ರ/೨೦೧೫-೧೬/೧೬೭೩ ದಿನಾಂಕ ೬.೪.೨೦೧೬

# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಆರನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

BRFP04

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ: ೨೦೧೬
ಪುನರ್ಮುದ್ರಣ:
ಅಕ್ಟೋಬರ ೨೦೨೧

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ ೪೧೧೦೦೪.
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಕಡೆಗೆ ಈ ಪುಸ್ತಕದ ಎಲ್ಲ ಹಕ್ಕುಗಳು ಇರುತ್ತವೆ. ಈ ಪುಸ್ತಕದಲ್ಲಿಯ ಯಾವುದೇ ಭಾಗವನ್ನು ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ:**
ಡಾ. ಸದಾನಂದ ಮೋರೆ, ಅಧ್ಯಕ್ಷ
ಶ್ರೀ. ಮೋಹನ ಶೇಟೆ, ಸದಸ್ಯ
ಶ್ರೀ. ಪಾಂಡುರಂಗ ಬಲಕವಡೆ, ಸದಸ್ಯ
ಅಡ್ವ. ವಿಕ್ರಮ ಎಡಕೆ, ಸದಸ್ಯ
ಡಾ. ಅಭಿರಾಮ ದೀಕ್ಷಿತ, ಸದಸ್ಯ
ಡಾ. ಬಾಪುಸಾಹೇಬ ಸಿಂದೆ, ಸದಸ್ಯ
ಶ್ರೀ. ಬಾಳಕೃಷ್ಣ ಚೋಪಡೆ, ಸದಸ್ಯ
ಶ್ರೀ. ಪ್ರಶಾಂತ ಸರೂಡಕರ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ,-ಸಚಿವ

**ನಾಗರಿಕ ಶಾಸ್ತ್ರ ವಿಷಯ ಸಮಿತಿ:**
ಡಾ. ಶ್ರೀಕಾಂತ ಪರಾಂಜಪೆ, ಅಧ್ಯಕ್ಷ
ಪ್ರಾ. ಸಾಧನಾ ಕುಲಕರ್ಣಿ, ಸದಸ್ಯ
ಡಾ. ಮೋಹನ ಕಾಶೀಕರ, ಸದಸ್ಯ
ಶ್ರೀ. ವೈಜನಾಥ ಕಾಳೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ-ಸಚಿವ

**ಇತಿಹಾಸ ಮತ್ತು ನಾಗರಿಕಶಾಸ್ತ್ರ ಅಭ್ಯಾಸಗಟ :**
ಶ್ರೀ. ರಾಹುಲ ಪ್ರಭು
ಶ್ರೀ ಸಂಜಯ ವಜ್ರೇಕರ
ಶ್ರೀ. ಸುಭಾಷ ರಾಠೋಡ
ಸೌ. ಸುನೀತಾ ದಳವಿ
ಡಾ. ಶಿವಾನಿ ಲಿಮಯೆ
ಶ್ರೀ. ಭಾವುಸಾಹೇಬ ಉಮಾಟೆ
ಡಾ. ನಾಗನಾಥ ಯೆವಲೆ
ಶ್ರೀ. ಸದಾನಂದ ಡೊಂಗರೆ
ಶ್ರೀ. ರವೀಂದ್ರ ಪಾಟೀಲ
ಶ್ರೀ. ವಿಕ್ರಮ ಅಡಸೂಳ
ಸೌ. ರೂಪಾಲಿ ಗಿರಕರ
ಸೌ. ಮೀನಾಕ್ಷಿ ಉಪಾಧ್ಯಾಯ
ಸೌ. ಕಾಂಚನ ಕೇತಕರ
ಸೌ. ಶಿವಕನ್ಯಾ ಪಟವೆ
ಡಾ. ಅನಿಲ ಸಿಂಗಾರೆ
ಡಾ. ರಾವಸಾಹೇಬ ಸೆಳಕೆ
ಶ್ರೀ. ಮರೀಬಾ ಚಂದನಶಿವೆ
ಶ್ರೀ. ಸಂತೋಷ ಸಿಂದೆ
ಡಾ. ಸತೀಶ ಚಾಪಲೆ
ಶ್ರೀ. ವಿಶಾಲ ಕುಲಕರ್ಣಿ
ಶ್ರೀ. ಶೇಖರ ಪಾಟೀಲ
ಶ್ರೀ. ಸಂಜಯ ಮೆಹತಾ
ಶ್ರೀ. ರಾಮದಾಸ ಠಾಕರ

**ಸಂಯೋಜಕ :**
**ಶ್ರೀ. ಮೊಗಲ ಜಾಧವ**
ವಿಶೇಷಾಧಿಕಾರಿ, ಇತಿಹಾಸ ಮತ್ತು ನಾಗರಿಕಶಾಸ್ತ್ರ
**ಶ್ರೀಮತಿ ವರ್ಷಾ ಸರೋದೆ**
ವಿಷಯ ಸಹಾಯಕ, ಇತಿಹಾಸ ಮತ್ತು ನಾಗರಿಕಶಾಸ್ತ್ರ
ಪಾಠ್ಯಪುಸ್ತಕ ಮಂಡಳ, ಪುಣೆ

**ಲೇಖಕರು :** ಡಾ. ಶುಭಾಂಗನಾ ಅತ್ರೆ, ಪ್ರಾ. ಸಾಧನಾ ಕುಲಕರ್ಣಿ
**ಮುಖಪುಟ ಮತ್ತು ಅಲಂಕಾರ :**
ಡಾ. ದಿಲೀಪ ಕದಮ, ಶ್ರೀ. ರವೀಂದ್ರ ಮೊಕಾಟೆ
**ನಕಾಶಕಾರ :** ಶ್ರೀ ರವಿಕಿರಣ ಜಾಧವ

**ಕನ್ನಡ ಸಂಯೋಜನ ಪ್ರಮುಖ :**
ಡಾ. ಸದಾನಂದ ಎಂ. ಬಿಳ್ಳೂರ,
ವಿಶೇಷಾಧಿಕಾರಿಗಳು ಕನ್ನಡ, ಪಾಠ್ಯಪುಸ್ತಕ ಮಂಡಳ, ಪುಣೆ
ಶ್ರೀ. ಆರ್.ಎಮ್. ಗಣಾಚಾರಿ- ವಿಷಯ ಸಹಾಯಕ, ಕನ್ನಡ
**ಭಾಷಾಂತರ :** ಶ್ರೀ. ಎನ್.ಎಮ್. ಕುಲಕರ್ಣಿ
**ಸಮೀಕ್ಷೆ :** ಶ್ರೀ. ಆರ್.ಎಸ್. ಪಾಟೀಲ

**ನಿರ್ಮಿತಿ :**
**ಶ್ರೀ. ಸಚ್ಚಿತಾನಂದ ಆಫಳೆ,**
ಮುಖ್ಯ ನಿರ್ಮಿತಿ ಅಧಿಕಾರಿ
**ಶ್ರೀ. ಪ್ರಭಾಕರ ಪರಬ,**
ನಿರ್ಮಿತಿ ಅಧಿಕಾರಿ
**ಶ್ರೀ. ಶಶಾಂಕ ಕಣಿಕದಳೆ**
ನಿರ್ಮಿತಿ ಸಹಾಯಕ

**ಅಕ್ಷರಜೋಡಣೆ :**
ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ
**ಕಾಗದ :**
೭೦ ಜಿ.ಎಸ್.ಎಮ್. ಕ್ರಿಮವೋವ್ಹ್
**ಮುದ್ರಣಾದೇಶ :**

**ಮುದ್ರಕ :**

**ಪ್ರಕಾಶಕ :**
**ಶ್ರೀ. ವಿವೇಕ ಉತ್ತಮ ಗೋಸಾವಿ,**
ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ-೨೫.

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

**‘ರಾಷ್ಟ್ರೀಯ ಅಭ್ಯಾಸಕ್ರಮ ರೂಪರೇಷೆ ೨೦೦೫’** ಮತ್ತು **‘ಬಾಲಕರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಅಧಿಕಾರ ಅಧಿನಿಯಮ ೧೦೦೯’** ಅನುಸಾರವಾಗಿ ಮಹಾರಾಷ್ಟ್ರದಲ್ಲಿ **‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ, ೨೦೧೨’**ನ್ನು ತಯಾರಿಸಲಾಯಿತು. ಈ ಸರಕಾರ ಮಾನ್ಯ ಅಭ್ಯಾಸಕ್ರಮವನ್ನು ೨೦೧೩-೨೦೧೪ನೇ ಶೈಕ್ಷಣಿಕ ವರ್ಷದಿಂದ ಕ್ರಮಶಃ ಜಾರಿಗೊಳಿಸಲಾಗಿದೆ. ಈ ಅಭ್ಯಾಸಕ್ರಮದಲ್ಲಿ ಮೂರನೆಯ ಇಯತ್ತೆಯಿಂದ ಐದನೆಯ ಇಯತ್ತೆಯ ವರೆಗೆ ಇತಿಹಾಸ ಮತ್ತು ನಾಗರಿಕಶಾಸ್ತ್ರ ವಿಷಯವನ್ನು ‘ಪರಿಸರ ಅಭ್ಯಾಸ’ ಭಾಗ-೧ ರಲ್ಲಿ ಹಾಗೂ ಪರಿಸರ ಅಭ್ಯಾಸ ಭಾಗ-೨ರಲ್ಲಿ ಸಮಾವೇಶ ಮಾಡಲಾಗಿದೆ. ಆರನೆಯ ಇಯತ್ತೆಯಿಂದ ಅಭ್ಯಾಸಕ್ರಮದಲ್ಲಿ ಇತಿಹಾಸ ಮತ್ತು ನಾಗರಿಕಶಾಸ್ತ್ರ ಒಂದು ಸ್ವತಂತ್ರ ವಿಷಯ ಇದೆ. ಈ ಮೊದಲು ಈ ವಿಷಯಗಳ ಸಲುವಾಗಿ ಎರಡು ಸ್ವತಂತ್ರ ಪಠ್ಯಪುಸ್ತಕಗಳಿದ್ದವು. ಈಗ ಆ ಎರಡೂ ವಿಷಯಗಳ ಸಮಾವೇಶವನ್ನು ಈ ದೊಡ್ಡ ಆಕಾರದ ಒಂದೇ ಪಠ್ಯಪುಸ್ತಕದಲ್ಲಿ ಮಾಡಲಾಗಿದೆ. ಈ ಪಠ್ಯಪುಸ್ತವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯು ಬಾಲಕೇಂದ್ರಿತ ಇರಬೇಕು, ಸ್ವಯಂ ಅಧ್ಯಯನದ ಮೇಲೆ ಒತ್ತು ಕೊಡಬೇಕು, ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯು ಆನಂದದಾಯಕ ಆಗಬೇಕು ಎಂಬ ವ್ಯಾಪಕ ದೃಷ್ಟಿಕೋನವನ್ನು ಎದುರಿಗಿಟ್ಟುಕೊಂಡು ಈ ಪುಸ್ತಕವನ್ನು ತಯಾರಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳು ನಿರ್ದಿಷ್ಟವಾಗಿ ಯಾವ ಕ್ಷಮತೆಗಳನ್ನು ಪ್ರಾಪ್ತಮಾಡಿಕೊಳ್ಳಬೇಕು ಎಂಬುದನ್ನು ಅಧ್ಯಯನ-ಅಧ್ಯಾಪನ ಮಾಡುವಾಗ ಸ್ಪಷ್ಟವಿರಬೇಕು. ಆದುದರಿಂದ ಈ ಪಠ್ಯಪುಸ್ತಕದಲ್ಲಿ ಇತಿಹಾಸ ಮತು ನಾಗರಿಕಶಾಸ್ತ್ರ ವಿಭಾಗಗಳ ಆರಂಭದಲ್ಲಿ ಆಯಾ ವಿಷಯದ ಅಪೇಕ್ಷಿತ ಕ್ಷಮತೆಗಳನ್ನು ನಮೂದಿಸಲಾಗಿದೆ. ಈ ಕ್ಷಮತೆಗಳ ಅನುಸಾರವಾಗಿ ಪಠ್ಯಪುಸ್ತಕದಲ್ಲಿಯ ಆಶಯವನ್ನು ನಾವಿಣ್ಯಪೂರ್ಣವಾಗಿ ಮಂಡನೆ ಮಾಡಲಾಗಿದೆ.

ಇತಿಹಾಸ ಭಾಗದಲ್ಲಿ ‘ಪ್ರಾಚೀನ ಭಾರತದ ಇತಿಹಾಸ’ವನ್ನು ಕೊಡಲಾಗಿದೆ. ಅದರಲ್ಲಿಂದ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳ ಬಗ್ಗೆ ಎಲ್ಲ ಮಾಹಿತಿ ಸಿಗಬೇಕು, ಅದರಂತೆ ಇದರ ಮುಖಾಂತರ ಅವರ ಸಾಮಾಜಿಕ ಏಕಾತ್ಮತೆ ಸಂಬಂಧದ ಅರಿವುಂಟಾಗಬೇಕು ಎಂಬ ಉದ್ದೇಶವಿದೆ. ಹರಪ್ಪಾ ಸಂಸ್ಕೃತಿಯ ಸಂಬಂಧ ಪ್ರಾಚೀನ ಭಾರತದ ಸಮೃದ್ಧಿಯಾಗುತ್ತದೆ. ಈ ವ್ಯಾಪಾರೀ ಸಂಬಂಧ ವಿಶ್ವಬಂಧುತ್ವ ಮತ್ತು ಅಂತರರಾಷ್ಟ್ರೀಯ ಸಾಮಂಜಸ್ಯಗಳಿಲ್ಲದೆ ಶಕ್ಯವಾಗಲಾರದು ಎಂಬುದರ ಮೇಲೆ ಒತ್ತು ಕೊಡಲಾಗಿದೆ.

ನಾಗರಿಕಶಾಸ್ತ್ರದ ಭಾಗದಲ್ಲಿ ‘ಸ್ಥಾನಿಕ ಆಡಳಿತ ಸಂಸ್ಥೆ’ ಈ ವಿಷಯದ ಬಗ್ಗೆ ಮಾಹಿತಿ ತೆಗೆದುಕೊಳ್ಳುವಾಗ ವಿಕಾಸದ ಯೋಜನೆಗಳಲ್ಲಿ ಸ್ಥಳೀಯ ಜನರ ಸಹಭಾಗ, ಮಹಿಳೆಯರ ಸಹಭಾಗದ ಮತ್ತು ಅವರ ಸಹಭಾಗದಿಂದ ಆದ ಬದಲಾವಣೆಯನ್ನು ತಪ್ಪದೇ ಉಲ್ಲೇಖ ಮಾಡಲಾಗಿದೆ. ನಮ್ಮ ದೇಶದಲ್ಲಿಯ ಆಡಳಿತ ಸಂವಿಧಾನ, ಕಾಯದೆ ಮತ್ತು ನಿಯಮಾನುಸಾರ ನಡೆಯುತ್ತದೆಯೋ ಅದನ್ನು ವಿದ್ಯಾರ್ಥಿಗಳಿಗೆ ಸುಲಭವಾದ ಭಾಷೆಯಲ್ಲಿ ಹೇಳಲಾಗಿದೆ. ಪಾಠಗಳಲ್ಲಿ ಚೌಕಟ್ಟಿನಲ್ಲಿ ಕೊಟ್ಟಿರುವ ಮಾಹಿತಿ ವಿದ್ಯಾರ್ಥಿಗಳ ಅಧ್ಯಯನ ಅಧಿಕ ಪರಿಣಾಮಕಾರಕವಾಗಬಲ್ಲುದು. ಶಿಕ್ಷಕರಿಗಾಗಿ ಬೇರೆ ಸೂಚನೆಗಳನ್ನು ಕೊಡಲಾಗಿದೆ. ಅಧ್ಯಾಪನ ಹೆಚ್ಚು ಹೆಚ್ಚು ಕೃತಿ ಪ್ರಧಾನವಾಗಬೇಕೆಂದು ಉಪಕ್ರಮಗಳನ್ನು ಕೊಡಲಾಗಿದೆ.

ಈ ಪಠ್ಯಪುಸ್ತಕವು ನಿರ್ದೋಷ ಮತ್ತು ಉತ್ತಮ ಗುಣಮಟ್ಟದ್ದಾಗಬೇಕೆಂಬ ದೃಷ್ಟಿಯಿಂದ ಮಹಾರಾಷ್ಟ್ರದ ಎಲ್ಲ ಭಾಗಗಳಿಂದ ಆಯ್ದ ಶಿಕ್ಷಕರು, ಅದರಂತೆ ಕೆಲವು ಶಿಕ್ಷಣ ತಜ್ಞರು, ವಿಷಯ ತಜ್ಞರು ಇವರಿಂದ ಈ ಪುಸ್ತಕದ ಸಮೀಕ್ಷಣೆಯನ್ನು ಮಾಡಿಸಲಾಗಿದೆ. ಬಂದ ಎಲ್ಲ ಸೂಚನೆ ಮತ್ತು ಅಭಿಪ್ರಾಯಗಳನ್ನು ಕಾಳಜಿಪೂರ್ವಕವಾಗಿ ವಿಚಾರಮಾಡಿ ಈ ಪುಸ್ತಕಕ್ಕೆ ಅಂತಿಮ ಸ್ವರೂಪ ಕೊಡಲಾಗಿದೆ. ಮಂಡಳದ ಇತಿಹಾಸ ವಿಷಯ ಸಮಿತಿ ಮತ್ತು ನಾಗರಿಕಶಾಸ್ತ್ರ ವಿಷಯ ಸಮಿತಿ, ಅಭ್ಯಾಸಗಟದ ಸದಸ್ಯರು, ಲೇಖಕರು ಮತ್ತು ಚಿತ್ರಕಾರರು ಇವರು ಬಹಳ ಆಸಕ್ತಿ ಮತ್ತು ಶ್ರದ್ಧೆಯಿಂದ ಈ ಪುಸ್ತಕವನ್ನು ತಯಾರಿಸಿದ್ದಾರೆ. ಮಂಡಳವು ಇವರೆಲ್ಲರಿಗೂ ಮನಃಪೂರ್ವಕ ಆಭಾರಿಯಾಗಿದೆ.

ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರು ಎಂಬ ಭಾವನೆ ನಮಗಿದೆ.



(ಡಾ. ಸುನಿಲ ಮಗರ)

ಸಂಚಾಲಕ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

ಪುಣೆ

ದಿನಾಂಕ: ೯ ಮೇ ೨೦೧೬, ಅಕ್ಷಯತೃತೀಯಾ

ಭಾರತೀಯ ಸೌರ: ೧೯ ವೈಶಾಖ ೧೯೩೮

## – ಶಿಕ್ಷಕರಿಗಾಗಿ –

- ಪ್ರಾಚೀನ ಭಾರತದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ಕಲಿಸುವುದರ ಉದ್ದೇಶವೇನೆಂದರೆ ವಿದ್ಯಾರ್ಥಿಗಳು ತಮ್ಮ ಸಂಸ್ಕೃತಿ ಮತ್ತು ಪರಂಪರೆಗಳ ಸಂಪೂರ್ಣ ಮಾಹಿತಿ ದೊರೆಯಬೇಕು ಹಾಗೂ ಅದರ ಮೂಲಕ ಅವರಲ್ಲಿ ಸಾಮಾಜಿಕ ಮತ್ತು ರಾಷ್ಟ್ರೀಯ ಏಕಾತ್ಮತೆಯ ಬಗೆಗಿನ ಅರಿವು ಬೆಳೆಯಬೇಕು. ಶಿಕ್ಷಕರು ಪ್ರಾಚೀನ ಭಾರತದ ಇತಿಹಾಸ ಈ ವಿಷಯವನ್ನು ಕಲಿಸುವಾಗ ಈ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಲಿಸುವ ಪದ್ಧತಿಯ ಯೋಜನೆ ತಯಾರಿಸಬೇಕು.
- ನಿತ್ಯದ ಜೀವನದಲ್ಲಿ ಅವರ ಅನುಭವಕ್ಕೆ ಬರುವ ಅನೇಕ ಸಾಂಸ್ಕೃತಿಕ ರೂಢಿ-ಪರಂಪರೆಗಳ ವಿಷಯವಾಗಿ ವಿದ್ಯಾರ್ಥಿಗಳ ಮನದಲ್ಲಿ ಅನೇಕ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳು ಯಾವವು ಎಂಬುದನ್ನು ಸ್ವಾನುಭವದ ಆಧಾರರಿಂದ ಶಿಕ್ಷಕರಿಗೆ ಗೊತ್ತಿರುವುದು ಅಪೇಕ್ಷಿತವಾಗಿದೆ. ಇಂಥ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ನಿರ್ಭಯವಾಗಿ ಕೇಳಬೇಕು. ಈ ದೃಷ್ಟಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.
- ನಮ್ಮ ಸಾಂಸ್ಕೃತಿಕ ಉತ್ತರದಾಯಿತ್ವದ ಅರಿವು ಪ್ರಾಚೀನ ಭಾರತದ ಇತಿಹಾಸದ ಅಭ್ಯಾಸದಿಂದ ನಿರ್ಮಾಣವಾಗುವ ಸಲುವಾಗಿ ವಿವಿಧ ಪ್ರಕಾರದ ಪ್ರಾಚೀನ ವಸ್ತು, ನಾಣ್ಯಗಳು, ಪ್ರಾಚೀನ ವಾಸ್ತುಶಿಲ್ಪದ ಮಾದರಿ ಇತ್ಯಾದಿಗಳನ್ನು ಕುರಿತು ಅಧಿಕಾಧಿಕ ಮಾಹಿತಿಯನ್ನು ಪಡೆಯುವ ಸಾಧನಗಳಾವವು ? ಇದರ ಮಾರ್ಗದರ್ಶನವನ್ನು ವಿದ್ಯಾರ್ಥಿಗಳಿಗೆ ಮಾಡಬೇಕು. ಪಠ್ಯಪುಸ್ತಕದಲ್ಲಿಯ ಮಾಹಿತಿಯಲ್ಲದೆ ಅಧಿಕ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಅವರಿಗೆ ಪ್ರೋತ್ಸಾಹ ನೀಡಬೇಕು.
- ಹರಪ್ಪಾ ಸಂಸ್ಕೃತಿಯ ಕಾಲದಿಂದಲೇ ದೂರದ ದೇಶಗಳೊಡನೆ ಸ್ಥಾಪಿತವಾದ ಭಾರತದ ವ್ಯಾಪಾರಿ ಸಂಬಂಧವು ಪ್ರಾಚೀನ ಭಾರತದ ಸಮೃದ್ಧಿಗೆ ಕಾರಣವಾಗಿತ್ತು ಎಂಬುದನ್ನು ಗಮನಿಸಿ ಅಂತರರಾಷ್ಟ್ರೀಯ ವ್ಯಾಪಾರದ ಸ್ವರೂಪವನ್ನು ವಿದ್ಯಾರ್ಥಿಗಳಿಗೆ ಸ್ವಲ್ಪದರಲ್ಲಿ ತಿಳಿಸಿ ಹೇಳಬೇಕು. ಇಂಥ ವ್ಯಾಪಾರವು ವಿಶ್ವಬಂಧುತ್ವ ಮತ್ತು ಅಂತರರಾಷ್ಟ್ರೀಯ ಸಾಮಂಜಸ್ಯಗಳಿಲ್ಲದೆ ಸಾಧ್ಯವಾಗುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದುಕೊಡಬೇಕು.
- ರಾಮಾಯಣ ಮತ್ತು ಮಹಾಭಾರತ ಈ ಮಹಾಕಾವ್ಯಗಳನ್ನು ಆಗ್ನೇಯ ಏಷ್ಯದಲ್ಲಿಯ ಇಂಡೋನೇಶಿಯಾ ಮತ್ತು ಕಾಂಬೋಡಿಯಾ ದೇಶಗಳಲ್ಲಿ ನೃತ್ಯನಾಟಕದ ರೂಪದಲ್ಲಿ ಸಾದರಪಡಿಸುವ ಪರಂಪರೆ ಇನ್ನೂವರೆಗೆ ಉಳಿದುಕೊಂಡು ಬಂದಿದೆ. ಅಲ್ಲಿಯ ಪ್ರಾಚೀನ ಶಿಲ್ಪಗಳಲ್ಲಿಯೂ ಅವುಗಳಲ್ಲಿಯ ಕಥೆಗಳ ಸಮಾವೇಶವಾದುದು ಕಂಡುಬರುತ್ತದೆ. ಆ ವಿಷಯದ ಹೆಚ್ಚಿನ ಮಾಹಿತಿಯನ್ನು ದೊರಕಿಸಿ ಅದನ್ನು ವರ್ಗದಲ್ಲಿ ಸಾದರಪಡಿಸಬಹುದು. ಅದಕ್ಕಾಗಿ ವಿದ್ಯಾರ್ಥಿಗಳಿಗೆ ಪ್ರೊಜೆಕ್ಟ್ ಕೊಡಬೇಕು.
- ನಾಗರಿಕಶಾಸ್ತ್ರ ವಿಷಯವನ್ನು ಆರಂಭಿಸುವ ಮೊದಲು ನಮ್ಮ ದೇಶದಲ್ಲಿಯ ಸರಕಾರದ ರಚನೆಯನ್ನು ಸ್ಪಷ್ಟ ವಾಗಿಸಬೇಕು. ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಸ್ಥಾನಿಕ ಸರಕಾರ ಸಂಸ್ಥೆ ಇವುಗಳ ಸ್ವರೂಪವನ್ನು ಸ್ವಲ್ಪದರಲ್ಲಿ ಸ್ಪಷ್ಟವಾಗಿಸಬೇಕು.
- ಸ್ಥಾನಿಕ ಆಡಳಿತದ ವಿಷಯದಲ್ಲಿ ರಾಜ್ಯ ಸರಕಾರದ ಸ್ವಾತಂತ್ರ ಕಾಯ್ದೆಗಳಿವೆ. ವಿದ್ಯಾರ್ಥಿಗಳಿಗೆ ಆ ಕಾಯ್ದೆಗಳ ವಿಸ್ತೃತ ಮಾಹಿತಿಯನ್ನು ಕೊಡುವ ಅಪೇಕ್ಷೆಯಿಲ್ಲ, ಆದರೆ ನಮ್ಮ ದೇಶದಲ್ಲಿಯ ಆಡಳಿತವು ಸಂವಿಧಾನ ಕಾಯ್ದೆ ಮತ್ತು ನಿಯಮಗಳಿಗನುಸಾರವಾಗಿ ನಡೆಯುತ್ತದೆ ಎಂಬುದನ್ನು ನಿಶ್ಚಿಂತವಾಗಿ ಹೇಳಬೇಕು. ಕಾಯ್ದೆಯ ರಾಜ್ಯ ಇರುವುದರ ಲಾಭಗಳನ್ನು ಅವರಿಗೆ ಬೇರೆ ಬೇರೆ ಉದಾಹರಣೆಗಳಿಂದ ತೋರಿಸಿ ಕೊಡಬೇಕು.
- ಎಪ್ಪತ್ತೂರನೆಯ ಮತ್ತು ಎಪ್ಪತ್ನಾಲ್ಕನೆಯ ಸಂವಿಧಾನ ವಿದುದ್ದಡಿ ಇಲ್ಲಿ ಸ್ವಲ್ಪ ಉಲ್ಲೆಖವಿದೆ. ಈ ಸಂವಿಧಾನ ತಿದುದ್ದಡಿಯಿಂದಾಗಿ ಸ್ಥಳಿಯ ಆಡಳಿತ ಸಂಸ್ಥೆಯು ಸಬಲೀಕರಣವಾಗಿದೆ ಎಂಬ ಅಂಶ ಲಕ್ಷ್ಯದಲ್ಲಿಟ್ಟುಕೊಂಡು ಸ್ಥಳಿಯ ಆಡಳಿತ ಸಂಸ್ಥೆಯಲ್ಲಿ ಆದಂಥ ಬದಲಾವಣೆಯನ್ನು ವಿದ್ಯಾರ್ಥಿಗಳಿಗೆ ಹೇಳಬೇಕು.
- ಸ್ಥಳಿಯ ಆಡಳಿತ ಸಂಸ್ಥೆಯಲ್ಲಿಯ ಮಹಿಳೆಯರ ಸಹಭಾಗದ ಮತ್ತು ಅವರ ಸಹಭಾಗದಿಂದ ಆದ ಬದಲಾವಣೆಯನ್ನು ತಪ್ಪದೆ ಉಲ್ಲೇಖ ಮಾಡಬೇಕು.
- ಬ್ರಿಟಿಷ ಆಡಳಿತದಲ್ಲಿ 'ಸ್ಥಳಿಯ ಸ್ವರಾಜ್ಯ ಸಂಸ್ಥೆ' ಹೀಗೆ ಸ್ಥಳಿಯ ಆಡಳಿತಕ್ಕೆ ಕರೆಯಲಾಗಿದೆ. ಸ್ವಾತಂತ್ರ್ಯಾನಂತರ ಎಲ್ಲ ಹಂತಗಳಲ್ಲಿ ಸ್ವರಾಜ್ಯವಿರುದ್ದರಿಂದ ಈಗ 'ಸ್ಥಳೀಯ ಆಡಳಿತ ಸಂಸ್ಥೆ' ಎಂದು ಕರೆಯವಾಗುತ್ತದೆ.

# ಪ್ರಾಚೀನ ಭಾರತದ ಇತಿಹಾಸ

## ಅನುಕ್ರಮಣಿಕೆ


| ಪಾಠದ ಹೆಸರು | ಪುಟ ಸಂಖ್ಯೆ |
|---|---|
| ೧. ಭಾರತೀಯ ಉಪಖಂಡ ಮತ್ತು ಇತಿಹಾಸ | ೧ |
| ೨. ಇತಿಹಾಸದ ಸಾಧನಗಳು | ೬ |
| ೩. ಹರಪ್ಪಾ ಸಂಸ್ಕೃತಿ | ೧೦ |
| ೪. ವೈದಿಕ ಸಂಸ್ಕೃತಿ | ೧೫ |
| ೫. ಪ್ರಾಚೀನ ಭಾರತದಲ್ಲಿಯ ಧಾರ್ಮಿಕ ಪ್ರವಾಹ | ೨೦ |
| ೬. ಜನಪದಗಳು ಮತ್ತು ಮಹಾಜನಪದಗಳು | ೨೬ |
| ೭. ಮೌರ್ಯಕಾಲದ ಭಾರತ | ೩೦ |
| ೮. ಮೌರ್ಯ ಸಾಮ್ರಾಜ್ಯದ ನಂತರದ ರಾಜ್ಯಗಳು | ೩೬ |
| ೯. ದಕ್ಷಿಣ ಭಾರತದಲ್ಲಿಯ ಪ್ರಾಚೀನ ರಾಜ್ಯಗಳು | ೪೨ |
| ೧೦. ಪ್ರಾಚೀನ ಭಾರತ : ಸಾಂಸ್ಕೃತಿಕ | ೪೮ |
| ೧೧. ಪ್ರಾಚೀನ ಭಾರತ ಮತ್ತು ಜಗತ್ತು | ೫೪ |



S.O.I. Note : The following foot notes are applicable : (1) © Government of India, Copyright : 2016. (2) The responsibility for the correctness of internal details rests with the publisher. (3) The territorial waters of India extend into the sea to a distance of twelve nautical miles measured from the appropriate base line. (4) The administrative headquarters of Chandigarh, Haryana and Punjab are at Chandigarh. (5) The interstate boundaries amongst Arunachal Pradesh, Assam and Meghalaya shown on this map are as interpreted from the "North-Eastern Areas (Reorganisation) Act. 1971," but have yet to be (6) The external boundaries and coastlines of India agree with the Record/Master Copy by Survey of India. (7) The state boundaries between Uttarakhand & Uttar Pradesh, Bihar & Jharkhand and Chattisgarh & Madhya Pradesh have not been by the Governments concerned. (8) The spellings of names in this map, have been taken from various sources.

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
| --- | --- |
| **ಅಧ್ಯಯನಾರ್ಥಕ್ಕೆ ಜೋತೆಗೂಡಿ/ಗುಂಪಿನಲ್ಲಿ ವೈಯಕ್ತಿಕ ರೀತಿಯಲ್ಲಿ ಸಂಧಿ ಕೊಡಿ ಹಾಗೂ ಮುಂದಿನ ವಿಷಯಕ್ಕೆ ಪ್ರವರ್ತರನ್ನಾಗಿಸಿ.**<br>• ಇತಿಹಾಸದ ಘಟನೆ ಮತ್ತು ಭೌಗೋಲಿಕ ವೈಶಿಷ್ಟ್ಯ ಈ ವಿಷಯವಾಗಿ ಮಾಹಿತಿ ಮಾಡಿಕೊಳ್ಳಿ.<br>• ಚಿತ್ರಗಳು, ವಿವಿಧ ಪ್ರಕಾರದ ಇತಿಹಾಸದ ಸಾಧನಗಳ ಚಿತ್ರಗಳನ್ನು ಇವುಗಳ ವಾಚನ, ವಿಶ್ಲೇಷಣೆ: ಅವುಗಳ ಮೇಲೆ ಚರ್ಚೆಗೈದು ಇತಿಹಾಸ ತಜ್ಞರು ಭಾರತದ ಪ್ರಾಚೀನ ಇತಿಹಾಸದ ಪುನರ್ ನಿರ್ಮಾಣ ಯಾವ ಪ್ರಕಾರ ಮಾಡಿರಬೇಕು ಎಂಬುದಕ್ಕೆ ಅರ್ಥ ಹಚ್ಚಬೇಕು.<br>• ನಕಾಶೆಯ ವಿಷಯವಾಗಿ ಕೃತಿ: ಮಹತ್ವದ ಸ್ಥಾನಗಳ ಶೋಧನೆ; ಭೇಟಿ ಹಾಗೂ ಆಹಾರ ಸಂಗ್ರಹಿಸುವ ಸ್ಥಾನಗಳು, ಆಹಾರ ಉತ್ಪಾದಕ, ಹರಪ್ಪ ಸಂಸ್ಕೃತಿ, ಜನಪದ, ಸಾಮ್ರಾಜ್ಯ, ಬುದ್ಧ ಮತ್ತು ಮಹಾವೀರ ಇವರ ಜೀವನದಲ್ಲಿ ಗತಿಸಿದ ಘಟನೆಗಳ ಸಂಬಂಧಿತ ಸ್ಥಳಗಳು, ಭಾರತದ ಹೊರಗೆ. ಕಲೆ ಮತ್ತು ಸ್ಥಾಪತ್ಯ ಶಾಸ್ತ್ರೀಯ ಕೇಂದ್ರಗಳು ಮತ್ತು ಅವುಗಳ ಭಾರತದೊಂದಿಗಿನ ಸಂಬಂಧ.<br>• ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಶಿಲ್ಪಕಲೆ, ಅಥವಾ ಕಾಳಿದಾಸನ ಮಹತ್ವದ ಸಾಹಿತ್ಯ ಇವುಗಳ ಶೋಧ ಪಡೆಯುವುದು.<br>• ಚರ್ಚೆ ಮಾಡಿರಿ. ಭೌದ್ಧ ಹಾಗೂ ಜೈನ ಧರ್ಮಗಳಲ್ಲಿನ ತತ್ವಗಳ ಹಾಗೂ ಇತರ ವಿಚಾರ ಪ್ರವಾಹಗಳು, ಇವುಗಳ- ಮೂಲಭೂತ ಸಂಕಲ್ಪನೆ ಹಾಗೂ ಮಧ್ಯವರ್ತಿ ಮೌಲ್ಯ ಇವುಗಳ ನೀತಿ (ಕಲಿಕೆ) ಇಂದಿನ ಕಾಲಕ್ಕೆ ಸಮರ್ಪಕತೆ: ಪ್ರಾಚೀನ ಭಾರತದಲ್ಲಿಯ ಕಲೆ ಮತ್ತು ಸ್ಥಾಪತ್ಯ ಕಲೆಯ ಅಭ್ಯಾಸ, ಭಾರತದ ಸಂಸ್ಕೃತಿ ಮತ್ತು ವಿಜ್ಞಾನ ಕ್ಷೇತ್ರದಲ್ಲಿಯ ಯೋಗದಾನ.<br>• ಹಿನ್ನಲೆಯ ಪಾಲನೆ: ಅನೇಕ ಐತಿಹಾಸಿಕ ಮಧ್ಯವರ್ತಿ ಕಲ್ಪನೆಗಳ ಮೇಲೆ ಆಧಾರಿತ ಉದಾ- ಕಳಿಂಗ ಯುದ್ಧ ನಂತರ ಸಮ್ರಾಟ ಅಶೋಕನ ನಡುವೇ ಆದಂತಹ ಬದಲಾವಣೆ. ಆ ಕಾಲದಲ್ಲಿಯ ಲಿಖಿತ ಸಾಧನಗಳ ಮಧ್ಯೆ ಅಂತರಭೂತ ಯಾವುದಾದರೊಂದು ವಿಷಯವನ್ನು ಆಧರಿಸಿ.<br>• ಪ್ರಕಲ್ಪ ಪದ್ಧತಿ: ರಾಜ್ಯಗಳ ಉತ್ಕ್ರಾಂತಿ ಸಮೂಹ ಮತ್ತು ಸಂಘಗಳೂ ಇವುಗಳ ಕಾರ್ಯ ಪದ್ಧತಿ ವಿವಿಧ ರಾಜ್ಯಗಳ ರಾಜ್ಯಮನೆತನ ಯೋಗದಾನ, ಭಾರತದಲ್ಲಿ ಹೊರಗಿನ ದೇಶಗಳ ಕ್ಷೇತ್ರದೊಂದಿಗಿನ ಸಂಪರ್ಕ ಹಾಗೂ ಈ ಸಂಪರ್ಕದಲ್ಲಾದ ವಿಶೇಷ ಪರಿಣಾಮ. ಈ ಪ್ರಕಲ್ಪಗಳ ಆಧಾರಿತ ವರ್ಗ ಚರ್ಚೆ.<br>• ವಸ್ತುಸಂಗ್ರಹಾಲಯಕ್ಕೆ ಭೇಟಿ: ಮಾನವೀ ವಸಾಹತುಗಳ ಭೌತಿಕ ಅವಶೇಷ ನೋಡುವುದಕ್ಕಾಗಿ- ಹರಪ್ಪ ಕಾಲಿನ, ಅವರ ಸಾಂಸ್ಕೃತಿಕದಲ್ಲಿಯ ಸಾತತ್ಯ ಮತ್ತು ಪರಿವರ್ತನೆ ಈ ವಿಷಯ ಕುರಿತು. ಚರ್ಚೆ ಮಾಡಿರಿ. | **ಅಧ್ಯಯನಾರ್ಥಿಗಳು**<br>06.73H.01 ಇತಿಹಾಸ ಮತ್ತು ಭೂಗೋಲ ಸಹ-ಸಂಬಂಧ ಗುರುತಿಸುವರು.<br>06.73H.02 ಇತಿಹಾಸದ ವಿವಿಧ ಸಾಧನಗಳನ್ನು ಗುರುತಿಸುತ್ತಾನೆ ಮತ್ತು ಅವರ ಈ ಕಾಲದಲ್ಲಿಯ ಇತಿಹಾಸದ ಪುನರ್ ಲೇಖನಕ್ಕಾಗಿ ಉಪಯೋಗ ಸ್ಪಷ್ಟ ಮಾಡುವರು.<br>06.73H.03 ಭಾರತದ ನಕಾಶೆಯ ಮೇಲೆ ಮಹತ್ವದ ಐತಿಹಾಸಿಕ ಸ್ಥಳಗಳ ಸ್ಥಾನ ದರ್ಶಿಸುವರು.<br>06.73H.04 ಮಹತ್ವದ ರಾಜ್ಯಗಳು, ರಾಜ್ಯಮನೆತನಗಳು ಲಕ್ಷಣೀಯ ಯೋಗದಾನ ಸ್ಪಷ್ಟ ಮಾಡುವರು. ಉದಾ- ಅಶೋಕನ ಶಿಲಾಲೇಖ, ಗುಪ್ತರ ಕಾಲಿನ ನಾಣ್ಯ: ಪಲ್ಲವರ ರಥ ಮಂದಿರಗಳು ಇತ್ಯಾದಿ.<br>06.73H.05 ಪ್ರಾಚೀನ ಕಾಲದಲ್ಲಿಯ ವ್ಯಾಪಕ ಘಟನೆಗಳನ್ನು ಸ್ಪಷ್ಟ ಪಡಿಸುವರು. ಬೇಟೆ ಹಾಗೂ ಆಹಾರ ಸಂಗ್ರಹಣೆಗಾಗಿ ಹಂತ ಹಂತವಾಗಿ ಕೃಷಿಯ ಪ್ರಾರಂಭ ಸಿಂಧೂ ಸಂಸ್ಕೃತಿಯಲ್ಲಿಯ ಮೊದಲ ಅಕ್ಷರಗಳು ಇತ್ಯಾದಿ ಒಂದೇ ಸ್ಥಳದಲ್ಲಿಯ ಘಟನೆಯ ಎರಡನೆಯ ಸ್ಥಳಗಗಳೊಗಿನ ಸಂಬಂಧ ಹೋಲಿಸುವರು.<br>06.73H.06 ಆ ಕಾಲಿನ ಲಿಖಿತ ಸಾಧನಗಳ ನಮೂದಿಸಿದ ಬಗ್ಗೆ ಘಟನೆ, ವ್ಯಕ್ತಿ ಇವುಗಳ ವರ್ಣನೆ ಮಾಡುವರು.<br>06.73H.07 ಭಾರತದ ಹೊರಗಿನ ಕ್ಷೇತ್ರದೊಂದಿಗೆ ಬಂದಿರುವಂತಹ ಸಂಪರ್ಕ ಧರ್ಮ, ಕಲೆ, ಸ್ಥಾಪತ್ಯಕಲೆ ಇತ್ಯಾದಿ ಕ್ಷೇತ್ರದ ಮೇಲೆ ಆದಂತಹ ಪರಿಣಾಮ ಸ್ಪಷ್ಟ ಮಾಡುವರು.<br>06.73H.08 ಭಾರತದ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿಯ ಯೋಗದಾನ ಸ್ಪಷ್ಟ ಪಡಿಸುವರು. ಉದಾ- ಖಗೋಲಶಾಸ್ತ್ರ, ವೈದ್ಯಕೀಯಶಾಸ್ತ್ರ ಗಣಿತ, ಲೋಹಶಾಸ್ತ್ರ ಇತ್ಯಾದಿ.<br>06.73H.09 ವಿವಿಧ ಐತಿಹಾಸಿಕ ಘಟನೆಗಳ ಸಂಬಂಧದ ಮಾಹಿತಿಯನ್ನು ಸಂಶ್ಲೇಷಣೆ ಮಾಡುವರು.<br>06.73H.10 ಪ್ರಾಚೀನ ಕಾಲದಲ್ಲಿಯ ವಿವಿಧ ಧರ್ಮ ಮತ್ತು ವಿಚಾರ ಪದ್ಧತಿ ಇವುಗಳ ಮೂಲಭೂತ ತತ್ವಗಳು ಮತ್ತು ಮೌಲ್ಯ ಇವುಗಳ ವಿಶ್ಲೇಷಣೆ ಮಾಡುವರು.<br>06.73H.11 ಮಾನವತೆ ಮತ್ತು ಧರ್ಮ ನಿರಪೇಕ್ಷತೆ ಇವುಗಳ ಸರ್ವಶ್ರೇಷ್ಠ ವಿಚಾರ ಇದನ್ನು ಸ್ಪಷ್ಟ ಪಡಿಸುತ್ತಾರೆ.<br>06.73H.12 ವೈಚಾರಿಕ ಹಾಗೂ ಸಾಂಸ್ಕೃತಿಕ ವಿಚಾರ ವಿನಿಮಯ ಮಾನವನ ಜ್ಞಾನ ಅಧಿಕ ಸಮೃದ್ಧವಾದುದನ್ನು ಅರಿತುಕೊಳ್ಳವರು. |

# ೧. ಭಾರತೀಯ ಉಪಖಂಡ ಮತ್ತು ಇತಿಹಾಸ

೧.೧ ಇತಿಹಾಸದ ರಚನೆ ಮತ್ತು ಭೌಗೋಲಿಕ ವೈಶಿಷ್ಟ್ಯಗಳು
೧.೨ ಭಾರತದ ಭೌಗೋಲಿಕ ವೈಶಿಷ್ಟ್ಯಗಳು
೧.೩ ಭಾರತೀಯ ಉಪಖಂಡ

## ೧.೧ ಇತಿಹಾಸದ ರಚನೆ ಮತ್ತು ಭೌಗೋಲಿಕ ವೈಶಿಷ್ಟ್ಯಗಳು

ಐದನೆಯ ಇಯತ್ತೆಯಲ್ಲಿ ನಾವು ಮಾನವ ಮತ್ತು ಅವನ ಸುತ್ತಲಿನ ಪರಿಸರ ಇವುಗಳಲ್ಲಿ ಹೇಗೆ ಪರಸ್ಪರ ನಿಕಟ ಸಂಬಂಧವಿರುತ್ತದೆ ಎಂಬುದನ್ನು ವಿಸ್ತಾರವಾಗಿ ನೋಡಿದೆವು. ಆದಿಮಾನವನ ಜೀವನದಲ್ಲಿಯ ಹಾಗೂ ತಂತ್ರಜ್ಞಾನದಲ್ಲಿಯ ಬದಲಾವಣೆಗಳು ಅವನ ಪರಿಸರದಲ್ಲಿಯ ಬದಲಾವಣೆಗಳ ಜೊತೆಗೆ ಹೇಗೆ ಹೊಂದಿಕೊಂಡಿದ್ದವು ಎಂಬುದನ್ನು ನೋಡಿದೆವು. ಶಿಲಾಯುಗೀನ ಸಂಸ್ಕೃತಿಯಿಂದ ಹಿಡಿದು ನದಿಕೊಳ್ಳಗಳ ಕೃಷಿ ಪ್ರಧಾನ ಸಂಸ್ಕೃತಿಯ ವರೆಗಿನ ಮಾನವೀ ಸಂಸ್ಕೃತಿಯ ಇತಿಹಾಸದ ಪ್ರವಾಸವು ಹೇಗೆ ಆಯಿತೆಂಬುದನ್ನು ಪರಿಶೀಲಿಸಿದೆವು.

ಇತಿಹಾಸವೆಂದರೆ ಮಾನವೀ ಸಂಸ್ಕೃತಿಯ ಪ್ರವಾಸದಲ್ಲಿ ಸಂಭವಿಸಿದ ಎಲ್ಲ ಪ್ರಕಾರದ ಭೂತಕಾಲದ ಘಟನೆಗಳ ಸುಸಂಗತ ರಚನೆ. ಸ್ಥಳ, ಕಾಲ, ವ್ಯಕ್ತಿ ಮತ್ತು ಸಮಾಜ ಇವು ಇತಿಹಾಸದ ನಾಲ್ಕು ಪ್ರಮುಖ ಆಧಾರ ಸ್ತಂಭಗಳಾಗಿವೆ. ಈ ನಾಲ್ಕು ಘಟಕಗಳ ಹೊರತು ಇತಿಹಾಸವು ಬರೆಯಲ್ಪಡುವುದಿಲ್ಲ. ಇವುಗಳಲ್ಲಿಯ ಸ್ಥಳ ಈ ಘಟಕವು ಭೂಗೋಲದ ಜೊತೆ ಅಂದರೆ ಭೌಗೋಲಿಕ ಪರಿಸ್ಥಿತಿಯ ಜೊತೆ ಸಂಬಂಧಿತವಾಗಿದೆ. ಇತಿಹಾಸ ಮತ್ತು ಭೂಗೋಲಗಳ ಸಂಬಂಧವು ಅವಿಚ್ಛಿನ್ನವಾಗಿದೆ. ಭೌಗೋಲಿಕ ಪರಿಸ್ಥಿತಿಯು ಇತಿಹಾಸದ ಮೇಲೆ ಅನೇಕ ಪ್ರಕಾರಗಳಿಂದ ಪರಿಣಾಮ ಬೀರುತ್ತಿರುತ್ತದೆ.

**ಬನ್ನಿ, ಚರ್ಚೆ ಮಾಡೋಣ.**

- ನಿಮ್ಮ ಪರಿಸರದಲ್ಲಿ ಯಾವ ಯಾವ ಉದ್ಯೋಗಗಳಿವೆ ?
- ನಿಮ್ಮ ಪರಿಸರದಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ ?

ಆಹಾರ, ವೇಷಭೂಷಣ, ಗೃಹನಿರ್ಮಾಣ, ಉದ್ಯೋಗ ಮುಂತಾದ ಸಂಗತಿಗಳು ನಾವು ವಾಸಿಸುವ ಪರಿಸರದ ಭೌಗೋಲಿಕ ವೈಶಿಷ್ಟ್ಯಗಳ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಅವಲಂಬಿಸಿರುತ್ತವೆ.



ಮನೆಯ ಪ್ರಕಾರಗಳು

ಸಮಾಜ ಜೀವನವು ಕೂಡ ಅವುಗಳ ಮೇಲೆ ಅವಲಂಬಿಸಿರುತ್ತದೆ. ಉದಾಹರಣೆಗಾಗಿ, ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನರ ಜೀವನವು ಬಯಲು ಪ್ರದೇಶದಲ್ಲಿ ವಾಸಿಸುವ ಜನರ ಜೀವನಕ್ಕಿಂತ ಹೆಚ್ಚು ಕಷ್ಟಮಯವಾಗಿರುತ್ತದೆ. ಗುಡ್ಡಗಾಡು ಪ್ರದೇಶದಲ್ಲಿ ಫಲವತ್ತಾದ ಭೂಮಿಯ ಉಪಲಬ್ಧತೆ ಅತ್ಯಂತ ಕಡಿಮೆ ಇದ್ದರೆ ಬಯಲು ಪ್ರದೇಶದಲ್ಲಿ ಫಲವತ್ತಾದ ಭೂಮಿಯು ದೊಡ್ಡ ಪ್ರಮಾಣದಲ್ಲಿ ಲಭ್ಯವಿರುತ್ತದೆ. ಅದರಿಂದಾಗಿ ಗುಡ್ಡ ಗಾಡು ಪ್ರದೇಶದಲ್ಲಿಯ ಜನರಿಗೆ ತೃಣಧಾನ್ಯಗಳು ಮತ್ತು ಕಾಯಿಪಲ್ಯೆಗಳು ಕಡಿಮೆ ಪ್ರಮಾಣದಲ್ಲಿ ಲಭ್ಯವಿರುತ್ತವೆ. ಆದರೆ ಬಯಲು ಪ್ರದೇಶದಲ್ಲಿಯ ಜನರಿಗೆ ಈ ಸಂಗತಿಗಳು ಸಾಕಷ್ಟು ದೊರೆಯುತ್ತವೆ. ಅದರ ಪರಿಣಾಮವು ತಿಂಡಿ-ತಿನಿಸುಗಳ ಮೇಲೆ ಆದದ್ದು ಕಂಡುಬರುತ್ತದೆ. ಗುಡ್ಡ ಗಾಡು ಪ್ರದೇಶದಲ್ಲಿ ವಾಸಿಸುವ ಜನರ ಆಹಾರಕ್ಕಾಗಿ ಬೇಟೆಗಾರಿಕೆಯ ಮೇಲೆ ಹಾಗೂ ಅರಣ್ಯದಿಂದ ಸಂಗ್ರಹಿಸಿದ ಪದಾರ್ಥಗಳ ಮೇಲೆ ಹೆಚ್ಚು ಅವಲಂಬಿಸಿರಬೇಕಾಗುತ್ತದೆ. ಇದೇ ರೀತಿ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಹಾಗೂ ಬಯಲು ಪ್ರದೇಶದಲ್ಲಿ ವಾಸಿಸುವ ಜನರ ಜೀವನ ಪದ್ಧತಿಯಲ್ಲಿಯ ಇತರ ಸಂಗತಿಗಳಲ್ಲಿಯೂ ವ್ಯತ್ಯಾಸ ಕಂಡುಬರುತ್ತದೆ.

ನಾವು ವಾಸಿಸುವ ಪ್ರದೇಶದಲ್ಲಿಯ ಹವಾಮಾನ, ಪರ್ಜನ್ಯ, ಬೇಸಾಯದಿಂದ ದೊರೆಯುವ ಬೆಳೆಗಳು, ವನಸ್ಪತಿ, ಪ್ರಾಣಿ ಮುಂತಾದ ಸಂಗತಿಗಳು ನಮ್ಮ ಬದುಕಿನ ಸಾಧನಗಳಾಗಿರುತ್ತವೆ. ಅವುಗಳ ಆಧಾರದ ಮೇಲಿಂದಲೇ ಆಯಾ ಪ್ರದೇಶದಲ್ಲಿಯ ಜೀವನ ಪದ್ಧತಿ ಹಾಗೂ ಸಂಸ್ಕೃತಿ ವಿಕಸಿತವಾಗುತ್ತಿರುತ್ತದೆ. ಬದುಕಿನ ಸಾಧನಗಳ ಹೇರಳತೆ ಇದ್ದಲ್ಲಿ ಮಾನವ ಸಮಾಜವು ದೀರ್ಘಕಾಲದ ವರೆಗೆ ವಸತಿ ಮಾಡುತ್ತದೆ. ಕಾಲಾಂತರದಲ್ಲಿ ಈ ವಸತಿಗಳು ಗ್ರಾಮ ವಸಾಹತು ಹಾಗೂ ನಗರಗಳಲ್ಲಿ ರೂಪಾಂತರವಾಗುತ್ತವೆ. ಪರಿಸರದ ಅವನತಿ, ಬರಗಾಲ, ಆಕ್ರಮಣಗಳು ಅಥವಾ ಇತರ ಕಾರಣಗಳಿಂದಾಗಿ ಬದುಕಿನ ಸಾಧನಗಳ ಕೊರತೆಯುಂಟಾದ ಕೂಡಲೇ ಜನರು ಊರನ್ನುಬಿಟ್ಟು ಹೋಗಬೇಕಾಗುತ್ತದೆ. ಗ್ರಾಮ- ವಸಾಹತುಗಳು, ನಗರಗಳು ಬರಡಾಗುತ್ತವೆ. ಇಂಥ ಅನೇಕ ಘಟನೆಗಳು ಇತಿಹಾಸದಲ್ಲಿ ಸಂಭವಿಸಿರುವುದು ಕಂಡುಬರುತ್ತದೆ. ಅದರ ಮೇಲಿಂದ ಇತಿಹಾಸ ಮತ್ತು ಭೂಗೋಲಗಳ ಸಂಬಂಧವು ಅವಿಚ್ಛಿನ್ನವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

## ೧.೨ ಭಾರತದ ಭೌಗೋಲಿಕ ವೈಶಿಷ್ಟ್ಯಗಳು

ನಮ್ಮ ಭಾರತ ದೇಶವು ವಿಸ್ತಾರದಲ್ಲಿ ದೊಡ್ಡದಾಗಿದೆ. ಅದರ ಉತ್ತರಕ್ಕೆ ಹಿಮಾಲಯ, ಪೂರ್ವಕ್ಕೆ ಬಂಗಾಲದ ಉಪಸಾಗರ, ಪಶ್ಚಿಮಕ್ಕೆ ಅರಬೀ ಸಮುದ್ರ ಹಾಗೂ ದಕ್ಷಿಣಕ್ಕೆ ಹಿಂದೂ ಮಹಾಸಾಗರ ಇವೆ. ಅಂದಮಾನ-ನಿಕೋಬಾರ ಮತ್ತು ಲಕ್ಷದ್ವೀಪ- ಈ ದ್ವೀಪಗಳನ್ನು ಬಿಟ್ಟು ಭಾರತದ ಉಳಿದ ಪ್ರದೇಶವು ಭೌಗೋಲಿಕ ದೃಷ್ಟಿಯಿಂದ ಅಖಂಡವಾಗಿದೆ.

ಪ್ರಾಚೀನ ಭಾರತದ ಇತಿಹಾಸವನ್ನು ಅಭ್ಯಾಸ ಮಾಡುವಾಗ ನಾವು ಈ ಭೂಪ್ರದೇಶವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಅದರ ಉಲ್ಲೇಖವನ್ನೇ ನಾವು 'ಪ್ರಾಚೀನ ಭಾರತ' ಎಂದು ಮಾಡುವವರಿದ್ದೇವೆ. ಇಂದಿನ ಪಾಕಿಸ್ತಾನ ಹಾಗೂ ಬಾಂಗಲಾದೇಶಗಳು ಕಿ.ಶ. ೧೯೪೭ರ ಮೊದಲು ಭಾರತದ ಭಾಗವಾಗಿದ್ದವು.

ಭಾರತದ ಇತಿಹಾಸದ ರಚನೆಯನ್ನು ಕುರಿತು ವಿಚಾರ ಮಾಡಲಾಗಿ ಕೆಳಗಿನ ಆರು ಭೂಪ್ರದೇಶಗಳು ಮಹತ್ವದ್ದೆನಿಸುತ್ತವೆ.

೧. ಹಿಮಾಲಯ
೨. ಸಿಂಧೂ-ಗಂಗಾ-ಬ್ರಹ್ಮಪುತ್ರಾ ನದಿಗಳ ಬಯಲು ಪ್ರದೇಶ
೩. ಥಾರದ ಮರುಭೂಮಿ
೪. ದಖ್ಖನ್ ಪ್ರಸ್ಥಭೂಮಿ
೫. ಸಮುದ್ರ ತೀರಗಳ ಪ್ರದೇಶ
೬. ಸಮುದ್ರದಲ್ಲಿಯ ದ್ವೀಪಗಳು



ಹಿಮಾಲಯ ಪರ್ವತ

**೧. ಹಿಮಾಲಯ:** ಹಿಂದುಕುಶ ಹಾಗೂ ಹಿಮಾಲಯ ಪರ್ವತಗಳಿಂದಾಗಿ ಭಾರತೀಯ ಉಪಖಂಡದ ಉತ್ತರಕ್ಕೆ ಒಂದು ಅಭೇದ್ಯವಾದ ಗೋಡೆಯೇ ನಿಂತಂತಾಗಿದೆ. ಈ ಗೋಡೆಯಿಂದಾಗಿ ಭಾರತೀಯ ಉಪಖಂಡವು ಮಧ್ಯ ಏಷ್ಯದಲ್ಲಿಯ ಮರುಭೂಮಿಯಿಂದ ಬೇರ್ಪಟ್ಟಿದೆ. ಆದರೆ ಹಿಂದುಕುಶ ಪರ್ವತದಲ್ಲಿಯ ಖೈಬರ ಹಾಗೂ ಬೋಲನ್ ಕಣಿವೆಯ ಮಾರ್ಗದ ಮೂಲಕ ಹೋಗುವ ವ್ಯಾಪಾರದ ಭೂಮಾರ್ಗ ಇದೆ. ಮಧ್ಯ ಏಷ್ಯದಿಂದ ಹೋಗುವ ಪ್ರಾಚೀನ ವ್ಯಾಪಾರಿ ಮಾರ್ಗದೊಂದಿಗೆ ಅದು ಜೋಡಿಸಲ್ಪಟ್ಟಿತ್ತು. ಚೀನದಿಂದ ಹೊರಟು ಮಧ್ಯ ಏಷ್ಯದೊಳಗಿಂದ ಅರಬೀ ಪ್ರದೇಶದ ವರೆಗೆ ಹೋಗುವ ಈ ವ್ಯಾಪಾರಿ ಮಾರ್ಗವು 'ರೇಶ್ಮೆಯ ಮಾರ್ಗ' ಎಂದು ಗುರುತಿಸಲ್ಪಡುತ್ತದೆ. ಏಕೆಂದರೆ ಈ ಮಾರ್ಗದಿಂದ ಪಶ್ಚಿಮದ ಕಡೆಯ ದೇಶಗಳಿಗೆ ಕಳಿಸಲಾಗುವ ವಸ್ತುಗಳಲ್ಲಿ ರೇಶ್ಮೆ ಪ್ರಮುಖವಾಗಿತ್ತು. ಇದೇ ಕಣಿವೆಯಲ್ಲಿಯ ಮಾರ್ಗದಿಂದ ಅನೇಕ ವಿದೇಶಿ ಆಕ್ರಮಣಕಾರರು ಪ್ರಾಚೀನ ಭಾರತದಲ್ಲಿ ಪ್ರವೇಶ ಮಾಡಿದರು. ಅನೇಕ ವಿದೇಶಿ ಪ್ರವಾಸಿಗಳು ಈ ಮಾರ್ಗದಿಂದ ಭಾರತಕ್ಕೆ ಬಂದರು.



ಖೈಬರ ಕಣಿವೆ

**೨. ಸಿಂಧೂ-ಗಂಗಾ-ಬ್ರಹ್ಮಪುತ್ರಾ ನದಿಗಳ ಬಯಲು ಪ್ರದೇಶ:** ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರಾ ಈ ಮೂರು ದೊಡ್ಡ ನದಿಗಳು ಹಾಗೂ ಅವುಗಳ ಉಪನದಿಗಳ ಕೊಳ್ಳಗಳ ಪ್ರದೇಶ ಇದಾಗಿದೆ. ಈ ಪ್ರದೇಶವು ಪಶ್ಚಿಮದ ಕಡೆಯ ಸಿಂಧು ಮತ್ತು ಪಂಜಾಬದಿಂದ ಹಿಡಿದು ಪೂರ್ವದ ಕಡೆಯ



ಗಂಗಾ ನದಿ

ಈಗಿನ ಬಾಂಗಲಾದೇಶದ ವರೆಗೆ ಹರಡಿದೆ. ಭಾರತದಲ್ಲಿಯ ಅತ್ಯಂತ ಪ್ರಾಚೀನ ಹರಪ್ಪಾ ನಾಗರಿಕ ಸಂಸ್ಕೃತಿ ಹಾಗೂ ಆನಂತರದ ಪ್ರಾಚೀನ ಗಣರಾಜ್ಯಗಳು ಹಾಗೂ ಸಾಮ್ರಾಜ್ಯಗಳು ಇದೇ ಪ್ರದೇಶದಲ್ಲಿ ಉದಯಕ್ಕೆ ಬಂದವು.

**ನಿಮಗೆ ಗೊತ್ತಿದೆಯೇ ?**

ಆಫ್ರಿಕಾ ಖಂಡದಲ್ಲಿಯ ಸಹಾರಾ ಮರುಭೂಮಿಯು ಜಗತ್ತಿನಲ್ಲಿ ಅತ್ಯಂತ ದೊಡ್ಡ ಮರುಭೂಮಿಯಾಗಿದೆ.



ಥಾರದ ಮರುಭೂಮಿ


**೩. ಥಾರದ ಮರುಭೂಮಿ:** ಥಾರದ ಮರು ಭೂಮಿಯು ರಾಜಸ್ಥಾನ, ಹರಿಯಾಣಾ ಹಾಗೂ ಗುಜರಾತ- ಈ ಪ್ರದೇಶಗಳ ಕೆಲವು ಭಾಗಗಳಲ್ಲಿ ಹರಡಿದೆ. ಅದರ ಕೆಲವು ಭಾಗವು ಇಂದಿನ ಪಾಕಿಸ್ತಾನದಲ್ಲಿಯೂ ಇದೆ. ಉತ್ತರಕ್ಕೆ ಸತಲಜ ನದಿ, ಪೂರ್ವಕ್ಕೆ ಅರವಲಿ ಪರ್ವತದ ಸಾಲುಗಳು, ದಕ್ಷಿಣಕ್ಕೆ ಕಚ್ಛದ ಆಖಾತ (ಕೊಲ್ಲಿ) ಹಾಗೂ ಪಶ್ಚಿಮಕ್ಕೆ ಸಿಂಧೂ ನದಿ ಇವೆ. ಹಿಮಾಚಲ ಪ್ರದೇಶದಲ್ಲಿ ಉಗಮವಾಗುವ ಘಗ್ಗರ ಎಂಬ ಹೆಸರಿನ ನದಿಯು ಥಾರದ ಮರುಭೂಮಿಯನ್ನು ತಲುಪುತ್ತದೆ. ಪಾಕಿಸ್ತಾನದಲ್ಲಿ ಅದನ್ನು ಹಾಕ್ರಾ ಎಂಬ ಹೆಸರಿನಿಂದ ಗುರುತಿಸುತ್ತಾರೆ. ರಾಜಸ್ಥಾನ ಮತ್ತು ಪಾಕಿಸ್ತಾನಗಳಲ್ಲಿಯ ಅದರ ಪಾತ್ರವು ಈಗ ಒಣಗಿ ಹೋಗಿದೆ. ಆ ಒಣಗಿದ ಪಾತ್ರದ ಪ್ರದೇಶದಲ್ಲಿ ಹರಪ್ಪಾ ಸಂಸ್ಕೃತಿಯ ಅನೇಕ ಸ್ಥಳಗಳು ಹರಡಿವೆ.

**೪. ದಖ್ಖನ್ ಪ್ರಸ್ಥಭೂಮಿ:** ಒಂದು ಬದಿಗೆ ಪೂರ್ವ ಕರಾವಳಿ ಹಾಗೂ ಮತ್ತೊಂದು ಬದಿಗೆ ಪಶ್ಚಿಮ ಕರಾವಳಿ ಇವುಗಳ ನಡುವೆ ಇರುವ ಭಾರತದ ಭೂಪ್ರದೇಶವು ದಕ್ಷಿಣದ ಕಡೆಗೆ ಚೂಪಾಗುತ್ತ ಹೋಗುತ್ತದೆ. ಅದರ ಪಶ್ಚಿಮಕ್ಕೆ ಅರಬೀ ಸಮುದ್ರ, ದಕ್ಷಿಣಕ್ಕೆ ಹಿಂದೂ ಮಹಾಸಾಗರ ಹಾಗೂ ಪೂರ್ವಕ್ಕೆ ಬಂಗಾಲದ ಉಪಸಾಗರ ಇವೆ. ಮೂರೂ ಬದಿಗೆ ನೀರಿನಿಂದ ಸುತ್ತುವರಿದ ಈ ಭೂಭಾಗವು ಸಮುದ್ರದಲ್ಲಿ ಹೊಕ್ಕ ತ್ರಿಕೋನಾಕಾರದ ಭೂಶಿರದಂತೆ ಕಾಣಿಸುತ್ತದೆ. ಇಂಥ ಭೂಪ್ರದೇಶಕ್ಕೆ 'ದ್ವೀಪಕಲ್ಪ' ಎನ್ನುತ್ತಾರೆ. ಭಾರತೀಯ ದ್ವೀಪಕಲ್ಪದ ಬಹಳಷ್ಟು ಭಾಗವು ದಖ್ಖನ್ ಪ್ರಸ್ಥಭೂಮಿಯಿಂದ ವ್ಯಾಪಿಸಿದೆ.

ದಖ್ಖನ ಪ್ರಸ್ಥಭೂಮಿಯ ಉತ್ತರಕ್ಕೆ ಸಾತಪುಡಾ ಹಾಗೂ ವಿಂಧ್ಯ ಪರ್ವತದ ಸಾಲುಗಳು ಹರಡಿವೆ. ಅದರ ಪಶ್ಚಿಮಕ್ಕೆ ಸಹ್ಯಾದ್ರಿಯ ಪರ್ವತ ಶ್ರೇಣಿಗಳಿವೆ. ಅದಕ್ಕೆ 'ಪಶ್ಚಿಮ ಘಟ್ಟ' ಎಂದೂ ಕರೆಯುತ್ತಾರೆ. ಸಹ್ಯಾದ್ರಿಯ ಪಶ್ಚಿಮದ ಅಡಿಯಲ್ಲಿ ಕೊಂಕಣ ಮತ್ತು ಮಲಬಾರ ಕರಾವಳಿಯ ಪ್ರದೇಶವಿದೆ. ದಖ್ಖನ ಪ್ರಸ್ಥಭೂಮಿಯ ಪೂರ್ವದ ಕಡೆಯ ಗುಡ್ಡಗಳಿಗೆ 'ಪೂರ್ವ ಘಟ್ಟ' ಎಂದು ಕರೆಯುತ್ತಾರೆ. ಈ ಪ್ರಸ್ಥಭೂಮಿಯಲ್ಲಿಯ ಭೂಮಿಯು ಫಲವತ್ತಾಗಿದ್ದು ಅಲ್ಲಿ ಹರಪ್ಪಾ ಸಂಸ್ಕೃತಿಯ ನಂತರದ ಕಾಲದಲ್ಲಿ ಅನೇಕ ಕೃಷಿ ಪ್ರಧಾನ ಸಂಸ್ಕೃತಿಗಳು ನೆಲೆಸಿದ್ದವು. ಮೌರ್ಯ ಸಾಮ್ರಾಜ್ಯವು ಪ್ರಾಚೀನ ಭಾರತದಲ್ಲಿಯ ಅತ್ಯಂತ ದೊಡ್ಡ ಸಾಮ್ರಾಜ್ಯವಾಗಿತ್ತು ಹಾಗೂ ದಖ್ಖನ್ ಪ್ರಸ್ಥಭೂಮಿಯ ಸಮಾವೇಶವು ಈ ಸಾಮ್ರಾಜ್ಯದಲ್ಲಿ ಆಗಿತ್ತು. ಮೌರ್ಯ ಸಾಮ್ರಾಜ್ಯದ ನಂತರವೂ ಇಲ್ಲಿ ಅನೇಕ ಚಿಕ್ಕ-ದೊಡ್ಡ ಸಾಮ್ರಾಜ್ಯಗಳು ಆಗಿಹೋದವು.

**೫. ಸಮುದ್ರತೀರಗಳ ಪ್ರದೇಶ:** ಪ್ರಾಚೀನ ಭಾರತದಲ್ಲಿ ಹರಪ್ಪಾ ಸಂಸ್ಕೃತಿಯ ಕಾಲದಿಂದ ಪಶ್ಚಿಮದ ದೇಶಗಳೊಡನೆ ವ್ಯಾಪಾರ ನಡೆಯುತ್ತಿತ್ತು. ಈ ವ್ಯಾಪಾರವನ್ನು ಸಮುದ್ರ ಮಾರ್ಗದಿಂದ ಮಾಡಲಾಗುತ್ತಿತ್ತು. ಅದರಿಂದಾಗಿ ಭಾರತದಲ್ಲಿಯ ಸಮುದ್ರತೀರದ ಬಂದರುಗಳ ಮುಖಾಂತರ ಹೊರದೇಶಗಳಲ್ಲಿಯ ಸಂಸ್ಕೃತಿ ಹಾಗೂ ಜನರ ಜೊತೆ ಭಾರತದ ಸಂಪರ್ಕ ಹಾಗೂ ಕೊಡು-ಕೊಳ್ಳುವಿಕೆ ನಡೆಯುತ್ತಿತ್ತು. ನಂತರದ ಕಾಲದಲ್ಲಿ ಭೂಮಾರ್ಗದಿಂದಲೂ ವ್ಯಾಪಾರ ಮತ್ತು ಸಂಪರ್ಕ ಆರಂಭವಾದವು. ಆದರೂ ಸಮುದ್ರಮಾರ್ಗದ ಮಹತ್ವ ಸ್ಥಿರವಾಗಿ ಉಳಿಯಿತು.

**೬. ಸಮುದ್ರದಲ್ಲಿಯ ದ್ವೀಪಗಳು:** ಅಂದಮಾನ ಮತ್ತು ನಿಕೋಬಾರ ಇವು ಬಂಗಾಲದ ಉಪಸಾಗರದಲ್ಲಿಯ ಭಾರತೀಯ ದ್ವೀಪಗಳಾಗಿವೆ. ಹಾಗೆಯೇ ಲಕ್ಷದ್ವೀಪ ಈ ಭಾರತೀಯ ದ್ವೀಪಗಳ ಸಮೂಹವು ಅರಬೀ ಸಮುದ್ರದಲ್ಲಿದೆ. ಪ್ರಾಚೀನ ಕಾಲದ ಸಮುದ್ರ ಮಾರ್ಗದ ವ್ಯಾಪಾರದಲ್ಲಿ ಈ ದ್ವೀಪಗಳ ಸ್ಥಾನವು




ಮಹತ್ವದ್ದಾಗಿರಬಹುದು. 'ಪೆರಿಪ್ಲಸ್ ಆಫ್ ದ ಎರಿಥ್ರಿಯನ್ ಸೀ' ಎಂದರೆ 'ಕೆಂಪು ಸಮುದ್ರದ ಮಾಹಿತಿ ಪುಸ್ತಕ'. ಈ ಪುಸ್ತಕದಲ್ಲಿ ಭಾರತೀಯ ದ್ವೀಪಗಳ ಉಲ್ಲೇಖವಿದೆ. ಈ ಪುಸ್ತಕವನ್ನು ಒಬ್ಬ ಅನಾಮಿಕ ಗ್ರೀಕ ನಾವಿಕನು ಬರೆದಿದ್ದಾನೆ.



**ಮಾಡಿ ನೋಡಿರಿ.**

ಭಾರತದ ನಕಾಶೆಯಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ.

೧. ಹಿಮಾಲಯ ಪರ್ವತ

೨. ಥಾರದ ಮರುಭೂಮಿ

೩. ಪೂರ್ವ ಕರಾವಳಿ



ಅಂದಮಾನ ದ್ವೀಪ

### ೧.೩ ಭಾರತೀಯ ಉಪಖಂಡ

ಹರಪ್ಪಾ ಮತ್ತು ಮೊಹೆಂಜೋದಾರೋ ಈ ಪಟ್ಟಣಗಳು

ಇಂದಿನ ಪಾಕಿಸ್ತಾನದಲ್ಲಿವೆ. ಅಫಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಭೂತಾನ, ಬಾಂಗಲಾದೇಶ, ಶ್ರೀಲಂಕಾ ಹಾಗೂ ನಮ್ಮ ಭಾರತ ದೇಶವು ಕೂಡಿ ನಿರ್ಮಾಣವಾಗುವ ಭೂಭಾಗವು 'ದಕ್ಷಿಣ ಏಷ್ಯ' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಇದೇ ಭೂಭಾಗದಲ್ಲಿಯ ಭಾರತ ದೇಶದ ವಿಸ್ತಾರ ಮತ್ತು ಮಹತ್ವವನ್ನು ಗಮನಿಸಿ ಈ ಪ್ರದೇಶಕ್ಕೆ 'ಭಾರತೀಯ ಉಪಖಂಡ' ಎಂದೂ ಕರೆಯುತ್ತಾರೆ. ಹರಪ್ಪಾ ಸಂಸ್ಕೃತಿಯ ವಿಸ್ತಾರವು ಪ್ರಾಮುಖ್ಯವಾಗಿ ಭಾರತೀಯ ಉಪಖಂಡದ ವಾಯುವ್ಯ ಭಾಗದಲ್ಲಿ ಆಗಿತ್ತು.

ಚೀನ ಮತ್ತು ಮ್ಯಾನ್‌ಮಾರ ಈ ನಮ್ಮ ನೆರೆಯ ದೇಶಗಳು ದಕ್ಷಿಣ ಏಷ್ಯದ ಇಲ್ಲವೆ ಭಾರತೀಯ ಉಪಖಂಡದ ಭಾಗವಾಗಿಲ್ಲ. ಆದರೂ ಪ್ರಾಚೀನ ಭಾರತದ ಜೊತೆ ಅವುಗಳ ಐತಿಹಾಸಿಕ ಸಂಬಂಧವಿತ್ತು. ಪ್ರಾಚೀನ ಭಾರತದ ಇತಿಹಾಸದ ಅಭ್ಯಾಸದಲ್ಲಿ ಅವುಗಳಿಗೆ ಮಹತ್ವದ ಸ್ಥಾನವಿದೆ.

## ಅಭ್ಯಾಸ

**೧. ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಇತಿಹಾಸವೆಂದರೇನು ?

(೨) ಮಾನವ ಸಮಾಜವು ದೀರ್ಘಕಾಲದ ವರೆಗೆ ಎಲ್ಲಿ ವಸತಿ ಮಾಡುತ್ತದೆ ?

(೩) ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನರಿಗೆ ಆಹಾರಕ್ಕಾಗಿ ಯಾವುದರ ಮೇಲೆ ಅವಲಂಬಿಸಿರಬೇಕಾಗುತ್ತದೆ ?

(೪) ಭಾರತದಲ್ಲಿಯ ಅತ್ಯಂತ ಪ್ರಾಚೀನ ನಾಗರಿಕ ಸಂಸ್ಕೃತಿ ಯಾವುದು ?

**೨. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(೧) ಮಾನವೀ ಸಮಾಜ ಜೀವನವು ಯಾವ ಸಂಗತಿಗಳ ಮೇಲೆ ಅವಲಂಬಿಸಿರುತ್ತದೆ ?

(೨) ನಾವು ವಾಸಿಸುವ ಪ್ರದೇಶದಲ್ಲಿಯ ಯಾವ ಸಂಗತಿಗಳು ನಮ್ಮ ಬದುಕಿನ ಸಾಧನಗಳಾಗಿರುತ್ತವೆ ?

(೩) 'ಭಾರತೀಯ ಉಪಖಂಡ'ವೆಂದು ಯಾವ ಪ್ರದೇಶವನ್ನು ಕರೆಯುತ್ತಾರೆ ?

**೩. ಕಾರಣ ಕೊಡಿರಿ.**

(೧) ಇತಿಹಾಸ ಮತ್ತು ಭೂಗೋಲಗಳ ಸಂಬಂಧವು ಅವಿಚ್ಛಿನ್ನವಾಗಿರುತ್ತದೆ.

(೨) ಜನರು ಊರನ್ನು ಬಿಟ್ಟು ಹೋಗಬೇಕಾಗುತ್ತದೆ.

**೪. ಗುಡ್ಡಗಾಡು ಪ್ರದೇಶದಲ್ಲಿಯ ಮತ್ತು ಬಯಲು ಪ್ರದೇಶದಲ್ಲಿಯ ಜನಜೀವನದಲ್ಲಿಯ ವ್ಯತ್ಯಾಸವನ್ನು ಸ್ಪಷ್ಟಪಡಿಸಿರಿ.**

**೫. ಪಠ್ಯಪುಸ್ತಕದಲ್ಲಿಯ ಭಾರತ-ಪ್ರಾಕೃತಿಕ ಈ ನಕಾಶದ ನಿರೀಕ್ಷಣೆ ಮಾಡಿ ಅದರ ಮೇಲೆ ಆಧಾರಿತವಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(೧) ಭಾರತದ ಉತ್ತರಕ್ಕೆ ಯಾವ ಪರ್ವತದ ಸಾಲುಗಳಿವೆ ?

(೨) ಭಾರತದ ಉತ್ತರದ ಕಡೆಯಿಂದ ಬರುವ ಮಾರ್ಗ ಯಾವುದು ?

(೩) ಗಂಗಾ-ಬ್ರಹ್ಮಪುತ್ರಾ ನದಿಗಳ ಸಂಗಮವು ಎಲ್ಲಿ ಆಗುತ್ತದೆ ?

(೪) ಭಾರತದ ಪೂರ್ವಕ್ಕೆ ಯಾವ ದ್ವೀಪಗಳು ಇವೆ ?

(೫) ಥಾರದ ಮರುಭೂಮಿ ಭಾರತದ ಯಾವ ದಿಕ್ಕಿಗೆ ಇದೆ?

**ಉಪಕ್ರಮ:**

(೧) ನಿಮ್ಮ ಪರಿಸರದಲ್ಲಿ ಕಂಡುಬರುವ ಜಲಾಶಯಗಳನ್ನು ಕುರಿತು ಮಾಹಿತಿ ಸಂಗ್ರಹಿಸಿರಿ.

(೨) ಜಗತ್ತಿನ ನಕಾಶೆಯಲ್ಲಿ ಕೆಳಗಿನ ಸಂಗತಿಗಳನ್ನು/ಘಟಕಗಳನ್ನು ತೋರಿಸಿರಿ.

೧. ಹಿಮಾಲಯ ಪರ್ವತ

೨. ರೇಶ್ಮೆಯ ಮಾರ್ಗ

೩. ಅರಬೀ ಪ್ರದೇಶ/ಅರಬಸ್ತಾನ

* * *



ವಿವಿಧ ವೇಷಭೂಷಣಗಳು

# ೨. ಇತಿಹಾಸದ ಸಾಧನಗಳು


೨.೧ ಭೌತಿಕ ಸಾಧನಗಳು
೨.೨ ಲಿಖಿತ ಸಾಧನಗಳು
೨.೩ ಮೌಖಿಕ ಸಾಧನಗಳು
೨.೪ ಪ್ರಾಚೀನ ಭಾರತದ ಇತಿಹಾಸದ ಸಾಧನಗಳು
೨.೫ ಇತಿಹಾಸದ ಲೇಖನವನ್ನು ಕುರಿತು ವಹಿಸಬೇಕಾದ ದಕ್ಷತೆ


**ಮಾಡಿ ನೋಡಿರಿ**

- ನಿಮ್ಮ ಮನೆಯಲ್ಲಿರುವ ಅಜ್ಜಿ-ಅಜ್ಜರ ಕಾಲದಲ್ಲಿಯ ವಸ್ತುಗಳ ಪಟ್ಟಿಯನ್ನು ತಯಾರಿಸಿರಿ.
- ನಿಮ್ಮ ಪರಿಸರದಲ್ಲಿಯ/ಊರಲ್ಲಿಯ ಹಳೆಯ ಕಟ್ಟಡದ ಮಾಹಿತಿಯನ್ನು ಸಂಗ್ರಹಿಸಿರಿ.

ನಮ್ಮ ಪೂರ್ವಜರು ಬಳಸಿದ ಅನೇಕ ವಸ್ತುಗಳು ಇಂದಿಗೂ ಅಸ್ತಿತ್ವದಲ್ಲಿವೆ. ಅವರು ಕೊರೆದಿಟ್ಟ ವಿವಿಧ ಲೇಖಗಳು ನಮಗೆ ದೊರಕಿವೆ. ಈ ಸಾಧನಗಳ ಸಹಾಯದಿಂದ ನಮಗೆ ಇತಿಹಾಸವು ತಿಳಿಯಲು ಸಾಧ್ಯವಾಗುತ್ತದೆ. ಇದಲ್ಲದೆ ರೂಢಿ, ಪರಂಪರೆ, ಜಾನಪದ ಕಲೆ, ಜಾನಪದ ಸಾಹಿತ್ಯ, ಐತಿಹಾಸಿಕ ಕಾಗದಪತ್ರಗಳು ಮುಂತಾದವುಗಳ ಆಧಾರದಿಂದ ನಮಗೆ ಇತಿಹಾಸ ತಿಳಿಯುತ್ತದೆ. ಇವೆಲ್ಲವುಗಳಿಗೆ 'ಇತಿಹಾಸದ ಸಾಧನಗಳು' ಎನ್ನುತ್ತಾರೆ.

ಇತಿಹಾಸದ ಸಾಧನಗಳಲ್ಲಿ ಮೂರು ಪ್ರಕಾರಗಳಿವೆ: ಭೌತಿಕ ಸಾಧನಗಳು, ಲಿಖಿತ ಸಾಧನಗಳು, ಮೌಖಿಕ ಸಾಧನಗಳು.

**ಹೇಳಿ, ನೋಡೋಣ!**

- ಕೋಟೆಗಳು, ಗುಹೆಗಳು, ಸ್ತೂಪಗಳು ಈ ಕಟ್ಟಡಗಳಿಗೆ 'ಭೌತಿಕ ಸಾಧನಗಳು' ಎನ್ನುತ್ತಾರೆ. ಇವುಗಳಲ್ಲದೆ ಇನ್ನೂ ಯಾವ ಯಾವ ಕಟ್ಟಡಗಳಿಗೆ ಭೌತಿಕ ಸಾಧನ ಎನ್ನುತ್ತಾರೆ ?

## ೨.೧ ಭೌತಿಕ ಸಾಧನಗಳು

ದೈನಂದಿನ ಜೀವನದಲ್ಲಿ ಮಾನವನು ವಿವಿಧ ಪ್ರಕಾರದ ವಸ್ತುಗಳನ್ನು ಬಳಸುತ್ತಿರುತ್ತಾನೆ. ಹಿಂದಿನ ಕಾಲದಲ್ಲಿ ಮಾನವನು ಬಳಸಿದ ಅನೇಕ ವಸ್ತುಗಳು ನಮಗೆ ಮಹತ್ವದ ಮಾಹಿತಿಯನ್ನು ಒದಗಿಸುತ್ತವೆ. ಪುರಾತನ ವಸ್ತುಗಳಲ್ಲಿಯ ಮಡಿಕೆಯ ಚೂರುಗಳ ಆಕಾರ, ಬಣ್ಣ ಹಾಗೂ ಚಿತ್ರಗಳ ಮೇಲಿಂದ ಈ ಪಾತ್ರೆಗಳು ಯಾವ ಕಾಲದ್ದು ಇರಬಹುದೆಂಬುದನ್ನು ಊಹಿಸಲಾಗುತ್ತದೆ. ಆಭರಣ ಮತ್ತು ಇತರ ವಸ್ತುಗಳ ಮೇಲಿಂದ ಮಾನವ ಸಮಾಜದಲ್ಲಿಯ ಪರಸ್ಪರ ಸಂಬಂಧಗಳ ಮಾಹಿತಿ ದೊರೆಯುತ್ತದೆ, ಧ್ಯಾನ, ಹಣ್ಣುಗಳ ಬೀಜ ಹಾಗೂ ಪ್ರಾಣಿಗಳ ಮೂಳೆಗಳ ಮೇಲಿಂದ ಅವರ ಆಹಾರದ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಬೇರೆ ಬೇರೆ ಕಾಲದಲ್ಲಿ ಮಾನವನು ಕಟ್ಟಿದ ಮನೆಗಳ ಹಾಗೂ ಕಟ್ಟಡಗಳ ಅವಶೇಷಗಳು ದೊರೆತಿವೆ. ಇದಲ್ಲದೆ ನಾಣ್ಯಗಳು, ಮುದ್ರೆಗಳೂ ದೊರಕಿವೆ. ಇವೆಲ್ಲವುಗಳ ಸಹಾಯದಿಂದ ಮಾನವನ ವ್ಯವಹಾರಗಳ ಮಾಹಿತಿ ದೊರೆಯುತ್ತದೆ. ಈ ಎಲ್ಲ ವಸ್ತುಗಳ ಹಾಗೂ ಕಟ್ಟಡಗಳ ಅವಶೇಷಗಳಿಗೆ ಇತಿಹಾಸದ 'ಭೌತಿಕ ಸಾಧನಗಳು' ಎನ್ನುತ್ತಾರೆ.

**ನಿಮಗೆ ಗೊತ್ತಿದೆಯೇ ?**

ಧಾನ್ಯದ ಕಣಗಳು ಹೆಚ್ಚುಕಾಲ ಉಳಿಯುವದಿಲ್ಲ, ಅವುಗಳಿಗೆ ಹುಳ ಹತ್ತುತ್ತವೆ. ಅವು ಪುಡಿಯಾಗುತ್ತವೆ.


ಪ್ರಾಚೀನ ಕಾಲದಲ್ಲಿ ಧಾನ್ಯವನ್ನು ಬೀಸುವ ಮೊದಲು ಅದನ್ನು ಹುರಿಯಲಾಗುತ್ತಿತ್ತು ಹಾಗೂ ನಂತರ ಆ ಧಾನ್ಯವನ್ನು ಒಡೆಯಲಾಗುತ್ತಿತ್ತು. ಧಾನ್ಯವನ್ನು ಹುರಿಯುವಾಗ ಅದರ ಕೆಲವು ಕಣಗಳು ಹೆಚ್ಚು ಹುರಿಯಲ್ಪಟ್ಟರೆ ಅಥವಾ ಹೊತ್ತಿದರೆ ಅವುಗಳನ್ನು ಚೆಲ್ಲಲಾಗುತ್ತಿತ್ತು. ಇಂಥ ಸುಟ್ಟ ಕಣಗಳು ವರ್ಷಗಟ್ಟಲೆ ಉಳಿಯುತ್ತವೆ. ಅವು ಉತ್ಖನನದಲ್ಲಿ ದೊರೆಯುತ್ತವೆ. ಅವುಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಲಾಗಿ ಅವು ಯಾವ ಧಾನ್ಯದ ಕಣಗಳಾಗಿವೆ ಎಂಬುದು ತಿಳಿದು ಬರುತ್ತದೆ.



ನಾಣ್ಯಗಳು



ಮಡಿಕೆಯ ಚೂರು



ಆಭರಣಗಳು



ಪಾತ್ರೆಗಳು

**ನಿಮಗೆ ಗೊತ್ತಿದೆಯೇ ?**

ಮಂದಿರಗಳ ಗೋಡೆಗಳು, ಗುಹೆಗಳ ಗೋಡೆಗಳು, ಶಿಲೆಗಳು, ತಾಮ್ರಪಟಗಳು, ಪಾತ್ರೆಗಳು, ಕಚ್ಚಾ ಇಟ್ಟಿಗೆಗಳು, ತಾಳೆಯ ಎಲೆಗಳು, ಭೂರ್ಜಪತ್ರಗಳು ಇತ್ಯಾದಿಗಳ ಮೇಲೆ ಕೊರೆದ ಲೇಖಗಳು ಲಿಖಿತ ಸಾಧನಗಳಲ್ಲಿ ಸಮಾವೇಶವಾಗುತ್ತವೆ.



ತಾಮ್ರಪಟ



ಶಿಲಾಲೇಖ

## ೨.೨ ಲಿಖಿತ ಸಾಧನಗಳು


ಶಿಲಾಯುಗದ ಮಾನವನು ತನ್ನ ಜೀವನದಲ್ಲಿಯ ಅನೇಕ ಪ್ರಸಂಗ ಹಾಗೂ ಭಾವನೆಗಳನ್ನು ಚಿತ್ರಗಳ ಮುಖಾಂತರ ವ್ಯಕ್ತಪಡಿಸಿದ್ದಾನೆ. ಸಾವಿರಾರು ವರ್ಷಗಳು ಉರುಳಿದ ನಂತರ ಮಾನವನಿಗೆ ಲೇಖನ ಕಲೆ ಗೊತ್ತಾಯಿತು.

ಮಾನವನು ಆರಂಭದಲ್ಲಿ ಪ್ರತೀಕ ಮತ್ತು ಚಿಹ್ನೆಗಳ ಉಪಯೋಗವನ್ನು ಮಾಹಿತಿಯನ್ನು ಬರೆದಿಡುವ ಸಲುವಾಗಿ ಮಾಡುತ್ತಿದ್ದನು. ಅವುಗಳಿಂದ ಲಿಪಿಯ ವಿಕಾಸವಾಗಲು ಸಾವಿರಾರು ವರ್ಷಗಳು ತಗಲಿದವು.


ಆರಂಭದ ಕಾಲದಲ್ಲಿ ಮಡಿಕೆಯ ಚೂರು, ಕಚ್ಚಾ ಇಟ್ಟಿಗೆ, ಗಿಡಗಳ ತೊಗಟೆ, ಭೂರ್ಜಪತ್ರಗಳಂತಹ ವಸ್ತುಗಳನ್ನು ಬರೆಯುವ ಸಲುವಾಗಿ ಉಪಯೋಗಿಸಲಾಗುತ್ತಿತ್ತು. ಇಂತಹ ವಸ್ತುಗಳ ಮೇಲಿನ ಬರವಣಿಗೆಯನ್ನು ಚೂಪಾದ ವಸ್ತುಗಳಿಂದ ಕೊರೆಯಲಾಗುತ್ತಿತ್ತು. ಅನುಭವ ಹಾಗೂ ಜ್ಞಾನವು ಹೆಚ್ಚುತ್ತ ಹೋದಂತೆ ಅವನು ವಿವಿಧ ಪದ್ಧತಿಗಳಿಂದ ಬರೆಯಲು ಆರಂಭಿಸಿದನು. ಸುತ್ತಮುತ್ತ ಸಂಭವಿಸಿದ ಘಟನೆಗಳು, ದರಬಾರಿನ ಕಾರ್ಯಕಲಾಪಗಳ ವೃತ್ತಾಂತ ಮುಂತಾದವುಗಳ ಮಾಹಿತಿಯನ್ನು ಬರೆದಿಡುವ ಪದ್ಧತಿ ಆರಂಭವಾಯಿತು. ಅನೇಕ ರಾಜರು ತಮ್ಮ ಆಜ್ಞೆ, ನಿರ್ಣಯ ಹಾಗೂ ದಾನಪತ್ರಗಳನ್ನು ಕಲ್ಲಿನಲ್ಲಿ ಇಲ್ಲವೆ ತಾಮ್ರಪಟದ ಮೇಲೆ ಕೊರೆದಿಟ್ಟಿದ್ದಾರೆ. ಕಾಲಾಂತರದಲ್ಲಿ ವಾಙ್ಮಯದ ಅನೇಕ ಪ್ರಕಾರಗಳು ನಿರ್ಮಾಣವಾದವು. ಧಾರ್ಮಿಕ ಹಾಗೂ ಸಾಮಾಜಿಕ ಗ್ರಂಥಗಳು, ನಾಟಕಗಳು, ಕಾವ್ಯಗಳು, ಪ್ರವಾಸ ವರ್ಣನೆಗಳು ಹಾಗೂ ವೈಜ್ಞಾನಿಕ ವಿಷಯಗಳ ಮೇಲಿನ ಲೇಖನಗಳು ರಚನೆಯಾದವು. ಈ ಸಾಹಿತ್ಯವು ಆಕಾಲದ ಇತಿಹಾಸವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಈ ಎಲ್ಲ ಸಾಹಿತ್ಯಕ್ಕೆ ಇತಿಹಾಸದ 'ಲಿಖಿತ ಸಾಧನಗಳು' ಎನ್ನುತ್ತಾರೆ.

**ನಿಮಗೆ ಗೊತ್ತಿದೆಯೆ ?**

ಭೂರ್ಜಪತ್ರವನ್ನು ಭೂರ್ಜ ವೃಕ್ಷದ ತೊಗಟೆಯಿಂದ ತಯಾರಿಸಲಾಗುತ್ತದೆ. ಭೂರ್ಜ ವೃಷ್ಷಗಳು ಕಾಶ್ಮೀರದಲ್ಲಿ ಕಂಡುಬರುತ್ತವೆ.



ಭೂರ್ಜ ವೃಕ್ಷ



ಭೂರ್ಜ ಪತ್ರ

### ಮಾಡಿ ನೋಡಿರಿ.

- ನಿಮ್ಮ ಪರಿಸರದಲ್ಲಿಯ/ಊರಲ್ಲಿಯ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿರಿ. ಅಲ್ಲಿ ಇರುವ ವಸ್ತುಗಳ ಮೇಲೆ ನಿಬಂಧ ಬರೆಯಿರಿ.
- ಬೀಸುವ ಕಲ್ಲಿನ ಹಾಡುಗಳನ್ನು ಸಂಗ್ರಹಿಸಿರಿ.
- ವಿವಿಧ ಜಾನಪದ ಗೀತೆಗಳನ್ನು ಸಂಗ್ರಹಿಸಿರಿ. ಅವುಗಳಲ್ಲಿಯ ಒಂದು ಗೀತೆಯನ್ನು ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾದರಪಡಿಸಿರಿ.

## ೨.೩ ಮೌಖಿಕ ಸಾಧನಗಳು

ಬೀಸುವ ಕಲ್ಲಿನ ಹಾಡುಗಳು, ಜಾನಪದ ಗೀತೆಗಳು, ಜಾನಪದ ಕತೆಗಳು ಇತ್ಯಾದಿ ಸಾಹಿತ್ಯವನ್ನು ಬರೆದಿಟ್ಟಿರುವುದಿಲ್ಲ, ಅದರ ಲೇಖಕನು ಅಜ್ಞಾತವಾಗಿರುತ್ತಾನೆ. ಅದನ್ನು ಅನೇಕ ತಲೆಮಾರುಗಳ ವರೆಗೆ ಕಾಯ್ದುಕೊಂಡು ಬರಲಾಗುತ್ತದೆ. ಇಂಥ ಸಾಹಿತ್ಯಕ್ಕೆ ಮೌಖಿಕ ಪರಂಪರೆಯಿಂದ ಕಾಯ್ದುಕೊಂಡು ಬಂದ ಸಾಹಿತ್ಯ ಎನ್ನುತ್ತಾರೆ. ಬೀಸುವಕಲ್ಲಿನ ಹಾಡುಗಳು, ಜಾನಪದ ಗೀತೆಗಳು, ಜಾನಪದ ಕತೆಗಳು ಮುಂತಾದ ಜಾನಪದ ಸಾಹಿತ್ಯದ ಪ್ರಕಾರಗಳು ಇದರಲ್ಲಿ ಸಮಾವೇಶವಾಗುತ್ತದೆ. ಇಂಥ ಸಾಧನಗಳಿಗೆ ಇತಿಹಾಸದ 'ಮೌಖಿಕ ಸಾಧನಗಳು' ಎನ್ನುತ್ತಾರೆ.

### ನಿಮಗೆ ಗೊತ್ತಿದೆಯೇ ?

- **ಓವಿ**

ಪಾಂಡುರಂಗ ಪಿತಾ । ರುಕ್ಮಿಣಿ ಮಾಝಿ ಬಯಾ ।
ಆಷಾಢ ವಾರಿಯೇಲಾ । ಪುಂಡಲೀಕ ಆಲಾ ನ್ಯಾಯ ।।
(ಪಾಂಡುರಂಗ ತಂದೆ । ರುಕ್ಮಿಣಿ ನನ್ನ ತಾಯಿ।
ಆಷಾಢ ವಾರಿಗೆ । ಪುಂಡಲೀಕ ಕರೆಯಲು ಬುದ ।।)

- **ಲೋಕಗೀತ –**

'ಮಹಾನಗರಿ ಉಜನಿ❖ ❖(ಉಜ್ಜಯನಿ)
ಲಇ ಪುಣ್ಯವಾನ ದಾನಿ
ತೇಥೆ ನಾಂದತ ಹೋತಾರಾಜಾ
ಸುಖಿ ಹೋತಿ ಪ್ರಜಾ
ತೀನ್ಹಿ ಲೋಕಿ ಗಾಜಾವಾಜಾ
ಅಸಾ ಉಜನೀಚಾ ಇಕ್ರಾಮ❖ ರಾಜಾ' ❖(ವಿಕ್ರಮಾದಿತ್ಯ)

(ಮಹಾನಗರವಾದ ಉಜ್ಜೈಯನಿಯಲ್ಲಿ ಅತ್ಯಂತ ಪುಣ್ಯವಂತ ರಾಜನು ಇರುತ್ತಿದ್ದನು. ಅವನು ದಾನಿಯಾಗಿದ್ದನು. ಅವನ ರಾಜ್ಯದಲ್ಲಿ ಪ್ರಜೆಗಳು ಸುಖಿಯಾಗಿದ್ದರು. ಇಂಥ ವಿಕ್ರಮಾದಿತ್ಯನ ಕೀರ್ತಿ ಮೂರೂ ಲೋಕಗಳಲ್ಲಿ ಹಬ್ಬಿತ್ತು.)

### ನಿಮಗೆ ಗೊತ್ತಿದೆಯೇ ?

**ಪ್ರಾಚೀನ ಭಾರತದ ಇತಿಹಾಸ ಲೇಖನದ ಸಾಧನಗಳು**

**ಭೌತಿಕ ಸಾಧನಗಳು**

| **ವಸ್ತುಗಳು** | **ಕಟ್ಟಡಗಳು** |
|---|---|
| ಗುಹಾಚಿತ್ರಗಳು | ಗುಹೆಗಳು |
| ಮಣ್ಣಿನ ಪಾತ್ರೆಗಳು | ಮನೆಗಳು |
| ಮಣ್ಣಿನ ಶಿಲ್ಪಗಳು | ಸ್ತೂಪಗಳು |
| ಮಣಿಗಳು | ಮಂದಿರಗಳು |
| ರತ್ನಗಳು, ಆಭರಣಗಳು | ಚರ್ಚುಗಳು |
| ಶಿಲ್ಪಗಳು | ಮಸಿದಿಗಳು |
| ಲೋಹದ ವಸ್ತುಗಳು | ಸ್ತಂಭಗಳು |
| ನಾಣ್ಯಗಳು | |
| ಶಸ್ತ್ರಾಸ್ತ್ರಗಳು | |

**ಲಿಖಿತ ಸಾಧನಗಳು**

- ಹರಪ್ಪಾ ಲಿಪಿಯಲ್ಲಿಯ ಲೇಖಗಳು
- ವೈದಿಕ ಸಾಹಿತ್ಯ
- ಮೆಸೋಪೊಟೆಮಿಯಾದಲ್ಲಿಯ ಇಟ್ಟಿಗೆಯ ಮೇಲಿನ ಲೇಖ
- ಮಹಾಭಾರತ, ರಾಮಾಯಣಗಳ ಹಸ್ತಲಿಖಿತ ಗ್ರಂಥಗಳು
- ಜೈನ, ಬೌದ್ಧ ಸಾಹಿತ್ಯ
- ಗ್ರೀಕ ಇತಿಹಾಸಕಾರ ಹಾಗೂ ಪ್ರವಾಸಿಗಳ ಲೇಖನಗಳು
- ಚೀನಿ ಪ್ರವಾಸಿಗಳ ಪ್ರವಾಸ ವರ್ಣನೆಗಳು
- ವ್ಯಾಕರಣ ಗ್ರಂಥ ಪುರಾಣ ಗ್ರಂಥ, ಕೊರೆದ ಲೇಖಗಳು

**ಮೌಖಿಕ ಸಾಧನಗಳು**

ಪ್ರಾಚೀನ ಭಾರತದಲ್ಲಿಯ ಮೌಖಿಕ ಪರಂಪರೆಯಿಂದ ಕಾಯ್ದುಕೊಂಡು ಬಂದ ವೈದಿಕ, ಬೌದ್ಧ ಹಾಗೂ ಜೈನ ಸಾಹಿತ್ಯ ಈಗ ಲಿಖಿತ ರೂಪದಲ್ಲಿ ಸಿಗುತ್ತದೆ. ಅವುಗಳ ರೂಪಾಂತರವು ಲಿಖಿತ ರೂಪದಲ್ಲಾಗಿದ್ದರೂ ಅವುಗಳ ಪಠಣದ ಪರಂಪರೆ ಈಗಲೂ ನಡೆದಿದೆ. ಮೌಖಿಕ ರೂಪದಲ್ಲಿಯ ಸಾಹಿತ್ಯದ ಉಪಯೋಗವನ್ನು ಯಾವಾಗ ಇತಿಹಾಸ-ಲೇಖನಕ್ಕಾಗಿ ಮಾಡಲಾಗುತ್ತದೋ ಆಗ ಅದು ಮೌಖಿಕ ಸಾಧನದಲ್ಲಿ ಸಮಾವೇಶವಾಗುತ್ತವೆ.

## ೨.೪ ಪ್ರಾಚೀನ ಭಾರತದ ಇತಿಹಾಸದ ಸಾಧನಗಳು

ಶಿಲಾಯುಗದ ಕಾಲದಿಂದ ಹಿಡಿದು ಕ್ರಿಸ್ತಶಕ ಎಂಟನೆಯ ಶತಮಾನದ ವರೆಗಿನ ಕಾಲಖಂಡವನ್ನು ಭಾರತದ ಇತಿಹಾಸದ ಪ್ರಾಚೀನ ಕಾಲಖಂಡವೆಂದು ತಿಳಿಯಲಾಗುತ್ತದೆ. ಭಾರತದಲ್ಲಿಯ ಶಿಲಾಯುಗವನ್ನು ಕುರಿತ ಮಾಹಿತಿಯು ಪುರಾತತ್ವ ಉತ್ಖನನದಿಂದ ದೊರೆಯುತ್ತದೆ. ಆ ಕಾಲದಲ್ಲಿ ಲಿಪಿಯ ವಿಕಾಸವಾಗಿರಲಿಲ್ಲ. ಕ್ರಿ.ಶ.ಪೂ. ೧೫೦೦ ರಿಂದ ಪ್ರಾಚೀನ ಇತಿಹಾಸದ ಮಾಹಿತಿಯು ವೇದ ವಾಙ್ಮಯಗಳಿಂದ ದೊರೆಯುತ್ತದೆ. ಆರಂಭದಲ್ಲಿ ವೇದಗಳು ಲಿಖಿತ ರೂಪದಲ್ಲಿರಲಿಲ್ಲ. ಅವುಗಳನ್ನು ಕಂಠಪಾಠ ಮಾಡುವ ತಂತ್ರವನ್ನು ಪ್ರಾಚೀನ ಕಾಲದ ಭಾರತೀಯರು ವಿಕಸಿತಗೊಳಿಸಿದ್ದರು. ಕಾಲಾಂತರದಲ್ಲಿ ವೇದಗಳು ಬರೆಯಲ್ಪಟ್ಟವು. ವೇದ ವಾಙ್ಮಯಗಳು ಮತ್ತು ಆ ನಂತರ ಬರೆಯಲ್ಪಟ್ಟ ಸಾಹಿತ್ಯ ಇವು ಪ್ರಾಚೀನ ಭಾರತದ ಇತಿಹಾಸದ ಮಹತ್ವದ ಸಾಧನವಾಗಿವೆ. ಇವುಗಳಲ್ಲಿ ಬ್ರಾಹ್ಮಣ ಗ್ರಂಥ, ಉಪನಿಷತ್ತುಗಳು, ಅರಣ್ಯಕಗಳು, ರಾಮಾಯಣ, ಮಹಾಭಾರತ ಈ ಮಹಾಕಾವ್ಯಗಳು, ಜೈನ ಮತ್ತು ಬೌದ್ಧ ಗ್ರಂಥಗಳು, ನಾಟಕಗಳು, ಕಾವ್ಯಗಳು, ಶಿಲಾಲೇಖಗಳು, ಸ್ತಂಭಾಲೇಖಗಳು, ವಿದೇಶಿ ಪ್ರವಾಸಿಗಳ ಪ್ರವಾಸ ವರ್ಣನೆಗಳು ಮುಂತಾದವುಗಳ ಸಮಾವೇಶವಾಗುತ್ತದೆ. ಅದೇ ರೀತಿ ಪುರಾತತ್ವ ಉತ್ಖನನದಲ್ಲಿ ದೊರೆತ ವಸ್ತುಗಳು, ಪುರಾತನ ಕಟ್ಟಡಗಳು, ನಾಣ್ಯಗಳು ಇತ್ಯಾದಿ ಅನೇಕ ಭೌತಿಕ ಸಾಧನಗಳ ಸಹಾಯದಿಂದ ನಮಗೆ ಪ್ರಾಚೀನ ಭಾರತದ ಇತಿಹಾಸವು ತಿಳಿಯುತ್ತವೆ.

## ೨.೫ ಇತಿಹಾಸ ಲೇಖನವನ್ನು ಕುರಿತು ವಹಿಸಬೇಕಾದ ದಕ್ಷತೆ

ಇತಿಹಾಸದ ಸಾಧನಗಳನ್ನು ಬಳಸುವಾಗ ದಕ್ಷತೆ ವಹಿಸಬೇಕಾಗುತ್ತದೆ. ಯಾವುದೊಂದು ಲಿಖಿತ ಪುರಾವೆಯು ಹಳೆಯದಾಗಿದ್ದರೂ ವಿಶ್ವಾಸಾರ್ಹ ವಾಗಿದೆಯೆಂದು ಹೇಳಲು ಬರುವುದಿಲ್ಲ. ಆ ವಿಷಯವನ್ನು ಯಾರು ಬರೆದರು, ಏಕೆ ಬರೆದರು, ಯಾವಾಗ ಬರೆದರು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ವಿಶ್ವಾಸಾರ್ಹವಾದ ವಿವಿಧ ಸಾಧನಗಳ ಆಧಾರದಿಂದ ತೆಗೆದುಕೊಂಡ ನಿರ್ಣಯಗಳನ್ನು ಪರಸ್ಪರ ಹೋಲಿಸಿ ನೋಡಬೇಕಾಗುತ್ತದೆ. ಇತಿಹಾಸ-ಲೇಖನದಲ್ಲಿ ಇಂತಹ ಪರಿಶೀಲನೆಗೆ ತುಂಬಾ ಮಹತ್ವವಿದೆ.



**ಏನು ಮಾಡಬಲ್ಲಿರಿ ?**

- ನಿಮಗೆ ಒಂದು ಹಳೆಯ ನಾಣ್ಯ ಸಿಕ್ಕಿತು
  - ನಿಮ್ಮ ಹತ್ತಿರ ಇಟ್ಟುಕೊಳ್ಳುವಿರಿ.
  - ಪಾಲಕರಿಗೆ ಕೊಡುವಿರಿ.
  - ವಸ್ತು ಸಂಗ್ರಹಾಲಯಕ್ಕೆ ಒಪ್ಪಿಸುವಿರಿ.

BRYGTE



**ಅಭ್ಯಾಸ**

೧. **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಬರೆಯುವ ಸಲುವಾಗಿ ಯಾವ ವಸ್ತುಗಳ ಉಪಯೋಗ ಮಾಡಲಾಗುತ್ತಿತ್ತು ?

(೨) ವೇದ ವಾಙ್ಮಯಗಳಿಂದ ಯಾವ ಮಾಹಿತಿ ದೊರೆಯುತ್ತದೆ ?

(೩) ಮೌಖಿಕ ಪರಂಪರೆಯಿಂದ ಯಾವ ಸಾಹಿತ್ಯವನ್ನು ಕಾಯ್ದುಕೊಂಡು ಬರಲಾಗುತ್ತದೆ ?

೨. **ಕೆಳಗಿನ ಸಾಧನಗಳನ್ನು ಭೌತಿಕ, ಲಿಖಿತ ಹಾಗೂ ಮೌಖಿಕ ಸಾಧನಗಳಲ್ಲಿ ವರ್ಗೀಕರಿಸಿರಿ.**

ತಾಮ್ರಪಟ, ಜಾನಪದ ಕತೆಗಳು, ಮಣ್ಣಿನ ಪಾತ್ರೆ, ಮಣಿಗಳು, ಪ್ರವಾಸ ವರ್ಣನೆ, ಬೀಸುವ ಕಲ್ಲಿನ ಹಾಡುಗಳು, ಶಿಲಾಲೇಖಗಳು, ಲಾವಣಿ ಪದಗಳು, ವೈದಿಕ ಸಾಹಿತ್ಯ, ಸ್ತೂಪಗಳು, ನಾಣ್ಯಗಳು, ಭಜನೆ, ಪುರಾಣ ಗ್ರಂಥಗಳು.

| ಭೌತಿಕ ಸಾಧನಗಳು | ಲಿಖಿತ ಸಾಧನಗಳು | ಮೌಖಿಕ ಸಾಧನಗಳು |
|---|---|---|
| ----- | ----- | ----- |
| ----- | ----- | ----- |
| ----- | ----- | ----- |

೩. **ಪಾಠದಲ್ಲಿಯ ಮಣ್ಣಿನ ಪಾತ್ರೆಗಳ ಚಿತ್ರಗಳನ್ನು ನೋಡಿರಿ ಹಾಗೂ ಅವುಗಳ ಪ್ರತಿಕೃತಿಯನ್ನು ತಯಾರಿಸಿರಿ.**

೪. **ಯಾವುದಾದರೂ ನಾಣ್ಯವನ್ನು ನಿರೀಕ್ಷಿಸಿ ಅದರ ಬಗ್ಗೆ ಕೆಳಗಿನ ಮಾಹಿತಿಯನ್ನು ಬರೆಯಿರಿ.**

ನಾಣ್ಯದ ಮೇಲಿನ ಬರಹ, ಉಪಯೋಗಿಸಿದ ಲೋಹ ,
ನಾಣ್ಯದ ಮೇಲಿನ ವರ್ಷ ......... ......... ..........
ನಾಣ್ಯದ ಮೇಲಿನ ಚಿಹ್ನೆ, ನಾಣ್ಯದ ಮೇಲಿನ ಚಿತ್ರ, ಭಾಷೆ, ತೂಕ
.............. .............. ...... ........
ಆಕಾರ, ಬೆಲೆ.
...... ......

೫. **ಯಾವಯಾವ ಸಂಗತಿಗಳು ಮೌಖಿಕ ರೂಪದಲ್ಲಿ ನಿಮ್ಮ ನೆನಪಿನಲ್ಲಿವೆ? ಅವುಗಳನ್ನು ಗುಂಪಿನಲ್ಲಿ ಸಾದರಪಡಿಸಿರಿ.**

ಉದಾ: ಕವಿತೆ, ಶ್ಲೋಕ, ಪ್ರಾರ್ಥನೆ, ಮಗ್ಗಿ ಇತ್ಯಾದಿ

**ಉಪಕ್ರಮ:**

ಭೌತಿಕ ಹಾಗೂ ಲಿಖಿತ ಸಾಧನಗಳ ಚಿತ್ರಗಳನ್ನು ಸಂಗ್ರಹಿಸಿರಿ. ಬಾಲಕರ ಮೇಳದಲ್ಲಿ ಆ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿರಿ.

* * *

# ೩. ಹರಪ್ಪಾ ಸಂಸ್ಕೃತಿ


೩.೧ ಹರಪ್ಪಾ ಸಂಸ್ಕೃತಿ
೩.೨ ಮನೆ ಹಾಗೂ ನಗರ ರಚನೆ
೩.೩ ಮುದ್ರೆಗಳು-ಪಾತ್ರೆಗಳು
೩.೪ ಮಹಾಸ್ನಾನಗೃಹ
೩.೫ ಜನಜೀವನ
೩.೬ ವ್ಯಾಪಾರ
೩.೭ ಅವನತಿಯ ಕಾರಣಗಳು


**ಮಾಡಿ ನೋಡಿರಿ**


ಭಾರತದ ನಕಾಶೆಯಲ್ಲಿ ಹರಪ್ಪಾ ಸಂಸ್ಕೃತಿಯ ಸ್ಥಳಗಳ ಹೆಸರುಗಳನ್ನು ತೋರಿಸಿರಿ.

## ೩.೧ ಹರಪ್ಪಾ ಸಂಸ್ಕೃತಿ

ಕ್ರಿ.ಶ. ೧೯೨೧ರಲ್ಲಿ ಪಂಜಾಬದಲ್ಲಿಯ ರಾವಿ ನದಿಯ ತೀರದಲ್ಲಿ ಹರಪ್ಪಾ ಎಂಬಲ್ಲಿ ಉತ್ಖನನವು ಪ್ರಥಮವಾಗಿ ಆರಂಭವಾಯಿತು. ಆದ್ದರಿಂದ ಈ ಸಂಸ್ಕೃತಿಗೆ 'ಹರಪ್ಪಾ ಸಂಸ್ಕೃತಿ' ಎಂಬ ಹೆಸರು ದೊರಕಿತು. ಈ ಸಂಸ್ಕೃತಿಯ 'ಸಿಂಧೂಸಂಸ್ಕೃತಿ' ಎಂಬ ಹೆಸರಿನಿಂದಲೂ ಗುರುತಿಸಲ್ಪಡುತ್ತದೆ.

ಹರಪ್ಪಾದ ದಕ್ಷಿಣಕ್ಕೆ ಸುಮಾರು ೬೫೦ ಕಿಲೋಮೀಟರ ದೂರದಲ್ಲಿ ಸಿಂಧೂ ನದಿಯ ಕೊಳ್ಳದಲ್ಲಿ ಮೊಹೆಂಜೋದಾರೋ ಎಂಬಲ್ಲಿ ಉತ್ಖನನ ನಡೆಯಿತು. ಹರಪ್ಪಾ ಮತ್ತು ಮೊಹೆಂಜೋದಾರೋ ಈ ಎರಡೂ ಸ್ಥಳಗಳಲ್ಲಿಯ ಉತ್ಖನನದಲ್ಲಿ ದೊರೆತ ವಸ್ತು ಹಾಗೂ ಕಟ್ಟಡಗಳ ಅವಶೇಷಗಳಲ್ಲಿ ಅಗಾಧವಾದ ಸಾಮ್ಯವಿತ್ತು.

ಧೋಲಾವೀರಾ, ಲೋಥಲ್, ಕಾಲೀಬಂಗನ್,



ದಾಯಮಾಬಾದ ಇತ್ಯಾದಿ ಸ್ಥಳಗಳಲ್ಲಿಯೂ ಉತ್ಖನನದಲ್ಲಿ ಇದೇ ಪ್ರಕಾರದ ಅವಶೇಷಗಳು ದೊರಕಿವೆ.

ಹರಪ್ಪಾ ಸಂಸ್ಕೃತಿಯ ವೈಶಿಷ್ಟ್ಯಗಳು ಸರ್ವಸಾಮಾನ್ಯವಾಗಿ ಎಲ್ಲ ಕಡೆಗೆ ಸಮಾನವಾಗಿರುವುದು ಕಂಡುಬರುತ್ತದೆ. ನಗರ ರಚನೆ, ರಸ್ತೆ, ಗೃಹ ನಿರ್ಮಾಣ, ಚರಂಡಿ ವ್ಯವಸ್ಥೆ, ಮುದ್ರೆ, ಪಾತ್ರೆಗಳು, ಆಟಿಗೆಗಳು, ಮೃತದೇಹಗಳನ್ನು ಹೂಳುವ ಪದ್ಧತಿ ಮುಂತಾದವುಗಳು ಪ್ರಾಮುಖ್ಯವಾಗಿ ಅದರಲ್ಲಿ ಸಮಾವೇಶವಾಗುತ್ತವೆ.

**ಹೇಳಿ, ನೋಡೋಣ!**

- ನಿಮ್ಮ ಪರಿಸರದಲ್ಲಿಯ/ಊರಲ್ಲಿಯ ಮನೆಗಳ ರಚನೆ ಹೇಗಿದೆ ?
- ಹಂಚಿನ, ಮಣ್ಣಿನ, ಇಳಿಜಾರು ಚಪ್ಪರದ ಮನೆಗಳಿವೆಯೇ?

## ೩.೨ ಮನೆಗಳು ಹಾಗೂ ನಗರ ರಚನೆ

ಹರಪ್ಪಾ ಸಂಸ್ಕೃತಿಯಲ್ಲಿ ಮನೆಗಳನ್ನು ಮತ್ತು ಇತರ ಕಟ್ಟಡಗಳನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗುತ್ತಿತ್ತು. ಕೆಲವು ಸ್ಥಳಗಳಲ್ಲಿ ಕಟ್ಟಡಕ್ಕಾಗಿ ಕಚ್ಚಾ ಇಟ್ಟಿಗೆ ಮತ್ತು ಕಲ್ಲಿನ ಬಳಕೆಯನ್ನೂ ಮಾಡಲಗುತ್ತಿತ್ತು. ಮಧ್ಯಭಾಗದಲ್ಲಿ ಚೌಕ ಹಾಗೂ ಅದರ ಸುತ್ತಮುತ್ತ ಕೋಣೆಗಳು- ಈ ಪ್ರಕಾರ ಮನೆಗಳ ರಚನೆ ಇರುತ್ತಿತ್ತು. ಮನೆಯ ಅಂಗಳದಲ್ಲಿ ಬಾವಿ, ಸ್ನಾನಗೃಹ ಹಾಗೂ ಶೌಚಾಲಯಗಳು ಇರುತ್ತಿದ್ದವು. ಚರಂಡಿಯ ನೀರು ಹರಿದು ಹೋಗುವ ಉತ್ತಮ ವ್ಯವಸ್ಥೆ ಇರುತ್ತಿತ್ತು. ಅದರ ಸಲುವಾಗಿ ಸುಟ್ಟಮಣ್ಣಿನ ಕೊಳವೆಗಳ ಉಪಯೋಗ ಮಾಡಲಾಗುತ್ತಿತ್ತು. ರಸ್ತೆಯಲ್ಲಿಯ ಚರಂಡಿಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗುತ್ತಿತ್ತು. ಅವು ಮುಚ್ಚಲ್ಪಟ್ಟಿರುತ್ತಿದ್ದವು. ಇದರ ಮೇಲಿಂದ ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ಅವರು ಎಷ್ಟು ಜಾಗರೂಕರಾಗಿದ್ದರೆಂಬುದು ಕಂಡುಬರುತ್ತದೆ.



ಹರಪ್ಪಾ ಸಂಸ್ಕೃತಿಯಲ್ಲಿಯ ಬಾವಿ

**ಹೇಳಿ, ನೋಡೋಣ!**

- ಕೊಳಚೆ ನೀರು ಹರಿದುಹೋಗುವ ಚರಂಡಿಗಳು ಮುಚ್ಚಿರದಿದ್ದರೆ ಆರೋಗ್ಯದ ಯಾವ ಯಾವ ಸಮಸ್ಯೆಗಳು ನಿರ್ಮಾಣವಾಗುತ್ತವೆ ?

ರಸ್ತೆಗಳು ಅಗಲವಾಗಿದ್ದು ಅವು ಪರಸ್ಪರ ಲಂಬಕೋನಾಕೃತಿಯಲ್ಲಿ ಛೇದಿಸುವ ರೀತಿಯಲ್ಲಿ ಕಟ್ಟಲಾಗುತ್ತಿತ್ತು. ಅದರಿಂದಾಗಿ ನಿರ್ಮಾಣವಾಗುವ ಚೌಕೋನಾಕಾರದ ಬಯಲು ಜಾಗೆಯಲ್ಲಿ ಮನೆಗಳನ್ನು ಕಟ್ಟಲಾಗುತ್ತಿತ್ತು. ನಗರಗಳಲ್ಲಿ ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ವಿಭಾಗಗಳನ್ನು ಮಾಡಲಾಗಿದ್ದು ಪ್ರತಿಯೊಂದು ವಿಭಾಗಕ್ಕೆ ಸ್ವತಂತ್ರ ರಕ್ಷಣಾ ಗೋಡೆ ಇರುತ್ತಿತ್ತು.

**ಮಾಡಿ ನೋಡಿರಿ.**

ಒಂದು ಬಟಾಟೆಯನ್ನು ತೆಗೆದುಕೊಳ್ಳಿರಿ. ಅದನ್ನು ಮಧ್ಯಭಾಗದಲ್ಲಿ ಹೋಳಿರಿ. ಹೋಳಿದ ಭಾಗದ ಮೇಲೆ ಮೊಳೆಯ ಸಹಾಯದಿಂದ ಕೆಲವು ಅಕ್ಷರಗಳನ್ನು ಹಾಗೂ ಚಿತ್ರಗಳನ್ನು ಕೊರೆಯಿರಿ. ಅಕ್ಷರ ಹಾಗೂ ಚಿತ್ರಗಳನ್ನು ಕೊರೆದ ಭಾಗವನ್ನು ಮಸಿಯಲ್ಲಿ ಇಲ್ಲವೆ ಬಣ್ಣದಲ್ಲಿ ಅದ್ದಿರಿ. ಬಣ್ಣದ ಭಾಗವನ್ನು ಕಾಗದದ ಮೇಲೆ ಮೂಡಿಸಿರಿ. ಏನಾಗುತ್ತದೆಂಬುದನ್ನು ನಿರೀಕ್ಷಿಸಿರಿ.

## ೩.೩ ಮುದ್ರೆಗಳು-ಪಾತ್ರೆಗಳು

ಹರಪ್ಪಾ ಸಂಸ್ಕೃತಿಯ ಮುದ್ರೆಗಳು ಪ್ರಾಮುಖ್ಯವಾಗಿ ಚೌಕೋನಾಕಾರದ್ದಾಗಿದ್ದು, ಸ್ಟಿಯೆಟೈಟ್ ಎಂಬ ಹೆಸರಿನ ಕಲ್ಲಿನಿಂದ ಮಾಡಲ್ಪಡುತ್ತಿದ್ದವು. ಮುದ್ರೆಗಳ ಮೇಲೆ ವಿವಿಧ ಪ್ರಾಣಿಗಳ ಚಿತ್ರಗಳಿವೆ. ಅವುಗಳಲ್ಲಿ ಎತ್ತು, ಎಮ್ಮೆ, ಆನೆ, ಘೇಂಡಾಮೃಗ, ಹುಲಿ ಗಳಂತಹ ನಿಜವಾದ ಪ್ರಾಣಿಗಳು ಹಾಗೂ ಏಕಶೃಂಗಗಳಂತಹ ಕಾಲ್ಪನಿಕ ಪ್ರಾಣಿಗಳು ನೋಡಲು ಸಿಗುತ್ತವೆ. ಇತರ ಪ್ರಾಣಿಗಳ ಚಿತ್ರಗಳಂತೆ ಮನುಷ್ಯನ ಚಿತ್ರಗಳೂ ಕಂಡುಬರುತ್ತವೆ. ಈ ಮುದ್ರೆಗಳನ್ನು ಮುದ್ರೆಯನ್ನು ಒತ್ತುವ ಸಲುವಾಗಿ ಉಪಯೋಗಿಸಲಾಗುತ್ತಿತ್ತು.



ಮುದ್ರೆಗಳು

**ಮಾಡಿ ನೋಡಿರಿ.**

ಮಣ್ಣಿನ ಪಾತ್ರೆಗಳನ್ನು ಹೇಗೆ ತಯಾರಿಸಲಾಗುತ್ತದೆ. ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಮಣ್ಣಿನ ಪಾತ್ರೆಗಳನ್ನು ತಯಾರಿಸುವ ಕುಶಲ ಕರ್ಮಿಯನ್ನು ಸಂದರ್ಶಿಸಿರಿ.


- ಯಾವ ಪ್ರಕಾರದ ಮಣ್ಣನ್ನು ಉಪಯೋಗಿಸುತ್ತಾರೆ.
- ಮಣ್ಣನ್ನು ಎಲ್ಲಿಂದ ತರುತ್ತಾರೆ ?
- ಒಂದು ಪಾತ್ರೆಯು ತಯಾರಾಗಲು ಎಷ್ಟು ಅವಧಿ ತಗಲುತ್ತದೆ ?

ಹರಪ್ಪಾ ಸಂಸ್ಕೃತಿಯ ಸ್ಥಳಗಳ ಉತ್ಖನನದಲ್ಲಿ ವಿವಿಧ ಪ್ರಕಾರದ ಹಾಗೂ ಆಕಾರದ ಪಾತ್ರೆಗಳು ದೊರೆತಿವೆ. ಅವುಗಳಲ್ಲಿ ಕೆಂಪು ಬಣ್ಣದ ಮೇಲ್ಮೈ ಮೇಲೆ ಕಪ್ಪು ಬಣ್ಣದಿಂದ ರೇಖಾ ಚಿತ್ರಗಳನ್ನು ತೆಗೆದ ಪಾತ್ರೆಗಳಿವೆ. ರೇಖಾ ಚಿತ್ರಗಳ ನಮೂನೆಗಳಲ್ಲಿ ಮೀನುಗಳ ಚಿಪ್ಪುಗಳು, ಒಂದರಲ್ಲೊಂದು ಸೇರಿರುವ ವರ್ತುಳಗಳು ಹಾಗೂ ಅರಳೆಯ ಎಲೆಗಳಂತಹ ಚಿತ್ರಗಳ ಸಮಾವೇಶವಾಗಿದೆ. ಹರಪ್ಪಾ ಸಂಸ್ಕೃತಿಯ ಜನರು ಮೃತ ವ್ಯಕ್ತಿಗಳನ್ನು ಹೂಳುವಾಗ ಆ ಶವದ ಜೊತೆ ಮಣ್ಣಿನ ಪಾತ್ರೆಗಳನ್ನು ಹೂಳುತ್ತಿದ್ದರು.



ಪಾತ್ರೆಗಳು





**ನಿರೀಕ್ಷಣೆ ಮಾಡಿರಿ.**

ನಿಮ್ಮ ಪರಿಸರದಲ್ಲಿಯ ಈಜುವ ಕೊಳಕ್ಕೆ ಭೇಟಿ ನೀಡಿರಿ. ಕೊಳದಲ್ಲಿಯ ನೀರನ್ನು ಬದಲಾಯಿಸುವ ಮತ್ತು ಹೊಸದಾಗಿ ಕೊಳಕ್ಕೆ ನೀರನ್ನು ಬಿಡುವ ಪದ್ಧತಿಯ ನಿರೀಕ್ಷಣೆ ಮಾಡಿರಿ.

ಈಗಿನ ಈಜುವ ಕೊಳ ಮತ್ತು ಹರಪ್ಪಾ ಕಾಲೀನ ಸ್ನಾನಗೃಹ ಇವುಗಳ ತುಲನೆ ಮಾಡಿರಿ.

### ೩.೪ ಮಹಾಸ್ನಾನಗೃಹ

ಮೊಹೆಂಜೋದಾರೋದಲ್ಲಿ ಒಂದು ವಿಶಾಲವಾದ ಸ್ನಾನಗೃಹ ದೊರೆತಿದೆ. ಮಹಾಸ್ನಾನಗೃಹದಲ್ಲಿಯ ಈಜುಗೊಳವು ಸುಮಾರು ೨.೫ ಮೀಟರ ಆಳವಾಗಿತ್ತು. ಅದರ ಉದ್ದಳತೆಯು ಸುಮಾರು ೧೨ ಮೀಟರ ಹಾಗೂ ಅಗಲಳತೆಯು ಸುಮಾರು ೭ ಮೀಟರ ಇತ್ತು. ಕೊಳದಲ್ಲಿಯ ನೀರು ಒಸರಿ ಹೋಗಬಾರದೆಂದು ಅದನ್ನು ಒಳಗಿನಿಂದ ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿತ್ತು. ಅದರಲ್ಲಿ ಇಳಿಯುವ ವ್ಯವಸ್ಥೆ ಇತ್ತು. ಅದರಂತೆ ಅದರಲ್ಲಿಯ ನೀರನ್ನು ಮೇಲಿಂದ ಮೇಲೆ ಬದಲಾಯಿಸುವ ಸೌಕರ್ಯವಿತ್ತು.



ಮೊಹೆಂಜೋದಾರೋದಲ್ಲಿಯ ಮಹಾಸ್ನಾನಗೃಹ

**ಹೇಳಿ, ನೋಡೋಣ**


- ನಿಮ್ಮ ಪರಿಸರದಲ್ಲಿ/ ಊರಲ್ಲಿ ಬೆಳೆಯುವ ಬೆಳೆಗಳ ಹಾಗೂ ಹಣ್ಣುಗಳ ಹೆಸರುಗಳನ್ನು ಬರೆಯಿರಿ.
- ನಿಮ್ಮ ಪರಿಸರದಲ್ಲಿಯ/ಊರಲ್ಲಿಯ ಜನರು ಯಾವ ಯಾವ ಪ್ರಕಾರದ ಬಟ್ಟೆಗಳನ್ನು ಧರಿಸುತ್ತಾರೆ?
- ನಿಮಗೆ ಗೊತ್ತಿರುವ ಆಭರಣಗಳ ಹೆಸರು ಬರೆಯಿರಿ.

## ೩.೫ ಜನಜೀವನ

ಹರಪ್ಪಾ ಸಂಸ್ಕೃತಿಯ ಜನರು ಬೇಸಾಯ ಮಾಡುತ್ತಿದ್ದರು. ಕಾಲೀಬಂಗನ್‌ದಲ್ಲಿ ನೇಗಿಲು ಹೊಡೆದ ಹೊಲದ ಪುರಾವೆ ದೊರಕಿದೆ. ಅಲ್ಲಿಯ ಜನರು ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಗೋದಿ, ಬಾರ್ಲಿ ಇವು ಪ್ರಮುಖ ಬೆಳೆಗಳಾಗಿದ್ದವು. ರಾಜಸ್ಥಾನದಲ್ಲಿ ಬಾರ್ಲಿಯ ಬೆಳೆಯನ್ನು ಹಾಗೂ ಗುಜರಾತದಲ್ಲಿ ರಾಗಿ ಬೆಳೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಇದಲ್ಲದೆ ಬಟಗಡಲೆ, ಎಳ್ಳು, ಚನ್ನಂಗಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಹರಪ್ಪಾ ಸಂಸ್ಕೃತಿಯ ಜನರಿಗೆ ಹತ್ತಿಯ ಪರಿಚಯವಿತ್ತು.

ಉತ್ಖನನದಲ್ಲಿ ದೊರೆತ ವಿಗ್ರಹಗಳು, ಮುದ್ರೆಗಳ ಮೇಲಿನ ಚಿತ್ರಗಳು ಹಾಗೂ ಬಟ್ಟೆಯ ಅವಶೇಷಗಳ ಆಧಾರದ ಮೇಲಿಂದ ಅವರು ಬಟ್ಟೆಯನ್ನು ನೇಯುತ್ತಿದ್ದಿರಬಹುದು. ಸ್ತ್ರೀ-ಪುರುಷರ ವೇಷಭೂಷಣದಲ್ಲಿ ಮೊಣಕಾಲಿನವರೆಗಿನ ಬಟ್ಟೆ ಹಾಗೂ ಉತ್ತರೀಯಗಳ ಸಮಾವೇಶವಾಗಿತ್ತು.

ವಿವಿಧ ಪ್ರಕಾರದ ಆಭರಣಗಳು ಉತ್ಖನನದಲ್ಲಿ ದೊರೆತಿವೆ. ಆ ಆಭರಣಗಳು ಬಂಗಾರ, ತಾಮ್ರ, ರತ್ನ ಅದರಂತೆ ಶಿಂಪಿ, ಕವಡೆ, ಬೀಜ ಮುಂತಾದವುಗಳಿಂದ ಮಾಡಲ್ಪಡುತ್ತಿದ್ದವು. ಅನೇಕ ಎಳೆಯ ಸರಗಳ, ಉಂಗುರಗಳು, ವಂಕಿ, ಡಾಬು-ಮುಂತಾದ ಆಭರಣಗಳನ್ನು ಸ್ತ್ರೀ-ಪುರುಷರು ಧರಿಸುತ್ತಿದ್ದರು. ಸ್ತ್ರೀಯರು ರಟ್ಟೆಯ ವರೆಗೆ ಬಳೆಗಳನ್ನು ಧರಿಸುತ್ತಿದ್ದರು.


**ಹರಪ್ಪಾ ಸಂಸ್ಕೃತಿಯಲ್ಲಿಯ ಆಭರಣಗಳು**

ಹರಪ್ಪಾ ಕಾಲದ ಕಲೆಯ ಉತ್ತಮ ನಮೂನೆ ಎಂದರೆ ಅಲ್ಲಿ ದೊರೆತ ವೈಶಿಷ್ಟ್ಯಪೂರ್ಣವಾದ ವಿಗ್ರಹ. ಅವನ ಮುಖದಲ್ಲಿಯ ಪ್ರತಿಯೊಂದು ಲಕ್ಷಣವು ಅತ್ಯಂತ ಸ್ಪಷ್ಟವಾಗಿದೆ. ಇಷ್ಟೇ ಅಲ್ಲದೆ ಅವನು ಹೆಗಲ ಮೇಲೆ ಹೊದ್ದುಕೊಂಡ ಶಾಲು ಹಾಗೂ ಆ ಶಾಲಿನ ಮೇಲಿನ ತ್ರಿದಳದ ಚಿತ್ರವನ್ನೂ ಅತ್ಯಂತ ಸುಂದರ ರೀತಿಯಿಂದ ತೋರಿಸಲಾಗಿದೆ.


**ಹರಪ್ಪಾಕಾಲದ ಕಲೆಯ ಮಾದರಿ**

**ಮಾಡಿ ನೋಡಿರಿ.**

ನಿಮ್ಮ ಹತ್ತಿರದ ಕಿರಾಣಿ ವಸ್ತುಗಳ ಅಂಗಡಿಗೆ ಭೇಟಿ ನೀಡಿರಿ. ಅಂಗಡಿಕಾರನು ಅಂಗಡಿಯ ಸಲುವಾಗಿ ಕಿರಾಣಿ ವಸ್ತುಗಳನ್ನು ಎಲ್ಲಿಂದ ತರುತ್ತಾನೆ ಎಂಬುದರ ಮಾಹಿತಿ ಪಡೆಯಿರಿ. ವಸ್ತುಗಳ ಪಟ್ಟಿಯನ್ನು ತಯಾರಿಸಿರಿ.

## ೩.೬ ವ್ಯಾಪಾರ

ಹರಪ್ಪಾ ಸಂಸ್ಕೃತಿಯ ಜನರು ಭಾರತದಲ್ಲಿ ಅದರಂತೆ ಹೊರದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದರು. ಸಿಂಧೂ ನದಿಯ ಕೊಳ್ಳದಲ್ಲಿ ಉತ್ತಮ ದರ್ಜೆಯ ಹತ್ತಿ ಬೆಳೆಯುತ್ತಿತ್ತು. ಅದು ಪಶ್ಚಿಮ ಏಷ್ಯ ದಕ್ಷಿಣ ಯುರೋಪ ಹಾಗೂ ಈಜಿಪ್ಟ್ ಈ ಪ್ರದೇಶಗಳಿಗೆ ನಿರ್ಯಾತವಾಗುತ್ತಿತ್ತು. ನೂಲಿನ ಬಟ್ಟೆ ಕೂಡ ನಿರ್ಯಾತವಾಗುತ್ತಿತ್ತು. ಈಜಿಪ್ಟ್‌ಗೆ ಮಲ್‌ಮಲ್ ಬಟ್ಟೆಯನ್ನು ಹರಪ್ಪಾ ಸಂಸ್ಕೃತಿಯ ವ್ಯಾಪಾರಿಗಳು ಪೂರೈಸುತ್ತಿದ್ದರು. ಕಾಶ್ಮೀರ, ದಕ್ಷಿಣ ಭಾರತ, ಇರಾಣ, ಅಫಗಾನಿಸ್ತಾನ ಹಾಗೂ ಬಲೂಚಿಸ್ತಾನಗಳಿಂದ ಬೆಳ್ಳಿ, ಸತುವು, ರತ್ನ, ಮಾಣಿಕ, ದೇವದಾರು ಕಟ್ಟಿಗೆ ಇತ್ಯಾದಿ ವಸ್ತುಗಳನ್ನು ತರಿಸಲಾಗುತ್ತಿತ್ತು. ವಿದೇಶಗಳ ಜೊತೆ ನಡೆಯುವ ವ್ಯಾಪಾರವು ಭೂಮಾರ್ಗ ಮತ್ತು ಸಮುದ್ರಮಾರ್ಗ- ಈ ಎರಡೂ ಮಾರ್ಗಗಳಿಂದ ನಡೆಯುತ್ತಿತ್ತು. ಉತ್ಖನನದಲ್ಲಿ ದೊರೆತ ಕೆಲವು ಮುದ್ರೆಗಳ ಮೇಲೆ ಹಡಗುಗಳ ಚಿತ್ರವನ್ನು ಕೊರೆಯಲಾಗಿದೆ. ಲೋಥಲ್ ಎಂಬಲ್ಲಿ ಪ್ರಚಂಡ ಆಕಾರದ ಹಡಗುಕಟ್ಟೆಯು ದೊರೆತಿದೆ. ಹರಪ್ಪಾ ಸಂಸ್ಕೃತಿಯ ವ್ಯಾಪಾರವು ಅರಬೀ ಸಮುದ್ರ ತೀರದಿಂದ ನಡೆಯುತ್ತಿತ್ತು.



ಲೋಥಲ್‌ದಲ್ಲಿಯ ಹಡಗುಕಟ್ಟೆ (ಅವಶೇಷಗಳ ಆಧಾರದಿಂದ ಪುನರ್‌ರಚನೆ)

## ೩.೭ ಅವನತಿಯ ಕಾರಣಗಳು

ಮೇಲಿಂದ ಮೇಲೆ ಬರುವ ಮಹಾಪೂರ, ಹೊರಗಿನಿಂದ ಬಂದ ತಂಡಗಳ ಆಕ್ರಮಣ, ವ್ಯಾಪಾರದ ಅವನತಿಗಳಂತಹ ಸಂಗತಿಗಳು ಹರಪ್ಪಾ ಸಂಸ್ಕೃತಿಯು ಅವನತಿ ಹೊಂದಲು ಕಾರಣೀಭೂತವಾಗಿದ್ದವು. ಅದರ ಜೊತೆ ಪರ್ಜನ್ಯ ಕಡಿಮೆಯಾಗುವಿಕೆ, ನದಿಗಳ ಪಾತ್ರಗಳು ಒಣಗಿ ಹೋಗುವುದು, ಭೂಕಂಪ, ಸಮುದ್ರ ಪಾತಳಿಯಲ್ಲಿಯ ಬದಲಾವಣೆ ಇತ್ಯಾದಿ ಕಾರಣಗಳಿಂದಲೂ ಕೆಲವು ಸ್ಥಳಗಳು ಬರಡಾದವು. ಇಂಥ ಕಾರಣಗಳಿಂದಾಗಿ ಜನರು ದೊಡ್ಡ ಪ್ರಮಾಣದಲ್ಲಿ ಸ್ಥಳಾಂತರ ಮಾಡಿದರು ಹಾಗೂ ಹರಪ್ಪಾ ಸಂಸ್ಕೃತಿಯಲ್ಲಿಯ ಪಟ್ಟಣಗಳ ಅವನತಿಯಾಯಿತು.

ಹರಪ್ಪಾ ಸಂಸ್ಕೃತಿಯು ಊರ್ಜಿತಾವಸ್ಥೆಯಲ್ಲಿದ್ದ ಸಂಪನ್ನವಾದ ನಾಗರಿಕ ಸಂಸ್ಕೃತಿಯಾಗಿತ್ತು. ಅದು ಭಾರತೀಯ ಸಂಸ್ಕೃತಿಗೆ ತಳಹದಿಯನ್ನು ಹಾಕಿತು.

## ಅಭ್ಯಾಸ

**೧. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಈ ಸಂಸ್ಕೃತಿಗೆ 'ಹರಪ್ಪಾ ಸಂಸ್ಕೃತಿ' ಎಂಬ ಹೆಸರು ಏಕೆ ದೊರಕಿತು ?

(೨) ಹರಪ್ಪಾ ಸಂಸ್ಕೃತಿಯ ಪಾತ್ರೆಗಳ ಮೇಲಿನ ಚಿತ್ರಗಳ ನಮೂನೆಗಳಲ್ಲಿ ಯಾವ ರೇಖಾಚಿತ್ರಗಳ ಸಮಾವೇಶವಾಗುತ್ತದೆ ?

(೩) ಹರಪ್ಪಾ ಸಂಸ್ಕೃತಿಯ ವ್ಯಾಪಾರಿಗಳು ಈಜಿಪ್ಟ್‌ಗೆ ಯಾವ ಬಟ್ಟೆಯನ್ನು ಪೂರೈಸುತ್ತಿದ್ದರು ?

**೨. ಪ್ರಾಚೀನ ಸ್ಥಳಗಳಿಗೆ ಭೇಟಿ ನೀಡುವಾಗ ಏನು ಮಾಡುವಿರಿ ?**

ಉದಾ– ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸುವಿರಿ, ಮಾಲಿನ್ಯವನ್ನು ತಡೆಯುವಿರಿ, ಐತಿಹಾಸಿಕ ಸಾಧನಗಳನ್ನು ರಕ್ಷಣೆ ಮಾಡುವಿರಿ, ಇತ್ಯಾದಿ.

**೩. ಮೊಹೆಂಜೊದಾರೋದಲ್ಲಿಯ ಸ್ನಾನಗೃಹದ ಚಿತ್ರವನ್ನು ತೆಗೆಯಿರಿ.**

**೪. ಕೆಳಗಿನ ಕೋಷ್ಟಕದಲ್ಲಿ ಹರಪ್ಪಾಕಾಲದ ಜನಜೀವನದ ಮಾಹಿತಿಯನ್ನು ಬರೆಯಿರಿ.**

| ಪ್ರಮುಖ ಬೆಳೆಗಳು | ವೇಷಭೂಷಣಗಳು | ಆಭರಣಗಳು/ಅಲಂಕಾರ |
|---|---|---|
| (೧) ---- | ---- | ---- |
| (೨) ---- | ---- | ---- |
| (೩) ---- | ---- | ---- |
| (೪) ---- | ---- | ---- |

**೫. ಒಂದು ಶಬ್ದದಲ್ಲಿ ಉತ್ತರ ಬರೆಯಿರಿ. ಇಂಥ ಪ್ರಶ್ನೆಗಳನ್ನು ನೀವು ಸ್ವತಃ ತಯಾರಿಸಿರಿ ಹಾಗೂ ಅವುಗಳ ಉತ್ತರ ಬರೆಯಿರಿ?**

ಉದಾ: ಹರಪ್ಪಾ ಸಂಸ್ಕೃತಿಯಲ್ಲಿ ಮುದ್ರೆಗಳನ್ನು ತಯಾರಿಸಲು ಉಪಯೋಗಿಸಿದ ಕಲ್ಲು.

**೬. ಹರಪ್ಪಾ ಸಂಸ್ಕೃತಿಯ ಕಾಲದಲ್ಲಿಯ ಇತರ ಜಾಗತಿಕ ಸಂಸ್ಕೃತಿಗಳನ್ನು ಜಗತ್ತಿನ ನಕಾಶೆಯಲ್ಲಿ ತೋರಿಸಿರಿ.**

**ಉಪಕ್ರಮ:**

(೧) ನಿಮ್ಮ ಶಾಲೆಯ ನಕ್ಷೆಯನ್ನು ತಯಾರಿಸಿರಿ. ಅದರಲ್ಲಿ ಶಾಲೆಯಲ್ಲಿಯ ವಿವಿಧ ಸ್ಥಳಗಳನ್ನು ತೋರಿಸಿರಿ. ಉದಾ. ಗ್ರಂಥಾಲಯ, ಆಟದ ಬಯಲು ಗಣಕಯಂತ್ರದ ಕೋಣೆ ಇತ್ಯಾದಿ.

(೨) ನಿಮ್ಮ ಊರಲ್ಲಿಯ ಹಾಗೂ ಮನೆಯಲ್ಲಿಯ ಧಾನ್ಯವನ್ನು ಸಂಗ್ರಹಿಸುವ ಪದ್ಧತಿಗಳನ್ನು ಕುರಿತು ಟಿಪ್ಪಣೆ ಬರೆಯಿರಿ.

* * *







ಹರಪ್ಪಾಕಾಲದ ಆಟಿಗೆಗಳು

# ೪. ವೈದಿಕ ಸಂಸ್ಕೃತಿ

೪.೧ ವೈದಿಕ ವಾಙ್ಮಯ
೪.೨ ಕುಟುಂಬ ವ್ಯವಸ್ಥೆ, ದೈನಂದಿನ ಜೀವನ
೪.೩ ಕೃಷಿ, ಪದಶುಪಾಲನೆ, ಆರ್ಥಿಕ ಮತ್ತು ಸಾಮಾಜಿಕ ಜೀವನ
೪.೪ ಧಾರ್ಮಿಕ ಕಲ್ಪನೆಗಳು
೪.೫ ರಾಜ್ಯಾಡಳಿತ ವ್ಯವಸ್ಥೆ

## ೪.೧. ವೈದಿಕ ವಾಙ್ಮಯ

'ವೇದ' ವಾಙ್ಮಯದ ಮೇಲೆ ಆಧಾರಿತವಾದ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿ ಹೌದು. ವೇದಗಳನ್ನು ಅತ್ಯಂತ ಪ್ರಾಚೀನ ಸಾಹಿತ್ಯವೆಂದು ಮನ್ನಿಸಲಾಗುತ್ತದೆ. ವೇದಗಳ ನಿರ್ಮಿತಿಯನ್ನು ಅನೇಕ ಋಷಿಗಳು ಮಾಡಿದರು. ವೇದಗಳಲ್ಲಿಯ ಕೆಲವು ಸೂಕ್ತಗಳು ಸ್ತ್ರೀಯರಿಗೂ ಸ್ಫುರಿಸಿವೆ.

ವೇದ ವಾಙ್ಮಯದ ಭಾಷೆ ಸಂಸ್ಕೃತವಾಗಿತ್ತು. ವೈದಿಕ ವಾಙ್ಮಯವು ಅತ್ಯಂತ ಸಮೃದ್ಧವಾಗಿದೆ. ಋಗ್ವೇದವನ್ನು ಅದರಲ್ಲಿಯ ಮೂಲಗ್ರಂಥವೆಂದು ತಿಳಿಯಲಾಗುತ್ತದೆ. ಅದು ಕಾವ್ಯರೂಪದಲ್ಲಿದೆ. ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವವೇದ ಎಂಬ ನಾಲ್ಕು ವೇದಗಳಿವೆ. ಈ ನಾಲ್ಕು ವೇದಗಳ ಗ್ರಂಥಗಳಿಗೆ 'ಸಂಹಿತಾ' ಎನ್ನುವರು. ವಿದ್ ಎಂದರೆ ಅರಿಯುವುದು ಇದರಿಂದ 'ವೇದ' ಈ ಸಂಜ್ಞೆ ನಿರ್ಮಾಣವಾಯಿತು. ಅದರ ಅರ್ಥ 'ಜ್ಞಾನ' ಎಂದಾಗುತ್ತದೆ. ಕಂಠಪಾಠದ ಆಧಾರದಿಂದ ವೇದಗಳನ್ನು ಕಾಯ್ದುಕೊಂಡು ಬರಲಾಯಿತು. ವೇದಗಳಿಗೆ 'ಶ್ರುತಿ' ಎಂದೂ ಕರೆಯುತ್ತಾರೆ.

**ಋಗ್ವೇದ ಸಂಹಿತೆ:** ಋಚಾಗಳಿಂದ ನಿರ್ಮಾಣವಾದ ವೇದವೆಂದರೆ 'ಋಗ್ವೇದ' ಹೌದು. 'ಋಚಾ' ಎಂದರೆ ಸ್ತುತಿ ಮಾಡುವ ಸಲುವಾಗಿ ರಚಿಸಿದ ಪದ್ಯ. ಅನೇಕ ಋಚಾಗಳನ್ನು ಒಂದೆಡೆ ಹೆಣೆದು ಯಾವುದೊಂದು ದೇವತೆಯನ್ನು ಸ್ತುತಿಸುವ ಸಲುವಾಗಿ ನಿರ್ಮಿಸಲಾದ ಕಾವ್ಯಕ್ಕೆ ಸೂಕ್ತ ಎನ್ನುತ್ತಾರೆ. ಋಗ್ವೇದ ಸಂಹಿತೆಯಲ್ಲಿ ವಿವಿಧ ದೇವತೆಗಳನ್ನು ಸ್ತುತಿಸುವ ಸೂಕ್ತಗಳಿವೆ.

**ಯಜುರ್ವೇದ ಸಂಹಿತೆ:** ಯಜುರ್ವೇದ ಸಂಹಿತೆಯಲ್ಲಿ ಯಜ್ಞದಲ್ಲಿ ಪಠಿಸಲಾಗುವ ಮಂತ್ರಗಳಿವೆ. ಯಜ್ಞವಿಧಿಯಲ್ಲಿ ಯಾವ ಮಂತ್ರವನ್ನು ಯಾವಾಗ ಮತ್ತು ಹೇಗೆ ಪಠಿಸಬೇಕೆಂಬುದರ ಮಾರ್ಗದರ್ಶನವು ಈ ಸಂಹಿತೆಯಲ್ಲಿ ಇದೆ. ಪದ್ಯದಲ್ಲಿರುವ ಮಂತ್ರಗಳು ಹಾಗೂ ಗದ್ಯರೂಪದಲ್ಲಿ ಕೊಡಲಾದ ಆ ಮಂತ್ರಗಳ ಸ್ಪಷ್ಟೀಕರಣ ಹೀಗೆ ಈ ಸಂಹಿತೆಯ ರಚನೆ ಇದೆ.



**ನಿಮಗೆ ಗೊತ್ತಿದೆಯೇ ?**

**ಕನ್ನಡ ಭಾಷೆಯಲ್ಲಿ ಕೆಲವು ಸೂಕ್ತಗಳ ಅರ್ಥ**

* ''ಹೇ ದೇವನೇ, ಸಾಕಷ್ಟು ಬರಿಸು. ನಮ್ಮ ಹೊಲದಲ್ಲಿ ಹುಲುಸಾಗಿ ಬೆಳೆ ಬರಲಿ. ನಮ್ಮ ಮಕ್ಕಳಿಗೆ ಸಾಕಷ್ಟು ಹಾಲು-ಹೈನು ಕೊಡು.''
* ''ಗೋವುಗಳು ನಮ್ಮ ಮನೆಗೆ ಬರಲಿ. ನಮ್ಮ ದವಣೆಯಲ್ಲಿ ಅವು ಆನಂದದಿಂದ ಇರಲಿ. ಅವುಗಳಿಗೆ ಅನೇಕ ಕರುಗಳಾಗಲಿ.''
* ''ಜನರೇ, ಎದ್ದೇಳಿ. ಉಷೆಯ ಆಗಮನದೊಂದಿಗೆ ಕತ್ತಲೆಯು ನಾಶವಾಗಿದೆ ಹಾಗೂ ಪ್ರಕಾಶದ ಆಗಮನವಾಗುತ್ತಿದೆ. ಉಷೆಯು ಸರ್ವಜಗತ್ತನ್ನು ಎಚ್ಚರಿಸಿದ್ದಾಳೆ. ನಾವು ನಮ್ಮ ನಮ್ಮ ಉದ್ಯೋಗವನ್ನು ಮಾಡಿ ಧನವನ್ನು ಗಳಿಸೋಣ.''

**ಸಾಮವೇದ ಸಂಹಿತೆ :** ಕೆಲವು ಯಜ್ಞವಿಧಿಗಳ ಸಮಯದಲ್ಲಿ ತಾಳಸ್ವರದಲ್ಲಿ ಮಂತ್ರಗಾಯನ ಮಾಡಲಾಗುತ್ತಿತ್ತು. ಆ ಮಂತ್ರಗಾಯನವನ್ನು ಹೇಗೆ ಮಾಡಬೇಕು ಎಂಬುದರ ಮಾರ್ಗದರ್ಶನ ಸಾಮವೇದ ಸಂಹಿತೆಯಲ್ಲಿದೆ. ಭಾರತೀಯ ಸಂಗೀತ ನಿರ್ಮಿತಿಯಲ್ಲಿ ಸಾಮವೇದವು ಸಿಂಹಪಾಲನ್ನು ಹೊಂದಿದೆ.

**ಅಥರ್ವವೇದ ಸಂಹಿತೆ:** ಅಥರ್ವವೇದ ಸಂಹಿತೆಗೆ ಅಥರ್ವ ಋಷಿಗಳ ಹೆಸರನ್ನು ನೀಡಲಾಗಿದೆ. ಅಥರ್ವವೇದದಲ್ಲಿ ದೈನಂದಿನ ಜೀವನದಲ್ಲಿಯ ಅನೇಕ ಸಂಗತಿಗಳಿಗೆ ಮಹತ್ವ ನೀಡಿದುದು ಕಂಡುಬರುತ್ತದೆ. ಜೀವನದಲ್ಲಿ ಬರುವ ಸಂಕಟಗಳ ಮೇಲೆ, ನೋವುಗಳ ಮೇಲೆ ಮಾಡಲಾಗುವ ಉಪಾಯಗಳನ್ನು ಅದರಲ್ಲಿ ಹೇಳಲಾಗಿದೆ. ಅದರಂತೆ ಅನೇಕ ಔಷಧಿ-ವನಸ್ಪತಿಗಳ ಮಾಹಿತಿಯನ್ನು ಅದರಲ್ಲಿ ಕೊಡಲಾಗಿದೆ. ರಾಜನು ರಾಜ್ಯಾಡಳಿತವನ್ನು ಹೇಗೆ ಮಾಡಬೇಕು ಎಂಬುದರ ಮಾರ್ಗದರ್ಶನ ಅದರಲ್ಲಿ ಮಾಡಲಾಗಿದೆ.

ಸಂಹಿತೆಗಳ ರಚನೆಯ ನಂತರ ಬ್ರಾಹ್ಮಣಗ್ರಂಥ, ಅರಣ್ಯಕಗಳು ಹಾಗೂ ಉಪನಿಷತ್ತುಗಳ ರಚನೆ ಮಾಡಲಾಯಿತು. ಅವುಗಳ ಸಮಾವೇಶನ್ನು ಕೂಡ ವೇದ ವಾಙ್ಮಯದಲ್ಲಿ ಮಾಡಲಾಗುತ್ತದೆ.

**ಬ್ರಾಹ್ಮಣಗ್ರಂಥ :** ಯಜ್ಞವಿಧಿಯಲ್ಲಿ ವೇದಗಳ ಉಪಯೋಗವನ್ನು ಹೇಗೆ ಮಾಡಬೇಕು ಎಂಬುದನ್ನು ಹೇಳುವ ಗ್ರಂಥಗಳಿಗೆ 'ಬ್ರಾಹ್ಮಣಗ್ರಂಥ' ಎನ್ನುವರು. ಪ್ರತಿಯೊಂದು ವೇದಕ್ಕೆ ಸ್ವತಂತ್ರ ಬ್ರಾಹ್ಮಣಗ್ರಂಥಗಳಿವೆ.

**ಅರಣ್ಯಕಗಳು :** ಅರಣ್ಯಕ್ಕೆ ಹೋಗಿ ಏಕಾಗ್ರಚಿತ್ತದಿಂದ

ಮಾಡಿದ ಚಿಂತನೆಯನ್ನು 'ಅರಣ್ಯಕ ಗ್ರಂಥ'ಗಳಲ್ಲಿ ಮಂಡಿಸಲಾಗಿದೆ. ಯಜ್ಞವಿಧಿಯನ್ನು ನೆರವೇರಿಸುವಾಗ ಯಾವುದೇ ರೀತಿಯ ತಪ್ಪು ಆಗಬಾರದು ಎಂಬುದರ ದಕ್ಷತೆ ವಹಿಸಿದುದು ಕಂಡುಬರುತ್ತದೆ.

**ಉಪನಿಷತ್ತುಗಳು:** ಉಪನಿಷತ್ತು ಎಂದರೆ ಗುರುವಿನಬಳಿ ಕುಳಿತುಕೊಂಡು ಪಡೆದ ಜ್ಞಾನ. ಜನನ-ಮರಣಗಳಂತಹ ಘಟನೆಗಳನ್ನು ಕುರಿತು ನಮ್ಮ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ನಿರ್ಮಾಣವಾಗುತ್ತಿರುತ್ತವೆ. ಆ ಪ್ರಶ್ನೆಗಳಿಗೆ ಉತ್ತರಗಳು ಸಹಜವಾಗಿ ದೊರೆಯುವುದಿಲ್ಲ, ಇಂಥ ಗಹನ ಪ್ರಶ್ನೆಗಳನ್ನು ಕುರಿತು ಉಪನಿಷತ್ತುಗಳಲ್ಲಿ ಚರ್ಚೆ ಮಾಡಲಾಗಿದೆ.

ನಾಲ್ಕು ವೇದಗಳು, ಬ್ರಾಹ್ಮಣ ಗ್ರಂಥಗಳು, ಅರಣ್ಯಕಗಳು ಹಾಗೂ ಉಪನಿಷತ್ತುಗಳನ್ನು ರಚಿಸಲು ಸುಮಾರು ಹದಿನೈದು ನೂರು ವರ್ಷಗಳ ಕಾಲಾವಧಿ ತಗುಲಿತು. ಆ ಕಾಲಾವಧಿಯಲ್ಲಿ ವೇದಕಾಲೀನ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳು ಆಗುತ್ತ ಹೋದವು. ಆ ಬದಲಾವಣೆಗಳ ಹಾಗೂ ವೇದಕಾಲದ ಜನಜೀವನದ ಅಭ್ಯಾಸ ಮಾಡಲು ವೈದಿಕ ವಾಙ್ಮಯವು ಮಹತ್ವದ ಸಾಧನವಾಗಿದೆ.

### ೪.೨ ಕುಟುಂಬ ವ್ಯವಸ್ಥೆ, ದೈನಂದಿನ ಜೀವನ

ವೇದಕಾಲದಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇತ್ತು. ಕುಟುಂಬದಲ್ಲಿಯ ಹಿರಿಯ ಪುರುಷನು ಮನೆಯ ಪ್ರಮುಖ ಅಂದರೆ 'ಗೃಹಪತಿ' ಯಾಗಿದ್ದನು. ಗೃಹಪತಿಯ ಕುಟುಂಬದಲ್ಲಿ ಅವನ ವೃದ್ಧ ತಾಯಿ-ತಂದೆ, ಅವನ ತಮ್ಮ ಹಾಗೂ ತಮ್ಮನ ಪರಿವಾರ, ಅವನ ಹೆಂಡತಿ ಹಾಗೂ ಮಕ್ಕಳು, ಅವನ ಮಗನ ಕುಟುಂಬ-ಹೀಗೆ ಎಲ್ಲರ ಸಮಾವೇಶವಿರುತ್ತಿತ್ತು. ಈ ಕುಟುಂಬ ವ್ಯವಸ್ಥೆಯು ಪುರುಷ ಪ್ರಧಾನವಾಗಿತ್ತು. ಆರಂಭದ ಕಾಲದಲ್ಲಿ ಲೋಪಾಮುದ್ರಾ, ಗಾರ್ಗಿ, ಮೈತ್ರೇಯಿ ಮುಂತಾದ ಕೆಲವು ವಿದುಷಿಯರ ಉಲ್ಲೇಖವು ವೈದಿಕ ಸಾಹಿತ್ಯಗದಲ್ಲಿ ಕಂಡುಬರುತ್ತದೆ. ಆದರೆ ಕ್ರಮೇಣವಾಗಿ ಸ್ತ್ರೀಯರ ಮೇಲಿನ ನಿರ್ಬಂಧಗಳು ಹೆಚ್ಚುತ್ತ ಹೋದವು. ಕುಟುಂಬ ಹಾಗೂ ಸಮಾಜದಲ್ಲಿಯ ಅವರ ಸ್ಥಾನಮಾನವು ಕಡಿಮೆ ದರ್ಜೆಯದಾಗುತ್ತ ಹೋಯಿತು.

ವೇದಕಾಲದಲ್ಲಿ ಮಣ್ಣಿನ ಇಲ್ಲವೆ ಹುಲ್ಲಿನ ಮನೆಗಳಿರುತ್ತಿದ್ದವು. ಹುಲ್ಲಿನ ಇಲ್ಲವೆ ಬಳ್ಳಿಯ ದಪ್ಪವಾದ ತಟ್ಟಿಯನ್ನು ಹೆಣೆದು ಅದರ ಮೇಲೆ ಸೆಗಣಿಮಣ್ಣನ್ನು ಮೆತ್ತಿ ಗೋಡೆಯನ್ನು ತಯಾರಿಸಲಾಗುತ್ತಿತ್ತು. ಈ ಮನೆಗಳಲ್ಲಿ ನೆಲವನ್ನು ಸೆಗಣಿ-ಮಣ್ಣಿನಿಂದ ಸಾರಿಸಲಾಗುತ್ತಿತ್ತು. ಮನೆಗೆ 'ಗೃಹ' ಇಲ್ಲವೆ 'ಶಾಲೆ' ಎಂಬ ಶಬ್ದಗಳನ್ನು ಬಳಸಲಾಗುತ್ತಿತ್ತು.

ವೇದಕಾಲದ ಜನರ ಆಹಾರದಲ್ಲಿ ಮುಖ್ಯವಾಗಿ ಗೋದಿ, ಬಾರ್ಲಿ, ಅಕ್ಕಿ ಈ ತೃಣಧಾನ್ಯಗಳ ಸಮಾವೇಶವಿತ್ತು. ಅವುಗಳಿಂದ ಅವರು ವಿವಿಧ ಪದಾರ್ಥಗಳನ್ನು ತಯಾರಿಸುತ್ತಿದ್ದರು. ವೈದಿಕ ವಾಙ್ಮಯದಲ್ಲಿ 'ಯವ', 'ಗೋಧೂಮ', 'ವ್ರೀಹಿ' ಮುಂತಾದ ಶಬ್ದಗಳು ಕಂಡುಬರುತ್ತವೆ. 'ಯವ' ಎಂದರೆ ಬಾರ್ಲಿ, ಗೋಧೂಮ ಎಂದರೆ ಗೋದಿ. ವ್ರೀಹಿ ಎಂದರೆ ಅಕ್ಕಿ, ಹಾಲು, ಮೊಸರು, ಬೆಣ್ಣೆ, ತುಪ್ಪ, ಜೇನುತುಪ್ಪ ಈ ಪದಾರ್ಥಗಳು ಅವರ ಮೆಚ್ಚಿನದಾಗಿದ್ದವು. ಉದ್ದು, ಚನ್ನಂಗಿ, ಎಳ್ಳು, ಮಾಂಸ ಇತ್ಯಾದಿ ಪದಾರ್ಥಗಳು ಕೂಡ ಅವರ ಆಹಾರದಲ್ಲಿ ಸಮಾವೇಶವಾಗಿದ್ದವು.



ವೇದಕಾಲದ ಮನೆಗಳು

ವೇದಕಾಲದ ಜನರು ಉಣ್ಣೆಯ ಹಾಗೂ ನೂಲಿನ ಬಟ್ಟೆಗಳನ್ನು ಧರಿಸುತ್ತಿದ್ದರು. ವಲ್ಕಲ ಎಂದರೆ ಮರದ ತೊಗಟೆಯಿಂದ ತಯಾರಿಸಿದ ಬಟ್ಟೆಗಳನ್ನೂ ಧರಿಸುತ್ತಿದ್ದರು. ಅದರಂತೆ ಪ್ರಾಣಿಗಳ ಚರ್ಮವನ್ನು ಕೂಡ ಬಟ್ಟೆಯಂತೆ ಉಪಯೋಗಮಾಡಲಾಗುತ್ತಿತ್ತು. ಸ್ತ್ರೀ ಹಾಗೂ ಪುರುಷರು ಹೂವಿನ ಮಾಲೆಗಳನ್ನು, ವಿವಿಧ ಪ್ರಕಾರದ ಮಣಿಗಳ ಸರಗಳನ್ನು ಹಾಗೂ ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು. 'ನಿಷ್ಕ' ಎಂಬ ಹೆಸರಿನ ಕಂಠಾಭರಣವು ವಿಶೇಷ ಜನಪ್ರಿಯವಾಗಿದ್ದಿರಬಹುದು. ಅದರ ಉಪಯೋಗವು ಕ್ರಯ-ವಿಕ್ರಯಕ್ಕಾಗಿಯೂ ಆಗುತ್ತಿತ್ತು.

ಗಾಯನ, ವಾದನ, ನೃತ್ಯ, ಪಗಡೆಯಾಟ, ರಥಗಳ ಪಂದ್ಯ ಹಾಗೂ ಬೇಟೆ ಇವು ಅವರ ಮನರಂಜನೆಯ ಸಾಧನಗಳಾಗಿದ್ದವು. ವೀಣೆ, ಶತತಂತಿ, ತಾಳ ಮತ್ತು ಶಂಖ ಇವು ಅವರ ಪ್ರಮುಖ ವಾದ್ಯಗಳಾಗಿದ್ದವು. ಡಮರುಗ ಹಾಗೂ ಮೃದಂಗ ಈ ತಾಲವಾದ್ಯಗಳನ್ನು ಅವರು ಬಳಸುತ್ತಿದ್ದರು.



ವೇದಕಾಲದ ವಾದ್ಯಗಳು

## ೪.೩. ಕೃಷಿ, ಪಶುಪಾಲನೆ, ಆರ್ಥಿಕ ಮತ್ತು ಸಾಮಾಜಿಕ ಜೀವನ

ವೈದಿಕಕಾಲದಲ್ಲಿ ಕೃಷಿಯು ಮುಖ್ಯ ಉದ್ಯೋಗವಾಗಿತ್ತು. ಅನೇಕ ಎತ್ತುಗಳನ್ನು ನೊಗಕ್ಕೆ ಹೂಡಿ ನೇಗಿಲು ಹೊಡೆಯಲಾಗುತ್ತಿತ್ತು. ನೇಗಿಲಿಗೆ ಕಬ್ಬಿಣದ ಕುಳವನ್ನು ಜೋಡಿಸಲಾಗುತ್ತಿತ್ತು. ಅಥರ್ವವೇದದಲ್ಲಿ ಬೆಳೆಗಳನ್ನು ನಾಶಪಡಿಸುವ ಕೀಟಗಳು, ಬೆಳೆಗಳನ್ನು ಧ್ವಂಸಗೊಳಿಸುವ ಪ್ರಾಣಿಗಳು ಹಾಗೂ ಅವುಗಳ ಮೇಲಿನ ಉಪಾಯ ಮುಂತಾದವುಗಳ ವಿಚಾರವನ್ನು ಮಾಡಿದ್ದು ಕಂಡುಬರುತ್ತದೆ. ಗೊಬ್ಬರಕ್ಕಾಗಿ ಸೆಗಣಿಯ ಉಪಯೋಗ ಮಾಡಲಾಗುತ್ತಿತ್ತು.


ವೈದಿಕಕಾಲದಲ್ಲಿ ಕುದುರೆ, ಆಕಳು– ಎತ್ತು, ನಾಯಿ ಮುಂತಾದ ಪ್ರಾಣಿಗಳಿಗೆ ವಿಶೇಷ ಮಹತ್ವವಿತ್ತು. ವಿನಿಮಯಕ್ಕಾಗಿ ಆಕಳುಗಳ ಉಪಯೋಗ ಮಾಡಲಾಗುತ್ತಿತ್ತು. ಅದರಿಂದಾಗಿ ಆಕಳುಗಳಿಗೆ ತುಂಬಾ ಬೆಲೆ ಇರುತ್ತಿತ್ತು. ಇತರರು ಆಕಳುಗಳನ್ನು ಕದ್ದೊಯ್ಯಬಾರದೆಂದು ವಿಶೇಷ ದಕ್ಷತೆ ವಹಿಸಲಾಗುತ್ತಿತ್ತು. ಕುದುರೆಯು ಅತ್ಯಂತ ವೇಗದಿಂದ ಓಡುವ ಪ್ರಾಣಿ. ಅದನ್ನು ಪಳಗಿಸಿ ರಥಕ್ಕೆ ಹೂಡುವುದರಲ್ಲಿ ವೇದಕಾಲದ ಜನರು ಪಾರಂಗತರಾಗಿದ್ದರು. ವೇದಕಾಲದ ರಥದ ಚಕ್ರಗಳಿಗೆ ಕಡಿಹಲ್ಲುಗಳು ಇರುತ್ತಿದ್ದವು. ಅಖಂಡವಾದ ಚಕ್ರಗಳಿಗಿಂತ ಕಡಿಹಲ್ಲುಗಳ ಚಕ್ರಗಳು ಹಗುರಾಗಿದ್ದವು. ಕುದುರೆಗಳನ್ನು ಜೋಡಿಸಿದ ಕಡಿಹಲ್ಲುಗಳ ಚಕ್ರಗಳುಳ್ಳ ವೇದಕಾಲದ ರಥಗಳು ಶೀಘ್ರಗಾಮಿಯಾಗಿದ್ದವು.



**ವೇದಕಾಲದ ರಥ**

### ನಿಮಗೆ ಗೊತ್ತಿದೆಯೇ ?

ಕುದುರೆಗೆ 'ಅಶ್ವ' ಎನ್ನುತ್ತಾರೆ. ಯಾವುದೊಂದು ಇಂಜನ್ನಿನ ವೇಗವನ್ನು ಅಳೆಯುವ ಸಲುವಾಗಿ ಬಳಸಲಾಗುವ ಘಟಕಕ್ಕೆ 'ಅಶ್ವಶಕ್ತಿ' (ಹಾರ್ಸ್ ಪಾವರ್) ಎನ್ನುತ್ತಾರೆ.



ಆ ಕಾಲದಲ್ಲಿ ಕೃಷಿ ಮತ್ತು ಪಶುಪಾಲನೆಯಲ್ಲಿ ಇತರ ಅನೇಕ ಉದ್ಯೋಗಗಳ ವಿಕಾಸವಾಗಿತ್ತು. ಪರಂಪರಾಗತ ಕುಶಲಕರ್ಮಿಗಳು ಸಮಾಜ ವ್ಯವಸ್ಥೆಯ ಮಹತ್ವದ ಭಾಗವಾಗಿದ್ದರು. 'ಶ್ರೇಣಿ' ಎಂಬ ಹೆಸರಿನಿಂದ ಗುರುತಿಸಲಾಗುವ ಅವರ ಸ್ವತಂತ್ರ ಸಂಘಟನೆಗಳಿದ್ದವು. ಇಂಥ ಶ್ರೇಣಿಗಳ ಪ್ರಮುಖನಿಗೆ 'ಶ್ರೇಷ್ಠಿ' ಎನ್ನುತ್ತಿದ್ದರು. ಆದರೆ ಕ್ರಮೇಣವಾಗಿ ಪರಂಪರಾಗತ ಕುಶಲಕರ್ಮಿಗಳ ಸ್ಥಾನಮಾನ ಕಡಿಮೆಯಾಗುತ್ತ ಹೋಯಿತು.

ಆ ಕಾಲದ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ವರ್ಣಗಳಿದ್ದವು. ಈ ವರ್ಣಗಳು ಅವರ ಉದ್ಯೋಗ ಮೇಲಿಂದ ನಿರ್ಧರಿಸಲ್ಪಡುತ್ತಿದ್ದವು. ನಂತರದ ಕಾಲದಲ್ಲಿ ವರ್ಣವು ಹುಟ್ಟಿನ ಮೇಲಿಂದ ನಿರ್ಧಾರವಾಗತೊಡಗಿತು. ಇದರಿಂದಾಗಿ ಜಾತಿಗಳು ನಿರ್ಮಾಣವಾದವು. ಜಾತಿವ್ಯವಸ್ಥೆಯಿಂದಾಗಿ ಸಮಾಜದಲ್ಲಿ ವಿಷಮತೆ ನಿರ್ಮಾಣವಾಯಿತು.

ಆದರ್ಶ ಜೀವನವನ್ನು ಹೇಗೆ ಸಾಗಿಸಬೇಕು ಎಂಬುದನ್ನು ಕುರಿತು ಕೆಲವು ಕಲ್ಪನೆಗಳು ವೇದಕಾಲದಲ್ಲಿ ಪ್ರಚಲಿತವಾಗಿದ್ದವು. ಜನ್ಮದಿಂದ ಹಿಡಿದು ಮೃತ್ಯುವಿನ ವರೆಗಿನ ನಾಲ್ಕು ಹಂತಗಳಿಗೆ 'ನಾಲ್ಕು ಆಶ್ರಮಗಳು' ಎನ್ನಲಾಗಿದೆ. ಮೊದಲನೆಯ ಆಶ್ರಮವೆಂದರೆ 'ಬ್ರಹ್ಮಚರ್ಯಾಶ್ರಮ'. ಗುರುವಿನ ಬಳಿ ಇದ್ದು ವಿದ್ಯಾರ್ಜನೆ ಮಾಡುವ ಕಾಲ ಇದಾಗಿತ್ತು.

ಬ್ರಹ್ಮಚರ್ಯಾಶ್ರಮವನ್ನು ಯಶಸ್ವಿ ರೀತಿಯಿಂದ ಪೂರ್ಣ ಮಾಡಿದ ನಂತರದ ಹಂತವೆಂದರೆ ಗೃಹಸ್ಥಾಶ್ರಮ. ಈ ಕಾಲದಲ್ಲಿ ಪುರುಷನು ಕುಟುಂಬ ಮತ್ತು ಸಮಾಜದ ಸಲುವಾಗಿ ಇರುವ ತಮ್ಮ ಕರ್ತವ್ಯಗಳನ್ನು ಪತ್ನಿಯ



ಗುರು-ಶಿಷ್ಯರು

ನೆರವಿನಿಂದ ಪೂರ್ಣ ಮಾಡಬೇಕು ಎಂಬ ನಿರೀಕ್ಷೆ ಇರುತ್ತಿತ್ತು ಮೂರನೆಯ ಆಶ್ರಮವೆಂದರೆ 'ವಾನಪ್ರಸ್ಥಾಶ್ರಮ'. ಈ ಹಂತದಲ್ಲಿ ಅವನು ಮನೆಯ ವ್ಯಾಮೋಹವನ್ನು ತ್ಯಜಿಸಿ ದೂರ ಹೋಗಬೇಕು. ಮನುಷ್ಯ ವಸತಿ ಇಲ್ಲದ ಸ್ಥಳದಲ್ಲಿ ವಾಸಿಸಬೇಕು ಹಾಗೂ ಅತ್ಯಂತ ಸಾದಾಜೀವನ ನಡೆಸಬೇಕು. ನಾಲ್ಕನೆಯ ಆಶ್ರಮವೆಂದರೆ 'ಸನ್ಯಾಸಾಸ್ರಮ'. ಈ ಹಂತದಲ್ಲಿ ಮನುಷ್ಯನು ಎಲ್ಲ ಸಂಬಂಧಗಳನ್ನು ತ್ಯಾಗಮಾಡಿ ಮಾನವ ಜನ್ಮದ ಅರ್ಥವನ್ನು ಅರಿತುಕೊಳ್ಳುವ ಸಲುವಾಗಿ ಜೀವಿಸಬೇಕು, ಹೆಚ್ಚುಕಾಲ ಒಂದೇ ಸ್ಥಳದಲ್ಲಿ ಇರಬಾರದು ಎಂಬ ಸಂಕೇತವಿತ್ತು.

### ೪.೪ ಧಾರ್ಮಿಕ ಕಲ್ಪನೆಗಳು

ವೇದಕಾಲದ ಧಾರ್ಮಿಕ ಕಲ್ಪನೆಗಳಲ್ಲಿ ನಿಸರ್ಗದಲ್ಲಿಯ ಸೂರ್ಯ, ಗಾಳಿ, ಮಳೆ, ಸಿಡಿಲು, ಬಿರುಗಾಳಿ, ನದಿ ಮುಂತಾದ ನಿಸರ್ಗದಲ್ಲಿಯ ಶಕ್ತಿಗಳಿಗೆ ದೇವ ರೂಪವನ್ನು ನೀಡಲಾಗಿತ್ತು. ಅವು ಜೀವನದಾಯಿ ಯಾಗಬೇಕೆಂದು ವೇದಗಳಲ್ಲಿ ಅವುಗಳ ಪ್ರಾರ್ಥನೆ ಮಾಡಲಾಗುತ್ತಿತ್ತು. ಆ ಶಕ್ತಿಗಳನ್ನು ಪ್ರಸನ್ನವಾಗಿಡಲು ವೇದಕಾಲದ ಜನರು ಅಗ್ನಿಗೆ ವಿವಿಧ ಪದಾರ್ಥಗಳನ್ನು ಅರ್ಪಿಸುತ್ತಿದ್ದರು. ಅದಕ್ಕೆ 'ಹವಿ' ಎನ್ನುತ್ತಿದ್ದರು. ಈ ರೀತಿ ಅಗ್ನಿಗೆ 'ಹವಿ'ಯನ್ನು ಅರ್ಪಣೆ ಮಾಡುವ ವಿಧಿ ಎಂದರೆ ಯಜ್ಞ. ಆರಂಭದಲ್ಲಿ ಯಜ್ಞ ವಿಧಿಯ ಸ್ವರೂಪವು ಸರಳವಾಗಿತ್ತು. ನಂತರ ಅದರ ನಿಯಮಗಳು ಹೆಚ್ಚು ಕಠಿಣವಾಗುತ್ತಹೋದವು. ಆ



ಯಜ್ಞ

ಕಠಿಣವಾದ ಯಜ್ಞವಿಧಿಯನ್ನು ನಿರ್ವಹಿಸುವ ಪುರೋಹಿತರ ಮಹತ್ವವು ಇದರಿಂದಾಗಿ ಹೆಚ್ಚುತ್ತಹೋಯಿತು.

ವೇದಕಾಲದ ಜನರು ಸೃಷ್ಟಿಯ ವ್ಯವಹಾರಗಳು ಹೇಗೆ ನಡೆಯುತ್ತವೆ ಎಂಬುದರ ವಿಚಾರವನ್ನೂ ಮಾಡಿದ್ದರು. ಬೇಸಿಗೆಯ ನಂತರ ಮಳೆಗಾಲ ಬರುತ್ತದೆ. ಮಳೆಗಾಲದ ನಂತರ ಚಳಿಗಾಲ ಬರುತ್ತದೆ. ಇದು ನಿಯಮಿತವಾಗಿ ನಡೆಯುವ ಸೃಷ್ಟಿಚಕ್ರವಾಗಿದೆ. ಸೃಷ್ಟಿಚಕ್ರ ಮತ್ತು ಅದರ ಗತಿಯಿಂದ ತಿರುಗುವ ಜೀವನಚಕ್ರ ಇದಕ್ಕೆ ವೇದಕಾಲದ ಜನರು 'ಋತ' ಎಂಬ ಹೆಸರು ಕೊಟ್ಟರು. ಪ್ರಾಣಿಮಾತ್ರರ ಜೀವನವು ಕೂಡ ಸೃಷ್ಟಿಚಕ್ರದ ಒಂದು ಭಾಗವಾಗಿದೆ. ಸೃಷ್ಟಿಚಕ್ರದಲ್ಲಿ ದೋಷ ನಿರ್ಮಾಣವಾದಾಗ ಸಂಕಟಗಳು ಬರುತ್ತವೆ. ಹಾಗೆ ಆಗಬಾರದೆಂದು ಪ್ರತಿಯೊಬ್ಬರೂ ದಕ್ಷತೆ ವಹಿಸಬೇಕು. ಯಾರೂ ಸೃಷ್ಟಿಯ ನಿಯಮವನ್ನು ಮುರಿಯಬಾರದು. ಹೀಗೆ ವರ್ತಿಸುವುದೆಂದರೆ ಧರ್ಮದ ಪ್ರಕಾರ ವರ್ತಿಸುವುದು, ಎಂದು ತಿಳಿಯಲಾಗುತ್ತಿತ್ತು.

**ಬನ್ನಿ, ಚರ್ಚೆ ಮಾಡೋಣ.**

ಸೃಷ್ಟಿಚಕ್ರದಲ್ಲಿ ದೋಷಗಳು ಯಾವುದರಿಂದ ನಿರ್ಮಾಣವಾಗುತ್ತವೆ? ಹಾಗೆ ಆಗಬಾರದೆಂದು ನೀವು ಯಾವ ಪ್ರಯತ್ನ ಮಾಡುವಿರಿ ?

ಉದಾ: ಮಳೆ ಕಡಿಮೆಯಾದರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೇಗೆ ಮಾಡುವಿರಿ ?

### ೪.೫ ರಾಜ್ಯಾಡಳಿತ ವ್ಯವಸ್ಥೆ

ವೇದಕಾಲದಲ್ಲಿ ಪ್ರತಿಯೊಂದು ಗ್ರಾಮವಸಾಹತಿಗೆ ಒಬ್ಬ ಪ್ರಮುಖನು ಇರುತ್ತಿದ್ದನು. ಅವನಿಗೆ 'ಗ್ರಾಮಣಿ' ಎನ್ನುತ್ತಿದ್ದರು. ಅನೇಕ ಗ್ರಾಮವಸಾಹತುಗಳ ಸಮೂಹವೆಂದರೆ 'ವಿಶ್'. ಅದರ ಪ್ರಮುಖನಿಗೆ 'ವಿಶ್‌ಪತಿ' ಎಂದು ಕರೆಯುತ್ತಿದ್ದರು. ಅನೇಕ 'ವಿಶ್' ಕೂಡಿ 'ಜನ' ನಿರ್ಮಾಣವಾಗುತ್ತಿತ್ತು. ಮುಂದೆ 'ಜನ'ವು ಯಾವಾಗ ಒಂದು ವಿಶಿಷ್ಟ ಪ್ರದೇಶದಲ್ಲಿ ನೆಲೆಸಿತೋ ಆಗ ಆ ಪ್ರದೇಶವನ್ನು 'ಜನಪದ' ಎಂದು ಕರೆಯಲಾಯಿತು. 'ಜನ'ದ ಪ್ರಮುಖನಿಗೆ 'ನೃಪ' ಇಲ್ಲವೆ 'ರಾಜ' ಎನ್ನಲಾಗುತ್ತಿತ್ತು. ಪ್ರಜೆಗಳ ರಕ್ಷಣೆ ಮಾಡುವುದು, ತೆರಿಗೆಯನ್ನು ಸಂಗ್ರಹಿಸುವುದು ಹಾಗೂ ಉತ್ತಮ ರಾಜ್ಯಾಡಳಿತ ಮಾಡುವುದು- ಇವು ರಾಜನ ಕರ್ತವ್ಯಗಳಾಗಿದ್ದವು.

ರಾಜ್ಯಾಡಳಿತವನ್ನು ಉತ್ತಮ ರೀತಿಯಿಂದ ನಡೆಸಲು ಸಹಾಯ ಮಾಡುವ ಸಲುವಾಗಿ ರಾಜನು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಪುರೋಹಿತ ಹಾಗೂ ಸೇನಾಪತಿ ಇವರು ವಿಶೇಷ ಮಹತ್ವದ ಅಧಿಕಾರಿಗಳಾಗಿದ್ದರು. ತೆರಿಗೆಯನ್ನು

ಸಂಗ್ರಹಿಸುವ ಸಲುವಾಗಿ ನೇಮಿಸಿದ ಅಧಿಕಾರಿಗಳಿಗೆ 'ಭಾಗದುಘ' ಎನ್ನುತ್ತಿದ್ದರು. 'ಭಾಗ' ಎಂದರೆ ಪಾಲು. 'ಜನ'ದ ಉತ್ಪನ್ನದಲ್ಲಿಯ ರಾಜನ 'ಭಾಗ'ವನ್ನು ಸಂಗ್ರಹಿಸುವವನೇ ಭಾಗದುಘ. ರಾಜನಿಗೆ ಮಾರ್ಗದರ್ಶನ ಮಾಡುವ ಸಲುವಾಗಿ 'ಸಭಾ', 'ಸಮಿತಿ', 'ವಿದಥ' ಹಾಗೂ 'ಜನ' ಎಂಬ ನಾಲ್ಕು ಸಂಸ್ಥೆಗಳಿದ್ದವು. ಅವುಗಳಲ್ಲಿ ರಾಜ್ಯದ ಜನರು ಭಾಗವಹಿಸುತ್ತಿದ್ದರು. 'ಸಭಾ' ಮತ್ತು 'ವಿದಥ'ಗಳ ಕಾರ್ಯಕಲಾಪಗಳಲ್ಲಿ ಸ್ತ್ರೀಯರೂ ಭಾಗವಹಿಸುತ್ತಿದ್ದರು. ರಾಜ್ಯದಲ್ಲಿಯ ಹಿರಿಯ ವ್ಯಕ್ತಿಗಳ ಮಂಡಳಕ್ಕೆ 'ಸಭಾ' ಎನ್ನುತ್ತಿದ್ದರು ಹಾಗೂ ಜನರ ಸರ್ವಸಾಧಾರಣ ಸಭೆಗೆ 'ಸಮಿತಿ' ಎನ್ನುತ್ತಿದ್ದರು. ಸಮಿತಿಯಲ್ಲಿ ಜನತೆಯ ಸಹಭಾಗವಿರುತ್ತಿತ್ತು.

ನಂತರ ವೈದಿಕ ವಿಚಾರ ಪ್ರವಾಹದಲ್ಲಿ 'ಸ್ಮೃತಿ' ಮತ್ತು 'ಪುರಾಣ' ಎಂಬ ಹೆಸರಿನ ವಾಙ್ಮಯ ನಿರ್ಮಾಣವಾಯಿತು. ವೇದ, ಸ್ಮೃತಿ, ಪುರಾಣಗಳು, ಲೋಕಭಾವನೆ ಮುಂತಾದವುಗಳ ಮೇಲೆ ಆಧಾರಿತವಾದ ಧಾರ್ಮಿಕ ಪ್ರವಾಹವು ಕಾಲಾಂತರದಲ್ಲಿ 'ಹಿಂದೂ' ಎಂಬ ಹೆಸರಿನಿಂದ ಗುರುತಿಸಲ್ಪಡತೊಡಗಿತು.

ಪ್ರಾಚೀನ ಭಾರತದಲ್ಲಿ ಯಜ್ಞವಿಧಿ ಮತ್ತು ವರ್ಣವ್ಯವಸ್ಥೆ ಇವುಗಳನ್ನು ಕುರಿತು ವೈದಿಕ ಪ್ರವಾಹಕ್ಕಿಂತ ಬೇರೆ ವಿಚಾರ ಮಾಡುವ ಧಾರ್ಮಿಕ ಪ್ರವಾಹವು ಅಸ್ತಿತ್ವದಲ್ಲಿತ್ತು. ಮುಂದಿನ ಪಾಠದಲ್ಲಿ ನಾವು ಅದರ ಪರಿಚಯವನ್ನು ಮಾಡಿಕೊಳ್ಳುವವರಿದ್ದೇವೆ.



## ಅಭ್ಯಾಸ

**೧. ಪಾಠದಲ್ಲಿಯ ತಾತ್ಪರ್ಯದ ವಿಚಾರ ಮಾಡಿ ಉತ್ತರ ಬರೆಯಿರಿ.**

(೧) ವೈದಿಕ ಸಾಹಿತ್ಯದಲ್ಲಿಯ ವಿದುಷಿಯರು

....................................

(೨) ವೇದಕಾಲದ ಮನರಂಜನೆಯ ಸಾಧನಗಳು

....................................

(೩) ವೇದಕಾಲದಲ್ಲಿಯ ನಾಲ್ಕು ಆಶ್ರಮಗಳು

....................................

**೨. ಸರಿ ಅಥವಾ ತಪ್ಪು ಎಂಬುದನ್ನು ಹೇಳಿರಿ.**

(೧) ಯಜ್ಞದಲ್ಲಿ ಪಠಿಸಲಾಗುವ ಮಂತ್ರ-ಋಗ್ವೇದ

(೨) ಅಥರ್ವ ಋಷಿಗಳ ಹೆಸರು ನೀಡಿದ ವೇದ-ಅಥರ್ವವೇದ

(೩) ಯಜ್ಞವಿಧಿಯ ಸಮಯದಲ್ಲಿ ಮಂತ್ರಗಾಯನ ಮಾಡಲು ಮಾರ್ಗದರ್ಶನ ಮಾಡುವ ವೇದ-ಸಾಮವೇದ

**೩. ಒಂದು ಶಬ್ದದಲ್ಲಿ ಉತ್ತರ ಬರೆಯಿರಿ.**

(೧) ವೈದಿಕ ವಾಙ್ಮಯದ ಭಾಷೆ ......... .

(೨) ವಿದ್ ಎಂದರೆ ......... .

(೩) ಗೋಧೂಮ ಎಂದರೆ ......... .

(೪) ಮನೆಯ ಪ್ರಮುಖ ಅಂದರೆ ......... .

(೫) ಶ್ರೇಣಿಗಳ ಪ್ರಮುಖ ......... .

**೪. ಹೆಸರುಗಳನ್ನು ಬರೆಯಿರಿ.**

(೧) ನಿಮಗೆ ಗೊತ್ತಿರುವ ವಾದ್ಯಗಳು

.......................... .

(೨) ಈಗಿನ ಕಾಲದ ಸ್ತ್ರೀಯರ ಕನಿಷ್ಠ ಎರಡು ಆಭರಣಗಳು. ...................... .

(೩) ಈಗಿನ ಮನರಂಜನೆಯ ಸಾಧನಗಳು

.......................... .

**೫. ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(೧) ವೇದಕಾಲದ ಜನರ ಆಹಾರದಲ್ಲಿ ಯಾವಯಾವ ಪದಾರ್ಥಗಳ ಸಮಾವೇಶವಾಗಿತ್ತು ?

(೨) ವೇದಕಾಲದಲ್ಲಿ ಆಕಳುಗಳ ಬಗ್ಗೆ ವಿಶೇಷ ದಕ್ಷತೆ ವಹಿಸಲಾಗುತ್ತಿತ್ತು. ಏಕೆ ?

(೩) ಸನ್ಯಾಸಾಶ್ರಮದಲ್ಲಿ ಮನುಷ್ಯನು ಹೇಗೆ ವರ್ತಿಸಬೇಕು-ಎಂಬ ನಿರೀಕ್ಷೆ ಇತ್ತು ?

**೬. ಟಿಪ್ಪಣಿ ಬರೆಯಿರಿ.**

(೧) ವೇದಕಾಲದ ಧಾರ್ಮಿಕ ಕಲ್ಪನೆಗಳು

(೨) ವೇದಕಾಲದ ಮನೆಗಳು

(೩) ವೇದಕಾಲದ ರಾಜ್ಯಾಡಳಿತ ವ್ಯವಸ್ಥೆ

**ಉಪಕ್ರಮ**

(೧) ನಿಮ್ಮ ಪರಿಸರದಲ್ಲಿಯ ಕೆಲವು ಕುಶಲಕರ್ಮಿಗಳನ್ನು ಸಂದರ್ಶಿಸಿ, ಅದರ ಮಾಹಿತಿಯನ್ನು ಬರೆಯಿರಿ.

(೨) ಪಾಠದಲ್ಲಿ ಬಂದ ಹೊಸ ಶಬ್ದ ಹಾಗೂ ಅವುಗಳ ಅರ್ಥಗಳ ಪಟ್ಟಿ ತಯಾರಿಸಿರಿ.

* * *

8SHBMP

# ೫. ಪ್ರಾಚೀನ ಭಾರತದಲ್ಲಿಯ ಧಾರ್ಮಿಕ ಪ್ರವಾಹ

೫.೧. ಜೈನ ಧರ್ಮ

೫.೨ ಬೌದ್ಧ ಧರ್ಮ

೫.೩ ಜ್ಯೂ ಧರ್ಮ

೫.೪ ಕ್ರೈಸ್ತ ಧರ್ಮ

೫.೫ ಇಸ್ಲಾಮ ಧರ್ಮ

೫.೬ ಪಾರಶೀ ಧರ್ಮ

ವೇದಕಾಲದ ಕೊನೆಯ ಭಾಗದಲ್ಲಿ ಯಜ್ಞವಿಧಿಗಳಲ್ಲಿಯ ಸಣ್ಣಪುಟ್ಟ ಸಂಗತಿಗಳಿಗೆ ಮಿತಿಮೀರಿ ಮಹತ್ವಪ್ರಾಪ್ತವಾಯಿತು. ಆ ಸಂಗತಿಗಳ ಜ್ಞಾನವು ಕೇವಲ ಪುರೋಹಿತ ವರ್ಗಕ್ಕೆ ಮಾತ್ರ ಇತ್ತು. ಬೇರೆಯವರಿಗೆ ಅದನ್ನು ಪಡೆಯುವ ಸ್ವಾತಂತ್ರ್ಯವಿರಲಿಲ್ಲ. ವರ್ಣವ್ಯವಸ್ಥೆಯ ನಿರ್ಬಂಧಗಳು ಅತ್ಯಂತ ಕಠೋರವಾಗುತ್ತ ಹೋದವು. ಮನುಷ್ಯನ ಕರ್ತೃತ್ವಕ್ಕಿಂತ ಹೆಚ್ಚಾಗಿ ಅವನ ಜನ್ಮವು ಯಾವ ವರ್ಣದಲ್ಲಿ ಆಗಿದೆಯೆಂಬುದರ ಮೇಲೆ ಸಮಾಜದಲ್ಲಿಯ ಅವನ ಸ್ಥಾನ ನಿರ್ಧಾರಿತವಾಗತೊಡಗಿತು. ಅದರಿಂದಾಗಿಯೇ ಉಪನಿಷತ್ತುಗಳ ಕಾಲದಿಂದ ಧಾರ್ಮಿಕ ವಿಚಾರಗಳನ್ನು ಯಜ್ಞವಿಧಿಗಳ ವರೆಗಷ್ಟೇ ಸೀಮಿತವಾಗಿಡದೆ ಅವುಗಳನ್ನು ಹೆಚ್ಚು ವ್ಯಾಪಕಗೊಳಿಸುವ ಪ್ರಯತ್ನ ಆರಂಭವಾದುದು ಕಂಡುಬರುತ್ತದೆ. ಆದರೆ ಉಪನಿಷತ್ತುಗಳಲ್ಲಿಯ ವಿಚಾರಗಳು ಆತ್ಮದ ಅಸ್ತಿತ್ವ, ಆತ್ಮದ ಸ್ವರೂಪ ಇತ್ಯಾದಿಗಳಿಗೆ ಮಹತ್ವ ನೀಡುವಂತಹದಾಗಿದ್ದವು. ಆ ವಿಚಾರಗಳು ಸರ್ವಸಾಮಾನ್ಯರಿಗೆ ತಿಳಿಯುವುದು ಕಠಿಣವಾಗಿತ್ತು. ಅದರಿಂದಾಗಿ ವಿಶಿಷ್ಟ ದೇವತೆಗಳ ಉಪಾಸನೆಗೆ ಮಹತ್ವ ನೀಡುವ ಭಕ್ತಿಪಂಥವು ನಿರ್ಮಾಣವಾಯಿತು. ಉದಾಹರಣೆಗಾಗಿ, ಶಿವಭಕ್ತರ ಶೈವಪಂಥ ಹಾಗೂ ವಿಷ್ಣುಭಕ್ತರ ವೈಷ್ಣವ ಪಂಥ. ಈ ದೇವತೆಗಳ ಸಂದರ್ಭದಲ್ಲಿ ಬೇರೆ ಬೇರೆ ಪುರಾಣಗಳು ರಚಿಸಲ್ಪಟ್ಟವು.

ಕ್ರಿ.ಶ.ಪೂ. ಆರನೇ ಶತಮಾನದಲ್ಲಿ ಸರ್ವಸಾಮಾನ್ಯ ಮನುಷ್ಯನಿಗೆ ಸಹಜವಾಗಿ ತಿಳಿಯುವಂತಹ ಧಾರ್ಮಿಕ ವಿಚಾರಗಳನ್ನು ಮಂಡಿಸುವ ಪ್ರಯತ್ನಮಾಡುವ ವಿಚಾರ ಪ್ರವಾಹವು ನಿರ್ಮಾಣವಾಯಿತು. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಉನ್ನತಿ ಮಾರ್ಗವನ್ನು ಶೋಧಿಸುವ ಸ್ವಾತಂತ್ರ್ಯವಿದೆಯೆಂಬುದರ ಅರಿವು ಅನೇಕರಿಗೆ ಆಯಿತು. ಈ ಅರಿವಿನಿಂದಲೇ ಮುಂದೆ ಹೊಸಧರ್ಮಗಳು ಹುಟ್ಟಿಕೊಂಡವು. ವ್ಯಕ್ತಿಯ ಉನ್ನತಿಗಾಗಿ ಜಾತಿ-ಜಾತಿಗಳಲ್ಲಿಯ ಭೇದಭಾವ ಮಹತ್ವದಲ್ಲವೆಂಬುದನ್ನು ಈ ಧರ್ಮಗಳು ಸ್ಪಷ್ಟವಾಗಿ ಮಂಡಿಸಿದವು. ಅವು ಶುದ್ಧ ಆಚರಣೆಯ ಮಹತ್ವವನ್ನು ಜನರ ಮನಸ್ಸಿನಲ್ಲಿ ಬಿಂಬಿಸಿದವು. ಹೊಸ ವಿಚಾರಗಳ ಪ್ರವರ್ತಕರಲ್ಲಿ ವರ್ಧಮಾನ ಮಹಾವೀರ ಮತ್ತು ಗೌತಮಬುದ್ಧ ಇವರ ಕಾರ್ಯವು ವಿಶೇಷ ಮಹತ್ವದ್ದಾಗಿದೆ.

## ೫.೧ ಜೈನ ಧರ್ಮ

ಜೈನ ಧರ್ಮವು ಭಾರತದಲ್ಲಿಯ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಈ ಧರ್ಮದಲ್ಲಿ 'ಅಹಿಂಸೆ' ಈ



ವರ್ಧಮಾನ ಮಹಾವೀರ

ತತ್ವಕ್ಕೆ ಮಹತ್ವ ಕೊಡಲಾಗಿದೆ. ಧರ್ಮಜ್ಞಾನವನ್ನು ಪ್ರಕಟ ಮಾಡುವವರಿಗೆ ಜೈನ ಧರ್ಮದಲ್ಲಿ ತೀರ್ಥಂಕರ ಎನ್ನುತ್ತಾರೆ. ಜೈನ ಪರಂಪರೆಯಲ್ಲಿ ಒಟ್ಟು ೨೪ ತೀರ್ಥಕರರು ಆಗಿ ಹೋದರು. ವರ್ಧಮಾನ ಮಹಾವೀರ ಇವರು ಜೈನ ಧರ್ಮ ಪರಂಪರೆಯಲ್ಲಿಯ ಇಪ್ಪತ್ನಾಲ್ಕನೆಯ ತೀರ್ಥಂಕರರಾಗಿದ್ದರು.

### ವರ್ಧಮಾನ ಮಹಾವೀರ (ಕ್ರಿ.ಶ.ಪೂ. ೫೯೯ ರಿಂದ ಕ್ರಿ.ಶ.ಪೂ. ೫೨೭)

ಇಂದು ಯಾವ ರಾಜ್ಯವನ್ನು ನಾವು ಬಿಹಾರ ಎಂಬ ಹೆಸರಿನಿಂದ ಗುರುತ್ತಿಸುತ್ತೇವೆಯೋ ಆ ರಾಜ್ಯದಲ್ಲಿ ಪ್ರಾಚೀನ ಕಾಲದಲ್ಲಿ ವೃಜ್ಜೀ ಎಂಬ ಹೆಸರಿನ ಒಂದು ಮಹಾಜನಪದವಿತ್ತು. ವೈಶಾಲಿಯು ಅದರ ರಾಜಧಾನಿಯಾಗಿತ್ತು. ವೈಶಾಲಿ ನಗರದ ಒಂದು ಭಾಗವಾದ ಕುಂಡಗ್ರಾಮ ಎಂಬಲ್ಲಿ ವರ್ಧಮಾನ ಮಹಾವೀರ ಇವರ ಜನನವಾಯಿತು. ಅವರ ತಂದೆಯ ಹೆಸರು ಸಿದ್ಧಾರ್ಥ ಹಾಗೂ ತಾಯಿಯ ಹೆಸರು ತ್ರಿಶಲಾ.

ವರ್ಧಮಾನ ಮಹಾವೀರರು ಜ್ಞಾನಪ್ರಾಪ್ತಿಯ ಸಲುವಾಗಿ ಮನೆಯನ್ನು ತ್ಯಜಿಸಿದರು. ಹನ್ನೆರಡೂವರೆ ವರ್ಷ ತಪಸ್ಸು ಮಾಡಿದ ನಂತರ ಅವರಿಗೆ ಜ್ಞಾನ ಪ್ರಾಪ್ತಿಯಾಯಿತು. ಈ ಜ್ಞಾನವು 'ಕೇವಲಿ' ಎಂದರೆ 'ವಿಶುದ್ಧ' ಸ್ವರೂಪದ್ದಾಗಿತ್ತು. ಆದ್ದರಿಂದ ಅವರಿಗೆ 'ಕೇವಲಿ' ಎಂದು ಕರೆಯಲಾಗುತ್ತದೆ. ಶರೀರಕ್ಕೆ ಸುಖಕರವೆನಿಸುವ ಸಂಗತಿಗಳಿಂದ ದೊರೆಯುವ ಆನಂದ ಹಾಗೂ ಕಷ್ಟಕರ ಸಂಗತಿಗಳಿಂದ ಆಗುವ ದುಃಖ ಇವುಗಳ ಯಾವುದೇ ಪರಿಣಾಮವು ಸ್ವತಃದ ಮೇಲೆ ಆಗಗೊಡದಿರುವುದು ಎಂದರೆ ವಿಕಾರಗಳ ಮೇಲೆ ಜಯಗಳಿಸುವುದು. ಇಂಥ ಜಯವನ್ನು ಅವರು ಗಳಿಸಿದರು. ಆದ್ದರಿಂದ ಅವರನ್ನು 'ಜಿನ' ಎಂದರೆ 'ಗೆದ್ದ'ವನು ಎಂದು ಕರೆಯಲಾಯಿತು. 'ಜಿನ' ಈ ಶಬ್ದದಿಂದ ಜೈನ ಎಂಬ ಶಬ್ದ ತಯಾರಾಗಿದೆ.

ವಿಕಾರಗಳನ್ನು ಜಯಿಸಿದ ಮಹಾನ್ ವೀರರಾದುದರಿಂದ ವರ್ಧಮಾನರನ್ನು ಮಹಾವೀರ ಎಂದು ಕರೆಯಲಾಗುತ್ತದೆ. ಜ್ಞಾನಪ್ರಾಪ್ತಿಯ ನಂತರ ಜನರಿಗೆ ಧರ್ಮವನ್ನು ತಿಳಿಸಿ ಹೇಳುವ ಸಲುವಾಗಿ ಅವರು ಸುಮಾರು ಮೂವತ್ತು ವರ್ಷ ಉಪದೇಶ ಮಾಡಿದರು. ಜನರಿಗೆ ಧರ್ಮವು ಸುಲಭವಾಗಿ ತಿಳಿಯಬೇಕೆಂದು ವರ್ಧಮಾನ ಮಹಾವೀರರು ಜನಸಾಮಾನ್ಯರ ಭಾಷೆಯಾದ 'ಅರ್ಧಮಾಗದಿ'ಯಲ್ಲಿ ಜನರೊಡನೆ ಸಂವಾದ ಮಾಡುತ್ತಿದ್ದರು. ಅವರು ಹೇಳಿದ ಧರ್ಮವುಶುದ್ಧಆಚರಣೆಗೆಮಹತ್ವನೀಡುವಂತಹದಾಗಿತ್ತು. ಶುದ್ಧ ಆಚರಣೆಯ ಸಲುವಾಗಿ ಅವರು ಹೇಳಿದ ಮಾರ್ಗದ ಸಾರವು ಪಂಚಮಹಾವ್ರತಗಳು ಹಾಗೂ ತ್ರಿರತ್ನಗಳು– ಇವುಗಳಲ್ಲಿ ಸಮಾವೇಶಗೊಂಡಿದೆ. ಜನರಿಗೆ ಉಪದೇಶ ಮಾಡುವ ಸಲುವಾಗಿ ನಡೆಯುವ ತೀರ್ಥಂಕರರ ಸಭೆಗಳಿಗೆ ಅರ್ಧಮಾಗಧಿ ಭಾಷೆಯಲ್ಲಿ 'ಸಮವಸರಣ' ಎನ್ನಲಾಗುತ್ತಿತ್ತು. ಈ ಸಮವಸರಣವು ಸಮತೆಯ ಮೇಲೆ ಆಧಾರಿತವಾಗಿತ್ತು. ಈ ಸಮವಸರಣಗಳಲ್ಲಿ ಎಲ್ಲ ವರ್ಣಗಳ ಜನರಿಗೆ ಪ್ರವೇಶವಿರುತ್ತಿತ್ತು.

**ಪಂಚಮಹಾವ್ರತಗಳು :** ಪಂಚಮಹಾವ್ರತಗಳೆಂದರೆ ಅತ್ಯಂತ ಕಠೋರವಾಗಿ ಆಚರಿಸುವ ಐದು ನಿಯಮಗಳು.

**೧. ಅಹಿಂಸೆ :** ಯಾವುದೇ ಜೀವನಕ್ಕೆ ನೋವಾಗುವಂತೆ ಇಲ್ಲವೆ ಹಿಂಸೆಯಾಗುವಂತೆ ವರ್ತಿಸಬಾರದು.

**೨. ಸತ್ಯ :** ಪ್ರತಿಯೊಂದು ಮಾತು ಮತ್ತು ಕೃತಿ ಪ್ರಾಮಾಣಿಕವಾಗಿರಬೇಕು.

**೩. ಅಸ್ತೇಯ :** 'ಸ್ತೇಯ' ಎಂದರೆ ಕಳ್ಳತನ ಮತ್ತೊಬ್ಬರ ಒಡೆತನದ ಅಥವಾ ಹಕ್ಕಿನ ವಸ್ತುವನ್ನು ಅದರ ಒಡೆಯುವ ಸಮ್ಮತಿಯಿಲ್ಲದೆ ತೆಗೆದುಕೊಳ್ಳುವುದು ಎಂದರೆ ಕಳ್ಳತನ. ಕಳ್ಳತನ ಮಾಡದಿರುವುದು ಎಂದರೆ ಅಸ್ತೇಯ.

**೪. ಅಪರಿಗ್ರಹ :** ಮನಸ್ಸಿನಲ್ಲಿ ಧನಲೋಭ–ವನ್ನಿಟ್ಟುಕೊಂಡು ಸಂಪತ್ತನ್ನು ಸಂಗ್ರಹಿಸುವುದರ ಕಡೆಗೆ ಮನುಷ್ಯನ ಪ್ರವೃತ್ತಿ ಇರುತ್ತದೆ. ಈ ರೀತಿ ಸಂಪತ್ತಿನ ಸಂಗ್ರಹ ಮಾಡದಿರುವುದು ಎಂದರೆ ಅಪರಿಗ್ರಹ.

**೫. ಬ್ರಹ್ಮಚರ್ಯ :** ಶರೀರಕ್ಕೆ ಸುಖಕರ ವೆನಿಸುವ ಸಂಗತಿಗಳನ್ನು ತ್ಯಜಿಸಿ ವ್ರತವನ್ನು ಪಾಲಿಸುವುದು ಎಂದರೆ ಬ್ರಹ್ಮಚರ್ಯ.

**ತ್ರಿರತ್ನಗಳು :** ತ್ರಿರತ್ನಗಳೆಂದರೆ ೧. 'ಸಮ್ಯಕ್ ದರ್ಶನ', ೨. 'ಸಮ್ಯಕ್ ಜ್ಞಾನ', ೩. 'ಸಮ್ಯಕ್ ಚಾರಿತ್ರ್ಯ ಈ ಮೂರು ತತ್ವಗಳು. ಸಮ್ಯಕ್ ಎಂದರೆ 'ಸಮತೋಲವುಳ್ಳ' ಎಂದರ್ಥ.

**೧. ಸಮ್ಯಕ್ ದರ್ಶನ :** ತೀರ್ಥಂಕರರ ಉಪದೇಶದಲ್ಲಿಯ ಸತ್ಯವನ್ನು ಅರಿತು ಅದರ ಮೇಲೆ ಶ್ರದ್ಧೆಯಿಡುವುದು.

**೨. ಸಮ್ಯಕ್ ಜ್ಞಾನ :** ತೀರ್ಥಂಕರರ ಉಪದೇಶದ ಮತ್ತು ತತ್ವಜ್ಞಾನದ ನಿತ್ಯ ಅಭ್ಯಾಸ ಮಾಡಿ ಅದರ ಗಹನವಾದ ಅರ್ಥವನ್ನು ತಿಳಿದುಕೊಳ್ಳುವುದು.

**೩. ಸಮ್ಯಕ್ ಚಾರಿತ್ರ್ಯ:** ಪಂಚಮಹಾವ್ರತಗಳನ್ನು ಕಟ್ಟುನಿಟ್ಟಿನಿಂದ ಆಚರಿಸುವುದು.

**ಉಪದೇಶದ ಸಾರ :** ಮಹಾವೀರರ ಉಪದೇಶದಲ್ಲಿಯ 'ಅನೇಕಾಂತವಾದ' ಎಂದು ಹೇಳಲ್ಪಡುವ ಸಿದ್ಧಾಂತವು ಸತ್ಯದ ಶೋಧಕ್ಕಾಗಿ ತುಂಬಾ ಮಹತ್ವದ್ದೆಂದು ತಿಳಿಯಲಾಗುತ್ತದೆ. ಅನೇಕಾಂತ ಈ ಶಬ್ದದಲ್ಲಿಯ 'ಅಂತ' ಈ ಶಬ್ದದ ಅರ್ಥ 'ಆಯಾಮ' ಎಂದಾಗುತ್ತದೆ. ಸತ್ಯವನ್ನು ಶೋಧಿಸುವಾಗ ವಿಷಯದ ಕೇವಲ ಒಂದೆರಡು ಆಯಾಮಗಳ ಕಡೆಗೆ ಗಮನಕೊಟ್ಟು ನಿರ್ಣಯ ತೆಗೆದುಕೊಂಡರೆ ಸತ್ಯದ ಸಂಪೂರ್ಣ ಜ್ಞಾನವಾಗಲಾರದು. ಆದ್ದರಿಂದ ಆ ವಿಷಯದ ಅನೇಕ ಆಯಾಮಗಳ ಕಡೆಗೆ ಗಮನಕೊಡುವುದು ಅವಶ್ಯಕವಾಗಿರುತ್ತದೆ ಎಂಬುದನ್ನು ಈ ಸಿದ್ಧಾಂತದಲ್ಲಿ ಮನ್ನಿಸಲಾಗಿದೆ. ಈ ಸಿದ್ಧಾಂತದಿಂದಾಗಿ ಸಮಾಜದಲ್ಲಿ ಸ್ವಂತದ ಅಭಿಪ್ರಾಯವನ್ನು ಕುರಿತು ದುರಾಗ್ರಹವನ್ನಿಟ್ಟುಕೊಳ್ಳುವ ಸ್ಥಿತಿ ಉಳಿಯುವದಿಲ್ಲ. ಇತರರ ಅಭಿಪ್ರಾಯಗಳ ಬಗ್ಗೆ ಸಹಿಷ್ಣುತೆ ನಿರ್ಮಾಣವಾಗುತ್ತದೆ.

ವ್ಯಕ್ತಿಯ ಘನತೆಯು ಅವನ ವರ್ಣದ ಮೇಲೆ ಅವಲಂಬಿಸಿದರೆ ಅದು ಅವನ ಉತ್ತಮ ಚಾರಿತ್ರ್ಯವನ್ನು ಅವಲಂಬಿಸಿರುತ್ತದೆ ಎಂಬುದು ವರ್ಧಮಾನ ಮಹಾವೀರರ ಉಪದೇಶವಾಗಿತ್ತು. ಸ್ತ್ರೀಯರಿಗಿರುವ ಜ್ಞಾನರ್ಜನೆ ಮಾಡುವ ಅಧಿಕಾರವು ವೈದಿಕ ಪರಂಪರೆಯಲ್ಲಿ ಕ್ರಮೇಣವಾಗಿ ಇಲ್ಲದಂತಾಗಿತ್ತು. ಆದರೆ ವರ್ಧಮಾನ ಮಹಾವೀರರು ಸ್ತ್ರೀಯರಿಗೂ ಸನ್ಯಾಸವನ್ನು ಸ್ವೀಕರಿಸುವ ಅಧಿಕಾರವನ್ನು ನೀಡಿದರು. ಎಲ್ಲ ಪ್ರಾಣಿಗಳನ್ನು ಪ್ರೀತಿಸಿರಿ. ಅಂತ:ಕರಣದಲ್ಲಿ ಇತರರ ಬಗ್ಗೆ ದಯೆ ಮತ್ತು ಕರುಣೆ ಇರಲಿ. ನೀವೂ ಜೀವಿಸಿರಿ ಹಾಗೂ ಮತ್ತೊಬ್ಬರಿಗೂ ಜೀವಿಸಲು ಅವಕಾಶ ಮಾಡಿಕೊಡಿ, ಎಂಬ ಉಪದೇಶವನ್ನು ಅವರು ಮಾಡಿದರು.

### ೫.೨ ಬೌದ್ಧ ಧರ್ಮ

ಬೌದ್ಧ ಧರ್ಮದ ಪ್ರಸಾರವು ಭಾರತ ಮತ್ತು ಭಾರತದ ಹೊರಗಿನ ಅನೇಕ ದೇಶಗಳಲ್ಲಿ ಆಯಿತು. ಗೌತಮ ಬುದ್ಧ ಇವರು ಬೌದ್ಧ ಧರ್ಮದ ಸಂಸ್ಥಾಪಕರಾಗಿದ್ದರು.

**ಗೌತಮ ಬುದ್ಧ (ಕ್ರಿ.ಶ.ಪೂ. ೫೬೩ ರಿಂದ ಕ್ರಿ.ಶ.ಪೂ. ೪೮೩)**

ಗೌತಮ ಬುದ್ಧರ ಜನನವು ನೇಪಾಳದಲ್ಲಿಯ ಲುಂಬಿನಿ ವನದಲ್ಲಿ ಆಯಿತು. ಅವರ ತಂದೆಯ ಹೆಸರು ಶುದ್ಧೋದನ ಮತ್ತು ತಾಯಿಯ ಹೆಸರು ಮಾಯಾದೇವಿ.



**ಗೌತಮ ಬುದ್ಧ**

ಗೌತಮ ಬುದ್ಧರ ಮೂಲ ಹೆಸರು ಸಿದ್ಧಾರ್ಥ ಎಂದಿತ್ತು. ಅವರಿಗೆ ಮಾನವ ಜೀವನದ ಸಂಪೂರ್ಣ ಜ್ಞಾನ ಪ್ರಾಪ್ತವಾಗಿತ್ತು. ಆದ್ದರಿಂದ ಅವರಿಗೆ 'ಬುದ್ಧ' ಎಂದು ಕರೆಯಲಾಯಿತು. ಮಾನವ ಜೀವನದಲ್ಲಿ ದುಃಖವು ಏಕೆ ಇದೆ ಎಂಬ ಪ್ರಶ್ನೆ ಅವರನ್ನು ಕಾಡಿತು. ಅದಕ್ಕೆ ಉತ್ತರವನ್ನು ಶೋಧಿಸುವ ಸಲುವಾಗಿ ಅವರು ಮನೆಮಾರನ್ನು ಪರಿತ್ಯಾಗ ಮಾಡಿದರು. ವೈಶಾಖ ಪೌರ್ಣಿಮೆಯ ದಿನ ಅವರು ಬಿಹಾರದಲ್ಲಿಯ ಗಯಾ ಪಟ್ಟಣದ ಹತ್ತಿರವಿರುವ ಉರುವೇಲಾ ಎಂಬ ಸ್ಥಳದಲ್ಲಿ ಒಂದು ಅಶ್ವತ್ಥ ವೃಕ್ಷದ ಕೆಳಗೆ ಧ್ಯಾನಾಸಕ್ತರಾಗಿ ಕುಳಿತಿದ್ದರು. ಆ ಸಮಯದಲ್ಲಿ ಅವರಿಗೆ 'ಬೋಧಿ' ಪ್ರಾಪ್ತವಾಯಿತು. 'ಬೋಧಿ' ಎಂದರೆ ಸರ್ವೋಚ್ಚ ಜ್ಞಾನ' ಆ ಅಶ್ವತ್ಥ ವೃಕ್ಷಕ್ಕೆ ಈಗ 'ಬೋಧಿ' ವೃಕ್ಷ' ಎನ್ನುತ್ತಾರೆ.



**ಬೋಧಿ ವೃಕ್ಷ**

ಅದರಂತೆ 'ಉರುವೇಲಾ' ಈ ಸ್ಥಾನಕ್ಕೆ 'ಬೋಧಗಯಾ' ಎಂದು ಕರೆಯುತ್ತಾರೆ. ಅವರು ತಮ್ಮ ಪ್ರಥಮ ಪ್ರವಚನವನ್ನು ವಾರಾಣಸಿ ಹತ್ತಿರದ ಸಾರನಾಥ ಎಂಬಲ್ಲಿ ನೀಡಿದರು. ಈ ಪ್ರವಚನದಲ್ಲಿ ಅವರು ಮಾಡಿದ ಉಪದದೇಶವನ್ನು 'ಧರ್ಮ' ಎಂದು ಕರೆಯಲಾಗುತ್ತದೆ. ಈ ಪ್ರವಚನದ ಮುಖಾಂತರ ಅವರು ಧರ್ಮದ ಚಕ್ರಕ್ಕೆ ಗತಿ ನೀಡಿದರು. ಆದ್ದರಿಂದ ಈ ಘಟನೆಗೆ ಪಾಲೀಭಾಷೆಯಲ್ಲಿ 'ಧಮ್ಮಚಕ್ಕಪವತ್ತನ' ಎನ್ನಲಾಗುತ್ತದೆ. ಸಂಸ್ಕೃತದಲ್ಲಿ ಇದಕ್ಕೆ 'ಧರ್ಮಚಕ್ರ ಪ್ರವರ್ತನ' ಎನ್ನುತ್ತಾರೆ. ನಂತರದ ಕಾಲದಲ್ಲಿ ಅವರು ಧರ್ಮದ ಉಪದೇಶ ಮಾಡುವುದಕ್ಕಾಗಿ ಸುಮಾರು ನಾಲ್ವತ್ತೈದು ವರ್ಷ ಚಾರಿಕಾ ಮಾಡಿದರು. ಚಾರಿಕಾ ಎಂದರೆ ಕಾಲ್ನಡಿಗೆಯ ಸಂಚಾರ. ಅವರು ತಮ್ಮ ಉಪದೇಶವನ್ನು ಜನಸಾಮಾನ್ಯರ ಭಾಷೆಯಾದ ಪಾಲೀಭಾಷೆಯಲ್ಲಿ ಮಾಡಿದರು. ಬೌದ್ಧ ಧರ್ಮದಲ್ಲಿ ಬುದ್ಧ, ಧಮ್ಮ ಮತ್ತು ಸಂಘ ಇವುಗಳಿಗೆ ಶರಣು ಹೋಗುವ ಸಂಕಲ್ಪನೆ ಮಹತ್ವದ್ದಾಗಿದೆ. ಈ ಸಂಕಲ್ಪನೆಗೆ 'ತ್ರಿಶರಣ' ಎನ್ನುತ್ತಾರೆ. ಅವರು ಹೇಳಿದ ಧರ್ಮದ ಸಾರವು ಕೆಳಗಿನಂತಿದೆ.

**ಆರ್ಯಸತ್ಯಗಳು :** ಮಾನವ ಜೀವನದಲ್ಲಿಯ ಎಲ್ಲ ವ್ಯವಹಾರಗಳ ಮೂಲದಲ್ಲಿ ನಾಲ್ಕು ಸತ್ಯಗಳಿವೆ. ಅವುಗಳಿಗೆ ಆರ್ಯಸತ್ಯಗಳು ಎನ್ನುತ್ತಾರೆ.

**೧. ದುಃಖ :** ಮಾನವ ಜೀವನದಲ್ಲಿ ದುಃಖವಿರುತ್ತದೆ.

**೨. ದುಃಖದ ಕಾರಣ :** ದುಃಖಕ್ಕೆ ಕಾರಣವಿರುತ್ತದೆ.

**೩. ದುಃಖ-ನಿವಾರಣೆ :** ದುಃಖವನ್ನು ದೂರ ಮಾಡಲು ಬರುತ್ತದೆ.

**೪. ಪ್ರತಿಪದ :** ಪ್ರತಿಪದ ಎಂದರೆ ಮಾರ್ಗ. ಅದು ದುಃಖವನ್ನು ನಿವಾರಿಸುವ ಮಾರ್ಗವಾಗಿದೆ. ಇದು ಶುದ್ಧ ಆಚರಣೆಯ ಮಾರ್ಗವಾಗಿದೆ. ಈ ಮಾರ್ಗಕ್ಕೆ 'ಅಷ್ಟಾಂಗ ಮಾರ್ಗ' ಎನ್ನಲಾಗುತ್ತದೆ.

**ಪಂಚಶೀಲ :** ಗೌತಮ ಬುದ್ಧರು ಐದು ನಿಯಮಗಳನ್ನು ಪಾಲಿಸಲು ಹೇಳಿದರು. ಆ ನಿಯಮಗಳಿಗೆ 'ಪಂಚಶೀಲ' ಎಂದು ಕರೆಯುತ್ತಾರೆ.

೧. ಪ್ರಾಣಿಗಳ ಕೊಲೆ ಮಾಡುವುದರಿಂದ ದೂರ ವಿರುವುದು.

೨. ಕಳ್ಳತನ ಮಾಡುವುದರಿಂದ ದೂರವಿರುವುದು.

೩. ಅನೈತಿಕ ಆಚರಣೆಯಿಂದ ದೂರವಿರುವುದು.

೪. ಅಸತ್ಯ ಮಾತನಾಡುವುದರಿಂದ ದೂರವಿರುವುದು.

೫. ಮಾದಕ ಪದಾರ್ಥಗಳ ಸೇವನೆಯಿಂದ ದೂರ ವಿರುವುದು.

**ಬೌದ್ಧ ಸಂಘ :** ತಮ್ಮ ಧಮ್ಮದ ಉಪದೇಶ ಮಾಡುವ ಸಲುವಾಗಿ ಅವರು ಭಿಕ್ಕುಗಳ ಸಂಘವನ್ನು ಸ್ಥಾಪಿಸಿದರು. ಗೃಹಸ್ಥ ಜೀವನದ ಪರಿತ್ಯಾಗ ಮಾಡಿ ಸಂಘವನ್ನು ಪ್ರವೇಶಿಸುವ ಅವರ ಅನುಯಾಯಿಗಳಿಗೆ 'ಭಿಕ್ಕು' ಎಂದು ಕರೆಯಲಾಗುತ್ತದೆ. ಬುದ್ಧರ ಹಾಗೆ ಭಿಕ್ಕುಗಳೂ ಕೂಡ 'ಚಾರಿಕಾ' ಮಾಡಿ ಜನರಿಗೆ ಧಮ್ಮದ ಉಪದೇಶವನ್ನು ಮಾಡುತ್ತಿದ್ದರು. ಸ್ತ್ರೀಯರ ಸ್ವತಂತ್ರ ಸಂಘವಿತ್ತು. ಅವರಿಗೆ ಭಿಕ್ಕುಣಿ ಎಂದು ಕರೆಯುತ್ತಾರೆ. ಬೌದ್ಧ ಧರ್ಮದಲ್ಲಿ ಎಲ್ಲ ವರ್ಣ ಹಾಗೂ ಜಾತಿಗಳ ಜನರಿಗೆ ಪ್ರವೇಶವಿತ್ತು.

### ನಿಮಗೆ ಗೊತ್ತಿದೆಯೇ ?

**ಅಷ್ಟಾಂಗ ಮಾರ್ಗ**

೧. **ಸಮ್ಯಕ್ ದೃಷ್ಟಿ:** ನಾಲ್ಕು ಆರ್ಯಸತ್ಯಗಳ ಜ್ಞಾನ ಹೌದು.
೨. **ಸಮ್ಯಕ್ ಸಂಕಲ್ಪ:** ಹಿಂಸೆ ಮುಂತಾದ ತತ್ವಗಳ ಪರಿತ್ಯಾಗ.
೩. **ಸಮ್ಯಕ್ ವಾಚಾ:** ಅಸತ್ಯ, ಚಾಡಿ, ಕಠೋರತೆ ಹಾಗೂ ನಿರರ್ಥಕ ಮಾತನಾಡದಿರುವುದು.
೪. **ಸಮ್ಯಕ್ ಕರ್ಮಾಂತ:** ಪ್ರಾಣಿಗಳ ಕೊಲೆ, ಕಳ್ಳತನ, ಸ್ವೇಚ್ಛಾಚಾರಗಳಿಂದ ದೂರವಿರುವುದು.
೫. **ಸಮ್ಯಕ್ ಆಜೀವ:** ಉಪಜೀವವನ್ನು ವಾಮ ಮಾರ್ಗದಿಂದ ಮಾಡದೆ ಯೋಗ್ಯ ಮಾರ್ಗದಿಂದ ಮಾಡುವುದು.
೬. **ಸಮ್ಯಕ್ ವ್ಯಾಯಾಮ:** ವ್ಯಾಯಾಮ ಎಂದರೆ ಪ್ರಯತ್ನ ಮಾಡುವುದು. ಕೆಟ್ಟ ಕರ್ಮಗಳು ಉತ್ಪನ್ನವಾಗಬಾರದು; ಉತ್ಪನ್ನವಾಗಿದ್ದರೆ ಅವುಗಳನ್ನು ತ್ಯಜಿಸಬೇಕು; ಒಳ್ಳೆಯ ಕರ್ಮಗಳು ಉತ್ಪನ್ನವಾಗಬೇಕು; ಅದರಂತೆ, ಉತ್ಪನ್ನವಾಗಿದ್ದರೆ ಅವು ನಷ್ಟವಾಗಬಾರದು. ಅದರ ಸಲುವಾಗಿ ಪ್ರಯತ್ನ ಮಾಡುವುದು.
೭. **ಸಮ್ಯಕ್ ಸ್ಮೃತಿ:** ಏಕಾಗ್ರಚಿತ್ತದಿಂದ ಲೋಭ ಮುಂತಾದ ವಿಕಾರಗಳನ್ನು ದೂರಮಾಡುವುದು ಹಾಗೂ ನಮ್ಮ ಚಿತ್ತವನ್ನು ಯೋಗ್ಯರೀತಿಯಿಂದ ತಿಳಿದುಕೊಳ್ಳುವುದು.
೮. **ಸಮ್ಯಕ್ ಸಮಾಧಿ:** ಏಕಾಗ್ರಚಿತ್ತದಿಂದ ಧ್ಯಾನದ ಅನುಭವ ಪಡೆಯುವುದು.

**ಉಪದೇಶದ ಸಾರ :** ಗೌತಮ ಬುದ್ಧರು ಮಾನವೀ ಬುದ್ಧಿಯ ಸ್ವಾತಂತ್ರ್ಯದ ಘೋಷಣೆ ಮಾಡಿದರು. ವರ್ಣ ಮುಂತಾದವುಗಳ ಆಧಾರದಿಂದ ಮನ್ನಿಸಲಾಗುತ್ತಿರುವ ವಿಷಮತೆಯನ್ನು ನಿರಾಕರಿಸಿದರು. ಹುಟ್ಟಿನಿಂದ ಯಾರೂ ಶ್ರೇಷ್ಠ ಅಥವಾ ಕನಿಷ್ಠ ರಾಗುವುದಿಲ್ಲ, ಆದರೆ ಆಚರಣೆಯ ಮೇಲಿಂದಲೇ ಶ್ರೇಷ್ಠತೆ ಅಥವಾ ಕನಿಷ್ಠತೆ ನಿರ್ಧಾರಿತವಾಗುತ್ತದೆ. 'ಪುಟ್ಟದಾದ ಗುಬ್ಬಿ ಕೂಡ ತನ್ನಗೂಡಿನಲ್ಲಿ ಸ್ವೇಚ್ಛೆಯಿಂದ ಚಿಂವ್ ಚಿಂವ್ ಮಾಡುತ್ತದೆ'. ಎಂಬ ಅವರ ವಚನವು ವಿಖ್ಯಾತವಾಗಿದೆ. ಅದು ಸ್ವಾತಂತ್ರ್ಯ ಮತ್ತು ಸಮತೆ ಈ ಮೌಲ್ಯಗಳನ್ನು ಕುರಿತು ಅವರ ಚಿಂತನವನ್ನು ತೋರಿಸುತ್ತದೆ. ಪುರುಷರಂತೆ ಸ್ತ್ರೀಯರಿಗೂ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳುವ ಅಧಿಕಾರವಿದೆ ಎಂದು ಅವರು ಉಪದೇಶ ಮಾಡಿದರು. ಯಜ್ಞದಂತಹ ಕರ್ಮಕಾಂಡವನ್ನು ಅವರು ವಿರೋಧಿಸಿದರು. ಅವರು ಉಪದೇಶಿಸಿದ ಪ್ರಜ್ಞೆ, ಶೀಲ ಇತ್ಯಾದಿ ಮೌಲ್ಯಗಳು ಮಾನವನ ಕಲ್ಯಾಣವನ್ನು ಸಾಧಿಸುತ್ತವೆ. ಸರ್ವ ಪ್ರಾಣಿಮಾತ್ರರ ವಿಷಯದಲ್ಲಿ 'ಕರುಣೆ' ಇದು ಅವರ ವ್ಯಕ್ತಿತ್ವದ ಅಸಾಧಾರಣ ವೈಶಿಷ್ಟ್ಯವಾಗಿತ್ತು.

ಗೌತಮ ಬುದ್ಧ ಇವರು ಉಪದೇಶ ಮಾಡಿದ ಸಹಿಷ್ಣುತೆಯು ಕೇವಲ ಭಾರತೀಯ ಸಮಾಜಕ್ಕಷ್ಟೇ ಅಲ್ಲ, ಇಡೀ ಮಾನವಜಾತಿಗೆ ಇಂದಿಗೂ ಮಾರ್ಗದರ್ಶಕವಾಗಿದೆ.

**ಲೋಕಾಯತ :** ಲೋಕಾಯತ ಅಥವಾ ಚಾರ್ವಾಕ ಎಂಬ ಹೆಸರಿನಿಂದ ಗುರುತಿಸಲ್ಪಡುವ ಪ್ರಾಚೀನ ಕಾಲದಲ್ಲಿಯ ವಿಚಾರ ಪ್ರವಾಹವು ಕೂಡ ಮಹತ್ವದ್ದಾಗಿದೆ. ಅವನು ಸ್ವತಂತ್ರ ವಿಚಾರಕ್ಕೆ ಮಹತ್ವ ನೀಡಿದನು. ಅವನು ವೇದಗಳ ಪ್ರಾಮಾಣ್ಯವನ್ನು ನಿರಾಕರಿಸಿದನು.

ಪ್ರಾಚೀನ ಕಾಲದಲ್ಲಿ ಭಾರತೀಯ ಭೂಮಿಯಲ್ಲಿ ಹೊಸ ಹೊಸ ಧಾರ್ಮಿಕ ವಿಚಾರಗಳ ಪ್ರವಾಹಗಳು ನಿರ್ಮಾಣವಾದವು. ಕಾಲಾಂತರದಲ್ಲಿ ಜ್ಯೂ, ಕ್ರಿಶ್ಚನ್, ಇಸ್ಲಾಮ ಹಾಗೂ ಪಾರಶೀ ಈ ಧರ್ಮಗಳು ಭಾರತೀಯ ಸಮಾಜದಲ್ಲಿ ಸ್ಥಿರವಾದವು.

## ೫.೩ ಜ್ಯೂ ಧರ್ಮ

ಜ್ಯೂ ಧರ್ಮದ ಜನರು ಸಾಮಾನ್ಯವಾಗಿ ಕ್ರಿಸ್ತಶಕದ ಮೊದಲನೆಯ ಶತಮಾನದಿಂದ ಮೂರನೆಯ ಶತಮಾನದ ಕಾಲದಲ್ಲಿ ಕೇರಳದಲ್ಲಿಯ ಕೋಚಿ ಎಂಬಲ್ಲಿ ಬಂದಿರಬಹುದು. ಜ್ಯೂ ಧರ್ಮಕ್ಕೆ 'ಯಹೂದಿ' ಧರ್ಮ ಎಂದೂ ಕರೆಯುತ್ತಾರೆ. ದೇವರು ಒಬ್ಬನೇ ಇದ್ದಾನೆ, ಎಂದು ಜ್ಯೂ ಧರ್ಮದ ಜನರು ತಿಳಿಯುತ್ತಾರೆ. ಜ್ಯೂ ಧರ್ಮದ ಉಪದೇಶದಲ್ಲಿ ನ್ಯಾಯ, ಸತ್ಯ, ಶಾಂತಿ, ಪ್ರೇಮ, ಕರುಣೆ, ನಮ್ರತೆ, ದಾನ ಮಾಡುವುದು, ಒಳ್ಳೆಯ ಮಾತನಾಡುವುದು ಹಾಗೂ ಸ್ವಾಭಿಮಾನ ಈ ಗುಣಗಳಿಗೆ ಮಹತ್ವ ನೀಡಲಾಗಿದೆ. ಅವರ ಪ್ರಾರ್ಥನಾ ಸ್ಥಳಕ್ಕೆ 'ಸಿನಗಾಗ್' ಎನ್ನುತ್ತಾರೆ.



ಸಿನಗಾಗ್

## ೫.೪ ಕ್ರೈಸ್ತ ಧರ್ಮ

ಕ್ರೈಸ್ತ ಧರ್ಮದ ಸ್ಥಾಪನೆಯನ್ನು ಏಸುಕ್ರಿಸ್ತರು ಮಾಡಿದರು. ಅದು ಜಗತ್ತಿನ ತುಂಬೆಲ್ಲ ಹರಡಿದೆ. ಏಸೂ

ಕ್ರಿಸ್ತರ ೧೨ ಶಿಷ್ಯರಲ್ಲಿ ಒಬ್ಬರಾದ ಸೇಂಟ್ ಥಾಮಸ್ ಇವರು ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿ ಕೇರಳಕ್ಕೆ ಬಂದರು. ಅವರು ತ್ರಿಚೂರ ಜಿಲ್ಲೆಯ ಪಲ್ಲಯೂರ ಎಂಬಲ್ಲಿ ಕ್ರಿಸ್ತಶಕ ೫೨ ರಲ್ಲಿ ಚರ್ಚಿನ ಸ್ಥಾಪನೆ ಮಾಡಿದರು. ಕ್ರೈಸ್ತ ಧರ್ಮದ ಉಪದೇಶದ ಪ್ರಕಾರ ದೇವರು ಒಬ್ಬನೇ ಇದ್ದಾನೆ. ಅವನು ಎಲ್ಲರ ಪ್ರೀತಿಯ ತಂದೆಯಾಗಿದ್ದಾನೆ. ಅಲ್ಲದೆ ಎಲ್ಲರಿಗಿಂತ ಹೆಚ್ಚು ಶಕ್ತಿವಂತನಾಗಿದ್ದಾನೆ. ಏಸೂ ಕ್ರಿಸ್ತ ಇವರು ದೇವರ ಪುತ್ರರಾಗಿದ್ದು ಮಾನವಜಾತಿಯ ಉದ್ಧಾರಕ್ಕಾಗಿ ಪೃಥ್ವಿಯ ಮೇಲೆ ಬಂದಿದ್ದರು ಎಂದು ಊಹಿಸಲಾಗುತ್ತದೆ. ನಾವೆಲ್ಲರೂ ಬಂಧು-ಬಗಿನಿಯರಾಗಿದ್ದೇವೆ. ನಾವು ಎಲ್ಲರನ್ನೂ ಪ್ರೀತಿಸಬೇಕು. ಶತ್ರುಗಳನ್ನು ಕೂಡ ಪ್ರೀತಿಸಬೇಕು. ತಪ್ಪಿತಸ್ಥನ್ನು ಕ್ಷಮಿಸಬೇಕು ಎಂದು ಕ್ರೈಸ್ತ ಧರ್ಮದಲ್ಲಿ ಹೇಳಲಾಗಿದೆ. 'ಬೈಬಲ್' ಇದು ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾಗಿದೆ. ಕ್ರಿಶ್ಚನ್ ಜನರ ಪ್ರಾರ್ಥನಾ ಸ್ಥಳಕ್ಕೆ 'ಚರ್ಚ್' ಎನ್ನುತ್ತಾರೆ.



ಚರ್ಚ್

### ೫.೫ ಇಸ್ಲಾಮ ಧರ್ಮ

ಇಸ್ಲಾಮ ಇದು ಏಕೇಶ್ವರವಾದವನ್ನು ನಂಬುವ ಧರ್ಮವಾಗಿದೆ. ಅಲ್ಲಾಹನು ಒಬ್ಬನೇ ಇದ್ದು ಮುಹಮ್ಮದ ಪೈಗಂಬರ ಅವನ ಪ್ರವಾದಿಯಾಗಿದ್ದಾರೆ. ಈಶ್ವರನ ಸಂದೇಶವು ಪೈಗಂಬರರ ಮುಖಾಂತರ ಪವಿತ್ರ 'ಕುರಆನ' ಈ ಧರ್ಮಗ್ರಂಥದಲ್ಲಿ ಪ್ರಕಟವಾಗಿದೆ. 'ಇಸ್ಲಾಮ' ಈ ಶಬ್ದದ ಅರ್ಥವು 'ಶಾಂತಿ' ಎಂದಾಗುತ್ತದೆ. ಈ ಶಬ್ದದ ಅರ್ಥವು 'ಅಲ್ಲಾಹನಿಗೆ ಶರಣು ಹೋಗುವುದು' ಎಂದೂ ಆಗುತ್ತದೆ. ಎಲ್ಲ ಕಾಲದಲ್ಲಿಯೂ ಹಾಗೂ ಎಲ್ಲೆಡೆ ಕೇವಲ ಅಲ್ಲಾಹ ಇರುವನು, ಅವನು ಅತ್ಯಂತ ಶಕ್ತಿಶಾಲಿ ಹಾಗೂ ಪರಮ ಕರುಣಾಮಯಿಯಾಗಿದ್ದಾನೆ, ಎಂದು ಇಸ್ಲಾಮದಲ್ಲಿ ಹೇಳಲಾಗಿದೆ. ಅಲ್ಲಾಹನ ಉಪಾಸನೆ ಮಾಡುವುದೇ ಮಾನವನ ಅಸ್ತಿತ್ವದ ಉದ್ದೇಶವಾಗಿದೆ ಎಂದು ನಂಬಲಾಗಿದೆ. ಮನುಷ್ಯನು ಜೀವನದಲ್ಲಿ ಹೇಗೆ ವರ್ತಿಸಬೇಕು ಎಂಬುದರ ಮಾರ್ಗದರ್ಶನವನ್ನು ಪವಿತ್ರವಾದ 'ಕುರಆನ' ಈ ಧರ್ಮಗ್ರಂಥದಲ್ಲಿ ಮಾಡಲಾಗಿದೆ. ಭಾರತ ಮತ್ತು ಅರಬಸ್ತಾನಗಳ ನಡುವೆ ತುಂಬಾ ಪ್ರಾಚೀನ ಕಾಲದಿಂದ ವ್ಯಾಪಾರಿ ಸಂಬಂಧವಿತ್ತು. ಅರಬಸ್ತಾನದ ವ್ಯಾಪಾರಿಗಳು ಕೇರಳದ ತೀರದಲ್ಲಿಯ ಬಂದರುಗಳಿಗೆ ಭೇಟಿ ನೀಡುತ್ತಿದ್ದರು. ಕ್ರಿಸ್ತಶಕದ ಏಳನೇ ಶತಮಾನದಲ್ಲಿ ಅರಬಸ್ತಾನದಲ್ಲಿ ಇಸ್ಲಾಮದ ಪ್ರಸಾರವಾಯಿತು. ಅದೇ ಶತಮಾನದಲ್ಲಿ ಅರಬ ವ್ಯಾಪಾರಿಗಳ ಮುಖಾಂತರ ಭಾರತದಲ್ಲಿ ಇಸ್ಲಾಮದ ಆಗಮನವಾಯಿತು. ಇಸ್ಲಾಮ ಧರ್ಮದ ಪ್ರಾರ್ಥನಾ ಸ್ಥಳಕ್ಕೆ 'ಮಸೀದಿ' ಎನ್ನುತ್ತಾರೆ.



ಮಸೀದಿ

### ೫.೬ ಪಾರಶಿ ಧರ್ಮ

ಪಾರಶಿ ಜನ ಮತ್ತು ವೈದಿಕ ಸಂಸ್ಕೃತಿಯ ಜನರ ನಡುವೆ ಪ್ರಾಚೀನ ಕಾಲದಿಂದಲೂ ಸಂಬಂಧವಿತ್ತು. ಪಾರಶಿ ಧರ್ಮದ ಪವಿತ್ರ ಗ್ರಂಥದ ಹೆಸರು 'ಅವೆಸ್ತಾ'. 'ಋಗ್ವೇದ' ಮತ್ತು ಅವೆಸ್ತಾಗಳಲ್ಲಿಯ ಭಾಷೆಯಲ್ಲಿ ಸಾಮ್ಯವಿದೆ. ಪಾರಶಿ ಜನರು ಇರಾಣದ 'ಪಾರ್ಸ' ಇಲ್ಲವೆ 'ಫಾರ್ಸ' ಎಂಬ ಪ್ರಾಂತದಿಂದ ಭಾರತಕ್ಕೆ ಬಂದರು. ಆದ್ದರಿಂದ ಅವರನ್ನು 'ಫಾರಶಿ' ಎಂಬ ಹೆಸರಿನಿಂಧ ಗುರುತಿಸಲಾಗುತ್ತದೆ. ಅವರು ಮೊದಲು ಗುಜರಾತಕ್ಕೆ ಬಂದರು. ಅವರು ಕ್ರಿಸ್ತಶಕದ ಎಂಟನೇ ಶತಮಾನದಲ್ಲಿ ಬಂದಿರಬಹುದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಝುರತುಷ್ಟ್ರ ಇವರು ಪಾರಶಿ ಧರ್ಮದ ಸಂಸ್ಥಾಪಕರಾಗಿದ್ದರು. 'ಅಹುರ ಮಜ್ದ' ಎಂಬ ಹೆಸರಿನಿಂದ ಅವರ ದೇವರನ್ನು ಉಲ್ಲೇಖಿಸಲಾಗುತ್ತದೆ. ಪಾರಶಿ ಧರ್ಮದಲ್ಲಿ ಅಗ್ನಿ ಮತ್ತು ನೀರು ಈ ಎರಡು ತತ್ವಗಳಿಗೆ ಅತ್ಯಂತ ಮಹತ್ವವಿದೆ. ಅವರ ಮಂದಿರಗಳಲ್ಲಿ ಪವಿತ್ರ ಅಗ್ನಿಯು ಪ್ರಜ್ವಲಿತವಾಗಿರುತ್ತದೆ. ಆ ಮಂದಿರಗಳಿಗೆ 'ಅಗ್ಯಾರಿ' ಎನ್ನುತ್ತಾರೆ. ಉತ್ತಮ ವಿಚಾರ, ಉತ್ತಮ ವಾಣಿ ಹಾಗೂ ಉತ್ತಮ ಕೃತಿ ಈ ಮೂರು ಪ್ರಮುಖ ಆಚರಣ ತತ್ವಗಳು ಪಾರಶಿ ವಿಚಾರಸರಣೀಯ ತಿರುಳಾಗಿದೆ.



ಅಗ್ಯಾರಿ

8SR4YC

## ಅಭ್ಯಾಸ

**೧. ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆಯಿರಿ.**

(೧) ಜೈನ ಧರ್ಮದಲ್ಲಿ .......... ಈ ತತ್ವಕ್ಕೆ ಮಹತ್ವ ಕೊಡಲಾಗಿದೆ.

(೨) ಸರ್ವ ಪ್ರಾಣಿಮಾತ್ರರ ವಿಷಯದಲ್ಲಿ........... ಇದು ಗೌತಮ ಬುದ್ಧರ ವ್ಯಕ್ತಿತ್ವದ ಅಸಾಧಾರಣ ವೈಶಿಷ್ಟ್ಯವಾಗಿತ್ತು.

**೨. ಸ್ವಲ್ಪದಲ್ಲಿ ಉತ್ತರ ಬರೆಯಿರಿ.**

(೧) ವರ್ಧಮಾನ ಮಹಾವೀರರು ಯಾವ ಉಪದೇಶವನ್ನು ಮಾಡಿದರು?

(೨) ಗೌತಮ ಬುದ್ಧರ ಯಾವ ವಚನವು ವಿಖ್ಯಾತವಾಗಿದೆ? ಅದರಿಂದ ಯಾವ ಮೌಲ್ಯಗಳು ಪ್ರಕಟವಾಗುತ್ತವೆ ?

(೩) ಜ್ಯೂ ಧರ್ಮದ ಉಪದೇಶದಲ್ಲಿ ಯಾವ ಗುಣಗಳಿಗೆ ಮಹತ್ವ ನೀಡಲಾಗಿದೆ ?

(೪) ಕ್ರಿಶ್ಚನ್ ಧರ್ಮದಲ್ಲಿ ಏನು ಹೇಳಲಾಗಿದೆ ?

(೫) ಇಸ್ಲಾಮ ಧರ್ಮದ ಉಪದೇಶದಲ್ಲಿ ಏನು ಹೇಳಲಾಗಿದೆ?

(೬) ಪಾರಶಿ ವಿಚಾರಸರಣಿಯ ತಿರುಳು ಯಾವುದು ?

**೩. ಟಿಪ್ಪಣೆ ಬರೆಯಿರಿ.**

(೧) ಆರ್ಯ ಸತ್ಯಗಳು (೨) ಪಂಚಶೀಲ

**೪. ಕೆಳಗೆ ಕೊಡಲಾದ ಪಂಚಮಹಾವ್ರತ ಹಾಗೂ ತ್ರಿರತ್ನಗಳನ್ನು ಕೆಳಗಿನ ಕೋಷ್ಟಕದಲ್ಲಿ ವರ್ಗೀಕರಣ ಮಾಡಿರಿ.**

(೧) ಅಹಿಂಸೆ (೨) ಸಮ್ಯಕ್ ದರ್ಶನ (೩) ಸತ್ಯ
(೪) ಅಸ್ತೇಯ (೫) ಸಮ್ಯಕ್ ಜ್ಞಾನ (೬) ಅಪರಿಗ್ರಹ
(೭) ಸಮ್ಯಕ್ ಚಾರಿತ್ರ್ಯ (೮) ಬ್ರಹ್ಮಚರ್ಯ

| ಪಂಚಮಹಾವ್ರತಗಳು | ತ್ರಿರತ್ನಗಳು |
|---|---|
| (೧)................. | (೧)................. |
| (೨)................. | (೨)................. |
| (೩)................. | (೩)................. |
| (೪)................. | |
| (೫)................. | |

**೫. ಕಾರಣ ಕೊಡಿರಿ.**

(೧) ವರ್ಧಮಾನ ಮಹಾವೀರರನ್ನು 'ಜಿನ' ಎಂದು ಏಕೆ ಕರೆಯಲಾಯಿತು ?

(೨) ಗೌತಮ ಬುದ್ಧರಿಗೆ 'ಬುದ್ಧ' ಎಂದು ಏಕೆ ಕರೆಯಲಾಯಿತು?


**ಉಪಕ್ರಮ**

(೧) ವಿವಿಧ ಹಬ್ಬಗಳ ಮಾಹಿತಿ ಮತ್ತು ಚಿತ್ರಗಳನ್ನು ಸಂಗ್ರಹಿಸಿರಿ.

(೨) ವಿವಿಧ ಧರ್ಮಗಳ ಪ್ರಾರ್ಥನಾ ಸ್ಥಳಗಳಿಗೆ ಭೇಟಿ ನೀಡಿರಿ ಹಾಗೂ ಪರಿಸರ ಭೇಟಿಯ ವರ್ಣನೆಯನ್ನು ನಿಮ್ಮ ವರ್ಗದಲ್ಲಿ ಕಥನ ಮಾಡಿರಿ.

* * *

# ೬. ಜನಪದಗಳು ಮತ್ತು ಮಹಾಜನಪದಗಳು




೬.೧ ಜನಪದಗಳು
೬.೨ ಮಹಾಜನಪದಗಳು
೬.೩ ಮಗಧ ಸಾಮ್ರಾಜ್ಯದ ಉದಯ



**ಮಾಡಿ ನೋಡಿರಿ.**

ಭಾರತದ ನಕಾಶೆಯಲ್ಲಿ ಹದಿನಾರು ಮಹಾಜನಪದಗಳ ಹೆಸರು ಬರೆಯಿರಿ.

## ೬.೧ ಜನಪದಗಳು

ಸಾಮಾನ್ಯವಾಗಿ ಕ್ರಿ.ಶ.ಪೂ. ೧೦೦೦ ದಿಂದ ಕ್ರಿ.ಶ.ಪೂ. ೬೦೦ರ ವರೆಗಿನ ಕಾಲಖಂಡವು ವೈದಿಕೋತ್ತರ ಕಾಲಖಂಡವೆಂದು ತಿಳಿಯಲಾಗುತ್ತದೆ. ಈ ಕಾಲದಲ್ಲಿ ಜನಪದಗಳು ಅಸ್ತಿತ್ವದಲ್ಲಿ ಬಂದವು. ಈ ಜನಪದಗಳೆಂದರೆ ಚಿಕ್ಕ ಚಿಕ್ಕ ರಾಜ್ಯಗಳಾಗಿದ್ದವು. ಭಾರತೀಯ ಉಪಖಂಡದ ವಾಯವ್ಯದಲ್ಲಿರುವ ಇಂದಿನ ಅಫಗಾನಿಸ್ತಾನದಿಂದ ಹಿಡಿದು ಪೂರ್ವಕ್ಕೆ ಬಿಹಾರ, ಬಂಗಾಲ ಹಾಗೂ ಓಡಿಶಾದ ವರೆಗಿನ ಪ್ರದೇಶದಲ್ಲಿ ಹಾಗೂ ದಕ್ಷಿಣಕ್ಕೆ ಮಹಾರಾಷ್ಟ್ರದ ವರೆಗೆ ಈ

ಜನಪದಗಳು ಹರಡಿದ್ದವು. ಇಂದಿನ ಮಹಾರಾಷ್ಟ್ರದ ಕೆಲವು ಭಾಗವು ಆಗಿನ 'ಅಶ್ಮಕ ಎಂಬ ಜನಪದದಿಂದ ವ್ಯಾಪಿಸಿತ್ತು. ಸಂಸ್ಕೃತ, ಪಾಲಿ ಹಾಗೂ ಅರ್ಧಮಾಗಧಿ ಸಾಹಿತ್ಯದಲ್ಲಿ ಈ ಜನಪದಗಳ ಹೆಸರುಗಳು ಕಂಡುಬರುತ್ತವೆ. ಗ್ರೀಕ ಇತಿಹಾಸಕಾರರ ಬರವಣಿಗೆಯಲ್ಲಿಯೂ ಅದನ್ನು ಕುರಿತ ಮಾಹಿತಿ ದೊರೆಯುತ್ತದೆ. ಅವುಗಳಲ್ಲಿಯ ಕೆಲವು ಜನಪದಗಳಲ್ಲಿ ರಾಜಪ್ರಭುತ್ವವಿತ್ತು. ಕೆಲವು ಜನಪದಗಳಲ್ಲಿ ಮಾತ್ರ ಗಣರಾಜ್ಯವಿತ್ತು. ಜನಪದಗಳಲ್ಲಿಯ ಹಿರಿಯ ವ್ಯಕ್ತಿಗಳ 'ಗಣಪರಿಷತ್ತು' ಇರುತ್ತಿತ್ತು. ಗಣಪರಿಷತ್ತಿನ ಸದಸ್ಯರು ಒಟ್ಟುಗೂಡಿ ಚರ್ಚೆ ಮಾಡಿ ರಾಜ್ಯಾಡಳಿತವನ್ನು ಕುರಿತು ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಯಾವ ಸಭಾಗೃಹದಲ್ಲಿ ಚರ್ಚೆ ನಡೆಯುತ್ತಿತ್ತೋ, ಅದಕ್ಕೆ 'ಸಂಥಾಗಾರ' ಎನ್ನಲಾಗುತ್ತಿತ್ತು. ಗೌತಮ ಬುದ್ಧರು ಶಾಕ್ಯ ಗಣರಾಜ್ಯದಲ್ಲಿದ್ದರು. ಪ್ರತಿಯೊಂದು ಜನಪದಕ್ಕೆ ಸ್ವತಂತ್ರ ನಾಣ್ಯಗಳಿದ್ದವು.

## ೬.೨ ಮಹಾಜನಪದಗಳು

### ಮಹಾಜನಪದಗಳು

#### ಕೋಸಲ

- ಕೋಸಲ ಮಹಾಜನಪದದ ವಿಸ್ತಾರವು ಹಿಮಾಲಯದ ಅಡಿಯಲ್ಲಿ ನೇಪಾಳ ಮತ್ತು ಉತ್ತರ ಪ್ರದೇಶಗಳಲ್ಲಿ ಆಗಿತ್ತು.
- ಈ ರಾಜ್ಯದಲ್ಲಿ ಶ್ರಾವಸ್ತಿ, ಕುಶಾವತಿ ಮತ್ತು ಸಾಕೇತ- ಈ ನಗರಗಳು ಪ್ರಸಿದ್ಧವಾಗಿದ್ದವು.
- ಶ್ರಾವಸ್ತಿಯು ಕೋಸಲ ಮಹಾಜನಪದದ ರಾಜಧಾನಿಯಾಗಿತ್ತು.
- ಗೌತಮ ಬುದ್ಧರು ಶ್ರಾವಸ್ತಿಯಲ್ಲಿಯ ಜೇತ ವನ ಎಂಬ ಪ್ರಸಿದ್ಧಿ ವಿಹಾರದಲ್ಲಿ ದೀರ್ಘಕಾಲ ವಾಸ ಮಾಡಿದ್ದರು.
- ಕೋಸಲದ ರಾಜ ಪ್ರಸೇನಜಿತನು ವರ್ಧಮಾನ ಮಹಾವೀರ ಹಾಗೂ ಗೌತಮ ಬುದ್ಧರ ಸಮಕಾಲೀನ ನಾಗಿದ್ದನು.
- ಕೋಸಲದ ರಾಜ್ಯವು ಮಗಧದಲ್ಲಿ ವಿಲೀನವಾಯಿತು.

#### ವತ್ಸ

- ವತ್ಸ ಮಹಾಜನಪದದ ವಿಸ್ತಾರವು ಉತ್ತರ ಪ್ರದೇಶದ ಪ್ರಯಾಗ ಎಂದರೆ ಅಲಹಾಬಾದದ ಸುತ್ತಲಿನ ಪ್ರದೇಶದಲ್ಲಿ ಆಗಿತ್ತು.
- ಕೋಸಮ ಎಂದರೆ ಪ್ರಾಚೀನಕಾಲದ ಕೌಶಂಬಿ ನಗರ.
- ಇದು ಒಂದು ಮಹಾತ್ವದ ವ್ಯಾಪಾರದ ಕೇಂದ್ರ ವಾಗಿತ್ತು.
- ಕೌಶಂಬಿಯಲ್ಲಿಯ ಮೂರು ಅತ್ಯಂತ ಶ್ರೀಮಂತ ವ್ಯಾಪಾರಿಗಳು ಗೌತಮ ಬುದ್ಧ ಹಾಗೂ ಅವರ ಅನುಯಾಯಿ ಗಳಿಗಾಗಿ ಮೂರು ವಿಹಾರಗಳನ್ನು ಕಟ್ಟಿದ್ದರು.
- ರಾಜ ಉದಯನ ಗೌತಮ ಬುದ್ಧರ ಸಮಕಾಲೀನ ನಾಗಿದ್ದನು.
- ರಾಜಾಉದಯನನ ನಂತರ ವತ್ಸ ಮಹಾಜನಪದದ ಸ್ವತಂತ್ರ ಅಸ್ತಿತ್ವ ಹೆಚ್ಚು ಕಾಲ ಉಳಿಯಲಿಲ್ಲ. ಅವಂತಿ ಮಹಾಜನಪದದ ರಾಜನು ಅದನ್ನು ಗೆದ್ದುಕೊಂಡನು.

#### ಅವಂತಿ

- ಮಧ್ಯ ಪ್ರದೇಶದ ಮಾಳವಾ ಪ್ರದೇಶದಲ್ಲಿ ಅವಂತಿ ಈ ಪ್ರಾಚೀನ ಮಹಾಜನಪದವಿತ್ತು.
- ಉಜ್ಜಯಿನಿ (ಉಜ್ಜೈನ) ಈ ನಗರವು ಅದರ ರಾಜಧಾನಿಯಾಗಿತ್ತು.
- ಉಜ್ಜಯಿನಿಯು ಒಂದು ಮಹತ್ವದ ವ್ಯಾಪಾರದ ಕೇಂದ್ರವಾಗಿತ್ತು.
- ಅವಂತಿಯ ರಾಜನಾದ ಪ್ರದ್ಯೋತನು ವರ್ಧಮಾನ ಮಹಾವೀರ ಹಾಗೂ ಗೌತಮ ಬುದ್ಧರ ಸಮಕಾಲೀನನಾಗಿದ್ದನು.
- ಅವಂತಿಯ ರಾಜ ನಂದೀವರ್ಧನನ ಆಡಳಿತದಲ್ಲಿ ಅವಂತಿಯು ಮಗಧ ಸಾಮ್ರಾಜ್ಯದಲ್ಲಿ ವಿಲೀನವಾಯಿತು.

#### ಮಗಧ

- ಬಿಹಾರದಲ್ಲಿಯ ಪಾಟಣಾ, ಗಯಾ ಈ ಪಟ್ಟಣಗಳ ಸುತ್ತಲಿನ ಪ್ರದೇಶ ಹಾಗೂ ಬಂಗಾಲದ ಕೆಲವು ಭಾಗಗಳಲ್ಲಿ ಮಗಧ ಮಹಾಜನಪದವಿತ್ತು.
- ರಾಜ ಗೃಹ (ರಾಜಗೀರ) ಇದು ಅದರ ರಾಜಧಾನಿಯಾಗಿತ್ತು.
- ಮಹಾಗೋವಿಂದ ಎಂಬ ವಾಸ್ತು ಶಾಸ್ತ್ರಜ್ಞನು ಬಿಂಬಿಸಾರನ ಅರಮನೆಯನ್ನು ಕಟ್ಟಿದ್ದನು.
- ಜೀವಕ ಎಂಬ ಪ್ರಸಿದ್ಧ ವೈದ್ಯನು ಬಿಂಬಿಸಾರನ ಆಸ್ಥಾನದಲ್ಲಿದ್ದನು.
- ಬಿಂಬಿಸಾರನು ಗೌತಮ ಬುದ್ಧರ ಶಿಷ್ಯತ್ವವನ್ನು ಸ್ವೀಕರಿಸಿದ್ದನು.

ಕೆಲವು ಜನಪದಗಳು ಕ್ರಮೇಣವಾಗಿ ಅಧಿಕ ಬಲಶಾಲಿಯಾದವು. ಅವುಗಳ ಭೌಗೋಲಿಕ ಗಡಿಗಳು ವಿಸ್ತರಿಸಲ್ಪಟ್ಟವು. ಇಂಥ ಜನಪದಗಳಿಗೆ ಮಹಾಜನಪದ ಎನ್ನುವರು. ಸಾಹಿತ್ಯದಲ್ಲಿಯ ಉಲ್ಲೇಖದ ಆಧಾರದಿಂದ ತಿಳಿದುಬರುವುದೇನೆಂದರೆ ಕ್ರಿ.ಶ.ಪೂ. ೬ನೇ ಶತಮಾನದ ವರೆಗೆ ಮಹಾಜನಪದಗಳಲ್ಲಿ ಹದಿನಾರು ಮಹಾಜನಪದಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಗಿತ್ತು. ಅದರಲ್ಲಿಯೂ ಕೋಸಲ, ವತ್ಸ, ಅವಂತಿ ಮತ್ತು ಮಗಧ ಈ ನಾಲ್ಕು ಮಹಾಜನಪದಗಳು ಹೆಚ್ಚು ಬಲಾಢ್ಯವಾಗುತ್ತ ಹೋದವು.

### ೬.೩ ಮಗಧ ಸಾಮ್ರಾಜ್ಯದ ಉದಯ

ಬಿಂಬಿಸಾರನ ಮಗನಾದ ಅಜಾತಶತ್ರುವು ಕೂಡ ಮಗಧದ ವಿಸ್ತಾರ ಮಾಡುವ ಧೋರಣೆಯನ್ನು ಸ್ವೀಕರಿಸಿದನು. ಅವನು ಪೂರ್ವದ ಕಡೆಯ ಅನೇಕ ಗಣರಾಜ್ಯಗಳನ್ನು ಗೆದ್ದುಕೊಂಡನು. ಅಜಾತಶತ್ರುವಿನ ಆಳ್ವಿಕೆಯಲ್ಲಿ ಮಗಧ ರಾಜ್ಯವು ವೈಭವದ ಶಿಖರವನ್ನೇರಿತ್ತು. ಅವನು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದನು. ಗೌತಮ ಬುದ್ಧರ ಮಹಾಪರಿನಿರ್ವಾಣದ ನಂತರ ಅಜಾತಶತ್ರುವಿನ



ಅಜಾತಶತ್ರು- ಶಿಲ್ಪ

ಆಡಳಿತದಲ್ಲಿ ರಾಜಗೃಹ ಎಂಬಲ್ಲಿ ಬೌದ್ಧ ಧರ್ಮದ ಪ್ರಥಮ ಸಂಗೀತ ಎಂದರೆ ಪರಿಷತ್ತು ಆಯಿತು.

ಅಜಾತಶತ್ರುವಿನ ಆಡಳಿತದಲ್ಲಿ ಮಗಧದ ಪಾಟಲೀಗ್ರಾಮ ಎಂಬ ಹೊಸ ರಾಜಧಾನಿಯ ಅಡಿಪಾಯವನ್ನು ಹಾಕಲಾಯಿತು. ಅದೇ ಮುಂದೆ ಪಾಟಲೀಪುತ್ರ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಪಾಟಲೀಪುತ್ರವು ಇಂದಿನ ಪಾಟಣಾ ನಗರ ಪರಿಸರದಲ್ಲಿರಬಹುದು.

ಅಜಾತಶತ್ರುವಿನ ನಂತರ ಆಗಿ ಹೋದ ಮಗಧದ ರಾಜರಲ್ಲಿ ಶಿಶುನಾಗ ಇವನು ಮಹತ್ವದ ರಾಜನಾಗಿದ್ದನು. ಅವನು ಅವಂತಿ, ಕೋಸಲ ಹಾಗೂ ವತ್ಸ ಈ ರಾಜ್ಯಗಳನ್ನು ಮಗಧಕ್ಕೆ ಸೇರಿಸಿಕೊಂಡನು. ಉತ್ತರ ಭಾರತದ ಸಂಪೂರ್ಣ ಪ್ರದೇಶವು ಅವನ ಅಧಿಪತ್ಯಕ್ಕೆ ಒಳಗಾಯಿತು. ಈ ರೀತಿ ಮಗಧ ಸಾಮ್ರಾಜ್ಯಕ್ಕೆ ಆಕಾರ ಪ್ರಾಪ್ತವಾಯಿತು.

**ಮಗಧ ಸಾಮ್ರಾಜ್ಯದ ನಂದ ರಾಜರು :** ಕ್ರಿ.ಶ.ಪೂ. ೩೬೪ ರಿಂದ ಕ್ರಿ.ಶ.ಪೂ. ೩೨೪ರ ಅವಧಿಯಲ್ಲಿ ಮಗಧ ಸಾಮ್ರಾಜ್ಯದ ಮೇಲೆ ನಂದ ರಾಜರ ಆಡಳಿತವಿತ್ತು. ಒಂದು ವಿಸ್ತಾರವಾದ ಸಾಮ್ರಾಜ್ಯಕ್ಕೆ ಅವಶ್ಯಕವಾದ ಆಡಳಿತ ವ್ಯವಸ್ಥೆಯನ್ನು ನಂದ ರಾಜರು ನಿರ್ಮಿಸಿದ್ದರು. ಅವರ ಕಡೆಗೆ ಕಾಲ್ದಳ, ಅಶ್ವದಳ, ರಥದಳ ಹಾಗೂ ಗಜದಳ- ಈ ರೀತಿ ಚತುರಂಗ ಸೈನ್ಯವಿತ್ತು. ಅವನು ತೂಕ ಮತ್ತು ಅಳತೆಗಳ ಪ್ರಮಾಣಿತ ಪದ್ಧತಿಯನ್ನು ಆರಂಭಿಸಿದನು.

ನಂದ ಮನೆತನದ ಕೊನೆಯ ರಾಜನ ಹೆಸರು ಧನಾನಂದ. ಅವನ ಆಡಳಿತಾವಧಿಯ ವರೆಗೆ ಮಗಧ ಸಾಮ್ರಾಜ್ಯದ ವಿಸ್ತಾರವು ಪಶ್ಚಿಮದ ಕಡೆಗೆ ಪಂಜಾಬದ ವರೆಗೆ ಆಗಿತ್ತು. ಧನಾನಂದನ ಆಡಳಿತದಲ್ಲಿ ಚಂದ್ರಗುಪ್ತ ಮೌರ್ಯನೆಂಬ ಮಹತ್ವಾಕಾಂಕ್ಷೆಯುಳ್ಳ ತರುಣನು ಪಾಟಲಿಪುತ್ರವನ್ನು ಗೆದ್ದುಕೊಂಡನು. ನಂದರ ಆಡಳಿತವನ್ನು ಕೊನೆಗೊಳಿಸಿದನು ಹಾಗೂ ಮೌರ್ಯ ಸಾಮ್ರಾಜ್ಯದ ಅಡಿಪಾಯವನ್ನು ಹಾಕಿದನು.

ಮುಂದಿನ ಪಾಠದಲ್ಲಿ ನಾವು ಮೌರ್ಯ ಸಾಮ್ರಾಜ್ಯದ ಉದಯದ ಕಾಲದಲ್ಲಿ ಭಾರತದ ವಾಯವ್ಯ ಹಾಗೂ ಪಶ್ಚಿಮ ಭಾಗಗಳ ಮೇಲಾದ ಪರಕೀಯ ಆಕ್ರಮಣಗಳ ಬಗ್ಗೆ ತಿಳಿದುಕೊಳ್ಳೋಣ. ಅದರಂತೆ ಮೌರ್ಯ ಸಾಮ್ರಾಜ್ಯದ ಸವಿಸ್ತಾರ ಮಾಹಿತಿಯನ್ನು ಪಡೆಯೋಣ.



**ನಿಮಗೆ ಗೊತ್ತಿದೆಯೇ ?**

ಹದಿನಾರು ಮಹಾಜನಪದಗಳ ಪ್ರಾಚೀನ ಮತ್ತು ಆಧುನಿಕ ಹೆಸರುಗಳು: (೧) ಕಾಶಿ (ಬನಾರಸ), (೨) ಕೋಸಲ (ಲಖನೌ), (೩) ಮಲ್ಲ (ಗೋರಖಪೂರ) (೪) ವತ್ಸ (ಅಲಹಾಬಾದ), (೫) ಚೇದಿ (ಕಾನಪೂರ) (೬) ಕುರು (ದಿಲ್ಲಿ) (೭) ಪಾಂಚಾಲ (ರೋಹಿಲಖಂಡ), (೮) ಮತ್ಸ್ಯ (ಜಯಪೂರ) (೯) ಶೂರಸೇನ (ಮಥುರಾ), (೧೦) ಅಶ್ಮಕ (ಔರಂಗಾಬಾದ-ಮಹಾರಾಷ್ಟ್ರ), (೧೧) ಅವಂತಿ (ಉಜ್ಜೈನ) (೧೨) ಅಂಗ (ಚಂಪಾ-ಪೂರ್ವ ಬಿಹಾರ), (೧೩) ಮಗಧ (ದಕ್ಷಿಣ ಬಿಹಾರ), (೧೪) ವೃಜ್ಜಿ (ಉತ್ತರ ಬಿಹಾರ) (೧೫) ಗಾಂಧಾರ (ಪೇಶಾವರ), (೧೬) ಕಂಬೋಜ (ಗಾಂಧಾರ ಹತ್ತಿರ)

## ಅಭ್ಯಾಸ

**೧. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಜನಪದ ಎಂದರೇನು ?
(೨) ಮಹಾಜನಪದ ಎಂದರೇನು ?
(೩) ಬೌದ್ಧ ಧರ್ಮದ ಪ್ರಥಮ ಪರಿಷತ್ತು ಎಲ್ಲಿ ಆಯಿತು ?
(೪) ತೂಕ ಮತ್ತು ಅಳತೆಗಳ ಪ್ರಮಾಣಿತ ಪದ್ಧತಿಯನ್ನು ಯಾರು ಆರಂಭಿಸಿದರು ?

**೨. ಹೇಳಿ ನೋಡೋಣ.**

(೧) ಇಂದಿನ ಮಹಾರಾಷ್ಟ್ರದ ಕೆಲವು ಭಾಗವು ಆಗಿನ ಈ ಜನಪದದಿಂದ ವ್ಯಾಪಿಸಿತ್ತು –
(೨) ಜನಪದಗಳಲ್ಲಿಯ ಹಿರಿಯ ವ್ಯಕ್ತಿಗಳ ಪರಿಷತ್ತು –
(೩) ಚರ್ಚೆ ನಡೆಯುತ್ತಿದ್ದ ಸಭಾಗೃಹ –
(೪) ಗೌತಮ ಬುದ್ಧರು ಈ ಗಣರಾಜ್ಯದಲ್ಲಿದ್ದರು –
(೫) ಚತುರಂಗ ಸೈನ್ಯ –

**೩. ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| (೧) ಸಂಗಿತಿ | (ಅ) ಅಜಾತಶತ್ರು |
| (೨) ಧನಾನಂದ | (ಬ) ಪರಿಷತ್ತು |
| (೩) ಪಾಟಲೀಗ್ರಾಮ | (ಕ) ಮಹಾಗೋವಿಂದ |
| | (ಡ) ನಂದರಾಜ |

**೪. ಭಾರತದಲ್ಲಿಯ ವಿವಿಧ ಘಟಕ ರಾಜ್ಯಗಳು ಹಾಗೂ ಅವುಗಳ ರಾಜಧಾನಿಗಳ ಪಟ್ಟಿ ತಯಾರಿಸಿರಿ.**

**ಉಪಕ್ರಮ**

(೧) ನಿಮ್ಮ ಪರಿಸರದಲ್ಲಿಯ ಕೋಟೆಗೆ ಭೇಟಿ ನೀಡಿ ಕೆಳಗಿನ ಅಂಶಗಳಿಗನುಗುಣವಾಗಿ ಮಾಹಿತಿ ಸಂಗ್ರಹಿಸಿರಿ.
(೧) ಕೋಟೆಯ ಪ್ರಕಾರ (೨) ಯಾರ ಆಳ್ವಿಕೆಯಲ್ಲಿ ನಿರ್ಮಾಣ (೩) ಕಿಲ್ಲೇದಾರ (೪) ಪ್ರಮುಖ ವೈಶಿಷ್ಟ್ಯಗಳು
(೨) ಭಾರತೀಯ ಸೈನ್ಯದಲ್ಲಿ ಯಾವ ಯಾವ ದಳಗಳಿವೆಯೆಂಬುದರ ಮಾಹಿತಿ ಸಂಗ್ರಹಿಸಿರಿ.
(೩) ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.

| ಅ. ನಂ. | ಮಹಾಜನಪದದ ರಾಜ್ಯ | ಸ್ಥಳ | ರಾಜಧಾನಿ | ಪ್ರಮುಖ ರಾಜನ ಹೆಸರು |
|---|---|---|---|---|
| ೧. | --- | ಹಿಮಾಲಯದ ಅಡಿಯಲ್ಲಿ | --- | --- |
| ೨. | ವತ್ಸ | --- | --- | --- |
| ೩. | --- | --- | --- | ಪ್ರದ್ಯೋತ |
| ೪. | --- | ಪಾಟಣಾ, ಗಯಾ ಈ ಪಟ್ಟಣಗಳ ಸುತ್ತಲಿನ ಪ್ರದೇಶ | --- | --- |

* * *


# ೭. ಮೌರ್ಯಕಾಲದ ಭಾರತ

## ೭.೧ ಗ್ರೀಕ ಸಾಮ್ರಾಟ ಸಿಕಂದರರ ದಂಡಯಾತ್ರೆ

## ೭.೨ ಮೌರ್ಯ ಸಾಮ್ರಾಜ್ಯ

### ನಿಮಗೆ ಗೊತ್ತಿದೆಯೇ?

ಕ್ರಿ.ಶ.ಪೂ. ಆರನೆಯ ಶತಮಾನದಲ್ಲಿ ಇರಾಣದಲ್ಲಿ ಸಾಯರಸ್ ಎಂಬ ಹೆಸರಿನ ರಾಜನು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ್ದನು. ಈ ಸಾಮ್ರಾಜ್ಯವು ವಾಯವ್ಯ ಭಾರತದಿಂದ ಹಿಡಿದು ರೋಮದ ವರೆಗೆ ಹಾಗೂ ಆಫ್ರಿಕಾದಿಂದ ಹಿಡಿದು ಈಜಿಪ್ಟ್ ವರೆಗೆ ಹರಡಿತ್ತು. ಕ್ರಿ.ಶ.ಪೂ. ೫೧೮ರ ಸುಮಾರಿಗೆ ದಾರ್ಯುಶ ಎಂಬ ಹೆಸರಿನ ಇರಾಣಿ ಸಾಮ್ರಾಟನು ಭಾರತದ ವಾಯವ್ಯದ ಕಡೆಗಿನ ಪ್ರದೇಶ ಹಾಗೂ ಪಂಜಾಬದ ವರೆಗಿನ ಕೆಲವು ಭಾಗವನ್ನು ಗೆದ್ದುಕೊಂಡಿದ್ದನು. ದಾರ್ಯುಶನು ಈ ಪ್ರದೇಶದಲ್ಲಿಯ ಕೆಲವು ಸೈನಿಕರನ್ನು ತನ್ನ ಸೈನ್ಯದಲ್ಲಿ ಭರ್ತಿ ಮಾಡಿದ್ದನು. ಗ್ರೀಕ ಇತಿಹಾಸಕಾರರ ಲೇಖನದಿಂದ ಅದರ ಮಾಹಿತಿ ದೊರೆಯುತ್ತದೆ. ಸಾಮ್ರಾಟ ದಾರ್ಯುಶನ ಆಡಳಿತದ ಕಾಲದಲ್ಲಿ ಭಾರತ ಮತ್ತು ಇರಾಣಗಳ ನಡುವೆ ರಾಜನೈತಿಕ ಸಂಬಂಧ ಪ್ರಸ್ಥಾಪಿತವಾಯಿತು. ಅದರಿಂದ ವ್ಯಾಪಾರ ಮತ್ತು ಕಲೆ-ಈ ಕ್ಷೇತ್ರದಲ್ಲಿಯ ಕೊಡುಕೊಳ್ಳುವಿಕೆ ಹೆಚ್ಚಿತು. ಸಾಮ್ರಾಟ ದಾರ್ಯುಶನು ತನ್ನ ಸಾಮ್ರಾಜ್ಯದಲ್ಲಿ ಎಲ್ಲೆಡೆ 'ದಾರಿಕ' ಎಂಬ ಹೆಸರಿನ ಒಂದೇ ಪ್ರಕಾರದ ಚಲಾವಣೆಯ ನಾಣ್ಯವನ್ನು ಜಾರಿಗೊಳಿಸಿದನು. ಅದರಿಂದಾಗಿ ವ್ಯಾಪಾರ ಮಾಡುವುದು ಸುಲಭವಾಯಿತು. ಸಾಮ್ರಾಟ ದಾರ್ಯುಶನ ಕಾಲದಲ್ಲಿ 'ಪರ್ಸಿಪೋಲೀಸ್' ಎಂಬ ರಾಜಧಾನಿಯನ್ನು ನಿರ್ಮಿಸಲಾಯಿತು. ಪರ್ಸಿಪೋಲಿಸ ಇದು ಇರಾಣದಲ್ಲಿ ಇದೆ.



ದಾರಿಕ

## ೭.೧ ಗ್ರೀಕ ಸಾಮ್ರಾಟ ಸಿಕಂದರರ ದಂಡಯಾತ್ರೆ

ಗ್ರೀಕ ಸಾಮ್ರಾಟ ಅಲೆಕ್ಝಾಂಡರ ಊರ್ಫ್ ಸಿಕಂದರನು ಕ್ರಿ.ಶ.ಪೂ. ೩೨೬ ರಲ್ಲಿ ಭಾರತದ ವಾಯವ್ಯ ಪ್ರದೇಶದ ಮೇಲೆ ದಾಳಿ ಮಾಡಿದನು. ಸಿಂಧೂ ನದಿಯನ್ನು ದಾಟಿ



ಸಾಮ್ರಾಟ ಸಿಕಂದರ

ಅವನು ತಕ್ಷಶಿಲೆಗೆ ಬಂದನು. ಈ ಮಾರ್ಗದಲ್ಲಿ ಕೆಲವು ಸ್ಥಾನಿಕ ಭಾರತೀಯ ರಾಜರು ಅವನೊಂದಿಗೆ ನಿಕರದ ಹೋರಾಟ ಮಾಡಿದರು. ಆದರೂ ಪಂಜಾಬದ ವರೆಗೆ ತಲುಪುವುದರಲ್ಲಿ ಸಿಕಂದರನು ಯಶಸ್ವಿಯಾದನು. ಆದರೆ ಈ ದಾಳಿಯಲ್ಲಿ ಸಿಕಂದರನ ಸೈನಿಕರು ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ತಾಯ್ನಾಡಿಗೆ ಮರಳಲು ಅವರು ಆತುರರಾಗಿದ್ದರು. ಅವರು ಸಿಕಂದರನ ವಿರುದ್ಧ ಬಂಡೆದ್ದರು. ಸಿಕಂದರನು ಹಿಮ್ಮೆಟ್ಟಲೇಬೇಕಾಯಿತು. ಭಾರತದಲ್ಲಿಯ ಗೆದ್ದುಕೊಂಡ ಪ್ರದೇಶಗಳ ವ್ಯವಸ್ಥೆಗಾಗಿ ಅವನು ಗ್ರೀಕ ಅಧಿಕಾರಿಗಳ ನೇಮಕ ಮಾಡಿದನು ಹಾಗೂ ಅವರಿಗೆ 'ಸತ್ರಪ' ಎಂದು ಕರೆದನು. ಆ ನಂತರ ಅವನು ಭಾರತದಿಂದ ತೆರಳಿದನು. ಹೋಗುವಾಗ ದಾರಿಯಲ್ಲಿ 'ಬೆಬಿಲಾನ್' ಎಂಬಲ್ಲಿ ಕ್ರಿ.ಶ.ಪೂ. ೩೨೩ ರಲ್ಲಿ ಅವನು ಮರಣ ಹೊಂದಿದನು. ಈ ಸ್ಥಳವು ಈಗಿನ ಇರಾಕ್‌ದಲ್ಲಿ ಇದೆ.

ಸಿಕಂದರನ ಆಗಮನದಿಂದಾಗಿ ಭಾರತ ಮತ್ತು ಪಶ್ಚಿಮದ ಕಡೆಯ ಜಗತ್ತು- ಇವುಗಳಲ್ಲಿಯ ವ್ಯಾಪಾರ ಬೆಳೆಯಿತು. ಸಿಕಂದರನ ಜೊತೆಗಿದ್ದ ಇತಿಹಾಸಕಾರರು ತಮ್ಮ ಲೇಖನದ ಮುಖಾಂತರ ಪಶ್ಚಿಮದ ಕಡೆಯ ಜಗತ್ತಿಗೆ ಭಾರತದ ಪರಿಚಯ ಮಾಡಿಸಿದರು. ಭಾರತೀಯ ಶಿಲ್ಪಕಲೆಯ ಮೇಲೆ ಗ್ರೀಕ ಶಿಲ್ಪಕಲೆಯ ಪ್ರಭಾವವಾಯಿತು. ಅದರಿಂದಲೇ ಮುಂದೆ ಗಾಂದಾರ ಶಿಲ್ಪಕಲಾಶೈಲಿಯ ಉದಯವಾಯಿತು. ಗ್ರೀಕ ರಾಜರ ನಾಣ್ಯಗಳು ವೈಶಿಷ್ಟ್ಯಪೂರ್ಣವಾಗಿದ್ದವು. ಅವುಗಳ ಒಂದು ಬದಿಗೆ ಈ ನಾಣ್ಯಗಳನ್ನು ಟಂಕಿಸಿದ ರಾಜನ ಚಿತ್ರ, ಇನ್ನೊಂದು ಬದಿಗೆ ಒಬ್ಬ ಗ್ರೀಕ ದೇವತೆಯ ಚಿತ್ರವಿರುತ್ತಿತ್ತು. ನಾಣ್ಯದ ಮೇಲೆ ಆ ರಾಜನ ಹೆಸರು ಇರುತ್ತಿತ್ತು. ಸಿಕಂದರನ ನಾಣ್ಯಗಳು ಕೂಡ ಇದೇ



**ಸಿಕಂದರನ ಬೆಳ್ಳಿಯ ನಾಣ್ಯಗಳು- ಎರಡೂ ಬದಿಗಳು**

ಪ್ರಕಾರದ್ದಾಗಿದ್ದವು. ನಂತರದ ಕಾಲದಲ್ಲಿ ಭಾರತೀಯ ರಾಜರೂ ಕೂಡ ಇಂಥ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು.

## ೭.೨ ಮೌರ್ಯ ಸಾಮ್ರಾಜ್ಯ

**ಚಂದ್ರಗುಪ್ತ ಮೌರ್ಯ :** ಚಂದ್ರಗುಪ್ತ ಮೌರ್ಯನು ಮೌರ್ಯ ಸಾಮ್ರಾಜ್ಯದ ಸ್ಥಾಪನೆ ಮಾಡಿದನು. ಮಗಧದ ನಂದರಾಜನಾದ ಧನಾನಂದನ ದಬ್ಬಾಳಿಕೆಯ ಆಡಳಿತಕ್ಕೆ ಜನ ಬೇಸತ್ತಿದ್ದರು. ಅವನನ್ನು ಸೋಲಿಸಿ ಚಂದ್ರಗುಪ್ತ ಮೌರ್ಯನು ಕ್ರಿ.ಶ.ಪೂ. ೩೨೫ ರಲ್ಲಿ ಮಗಧದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಅವನು ಅವಂತಿ ಮತ್ತು ಸೌರಾಷ್ಟ್ರಗಳನ್ನು ಗೆದ್ದುಕೊಂಡು, ತನ್ನ ಸಾಮ್ರಾಜ್ಯ ವಿಸ್ತಾರ ಮಾಡಲು ಆರಂಭಿಸಿದನು. ಸಿಕಂದರನು ನೇಮಕ ಮಾಡಿದ ಸತ್ರಪಾಗಳಲ್ಲಿ ಅವನ ಮೃತ್ಯುವಿನ ನಂತರ ಅಧಿಕಾರಕ್ಕಾಗಿ ಹೋರಾಟ ಆರಂಭವಾಯಿತು. ಸೆಲ್ಯೂಕಸ್ ನಿಕೇಟರ ಇವನು ಸಿಕಂದರನ ಸೇನಾಪತಿಯಾಗಿದ್ದನು. ಸಿಕಂದರನ ಮರಣದ ನಂತರ ಅವನು ಬೆಬಿಲಾನ್‌ದ ರಾಜನಾಗಿದ್ದನು. ಅವನು ವಾಯವ್ಯ ಭಾರತ ಮತ್ತು ಪಂಜಾಬಗಳ ಮೇಲೆ ಆಕ್ರಮಣ ಮಾಡಿದನು. ಚಂದ್ರಗುಪ್ತ ಮೌರ್ಯನು ಅವನ ಆಕ್ರಮಣವನ್ನು ಯಶಸ್ವಿ ರೀತಿಯಿಂದ ಎದುರಿಸಿದನು. ಸೆಲ್ಯುಕಸ್ ನಿಕೇಟರನನ್ನು ಸೋಲಿಸಿದ್ದರಿಂದ ಅಫಗಾನಿಸ್ತಾನದಲ್ಲಿಯ ಕಾಬೂಲ, ಕಂದಹಾರ, ಹೆರಾತ ಮುಂತಾದ ಪ್ರದೇಶಗಳು ಅವನ ಸಾಮ್ರಾಜ್ಯದಲ್ಲಿ ವಿಲೀನವಾದವು.

**ನಿಮಗೆ ಗೊತ್ತಿದೆಯೇ ?**

ವಿಶಾಖದತ್ತ ಎಂಬ ಸಂಸ್ಕೃತ ನಾಟಕಕಾರನು 'ಮುದ್ರಾರಾಕ್ಷಸ' ಎಂಬ ನಾಟಕವನ್ನು ಬರೆದನು. ಅದರಲ್ಲಿ ಧನಾನಂದನನ್ನು ಸೋಲಿಸಿ ಚಂದ್ರಗುಪ್ತ ಮೌರ್ಯನು ಸ್ವತಂತ್ರ್ಯ ಪ್ರಭುತ್ವವನ್ನು ಹೇಗೆ ಸ್ಥಾಪಿಸಿದನು ಎಂಬುದನ್ನು ವಿವರಿಸಿದ್ದಾನೆ. ಈ ನಾಟಕದಲ್ಲಿ ಆರ್ಯ ಚಾಣಕ್ಯ ಅಥವಾ ಕೌಟಿಲ್ಯನ ಕೊಡುಗೆಗೆ ವಿಶೇಷ ಮಹತ್ವ ಕೊಡಲಾಗಿದೆ.

ಸೆಲ್ಯುಕಸ್ ನಿಕೇಟರನ ರಾಯಭಾರಿಯಾದ ಮೆಗಸ್ತನೀಸ ಇವನು ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಇದ್ದನು. ಅವನ 'ಇಂಡಿಕಾ' ಎಂಬ ಗ್ರಂಥದಲ್ಲಿಯ ವರ್ಣನೆಯು ಮೌರ್ಯಕಾಲೀನ ಭಾರತದ ಅಭ್ಯಾಸದ ಒಂದು ಮಹತ್ವದ ಸಾಧನವಾಗಿದೆ.

ಗುಜರಾತ ರಾಜ್ಯದ ಜುನಾಗಡದ ಹತ್ತಿರ ಸಾಮ್ರಾಟ ಚಂದ್ರಗುಪ್ತ ಮೌರ್ಯನು 'ಸುದರ್ಶನ' ಎಂಬ ಹೆಸರಿನ ಆಣೆಕಟ್ಟನ್ನು ಕಟ್ಟಿದ್ದನು. ಆ ರೀತಿಯ ಉಲ್ಲೇಖವಿರುವ ಶಿಲಾಲೇಖವಿದೆ.


**ನಿಮಗೆ ಗೊತ್ತಿದೆಯೇ ?**

ಜೈನ ಪರಂಪರೆಗಾನುಸಾರವಾಗಿ ಚಂದ್ರಗುಪ್ತ ಮೌರ್ಯನು ಜೈನ ಧರ್ಮವನ್ನು ಸ್ವೀಕರಿಸಿದ್ದನು ಎಂದು ತಿಳಿಯಲಾಗುತ್ತದೆ. ತನ್ನ ಜೀವನದ ಕೊನೆಗೆ ಚಂದ್ರಗುಪ್ತನು ಅರಸೊತ್ತಿಗೆಯನ್ನು ತ್ಯಜಿಸಿದನು. ಉಳಿದ ಆಯುಷ್ಯವನ್ನು ಅವನು ಕರ್ನಾಟಕದ ಶ್ರವಣ ಬೆಳಗೊಳ ಎಂಬಲ್ಲಿ ಕಳೆದನು. ಅಲ್ಲಿಯೇ ಅವನು ಮರಣ ಹೊಂದಿದನು.

**ಸಾಮ್ರಾಟ ಅಶೋಕ:** ಚಂದ್ರಗುಪ್ತನು ಅರಸೊತ್ತಿಗೆಯನ್ನು ತ್ಯಜಿಸಿದ ನಂತರ ಅವನ ಮಗ ಬಿಂದುಸಾರನು ಮಗಧದ ರಾಜನಾದನು. ಬಿಂದುಸಾರನ ಮರಣದ ನಂತರ ಅವನ ಮಗನಾದ ಅಶೋಕನು ಕ್ರಿ.ಶ.ಪೂ. ೨೭೩ ರಲ್ಲಿ ಅಧಿಕಾರಕ್ಕೆ ಬಂದನು. ರಾಜನಾಗುವ ಮೊದಲು ಅವನನ್ನು ತಕ್ಷಶಿಲೆ ಮತ್ತು ಉಜ್ಜೈನಗಳ ರಾಜ್ಯಪಾಲನನ್ನಾಗಿ ನೇಮಕ ಮಾಡಿತ್ತು. ಅವನು ರಾಜ್ಯಪಾಲನಾಗಿದ್ದಾಗ ತಕ್ಷಶಿಲೆಯಲ್ಲಾದ ದಂಗೆಯನ್ನು ಅಡಗಿಸಿದ್ದನು. ಮಗಧದ ಸಾಮ್ರಾಟನಾದ ಮೇಲೆ ಅವನು ಕಲಿಂಗದ ಮೇಲೆ ದಾಳಿ ಮಾಡಿದನು. ಕಲಿಂಗ ರಾಜ್ಯದ ಪ್ರದೇಶವು ಇಂದಿನ ಒಡಿಶಾ ರಾಜ್ಯದಲ್ಲಿ ಇತ್ತು. ಸಾಮ್ರಾಟ ಅಶೋಕನು ಕಲಿಂಗದ ಮೇಲೆ ಜಯಗಳಿಸಿದನು.

ಸಾಮ್ರಾಟ ಅಶೋಕನ ಸಾಮ್ರಾಜ್ಯವು ವಾಯವ್ಯಕ್ಕೆ ಅಫಗಾನಿಸ್ತಾನದ ವರೆಗೆ, ಉತ್ತರಕ್ಕೆ ನೇಪಾಳದಿಂದ ಹಿಡಿದು ದಕ್ಷಿಣಕ್ಕೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ವರೆಗೆ, ಪೂರ್ವಕ್ಕೆ ಬಂಗಾಲದಿಂದ ಹಿಡಿದು ಪಶ್ಚಿಮಕ್ಕೆ ಸೌರಾಷ್ಟ್ರದ ವರೆಗೆ ಹಬ್ಬಿತ್ತು.

**ಕಲಿಂಗದ ಯುದ್ಧ :** ಕಲಿಂಗದ ಯುದ್ಧದಲ್ಲಾದ ಭಯಂಕರ ರಕ್ತಪಾತವನ್ನು ಕಂಡು ಅಶೋಕನು ಇನ್ನು ಮುಂದೆ ಎಂದೂ ಯುದ್ಧ ಮಾಡುವುದಿಲ್ಲವೆಂದು ನಿರ್ಧರಿಸಿದನು. ಸತ್ಯ, ಅಹಿಂಸೆ, ಇತರರ ಬಗ್ಗೆ ದಯೆ




### ಇದನ್ನು ಯಾವಾಗಲೂ ಲಕ್ಷ್ಯದಲ್ಲಿಡಿರಿ.

ಸಾಮ್ರಾಟ ಅಶೋಕನ ಸಂದೇಶ

- ತಂದೆ-ತಾಯಿಗಳ ಸೇವೆ ಮಾಡುವುದು ಒಳ್ಳೆಯದಾಗಿರುತ್ತದೆ.
- ಪ್ರೇಮಭಾವನೆಯನ್ನು ಬೆಳೆಸುವ ವಿಜಯವೇ ನಿಜವಾದ ವಿಜಯ.

### ಮಾಡಿ ನೋಡಿರಿ.

ಭಾರತದ ನಕಾಶೆಯಲ್ಲಿ ಸಾಮ್ರಾಟ ಅಶೋಕನ ಶಿಲಾಲೇಖ ಮತ್ತು ಸ್ತಂಭಲೇಖಗಳನ್ನು ತೋರಿಸುವ ಸ್ಥಳಗಳನ್ನು ತೋರಿಸಿರಿ.

ಹಾಗೂ ಕ್ಷಮಾಶೀಲತೆ ಈ ಗುಣಗಳು ಅವನ ದೃಷ್ಟಿಯಲ್ಲಿ ಮಹತ್ವದ್ದಾಗಿದ್ದವು. ತನ್ನ ಸಂದೇಶವನ್ನು ಜನತೆಯ ವರೆಗೆ ಮುಟ್ಟಿಸುವ ಸಲುವಾಗಿ ಅವನು ಅಲ್ಲಲ್ಲಿ ಶಿಲಾಶಾಸನಗಳನ್ನು ಹಾಗೂ ಸ್ತಂಭಲೇಖಗಳನ್ನು ಕೊರೆಯಿಸಿದನು. ಈ ಲೇಖಗಳು ಬ್ರಾಹ್ಮೀ ಲಿಪಿಯಲ್ಲಿವೆ. ಈ ಲೇಖಗಳಲ್ಲಿ ಅವನು ತನ್ನ ಸ್ವಂತದ ಉಲ್ಲೇಖವನ್ನು 'ದೇವಾನಂ ಪಿಯೊ ಪಿಯದಸಿ' (ದೇವರ ಪ್ರಿಯ ಪ್ರಿಯದರ್ಶಿ) ಎಂದು ಮಾಡಿದ್ದಾನೆ. ರಾಜ್ಯಾಭಿಷೇಕವಾದ ಎಂಟು ವರ್ಷಗಳ ನಂತರ ಅವನು ಕಲಿಂಗದ ಮೇಲೆ ಜಯಗಳಿಸಿದನು ಹಾಗೂ ಅಲ್ಲಿಯ ವಿನಾಶವನ್ನು ಕಂಡು ಅವನ ಹೃದಯ ಪರಿವರ್ತನೆಯಾಯಿತು ಎಂಬುದರ ಉಲ್ಲೇಖವು ಅವನ ಈ ಲೇಖದಲ್ಲಿದೆ.

ಸಾಮ್ರಾಟ ಅಶೋಕನ ದಿಲ್ಲಿ-ಟೋಪಡಾ ಎಂಬಲ್ಲಿಯ ಒಂದು ಲೇಖದಲ್ಲಿ ಕಣ್ಣುಕ್ಕಪ್ಪಡಿ, ಮಂಗಗಳು, ಘೇಂಡಾಮೃಗಗಳು ಇತ್ಯಾದಿಗಳ ಬೇಟೆಯಾಡಬಾರದು, ಅರಣ್ಯದಲ್ಲಿ ಉರಿ ಹಚ್ಚಬಾರದು ಎಂಬ ಕಠೋರ ನಿರ್ಬಂಧಗಳನ್ನು ಬರೆದಿಡಲಾಗಿದೆ.



**ಸಾಮ್ರಾಟ ಅಶೋಕ**

**ಅಶೋಕನ ಧರ್ಮಪ್ರಸಾರದ ಕಾರ್ಯ:** ಅಶೋಕನು ಸ್ವತಃ ಬೌದ್ಧಧರ್ಮವನ್ನು ಸ್ವೀಕರಿಸಿದ್ದನು. ಅವನು ಪಾಟಲಿಪುತ್ರ ಎಂಬಲ್ಲಿ ಬೌದ್ಧ ಧರ್ಮದ ಮೂರನೆಯ ಪರಿಷತ್ತನ್ನು ಏರ್ಪಡಿಸಿದ್ದನು. ಅಶೋಕನು ತನ್ನ ಮಗ ಮಹೇಂದ್ರನನ್ನು ಹಾಗೂ ಮಗಳು ಸಂಘಮಿತ್ರೆಯನ್ನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಶ್ರೀಲಂಕಾಕ್ಕೆ ಕಳುಹಿಸಿದ್ದನು. ಅವನು ಧರ್ಮದ ಪ್ರಚಾರಕ್ಕಾಗಿ ಆಗ್ನೇಯ ಏಷ್ಯ ಮತ್ತು ಮಧ್ಯ ಏಷ್ಯದ ದೇಶಗಳಿಗೂ ಬೌದ್ಧ ಭಿಕ್ಕುಗಳನ್ನು ಕಳಿಸಿದ್ದನು. ಅವನು ಅನೇಕ ಸ್ತೂಪ ಮತ್ತು ವಿಹಾರಗಳನ್ನು ಕಟ್ಟಿಸಿದನು.

**ಅಶೋಕನ ಜನಹಿತದ ಕಾರ್ಯಗಳು :** ಅಶೋಕದ ಪ್ರಜೆಗಳಿಗಾಗಿ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಮಹತ್ವ ನೀಡಿದನು. ಉದಾಹರಣೆಗಾಗಿ ಜನರಿಗೆ ಹಾಗೂ ಪಶುಗಳಿಗೆ ಉಚಿತವಾಗಿ ಔಷಧೋಪಚಾರ ದೊರೆಯುವಂತೆ ವ್ಯವಸ್ಥೆ ಮಾಡಿದನು. ಅನೇಕ ರಸ್ತೆಗಳನ್ನು ನಿರ್ಮಿಸಿದನು. ನೆರಳಿನ ಸಲುವಾಗಿ ರಸ್ತೆಗಳ ಎರಡೂ ಬದಿಗಳಲ್ಲಿ ಗಿಡಗಳನ್ನು ನೆಡಿಸಿದನು. ಧರ್ಮಶಾಲೆಗಳನ್ನು ಕಟ್ಟಿಸಿದನು. ಬಾವಿಗಳನ್ನು ತೋಡಿಸಿದನು.



**ಮಾಡಿ ನೋಡಿರಿ.**

ನಿಮ್ಮ ಪರಿಸರದಲ್ಲಿ ಯಾವ ಸಂಸ್ಥೆಗಳು ಯಾವ ಜನಹಿತದ ಕಾರ್ಯಗಳನ್ನು ಮಾಡುತ್ತವೆ. ಅದರ ವರದಿಯನ್ನು ತಯಾರಿಸಿರಿ.

**ಮೌರ್ಯಕಾಲದ ರಾಜ್ಯವ್ಯವಸ್ಥೆ :** ಮೌರ್ಯ ಸಾಮ್ರಾಜ್ಯದ ರಾಜಧಾನಿ ಪಾಟಲಿಪುತ್ರ ಎಂಬಲ್ಲಿ ಇತ್ತು. ಆಡಳಿತದ ಅನುಕೂಲತೆಗಾಗಿ ಸಾಮ್ರಾಜ್ಯವನ್ನು ನಾಲ್ಕು ವಿಭಾಗಗಳಲ್ಲಿ ವಿಭಾಗಿಸಲಾಗಿತ್ತು. ಪ್ರತಿಯೊಂದು ವಿಭಾಗಕ್ಕೆ ಸ್ವತಂತ್ರ ರಾಜಧಾನಿ ಇತ್ತು.

೧. ಪೂರ್ವ ವಿಭಾಗ- ತೋಶಾಲ (ಓಡಿಶಾ).
೨. ಪಶ್ಚಿಮ ವಿಭಾಗ- ಉಜ್ಜಯಿನಿ (ಮಧ್ಯಪ್ರದೇಶ)
೩. ದಕ್ಷಿಣ ವಿಭಾಗ- ಸುವರ್ಣಗಿರಿ (ಕರ್ನಾಟಕದಲ್ಲಿಯ ಕನಕಗಿರಿ),
೪. ಉತ್ತರ ವಿಭಾಗ- ತಕ್ಷಶಿಲಾ (ಪಾಕಿಸ್ತಾನ)

ರಾಜ್ಯಾಡಳಿತದಲ್ಲಿ ರಾಜನಿಗೆ ಸಲಹೆ ನೀಡಲು ಮಂತ್ರಿ ಪರಿಷತ್ತು ಇತ್ತು. ವಿವಿಧ ಹಂತಗಳಲ್ಲಿ ಕೆಲಸ ಮಾಡುವ ಅನೇಕ ಅಧಿಕಾರಿಗಳು ಇದ್ದರು. ಇವರೆಲ್ಲರ ಮೇಲೆ ಮೇಲ್ವಿಚಾರಣೆ ಮಾಡುವ ಸಲುವಾಗಿ ಹಾಗೂ ಶತ್ರುಗಳ ಸುಳುವುಗಳ ಕಡೆಗೆ ಲಕ್ಷ್ಯವಿಡುವ ಸಲುವಾಗಿ ಅತ್ಯಂತ ದಕ್ಷ ಗುಪ್ತಚಾರ ವಿಭಾಗವಿತ್ತು.

**ಮೌರ್ಯಕಾಲದ ಜನಜೀವನ :** ಮೌರ್ಯಕಾಲದ ಕೃಷಿ ಉತ್ಪಾದನೆಗೆ ತುಂಬಾ ಮಹತ್ವವಿತ್ತು. ಕೃಷಿಯ ಜೊತೆ ವ್ಯಾಪಾರ ಮತ್ತು ಇತರ ಉದ್ಯೋಗಗಳೂ ಊರ್ಜಿತಾವಸ್ಥೆಯಲ್ಲಿದ್ದವು. ಹಸ್ತಿದಂತದ ಮೇಲಿನ ಕೆತ್ತನೆಯ ಕೆಲಸ, ಬಟ್ಟೆ ನೇಯುವುದು ಹಾಗೂ ಬಣ್ಣಕೊಡುವುದು, ಲೋಹದ ಕೆಲಸ ಮುಂತಾದ ಅನೇಕ ಉದ್ಯೋಗಗಳು ಇದ್ದವು. ವಿಲಕ್ಷಣ ಹೊಳಪುಳ್ಳ ಕಪ್ಪು ಬಣ್ಣದ ಮಣ್ಣಿನ ಪಾತ್ರೆಗಳನ್ನು ತಯಾರಿಸಲಾಗುತ್ತಿತ್ತು. ಹಡಗು

ಕಟ್ಟುವ ಉದ್ಯೋಗವು ದೊಡ್ಡ ಪ್ರಮಾಣದಲ್ಲಿತ್ತು. ಲೋಹದ ಕೈಗಾರಿಕೆಯಲ್ಲಿ ಇತರ ಲೋಹಗಳ ಜೊತೆಗೆ ಕಬ್ಬಿಣದ ವಸ್ತುಗಳನ್ನು ತಯಾರಿಸುವ ತಂತ್ರಜ್ಞಾನವು ವಿಕಸಿತವಾಗಿತ್ತು.

ನಗರಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಉತ್ಸವ, ಸಮಾರಂಭಗಳು ಆಚರಿಸಲ್ಪಡುತ್ತಿದ್ದವು. ಅದರಲ್ಲಿ ಜನರ ಮನರಂಜನೆಗಾಗಿ ನೃತ್ಯ, ಗಾಯನಗಳ ಕಾರ್ಯಕ್ರಮಗಳು ಆಗುತ್ತಿದ್ದವು. ಕುಸ್ತಿ, ರಥಗಳ ಪಂದ್ಯಗಳು ಜನಪ್ರಿಯ ವಾಗಿದ್ದವು. ಪಗಡೆಯಾಟ ಹಾಗೂ ಚದುರಂಗಾದಟ ದಂತಹ ಆಟಗಳನ್ನು ಅವರು ಆಸಕ್ತಿಯಿಂದ ಆಡುತ್ತಿದ್ದರು. ಚದುರಂಗದಾಟಕ್ಕೆ 'ಅಷ್ಟಪದ' ಎಂಬ ಹೆಸರು ಇತ್ತು.



ಸ್ತಂಭ ಶಿರೋಭಾಗ

**ಮೌರ್ಯಕಾಲದ ಕಲೆ ಮತ್ತು ಸಾಹಿತ್ಯ:** ಸಾಮ್ರಾಟ ಅಶೋಕನ ಕಾಲದಲ್ಲಿ ಶಿಲ್ಪಕಲೆಗೆ ಉತ್ತೇಜನ ದೊರೆಯಿತು.

**ನಿಮಗೆ ಗೊತ್ತಿದೆಯೇ ?**

ಭಾರತದ ರಾಜಮುದ್ರೆಯನ್ನು ಸಾರನಾಥದಲ್ಲಿಯ ಅಶೋಕಸ್ತಂಭದ ಆಧಾರದಿಂಧ ತಯಾರಿಸಲಾಗಿದೆ. ಸಾರನಾಥದಲ್ಲಿಯ ಮೂಲ ಸ್ತಂಭದ ಮೇಲೆ ನಾಲ್ಕು ಸಿಂಹಗಳಿವೆ. ಪ್ರತಿಯೊಂದು ಸಿಂಹದ ಚಿತ್ರದ ಕೆಳಗೆ ಅಡ್ಡ ಪಟ್ಟಿಯ ಮೇಲೆ ಚಕ್ರವಿದೆ. ಅವುಗಳಲ್ಲಿ ನಮಗೆ ಒಂದೇ ಚಕ್ರವು ಸಂಪೂರ್ಣವಾಗಿ ಕಾಣಿಸುತ್ತದೆ. ಚಕ್ರದ ಒಂದು ಬದಿಗೆ ಅಶ್ವ ಹಾಗೂ ಮತ್ತೊಂದು ಬದಿಗೆ ವೃಷಭ ಇದೆ. ರಾಜಮುದ್ರೆಯ ಯಾವ ಬದಿ ಕಾಣಿಸುವುದಿಲ್ಲವೋ ಆ ಬದಿಯ ಮೇಲೆ ಇದೇ ರೀತಿ ಆನೆ ಹಾಗೂ ಸಿಂಹ ಈ ಎರಡು ಪ್ರಾಣಿಗಳೂ ಇವೆ.

ಅಶೋಕ ನಿಲ್ಲಿಸಿದ ಸ್ತಂಭವು ಭಾರತೀಯ ಶಿಲ್ಪಕಲೆಯ ಒಂದು ಉತ್ತಮ ನಮೂನೆ ಯಾಗಿದೆ. ಅವನು ನಿಲ್ಲಿಸಿದ ಸ್ತಂಭದ ಮೇಲೆ ಸಿಂಹ, ಆನೆ, ಎತ್ತುಗಳಂತಹ ಪ್ರಾಣಿಗಳ ಉತ್ತಮ ಶಿಲ್ಪಗಳಿವೆ. ಸಾರನಾಥದಲ್ಲಿಯ ಅಶೋಕ ಸ್ತಂಭದ ಮೇಲಿನ ಚಕ್ರವು ಭಾರತದ ರಾಷ್ಟ್ರಧ್ವಜದಲ್ಲಿ ಕಂಗೊಳಿಸುತ್ತಿದೆ. ಆ ಸ್ತಂಭದ ಮೇಲೆ ನಾಲ್ಕೂ ಬದಿಗೆ ಸಿಂಹಗಳಿವೆ. ಎದುರಿನಿಂದ ನೋಡುವಾಗ ಅದರಲ್ಲಿಯ ಮೂರೇ ಸಿಂಹಗಳು ನಮಗೆ ಕಾಣಿಸುತ್ತವೆ. ಇದು ಭಾರತದ ರಾಜಮುದ್ರೆ ಇದೆ. ಅವನ ಕಾಲದಲ್ಲಿ ಅಗಿಯಲ್ಪಟ್ಟ ಬರಾಬಾರ ಗುಡ್ಡಗಳಲ್ಲಿಯ ಗುಹೆಗಳು ಪ್ರಸಿದ್ಧವಾಗಿವೆ. ಈ ಗುಹೆಗಳು ಬಿಹಾರದಲ್ಲಿವೆ. ಭಾರತದಲ್ಲಿಯ ಗುಹೆಗಳಲ್ಲಿ ಈ ಗುಹೆಗಳು ಅತ್ಯಂತ ಪ್ರಾಚೀನವಾಗಿವೆ.

ಸಾಮ್ರಾಟ ಅಶೋಕನ ಮರಣದ ನಂತರ ಮೌರ್ಯ ಸಾಮ್ರಾಜ್ಯವು ಅವನತಿ ಹೊಂದಿತು. ಮೌರ್ಯಕಾಲದ



ಬರಾಬಾರ ಎಂಬಲ್ಲಿಯ ಗುಹೆಗಳು

ನಂತರ ಭಾರತದಲ್ಲಿ ಅನೇಕ ರಾಜ್ಯಗಳು ಉದಯಕ್ಕೆ ಬಂದವು ಕೆಲವು ಸಾಮ್ರಾಜ್ಯಗಳೂ ಉದಯವಾದವು. ಮೌರ್ಯ ಸಾಮ್ರಾಜ್ಯವು ಪ್ರಾಚೀನ ಭಾರತದಲ್ಲಿಯ ಅತ್ಯಂತ ದೊಡ್ಡ ಸಾಮ್ರಾಜ್ಯವಾಗಿತ್ತು. ಮೌರ್ಯಕಾಲದ ನಂತರದ ರಾಜಕೀಯ ಹಾಗೂ ಸಾಂಸ್ಕೃತಿಕ ಘಟನೆಗಳನ್ನು ನಾವು ಮುಂದಿನ ಪಾಠದಲ್ಲಿ ತಿಳಿದುಕೊಳ್ಳುವವರಿದ್ದೇವೆ.

## ಅಭ್ಯಾಸ

**೧. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಸತ್ರಪಗಳಲ್ಲಿ ಹೋರಾಟ ಏಕೆ ಆರಂಭವಾಯಿತು ?

(೨) ಅಶೋಕನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಶ್ರೀಲಂಕಾಕ್ಕೆ ಯಾರನ್ನು ಕಳುಹಿಸಿದನು ?

(೩) ಮೌರ್ಯಕಾಲದಲ್ಲಿ ಯಾವ ಯಾವ ಉದ್ಯೋಗಗಳಿದ್ದವು ?

(೪) ಸಾಮ್ರಾಟ ಅಶೋಕನು ನಿಲ್ಲಿಸಿದ ಸ್ತಂಭದ ಮೇಲೆ ಯಾವ ಯಾವ ಪ್ರಾಣಿಗಳ ಶಿಲ್ಪಗಳಿವೆ ?

**೨. ಹೇಳಿ, ನೋಡೋಣ.**

(೧) ಸತ್ರಪ

(೨) ಸುದರ್ಶನ

(೩) 'ದೇವಾನಂ ಪಿಯೊ ಪಿಯದಸಿ'

(೪) ಅಷ್ಟಪದ

**೩. ನೆನಪಿಸಿಕೊಳ್ಳಿ, ಹಾಗೂ ಬರೆಯಿರಿ.**

(೧) ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯದ ವ್ಯಾಪ್ತಿ

(೨) ಸಾಮ್ರಾಟ ಅಶೋಕನ ಸಾಮ್ರಾಜ್ಯದ ವ್ಯಾಪ್ತಿ

**೪. ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| (೧) ಸಾಮ್ರಾಟ ಅಲೆಕ್ಝಾಂಡರ | (ಅ) ಸೆಲ್ಯುಕಸ್ ನಿಕೇಟರನ ರಾಜಭಾರಿ |
| (೨) ಮೆಗಸ್ತನೀಸ | (ಬ) ಗ್ರೀಕ ಸಾಮ್ರಾಟ |
| (೩) ಸಾಮ್ರಾಟ ಅಶೋಕ | (ಕ) ರೋಮದ ಸಾಮ್ರಾಟ |
| | (ಡ) ಮಗಧದ ಸಾಮ್ರಾಟ |

**೫. ನಿಮಗೆ ಏನು ಅನಿಸುತ್ತದೆ ?**

(೧) ಸಿಕಂದರನು ಹಿಮ್ಮೆಟ್ಟಲೇಬೇಕಾಯಿತು.

(೨) ಗ್ರೀಕ ರಾಜರ ನಾಣ್ಯಗಳು ವೈಶಿಷ್ಟ್ಯಪೂರ್ಣವಾಗಿದ್ದವು.

(೩) ಸಾಮ್ರಾಟ ಅಶೋಕನು ಇನ್ನು ಮುಂದೆ ಎಂದೂ ಯುದ್ಧ ಮಾಡುವುದಿಲ್ಲವೆಂದು ನಿರ್ಧರಿಸಿದನು.

**೬. ನಿಮ್ಮ ಶಬ್ದಗಳಲ್ಲಿ ವರ್ಣಿಸಿರಿ.**

(೧) ಸಾಮ್ರಾಟ ಅಶೋಕನ ಜನಹಿತದ ಕಾರ್ಯಗಳು.

(೨) ಮೌರ್ಯಕಾಲದ ಮನರಂಜನೆಯ ಮತ್ತು ಆಟದ ಸಾಧನಗಳು.

**೭. ಇಂದು ಯುವಾನ್ ಚ್ವಾಂಗ್ (ಹ್ಯೂಯನ್-ತ್ಸಾಂಗ್) ರಂತಹ ವಿದೇಶಿ ಪ್ರವಾಸಿಯು ನಿಮಗೆ ಭೇಟಿಯಾದರೆ ನೀವು ಏನು ಮಾಡುವಿರಿ ?**

**ಉಪಕ್ರಮ:**


(೨) ನಿಮ್ಮ ಪರಿಸರದಲ್ಲಿ ಜನತೆಯ ಪ್ರತಿನಿಧಿಗಳು ಮಾಡಿದ ಜನಹಿತದ ಕಾರ್ಯಗಳ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ.

(೨) ಸಾಮ್ರಾಟ ಅಶೋಕನ ಜೀವನದ ಬಗ್ಗೆ ಅಧಿಕ ಮಾಹಿತಿಯನ್ನು ಸಂಗ್ರಹಿಸಿ ನಾಟ್ಯಾಭಿನಯವನ್ನು ನಿಮ್ಮ ವರ್ಗದಲ್ಲಿ ಸಾದರಪಡಿಸಿರಿ.

* * *

BT9H2H

# ೮. ಮೌರ್ಯ ಸಾಮ್ರಾಜ್ಯದ ನಂತರದ ರಾಜ್ಯಗಳು




೮.೧ ಶುಂಗ ಮನೆತನ
೮.೨ ಇಂಡೋ-ಗ್ರೀಕ ರಾಜರು
೮.೩ ಕುಷಾಣ ರಾಜರು
೮.೪ ಗುಪ್ತ ರಾಜ ಮನೆತನ
೮.೫ ವರ್ಧನ ರಾಜ ಮನೆತನ
೮.೬ ಈಶಾನ್ಯ ಭಾರತದಲ್ಲಿ ರಾಜ ಪ್ರಭುತ್ವ

## ೮.೧ ಶುಂಗ ಮನೆತನ

ಸಾಮ್ರಾಟ ಅಶೋಕನ ನಂತರ ಮೌರ್ಯ ಆಡಳಿತದ ಸಾಮರ್ಥ್ಯ ಕಡಿಮೆಯಾಗುತ್ತ ಹೋಯಿತು. ಕೊನೆಯ ಮೌರ್ಯ ರಾಜನ ಹೆಸರು ಬೃಹದ್ರಥ ಎಂದಿತ್ತು. ಮೌರ್ಯರ ಸೇನಾಪತಿ ಪುಷ್ಯಮಿತ್ರ ಶುಂಗ ಈತನು ಬಂಡೆದ್ದು ಬೃಹದ್ರಥನ

ಕೊಲೆ ಮಾಡಿ ತಾನು ಸ್ವತ: ರಾಜನಾದನು.

## ೮.೨ ಇಂಡೋ-ಗ್ರೀಕ ರಾಜರು

ಈ ಕಾಲದಲ್ಲಿ ಭಾರತೀಯ ಉಪಖಂಡದ ವಾಯವ್ಯದ ಕಡೆಯ ಪ್ರದೇಶದಲ್ಲಿ ಗ್ರೀಕ ರಾಜರ ಚಿಕ್ಕ-ಚಿಕ್ಕ ರಾಜ್ಯಗಳಿದ್ದವು. ಆ ರಾಜರಿಗೆ 'ಇಂಡೋ-ಗ್ರೀಕ ರಾಜರು' ಎಂದು ಕರೆಯಲಾಗುತ್ತದೆ. ಪ್ರಾಚೀನ ಭಾರತೀಯ ನಾಣ್ಯಗಳ ಇತಿಹಾಸದಲ್ಲಿ ಈ ರಾಜರ ನಾಣ್ಯಗಳು ಅತ್ಯಂತ ಮಹತ್ವದ್ದಾಗಿವೆ. ನಾಣ್ಯದ ಒಂದು ಬದಿಗೆ ರಾಜನ ಚಿತ್ರ ಹಾಗೂ ಇನ್ನೊಂದು ಬದಿಗೆ ದೇವತೆಯ ಚಿತ್ರ ಈ ಪದ್ಧತಿಯ ನಾಣ್ಯಗಳನ್ನು ತಯಾರಿಸುವುದು ಅವರ ಪರಂಪರೆಯಾಗಿತ್ತು. ಇದು ಮುಂದೆ ಭಾರತದಲ್ಲಿ ರೂಢಿಯಾಯಿತು. ಇಂಡೋ-ಗ್ರೀಕ ರಾಜರಲ್ಲಿ ಮಿನಾಂಡರ ಎಂಬ ರಾಜನು ಪ್ರಸಿದ್ಧನಾಗಿದ್ದು, ಅವನು ನಾಗಸೇನ ಎಂಬ ಬೌದ್ಧ ಭಿಕ್ಕುವಿನ ಜೊತೆ ಬೌದ್ಧ ತತ್ವಜ್ಞಾನದ ವಿಷಯವಾಗಿ ಚರ್ಚೆ ಮಾಡಿದ್ದನು. ಮಿನಾಂಡರ ಎಂದರೇನೇ ಮಿಳಿಂದ. ಅವನು ಭಿಕ್ಕು ನಾಗಸೇನ ಇವರಿಗೆ ಕೇಳಿದ ಪ್ರಶ್ನೆಗಳ ಮೇಲಿಂದ 'ಮಿಳಿಂದಪನ್ಹ' ಎಂಬ ಗ್ರಂಥದ ನಿರ್ಮಿತಿಯಾಯಿತು. 'ಪನ್ಹ' ಈ ಪಾಲೀ ಭಾಷೆಯಲ್ಲಿಯ ಶಬ್ದದ ಅರ್ಥ 'ಪ್ರಶ್ನೆ' ಎಂದಾಗುತ್ತದೆ.



**ಮಿನಾಂಡರನ ಬೆಳ್ಳಿಯ ನಾಣ್ಯಗಳು- ಎರಡೂ ಬದಿ**

## ೮.೩ ಕುಷಾಣ ರಾಜರು

ಬೇರೆ ಬೇರೆ ಜನರ ತಂಡಗಳು ಹೊರಗಿನಿಂದ ಭಾರತಕ್ಕೆ ಬರುತ್ತಲೇ ಇದ್ದವು. ಅವುಗಳಲ್ಲಿ ಮಧ್ಯ ಏಷ್ಯದಿಂದ ಬಂದ 'ಕುಷಾಣ' ಎಂಬ ಹೆಸರಿನಿಂದ ಗುರುತಿಸಲ್ಪಡುವ ತಂಡಗಳಿದ್ದವು. ಕ್ರಿಸ್ತಶಕದ ಮೊದಲನೆಯ ಶತಮಾನದಲ್ಲಿ ವಾಯವ್ಯದ ಕಡೆಯ ಪ್ರದೇಶದಲ್ಲಿ ಹಾಗೂ ಕಾಶ್ಮೀರದಲ್ಲಿ ಅವರು ರಾಜ್ಯ ಸ್ಥಾಪನೆ ಮಾಡಿದರು. ಭಾರತದಲ್ಲಿ ಬಂಗಾರದ ನಾಣ್ಯಗಳನ್ನು ಟಂಕಿಸಲು ಕುಷಾಣ ರಾಜರು ಆರಂಭಿಸಿದರು. ನಾಣ್ಯಗಳ ಮೇಲೆ ಗೌತಮ ಬುದ್ಧ ಹಾಗೂ ವಿವಿಧ ಭಾರತೀಯ ದೇವತೆಗಳ ಚಿತ್ರಗಳನ್ನು ಬಳಸುವ ಪರಂಪರೆಯನ್ನು ಕುಷಾಣ ರಾಜರು ಆರಂಭಿಸಿದರು. ಕುಷಾಣ ರಾಜನಾದ ಕನಿಷ್ಕನು ಸಾಮ್ರಾಜ್ಯದ ವಿಸ್ತಾರ ಮಾಡಿದನು.

**ಸಾಮ್ರಾಟ ಕನಿಷ್ಕ :** ಕನಿಷ್ಕನ ಸಾಮ್ರಾಜ್ಯವು ಪಶ್ಚಿಮಕ್ಕೆ ಕಾಬೂಲದಿಂದ ಹಿಡಿದು ಪೂರ್ವಕ್ಕೆ ವಾರಣಾಸಿಯ ವರೆಗೆ ಹಬ್ಬಿತ್ತು. ಕನಿಷ್ಕನ ಬಂಗಾರದ ಹಾಗೂ ತಾಮ್ರದ ನಾಣ್ಯಗಳು ದೊರಕಿವೆ. ಕನಿಷ್ಕನ ಕಾಲದಲ್ಲಿ ಬೌದ್ಧ ಧರ್ಮದ ನಾಲ್ಕನೇ ಪರಿಷತ್ತನ್ನು ಕಾಶ್ಮೀರದಲ್ಲಿ ಏರ್ಪಡಿಸಲಾಗಿತ್ತು. ಕನಿಷ್ಕನು ಕಾಶ್ಮೀರದಲ್ಲಿ ಕನಿಷ್ಕಪೂರ ಎಂಬ ನಗರವನ್ನು ನಿರ್ಮಿಸಿದ್ದನು. ಶ್ರೀನಗರದ ಹತ್ತಿರವಿರುವ ಕಾಮ್‌ಪೂರ ಹೆಸರಿನ ಊರೇ ಕನಿಷ್ಕಪೂರ ಇರಬಹುದು. ಕನಿಷ್ಕನ ಕಾಲದಲ್ಲಿ ಅಶ್ವಘೋಷ ಎಂಬ ಕವಿ ಆಗಿ ಹೋದನು. ಅವನು 'ಬುದ್ಧಚರಿತ' ಮತ್ತು 'ವಜ್ರಸೂಚಿ' ಎಂಬ ಗ್ರಂಥಗಳನ್ನು ಬರೆದನು. ಕನಿಷ್ಕನ ಆಸ್ಥಾನದಲ್ಲಿ ಚರಕ ಎಂಬ ಪ್ರಸಿದ್ಧ ವೈದ್ಯನು ಇದ್ದನು.



**ಕನಿಷ್ಕನ ಬಂಗಾರದ ನಾಣ್ಯಗಳು- ಎರಡೂ ಬದಿ**


**ನಿಮಗೆ ಗೊತ್ತಿದೆಯೇ ?**

ಕನಿಷ್ಕನ ಬಂಗಾರದ ನಾಣ್ಯಗಳು: ಈ ನಾಣ್ಯಗಳನ್ನು ಸಾಮ್ರಾಟ ಕನಿಷ್ಕನು ಟಂಕಿಸಿದ್ದನು. ಈ ನಾಣ್ಯದ ಮುಂಬದಿಯ ಮೇಲೆ ಗ್ರೀಕ ಲಿಪಿಯಲ್ಲಿ ಬರೆದ 'ಶಾವೊ' ನಾನೊ ಶಾವೊ ಕನೆಷ್ಕಿ ಕೋಶಾನೋ' ಎಂಬ ಲೇಖವಿದೆ. ಇದರ ಅರ್ಥ 'ರಾಜಾಧಿರಾಜ ಕನಿಷ್ಕ ಕುಷಾಣ' ಎಂದು ಇದೆ. ನಾಣ್ಯದ ಹಿಂಬದಿಯ ಮೇಲೆ ಗೌತಮ ಬುದ್ಧನ ಚಿತ್ರವಿದೆ. ಅದರ ಬದಿಗೆ ಗ್ರೀಕ ಲಿಪಿಯಲ್ಲಿ 'ಬೊದ್ದೊ' ಎಂದರೆ ಬುದ್ಧ ಎಂದು ಬರೆಯಲಾಗಿದೆ.

## ೮.೪ ಗುಪ್ತ ರಾಜಮನೆತನ

ಕ್ರಿಸ್ತಶಕದ ಮೂರನೆಯ ಶತಮಾನದ ಕೊನೆಯಲ್ಲಿ ಉತ್ತರ ಭಾರತದಲ್ಲಿ ಗುಪ್ತ ರಾಜಮನೆತನದ ಆಡಳಿತದ ಉದಯವಾಯಿತು. ಸುಮಾರು ಮೂರು ಶತಮಾನ ಗುಪ್ತ ಮನೆತನವು ಅಧಿಕಾರದಲ್ಲಿತ್ತು. ಗುಪ್ತ ರಾಜಮನೆತನದ ಸಂಸ್ಥಾಪಕನ ಹೆಸರು 'ಶ್ರೀಗುಪ್ತ' ಎಂದು ಇತ್ತು. ಸಮುದ್ರಗುಪ್ತ ಮತ್ತು ಎರಡನೆಯ ಚಂದ್ರಗುಪ್ತ ಇವರು ಗುಪ್ತ ಮನೆತನದಲ್ಲಿಯ ವಿಶೇಷ ಉಲ್ಲೇಖನೀಯ ರಾಜರಾಗಿದ್ದರು.

**ಸಮುದ್ರಗುಪ್ತ :** ಮೊದಲನೆಯ ಚಂದ್ರಗುಪ್ತನ ಆಡಳಿತದ ಕಾಲದಲ್ಲಿ ಗುಪ್ತರ ರಾಜ್ಯವಿಸ್ತಾರವು ಆರಂಭವಾಯಿತು. ಅವನ ಮಗನಾದ ಸಮುದ್ರಗುಪ್ತನು ಸುತ್ತಮುತ್ತಲಿನ ರಾಜರನ್ನು ಸೋಲಿಸಿ ರಾಜ್ಯವನ್ನು ಇನ್ನೂ ವಿಸ್ತರಿಸಿದನು. ಅವನ ಆಡಳಿತಾವಧಿಯಲ್ಲಿ ಗುಪ್ತರ ರಾಜ್ಯವು ಆಸಾಮದಿಂದ ಹಿಡಿದು ಪಂಜಾಬದ ವರೆಗೆ ಹಬ್ಬಿತ್ತು. ಅವನು ತಮಿಳುನಾಡಿನ ಕಾಂಚಿಯ ವರೆಗಿನ ಪೂರ್ವ ಕರಾವಳಿಯ ಪ್ರದೇಶಗಳನ್ನೂ ಗೆದ್ದುಕೊಂಡಿದ್ದನು. ಸಮುದ್ರಗುಪ್ತನು ಪಡೆದ ವಿಜಯದಿಂದಾಗಿ ಅವನ ಪ್ರಾಬಲ್ಯ ಹೆಚ್ಚಿತ್ತು. ಅದರಿಂದಾಗಿ ವಾಯವ್ಯದ ಕಡೆಯ ರಾಜರು ಹಾಗೂ ಶ್ರೀಲಂಕಾದ ರಾಜರು ಕೂಡ ಅವನೊಂದಿಗೆ ಮೈತ್ರಿ-ಒಪ್ಪಂದವನ್ನು ಮಾಡಿಕೊಂಡರು. ಸಮುದ್ರಗುಪ್ತನ ಪರಾಕ್ರಮ ಹಾಗೂ ಅವನು ಪಡೆದ ವಿಜಯ ಇವುಗಳ ವರ್ಣನೆಯನ್ನು ಪ್ರಯಾಗದ ಸ್ತಂಭ ಲೇಖದಲ್ಲಿ ಸವಿಸ್ತಾರವಾಗಿ ಕೊರೆಯಲಾಗಿದೆ. ಈ ಲೇಖವು 'ಪ್ರಯಾಗ ಪ್ರಶಸ್ತಿ' ಎಂದು ಗುರುತಿಸಲ್ಪಡುತ್ತದೆ. ಅದಕ್ಕೆ 'ಅಲಹಾಬಾದ ಪ್ರಶಸ್ತಿ' ಎಂದೂ ಕರೆಯುತ್ತಾರೆ. ಸಮುದ್ರಗುಪ್ತನು ವೀಣಾವಾದನದಲ್ಲಿ ಪಾರಂಗತನಾಗಿದ್ದನು. ಸಮುದ್ರಗುಪ್ತನು ವಿವಿಧ ಪ್ರಕಾರದ ಪ್ರತಿಮೆಗಳಿರುವ ನಾಣ್ಯಗಳನ್ನು ಮುದ್ರಿಸಿದ್ದನು. ಅದರಲ್ಲಿಯ ಒಂದು ಪ್ರಕಾರದಲ್ಲಿ ಅವನು ಸ್ವತಃ ವೀಣೆಯನ್ನು ನುಡಿಸುತ್ತಿರುವುದನ್ನು ಕಾಣಬಹುದು. ಅದರ ಮೇಲೆ 'ಸಮುದ್ರಗುಪ್ತ' ಎಂಬ ಹೆಸರು ಬರೆಯಲಾಗಿದೆ.



ಸಮುದ್ರಗುಪ್ತನ ಬಂಗಾರದ ನಾಣ್ಯಗಳು- ಎರಡೂ ಬದಿ

**ಎರಡನೆಯ ಚಂದ್ರಗುಪ್ತ :** ಎರಡನೆಯ ಚಂದ್ರಗುಪ್ತನು ಸಮುದ್ರಗುಪ್ತನ ಮಗನಾಗಿದ್ದನು. ಗುಪ್ತರ ಸಾಮ್ರಾಜ್ಯವನ್ನು ಅವನು ವಾಯವ್ಯದ ಕಡೆಗೆ ಹೆಚ್ಚಿಸಿದನು. ಅವನು ಮಾಳವಾ, ಗುಜರಾತ ಹಾಗೂ ಸೌರಾಷ್ಟ್ರಗಳನ್ನು ಗೆದ್ದುಕೊಂಡಿದ್ದನು. ಎರಡನೆಯ ಚಂದ್ರಗುಪ್ತನು ತನ್ನ ಮಗಳಾದ ಪ್ರಭಾವತಿ ಇವಳ ವಿವಾಹವನ್ನು ವಾಕಾಟಕ ಮನೆತನದ ಎರಡನೆಯ ರುದ್ರಸೇನನ ಜೊತೆ ಮಾಡಿ ಕೊಟ್ಟನು. ಈ ರೀತಿ ದಕ್ಷಿಣದ ಕಡೆಯ ಬಲಾಢ್ಯ ವಾಕಾಟಕ ರಾಜ್ಯದೊಂದಿಗೆ ನೆಂಟಸ್ತಿಕೆಯನ್ನು ಬೆಳೆಸಿದನು. ದಿಲ್ಲಿ ಹತ್ತಿರದ ಮೆಹರೌಲಿ ಎಂಬಲ್ಲಿ ಒಂದು ಲೋಹದ ಸ್ತಂಭ ನಿಂತಿದೆ. ಅದು ಸುಮಾರು ಒಂದೂವರೆ ಸಾವಿರ ವರ್ಷಕ್ಕಿಂತಲೂ ಹೆಚ್ಚು ಹಳೆಯದಾಗಿದೆ. ಆದರೂ ಅದಕ್ಕೆ ತುಕ್ಕು ಹಿಡಿದಿಲ್ಲ. ಅದು ಪ್ರಾಚೀನ ಭಾರತೀಯರು ತಂತ್ರಜ್ಞಾನದಲ್ಲಿ ಸಾಧಿಸಿದ ಪ್ರಗತಿಯ ಪ್ರತೀಕವಾಗಿದೆ. ಈ ಲೋಹ ಸ್ತಂಭದ ಮೇಲಿನ ಲೇಖದಲ್ಲಿ 'ಚಂದ್ರ' ಎಂಬ ಹೆಸರಿನ ರಾಜನ ಉಲ್ಲೇಖವಿದೆ. ಆ ಉಲ್ಲೇಖದ ಆಧಾರದಿಂದ ಈ ಲೋಹ ಸ್ತಂಭವು ಎರಡನೆಯ ಚಂದ್ರಗುಪ್ತನ ಕಾಲದಲ್ಲಿಯದಾಗಿದೆ ಎಂದು ಊಹಿಸಲಾಗುತ್ತದೆ.

**ನಿಮಗೆ ಗೊತ್ತಿದೆಯೆ ?**

ಫಾಹಿಯಾನ ಎಂಬ ಚೀನಿ ಪ್ರವಾಸಿಯು ಎರಡನೆಯ ಚಂದ್ರಗುಪ್ತನ ಕಾಲದಲ್ಲಿ ಭಾರತಕ್ಕೆ ಬಂದಿದ್ದನು. ತನ್ನ ಪ್ರವಾಸ ವರ್ಣನೆಯಲ್ಲಿ ಅವನು ಗುಪ್ತ ಕಾಲದಲ್ಲಿಯ ಸಮಾಜ ಜೀವನವನ್ನು ವಿವರಿಸಿದ್ದಾನೆ. ಅವನು ಹೀಗೆ ಹೇಳುತ್ತಾನೆ- ಭಾರತದ ನಗರಗಳ ಭವ್ಯವಾಗಿದ್ದು ಊರ್ಜಿತಾವಸ್ಥೆಯಲ್ಲಿವೆ. ಪ್ರವಾಸಿಕರಿಗಾಗಿ ಈ ನಗರಗಳಲ್ಲಿ ಅನೇಕ ಅತಿಥಿ ಗೃಹಗಳಿವೆ. ಅನೇಕ ಧರ್ಮಾದಾಯ ಸಂಸ್ಥೆಗಳೂ ಇವೆ. ನಗರಗಳಲ್ಲಿ ಆಸ್ಪತ್ರೆಗಳಿವೆ. ಅಲ್ಲಿ ಬಡವರಿಗೆ ಉಚಿತ ವೈದ್ಯಕೀಯ ಸೇವೆ ಉಪಲಬ್ಧವಿದೆ. ವಿಹಾರಗಳೂ, ಮಂದಿರಗಳೂ ಭವ್ಯವಾಗಿವೆ. ಜನರಿಗೆ ಉದ್ಯೋಗವನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ. ಎಲ್ಲಿಯೂ ಸಂಚಾರ ಮಾಡಲು ಜನರ ಮೇಲೆ ನಿರ್ಬಂಧವಿಲ್ಲ. ಸರಕಾರಿ ಅಧಿಕಾರಿಗಳಿಗೆ ಹಾಗೂ ಸೈನಿಕರಿಗೆ ನಿಯಮಿತವಾಗಿ ವೇತನ ಕೊಡಲಾಗುತ್ತದೆ. ಅಲ್ಲಿಯ ಜನರು ಸೆರೆ ಕುಡಿಯುವುದಿಲ್ಲ. ಹಿಂಸೆ ಮಾಡುವುದಿಲ್ಲ. ಗುಪ್ತ ಸಾಮ್ರಾಜ್ಯದಲ್ಲಿಯ ರಾಜ್ಯಾಡಳಿತವನ್ನು ಯೋಗ್ಯ ರೀತಿಯಿಂದ ನಡೆಸಲಾಗುತ್ತದೆ.

ಎರಡನೆಯ ಚಂದ್ರಗುಪ್ತನ ಕಾಲದಲ್ಲಿ 'ಫಾಹಿಯಾನ' ಎಂಬ ಬೌದ್ಧ ಭಿಕ್ಕು ಚೀನದಿಂದ ಭಾರತಕ್ಕೆ ಬಂದಿದ್ದನು. ಅವನು ತನ್ನ ಭಾರತದಲ್ಲಿಯ ಪ್ರವಾಸದ ವರ್ಣನೆಯನ್ನು ಬರೆದಿಟ್ಟಿದ್ದಾನೆ. ಅದರಲ್ಲಿ ಗುಪ್ತ ಸಾಮ್ರಾಜ್ಯದಲ್ಲಿಯ ಉತ್ತಮ ರಾಜ್ಯಾಡಳಿತ ವ್ಯವಸ್ಥೆಯ ಮಾಹಿತಿ ದೊರೆಯುತ್ತದೆ.

### ೮.೫ ವರ್ಧನ ರಾಜಮನೆತನ

ಗುಪ್ತ ಸಾಮ್ರಾಜ್ಯದ ಸಾಮರ್ಥ್ಯವು ಕಡಿಮೆಯಾಗುತ್ತಿದ್ದಂತೆ ಉತ್ತರ ಭಾರತದಲ್ಲಿ ಅನೇಕ ರಾಜ್ಯಗಳು ಉದಯವಾದವು. ವರ್ಧನ ರಾಜ ಮನೆತನವು ಅವುಗಳಲ್ಲಿಯ ಒಂದು ರಾಜ್ಯವಾಗಿತ್ತು. ದಿಲ್ಲಿಯ ಹತ್ತಿರವಿರುವ ಥಾನೇಸರ ಎಂಬ ಸ್ಥಳದಲ್ಲಿ ಪ್ರಭಾಕರ ವರ್ಧನ ಎಂಬ ಹೆಸರಿನ ರಾಜನು ರಾಜ್ಯವಾಳುತ್ತಿದ್ದನು. ಅವನ ಕಾಲದಲ್ಲಿ ವರ್ಧನ ಮನೆತನವು ಪ್ರಭಾವಿಯಾಯಿತು. ಹರ್ಷವರ್ಧನನು ಅವನ ಮಗನಾಗಿದ್ದನು. ಹರ್ಷವರ್ಧನನು ವರ್ಧನ ಸಾಮ್ರಾಜ್ಯದ ವಿಸ್ತಾರ ಮಾಡಿದನು. ಅವನ ಆಳ್ವಿಕೆಯಲ್ಲಿ ವರ್ಧನ ಸಾಮ್ರಾಜ್ಯದ ವಿಸ್ತಾರವು ಉತ್ತರಕ್ಕೆ ನೇಪಾಳ, ದಕ್ಷಿಣಕ್ಕೆ ನರ್ಮದಾ ನದಿ ಪೂರ್ವಕ್ಕೆ ಆಸಾಮ ಹಾಗೂ ಪಶ್ಚಿಮಕ್ಕೆ ಗುಜರಾತದ ವರೆಗೆ ಆಗಿತ್ತು. ಕಾಮರೂಪ ಎಂದರೆ ಪ್ರಾಚೀನ ಆಸಾಮ. ಅಲ್ಲಿಯ ರಾಜನಾದ ಭಾಸ್ಕರ ವರ್ಮನನೊಡನೆ ಅವನ ಮೈತ್ರಿಯ ಸಂಬಂಧವಿತ್ತು. ಹರ್ಷವರ್ಧನನು ತನ್ನ ರಾಯಭಾರಿಯನ್ನು ಚೀನಿ ದರಬಾರಕ್ಕೆ ಕಳಿಸಿದ್ದನು. ಹರ್ಷವರ್ಧನನು ಚೀನದ ಸಾಮ್ರಾಟನೊಡನೆ ಮೈತ್ರಿಯ ಸಂಬಂಧವನ್ನು ಪ್ರಸ್ಥಾಪಿಸಿದ್ದನು. ಅವನು ತನ್ನ ರಾಜಧಾನಿಯನ್ನು ಕನೌಜ ಎಂಬಲ್ಲಿ ಸ್ಥಾಪಿಸಿದನು. ಅವನ ಆಡಳಿತದಲ್ಲಿ ವ್ಯಾಪಾರವು ಊರ್ಜಿತಾವಸ್ಥೆಯಲ್ಲಿತ್ತು. ರಾಜ್ಯದ ಉತ್ಪನ್ನದ ಬಹು ದೊಡ್ಡ ಭಾಗವನ್ನು ಅವನು ಪ್ರಜೆಗಳ ಹಿತಕ್ಕಾಗಿ ಬಳಸುತ್ತಿದ್ದನು. ಪ್ರತಿ ಐದು ವರ್ಷಕ್ಕೊಮ್ಮೆ ಅವನು ಸ್ವಂತದ ಸಂಪತ್ತನ್ನು ಪ್ರಜೆಗಳಿಗೆ ದಾನ ಮಾಡುತ್ತಿದ್ದನು.

ಹರ್ಷವರ್ಧನನ ಆಸ್ಥಾನದಲ್ಲಿಯ ರಾಜಕವಿ ಬಾಣಭಟ್ಟನು 'ಹರ್ಷಚರಿತ' ಎಂಬ ಹರ್ಷವರ್ಧನನ ಜೀವನದ ಮೇಲಿನ ಗ್ರಂಥವನ್ನು ಬರೆದನು. ಅದರ ಆಧಾರದಿಂದ ಹರ್ಷವರ್ಧನನ ಆಳ್ವಿಕೆಯ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಹರ್ಷವರ್ಧನನು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದನು. ಅವನು ಇತರ ಧರ್ಮಗಳಿಗೂ ಉದಾರ ಆಶ್ರಯ ನೀಡಿದನು. ಹರ್ಷವರ್ಧನನು 'ರತ್ನಾವಲಿ', 'ನಾಗಾನಂದ' ಮತ್ತು 'ಪ್ರಿಯದರ್ಶಿಕಾ' ಎಂಬ ಮೂರು ಸಂಸ್ಕೃತ ನಾಟಕಗಳನ್ನು ಬರೆದನು. ಅವನ ಕಾಲದಲ್ಲಿ ಯುವಾನ್ ಚ್ವಾಂಗ್ ಎಂಬ ಬೌದ್ಧ ಭಿಕ್ಕು ಚೀನಾದಿಂದ ಭಾರತಕ್ಕೆ ಬಂದಿದ್ದನು. ಅವನು ಭಾರತದ ತುಂಬೆಲ್ಲ ಸಂಚರಿಸಿದನು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಅವನು ಎರಡು ವರ್ಷ ಕಳೆದಿದ್ದನು. ಅವನು ಚೀನಾಕ್ಕೆ ಮರಳಿದ ನಂತರ ಬೌದ್ಧ ಗ್ರಂಥಗಳನ್ನು ಚೀನಿ ಭಾಷೆಯಲ್ಲಿ ಭಾಷಾಂತರ ಮಾಡಿದನು.



ಯುವಾನ್ ಚ್ವಾಂಗ್

**ನಿಮಗೆ ಗೊತ್ತಿದೆಯೇ ?**

ಯುವಾನ್ ಚ್ವಾಂಗನು ಭಾರತದ ತುಂಬೆಲ್ಲ ಸಂಚರಿಸಿದನು. ಅವನು ಮಹಾರಾಷ್ಟ್ರದ ಜನತೆಯ ವಿಷಯವಾಗಿ ಗೌರವೋದ್ಗಾರವನ್ನು ತೆಗೆದಿದ್ದಾನೆ. ''ಮಹಾರಾಷ್ಟ್ರದ ಜನರು ಅಭಿಮಾನಿಗಳಾಗಿದ್ದಾರೆ. ಯಾರಾದರೂ ಉಪಕಾರ ಮಾಡಿದರೆ, ಅವರು ಯಾವಾಗಲೂ ಉಪಕಾರವನ್ನು ಸ್ಮರಿಸುತ್ತಾರೆ. ಆದರೆ ಯಾರಾದರೂ ಅವರ ಅವಮಾನ ಮಾಡಿದರೆ ಅವರು ಸಹಿಸುವುದಿಲ್ಲ. ಸಂಕಟದಲ್ಲಿ ಸಿಲುಕಿದ ಜನರಿಗೆ ಅವರು ತಮ್ಮ ಪ್ರಾಣದ ಪರಿವೆಯಿಲ್ಲದೆ ಸಹಾಯ ಮಾಡುತ್ತಾರೆ. ಶರಣು ಬಂದವರಿಗೆ ಅವರು ಕೇಡು ಮಾಡುವುದಿಲ್ಲ.'' ಎಂದು ಅವನು ಹೇಳುತ್ತಾನೆ.



ನಾಲಂದಾ ವಿಶ್ವವಿದ್ಯಾಲಯ

## ೮.೬ ಈಶಾನ್ಯ ಭಾರತದಲ್ಲಿಯ ರಾಜಪ್ರಭುತ್ವ

ಈಶಾನ್ಯ ಭಾರತದ ಮಣಿಪೂರ ಪ್ರದೇಶದಲ್ಲಿಯ ರಾಜಕುಮಾರಿ ಉಲೂಪಿಯ ವಿವಾಹವು ಅರ್ಜುನನ ಜೊತೆ ಆಗಿತ್ತೆಂಬ ಕಥೆ ಮಹಾಭಾರತದಲ್ಲಿ ಬಂದಿದೆ. 'ಕಾಮರೂಪ'' ಎಂಬ ರಾಜ್ಯವು ಕ್ರಿಸ್ತಶಕ ನಾಲ್ಕನೆಯ ಶತಮಾನದಲ್ಲಿ ಉದಯಕ್ಕೆ ಬಂದಿತು. ಪುಷ್ಯವರ್ಮನ್ ಇವನು ಕಾಮರೂಪ ರಾಜ್ಯದ ಸಂಸ್ಥಾಪಕವಾಗಿದ್ದನು. ಸಮುದ್ರಗುಪ್ತನ ಅಲಹಾಬಾದದಲ್ಲಿಯ ಸ್ತಂಭಲೇಖದಲ್ಲಿ ಅದರ ಉಲ್ಲೇಖವನ್ನು ಮಾಡಲಾಗಿದೆ. ಕಾಮರೂಪ ರಾಜನು ಕೊರೆದ ಅನೇಕ ಲೇಖಗಳು ಉಪಲಬ್ಧವಾಗಿವೆ. ಮಹಾಭಾರತ ಹಾಗೂ ರಾಮಾಯಣ ಈ ಮಹಾಕಾವ್ಯಗಳಲ್ಲಿ ಕಾಮರೂಪದ ಉಲ್ಲೇಖವನ್ನು 'ಪ್ರಾಗ್‌ಜ್ಯೋತಿಷ' ಎಂಬ ಹೆಸರಿನಿಂದ ಮಾಡಲಾಗಿದೆ. ಪ್ರಾಗ್‌ಜ್ಯೋತಿಷಪೂರವು ಆ ರಾಜ್ಯದ ರಾಜಧಾನಿಯಾಗಿತ್ತು. ಪ್ರಾಗ್‌ಜ್ಯೋತಿಷಪೂರ ಎಂದರೆ ಇಂದಿನ ಆಸಾಮ ರಾಜ್ಯದಲ್ಲಿಯ ಗುವಾಹಾಟಿ ಪಟ್ಟಣ. 'ಪೆರಿಪ್ಲಸ್ ಆಫ್ ದ ಎರಿಥ್ರಿಯನ್ ಸೀ' ಎಂಬ ಪುಸ್ತಕದಲ್ಲಿ ಅದರ ಉಲ್ಲೇಖವನ್ನು 'ಕಿರ್ಹಾದಿಯಾ' ಅಂದರೆ 'ಕಿರಾತ ಜನರ ಪ್ರದೇಶ' ಎಂದು ಮಾಡಲಾಗಿದೆ. ಕಾಮರೂಪ ರಾಜ್ಯದ ವಿಸ್ತಾರವು ಬ್ರಹ್ಮಪುತ್ರಾ ನದಿಯ ಕೊಳ್ಳ, ಭೂತಾನ, ಬಂಗಾಲದ ಕೆಲವು ಭಾಗ, ಬಿಹಾರದ ಕೆಲವು ಭಾಗ ಇತ್ಯಾದಿ ಪ್ರದೇಶಗಳಲ್ಲಿ ಆಗಿತ್ತು. ಈಶಾನ್ಯ ಭಾರತದಲ್ಲಿಯ 'ಕಾಮರೂಪ' ರಾಜ್ಯಕ್ಕೆ ಯುವಾನ್ ಚ್ವಾಂಗನು ಹೋಗಿದ್ದನು. ಆ ಸಮಯದಲ್ಲಿ ಭಾಸ್ಕರವರ್ಮನ ಅಲ್ಲಿಯ ರಾಜನಾಗಿದ್ದನು.

ಈ ಪಾಠದಲ್ಲಿ ನಾವು ಮೌರ್ಯರ ನಂತರದ ಕಾಲದಲ್ಲಿಯ ಉತ್ತರ ಭಾರತ ಹಾಗೂ ಅಲ್ಲಿಯ ವಿವಿಧ ರಾಜ ಪ್ರಭುತ್ವಗಳ ಪರಿಚಯ ಮಾಡಿಕೊಂಡೆವು. ಅದರಂತೆ ಆ ಸಮಯದಲ್ಲಿ ಈಶ್ಯಾನ್ಯ ಭಾರತದಲ್ಲಿ ಯಾವ ಪರಿಸ್ಥಿತಿ ಇತ್ತೆಂಬುದನ್ನೂ ನೋಡಿದೆವು. ಮುಂದಿನ ಪಾಠದಲ್ಲಿ ನಾವು ಆ ಸಮಯದಲ್ಲಿ ದಕ್ಷಿಣ ಭಾರತದಲ್ಲಿರುವ ರಾಜಪ್ರಭುತ್ವಗಳ ಪರಿಚಯ ಮಾಡಿಕೊಳ್ಳುವವರಿದ್ದೇವೆ.

**ನಿಮಗೆ ಗೊತ್ತಿದೆಯೇ ?**

ಭಾರತೀಯ ಪರಂಪರೆಗನುಸಾರವಾಗಿ ಪ್ರಾಚೀನ ಕಾಲದಲ್ಲಿ ಕಾಶ್ಮೀರ ಹೆಸರು 'ಕಶ್ಯಪಪೂರ' ಎಂದು ಇತ್ತು. ಗ್ರೀಕ ಇತಿಹಾಸಕಾರರು ಅದರ ಉಲ್ಲೇಖವನ್ನು ಕ್ಯಾಸ್ಪೆಪಿರಾಸ್, ಕ್ಯಾಸ್ಪೆಟಿರಾಕ್ ಹಾಗೂ ಕ್ಯಾಸ್ಪೇರಿಯಾ ಎಂದು ಮಾಡಿದ್ದಾರೆ. ಮಹಾಭಾರತದ ಕಾಲದಲ್ಲಿ ಕಾಂಬೋಜ ಮನೆತನದ ರಾಜರು ಆಳ್ವಿಕೆ ಮಾಡುತ್ತಿದ್ದ ಉಲ್ಲೇಖ ಬರುತ್ತದೆ. ಸಾಮ್ರಾಟ ಅಶೋಕನ ಕಾಲದಲ್ಲಿ ಕಾಶ್ಮೀರ ಮೌರ್ಯ ಸಾಮ್ರಾಜ್ಯದಲ್ಲಿ ವಿಲೀನವಾಗಿತ್ತು. ಕ್ರಿಸ್ತಶಕದ ಏಳನೆಯ ಶತಮಾನದಲ್ಲಿ ಕರ್ಕೋಟ ಮನೆತನದ ರಾಜ್ಯವು ಕಾಶ್ಮೀರದಲ್ಲಿತ್ತು. ಕಲ್ಹಣನು ತನ್ನ ರಾಜತರಂಗಿಣಿ ಎಂಬ ಗ್ರಂಥದಲ್ಲಿ ಅದರ ಮಾಹಿತಿಯನ್ನು ಕೊಟ್ಟಿದ್ದಾನೆ.

## ಅಭ್ಯಾಸ

**೧. ಹೇಳಿ, ನೋಡೋಣ.**

(೧) ಭಾರತದಲ್ಲಿ ಬಂಗಾರದ ನಾಣ್ಯಗಳನ್ನು ಟಂಕಿಸಲು ಆರಂಭಿಸಿದ ರಾಜರು.

(೨) ಕನಿಷ್ಕನು ಕಾಶ್ಮೀರದಲ್ಲಿ ನಿರ್ಮಿಸಿದ್ದ ನಗರ.

(೩) ವೀಣಾವಾದನದಲ್ಲಿ ಪಾರಂಗತನಾಗಿದ್ದ ರಾಜ.

(೪) ಕಾಮರೂಪ ಎಂದರೆ.

**೨. ಪಾಠದಲ್ಲಿಯ ನಕಾಶೆಯನ್ನು ನಿರೀಕ್ಷಿಸಿ ಗುಪ್ತರ ಸಾಮ್ರಾಜ್ಯದಲ್ಲಿಯ ಆಧುನಿಕ ಪಟ್ಟಣಗಳ ಹೆಸರುಗಳ ಪಟ್ಟಿಯನ್ನು ತಯಾರಿಸಿರಿ.**

**೩. ಚರ್ಚೆ ಮಾಡಿ ಬರೆಯಿರಿ.**

(೧) ಸಾಮ್ರಾಟ ಕನಿಷ್ಕ


(೨) ಮೆಹರೌಲಿಯಲ್ಲಿಯ ಲೋಹಸ್ತಂಭ

**೪. ಪಾಠದಲ್ಲಿಯ ವಿವಿಧ ಗ್ರಂಥ ಹಾಗೂ ಅವುಗಳ ಲೇಖಕರ ಹೆಸರುಗಳ ಪಟ್ಟಿ ತಯಾರಿಸಿರಿ.**

**೫. ಕೆಳಗಿನ ಅಂಶಗಳ ಆಧಾರದಿಂದ ಗುಪ್ತ ರಾಜಮನೆತನ ಹಾಗೂ ವರ್ಧನ ರಾಜಮನೆತನಗಳ ತುಲನಾತ್ಮಕ ಕೋಷ್ಟಕವನ್ನು ತಯಾರಿಸಿರಿ.**

| ಅಂಶಗಳು | ಗುಪ್ತ ರಾಜ ಮನೆತನ | ವರ್ಧನ ರಾಜನೆತನ |
|---|---|---|
| ಸಂಸ್ಥಾಪಕರು | | |
| ರಾಜ್ಯವಿಸ್ತಾರ | | |
| ಕಾರ್ಯ | | |

**೬. ಕೆಳಗಿನ ಪದಬಂಧವನ್ನು ಬಿಡಿಸಿರಿ.**




**ಮೇಲಿನಿಂದ ಕೆಳಕ್ಕೆ**

೨. ★★★★★ ಇವನ ಪರಾಕ್ರಮದ ವರ್ಣನೆಯು ಪ್ರಯಾಗ ಎಂಬಲ್ಲಿಯ ಸ್ತಂಭಲೇಖದಲ್ಲಿ ಕಂಡುಬರುತ್ತದೆ.

೩. ಮೆಹರೌಲಿ ಲೋಹಸ್ತಂಭದ ಮೇಲೆ ★★ ಹೆಸರಿನ ರಾಜನ ಉಲ್ಲೇಖ ಕಂಡು ಬರುತ್ತದೆ.

೫. ಪುಷ್ಯವರ್ಮನ ಇವನು ★★★★ ದ ರಾಜ್ಯವನ್ನು ಸ್ಥಾಪಿಸಿದನು.

೭. ★★★★★ ಇವನ ಆಸ್ಥಾನದಲ್ಲಿ ಬಾಣಭಟ್ಟ ಎಂಬ ರಾಜಕವಿ ಇದ್ದನು.

೮. ಇಂಡೋಗ್ರೀಕ ರಾಜರಲ್ಲಿ ಪ್ರಸಿದ್ಧ ರಾಜ ★★★★.

**ಎಡದಿಂದ ಬಲಕ್ಕೆ**

೧. ★★★★★★★ ಇವನು ಗುಪ್ತರ ಸಾಮ್ರಾಜ್ಯವನ್ನು ವಾಯವ್ಯದ ಕಡೆಗೆ ಹೆಚ್ಚಿಸಿದನು.

೪. ಹರ್ಷವರ್ಧನನ ಒಂದು ಸಂಸ್ಕೃತ ನಾಟಕ ★★★★★

೬. ಗುಪ್ತ ರಾಜ ಮನೆತನದ ಸಂಸ್ಥಾಪಕ ★★★

೯. ★★★★ ಇವಳ ವಿವಾಹವು ವಾಕಾಟಕ ಮನೆತನದ ಎರಡನೆಯ ರುದ್ರಸೇನನ ಜೊತೆ ಆಯಿತು.

೧೦. ಎರಡನೆಯ ಚಂದ್ರಗುಪ್ತನ ಕಾಲದಲ್ಲಿ ಭಾರತಕ್ಕೆ ಬಂದ ಬೌದ್ಧ ಭಿಕ್ಕು ★★★★

೧೧. ಕನಿಷ್ಕನ ಆಸ್ಥಾನದಲ್ಲಿಯ ಪ್ರಸಿದ್ಧ ವೈದ್ಯ ★★★


**ಉಪಕ್ರಮ :**

ಮೌರ್ಯ ಸಾಮ್ರಾಜ್ಯದ ನಂತರ ಭಾರತದಲ್ಲಿ ಆಗಿ ಹೋದ ರಾಜರ ವಿಷಯವಾಗಿ ಅಧಿಕ ಮಾಹಿತಿಯನ್ನು ಸಂಗ್ರಹಿಸಿರಿ ಹಾಗೂ ನಿಮ್ಮ ಮೆಚ್ಚಿನ ರಾಜನ ಪಾತ್ರಾಭಿನಯವನ್ನು ವರ್ಗದಲ್ಲಿ ಸಾದರಪಡಿಸಿರಿ.

* * *

# ೯. ದಕ್ಷಿಣ ಭಾರತದಲ್ಲಿಯ ಪ್ರಾಚೀನ ರಾಜ್ಯಗಳು

೯.೧ ಚೇರ, ಪಾಂಡ್ಯ ಹಾಗೂ ಚೋಳ ರಾಜಮನೆತನಗಳು
೯.೨ ಸಾತವಾಹನ ರಾಜಮನೆತನ
೯.೩ ವಾಕಾಟಕ ರಾಜಮನೆತನ
೯.೪ ಚಾಲುಕ್ಯ ರಾಜಮನೆತನ
೯.೫ ಪಲ್ಲವ ರಾಜಮನೆತನ
೯.೬ ರಾಷ್ಟ್ರಕೂಟ ರಾಜಮನೆತನ






**ಮಾಡಿ ನೋಡಿರಿ.**

ಭಾರತದ ನಕಾಶೆಯಲ್ಲಿ ದಕ್ಷಿಣ ಭಾರತದಲ್ಲಿಯ ಮಹತ್ವದ ಸ್ಥಳಗಳನ್ನು ತೋರಿಸಿರಿ.

## ೯.೧ ಚೇರ, ಪಾಂಡ್ಯ ಹಾಗೂ ಚೋಳ ರಾಜಮನೆತನಗಳು

ದಕ್ಷಿಣದಲ್ಲಿಯ ಪ್ರಾಚೀನ ರಾಜಪ್ರಭುತ್ವಗಳಲ್ಲಿ ಮೂರು ರಾಜಪ್ರಭುತ್ವಗಳ ಉಲ್ಲೇಖವು ಆ ಕಾಲದ ಸಾಹಿತ್ಯದಲ್ಲಿ ಬರುತ್ತದೆ. ಚೇರ, ಪಾಂಡ್ಯ, ಹಾಗೂ ಚೋಳ

ಇವು ಆ ರಾಜಪ್ರಭುತ್ವಗಳಾಗಿದ್ದವು. ಈ ರಾಜಪ್ರಭುತ್ವಗಳು ಕ್ರಿಸ್ತಶಕ ಪೂರ್ವದ ನಾಲ್ಕನೆಯ ಶತಮಾನದಲ್ಲಿ ಇಲ್ಲವೆ ಅದಕ್ಕಿಂತಲೂ ಮೊದಲು ಅಸ್ತಿತ್ವದಲ್ಲಿ ಇದ್ದವು. ಅವುಗಳ ಉಲ್ಲೇಖವನ್ನು ರಾಮಾಯಣ ಮತ್ತು ಮಹಾಭಾರತ ಈ ಮಹಾಕಾವ್ಯಗಳಲ್ಲಿ ಮಾಡಲಾಗಿದೆ. ತಮಿಳು ಭಾಷೆಯಲ್ಲಿಯ ಸಂಘಮ ಸಾಹಿತ್ಯದಲ್ಲಿ ಈ ಮೂರು ರಾಜಪ್ರಭಉತ್ವಗಳ ಉಲ್ಲೇಖವಿದೆ. ಮೌರ್ಯ ಸಾಮ್ರಾಟ ಅಶೋಕನ ಲೇಖಗಳಲ್ಲಿಯೂ ಅವುಗಳ ಉಲ್ಲೇಖವಿದೆ. 'ಪೆರಿಪ್ಲಸ್ ಆಫ್ ದ ಎರಿಥ್ರಿಯನ್ ಸೀ' ಎಂಬ ಪುಸ್ತಕದಲ್ಲಿ 'ಮುಝಿರೀಸ' ಇದು ಕೇರಳದ ತೀರದಲ್ಲಿಯ ಅತ್ಯಂತ ಮಹತ್ವದ ಬಂದರವಾಗಿತ್ತೆಂದು ಹೇಳಲಾಗಿದೆ. ಈ ಬಂದರವು ಚೇರ ರಾಜ್ಯದಲ್ಲಿ ಇತ್ತು. ಮುಝಿರೀಸ ಬಂದರದ ಮೂಲಕ ಮಸಾಲೆಯ ಪದಾರ್ಥಗಳು, ಮುತ್ತುಗಳು, ಅಮೂಲ್ಯ ರತ್ನಗಳು ಇತ್ಯಾದಿ ವಸ್ತುಗಳು ಇಟಲಿಯಲ್ಲಿಯ ರೋಮ ಹಾಗೂ ಪಶ್ಚಿಮದ ಕಡೆಯ ಇತರ ದೇಶಗಳಿಗೆ ನಿರ್ಯಾತವಾಗುತ್ತಿದ್ದವು. ಪಾಂಡ್ಯ ರಾಜ್ಯದ ವಿಸ್ತಾರವು ಇಂದಿನ ತಮಿಳುನಾಡಿನಲ್ಲಿ ಆಗಿತ್ತು. ಅಲ್ಲಿಯ ಉತ್ತಮ ದರ್ಜೆಯ ಮುತ್ತುಗಳಿಗೆ ತುಂಬಾ ಬೇಡಿಕೆ ಇತ್ತು. ಮಧುರಾಯಿ ಇದು ಪಾಂಡ್ಯ ರಾಜ್ಯದ ರಾಜಧಾನಿಯಾಗಿತ್ತು. ಪ್ರಾಚೀನ ಚೋಳರ ರಾಜ್ಯವು ತಮಿಳುನಾಡಿನಲ್ಲಿಯ ತಿರುಚಿರಾಪಳ್ಳಿಯ ಸುತ್ತಮುತ್ತಲಿನ ಪ್ರದೇಶದಿಲ್ಲ ಇತ್ತು.

### ೯.೨ ಸಾತವಾಹನ ರಾಜಮನೆತನ

ಮೌರ್ಯ ಸಾಮ್ರಾಜ್ಯದ ಅವನತಿಯ ನಂತರ ಉತ್ತರ ಭಾರತದಂತೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಈ ಪ್ರದೇಶಗಳಲ್ಲಿಯ ಸ್ಥಳೀಯ ರಾಜರು ಸ್ವತಂತ್ರರಾದರು. ಅವರು ಚಿಕ್ಕ ಚಿಕ್ಕ ರಾಜ್ಯಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಸಾತವಾಹನ ಮನೆತನ ಒಂದಾಗಿತ್ತು. ಪ್ರತಿಷ್ಠಾನ ಅಂದರೆ ಪೈಠಣ ಇದು ಅವರ ರಾಜಧಾನಿಯಾಗಿತ್ತು. ರಾಜಾ ಸಿಮುಕ ಇವನು ಸಾತವಾಹನ ಮನೆತನದ ಸಂಸ್ಥಾಪಕನಾಗಿದ್ದನು. ಪುಣೆ ಜಿಲ್ಲೆಯಲ್ಲಿಯ ಜುನ್ನರ ಹತ್ತಿರದ ನಾಣೇಘಾಟದಲ್ಲಿಯ ಗುಹೆಯಲ್ಲಿ ಕೊರೆದ ಲೇಖನದಲ್ಲಿ ಈ ಮನೆತನದ ಮಹತ್ವದ ವ್ಯಕ್ತಿಗಳ ಹೆಸರುಗಳಿವೆ. ಕೆಲವು ಸಾತವಾಹನ ರಾಜರು ತಮ್ಮ ಹೆಸರಿನ ಮೊದಲು ತಾಯಿಯ ಹೆಸರನ್ನು ಬರೆಯುತ್ತಿದ್ದರು. ಉದಾ: ಗೌತಮೀಪುತ್ರ ಸಾತಕರ್ಣಿ.

ಸಾತವಾಹನ ಮನೆತನದಲ್ಲಿಯ ಗೌತಮೀಪುತ್ರ ಸಾತಕರ್ಣಿ ಈ ರಾಜನು ವಿಶೇಷ ಪ್ರಸಿದ್ಧನಾಗಿದ್ದನು. ಅವನ ಪರಾಕ್ರಮದ ವರ್ಣನೆಯನ್ನು ನಾಶಿಕದಲ್ಲಿಯ ಗುಹೆಗಳಲ್ಲಿ ಕೊರೆದ ಲೇಖನಗಳಲ್ಲಿ ಮಾಡಲಾಗಿದೆ. ಅವನು ಶಕರ ರಾಜನಾದ ನಹಪಾನನನ್ನು ಪರಾಭವಗೊಳಿಸಿದನು.



**ನಿಮಗೆ ಗೊತ್ತಿದೆಯೇ ?**

ನಾಣೇಘಾಟ: ಪುಣೆ ಮತ್ತು ಠಾಣೆ ಜಿಲ್ಲೆಯ ಗಡಿಯಲ್ಲಿ (ಜುನ್ನರ-ಮುರಬಾಡ ರಸ್ತೆ) ಇರುವ ಘಟ್ಟದ ರಸ್ತೆಯು 'ನಾಣೇಘಾಟ' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಐದು ಕಿಲೋಮೀಟರ ಉದ್ದದ ಈ ಘಟ್ಟವನ್ನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಸಾತವಾಹನರ ಆಳ್ವಿಕೆಯಲ್ಲಿ ತಯಾರಿಸಲಾಯಿತು. ಮೊದಲು ಈ ಘಟ್ಟವು ದೇಶ ಮತ್ತು ಕೊಂಕಣ ಇವುಗಳ ನಡುವಿನ ಮುಖ್ಯ ವ್ಯಾಪಾರಿ ಮಾರ್ಗಗಳಲ್ಲಿ ಒಂದಾಗಿತ್ತು. ವ್ಯಾಪಾರ ಮತ್ತು ಸಾರಿಗೆಗಳ ಸಲುವಾಗಿ ಈ ಘಟ್ಟವನ್ನು ಉಪಯೋಗಿಸಲಾಗುತ್ತಿತ್ತು. ಲೇಖಗಳನ್ನು ಕೊರೆದ ರಂಜಣಿಗೆಯು ಅಲ್ಲಿ ಇಂದು ಕೂಡ ನೋಡಲು ಸಿಗುತ್ತದೆ. ನಾಣೇಘಾಟದಲ್ಲಿಯ ಗುಹೆಗಳಲ್ಲಿ ಸಾತವಾಹನ ರಾಜರ ಮೂರ್ತಿ ಮತ್ತು ಪ್ರಾಚೀನ ಶಿಲಾಲೇಖಗಳಿವೆ. ಇಲ್ಲಿಯ ಶಿಲಾಲೇಖದಲ್ಲಿ ಸಾತವಾಹನ ರಾಜರು ಮತ್ತು ರಾಣಿಯರು ನೀಡಿದ ದೇಣಿಗೆಗಳ ವರ್ಣನೆ ಇದೆ.

ನಾಸಿಕದ ಗುಹೆಯಲ್ಲಿಯ ಒಂದು ಶಿಲಾಶಾಸನದಲ್ಲಿ ಗೌತಮಿಪುತ್ರನ ಉಲ್ಲೇಖವನ್ನು 'ತ್ರಿಸಮುದ್ರ ತೋಯಪೀತ ವಾಹನ' ಎಂದು ಮಾಡಲಾಗಿದೆ. ತೋಯ ಎಂದರೆ ನೀರು. ಕುದುರೆ ಇದು ರಾಜನ ವಾಹನ. 'ಯಾರ ಕುದುರೆಗಳು ಮೂರು ಸಮುದ್ರಗಳ ನೀರನ್ನು ಕುಡಿದಿವೆಯೋ ಅವನು'' ಎಂದು ಅದರ ಅರ್ಥವಾಗುತ್ತದೆ. ಮೂರು ಸಮುದ್ರಗಳೆಂದರೆ ಅರಬೀ ಸಮುದ್ರ, ಬಂಗಾಲದ ಉಪಸಾಗರ ಹಾಗೂ ಹಿಂದೂ ಮಹಾಸಾಗರ. ಅವನ ಕಾಲದಲ್ಲಿ ಸಾತವಾಹನರ ಸಾಮ್ರಾಜ್ಯವು ಉತ್ತರಕ್ಕೆ ನರ್ಮದಾ ನದಿಯಿಂದ ಹಿಡಿದು ದಕ್ಷಿಣಕ್ಕೆ ತುಂಗಭದ್ರಾ ನದಿಯ ವರೆಗೆ ಹಬ್ಬಿತ್ತು.

ಹಾಲ ಎಂಬ ಹೆಸರಿನ ಸಾತವಾಹನ ರಾಜನ 'ಗಾಥಾ ಸಪ್ತಶತಿ' ಈ ಮಾಹಾರಾಷ್ಟ್ರೀ ಎಂಬ ಪ್ರಾಕೃತ ಭಾಷೆಯಲ್ಲಿಯ ಗ್ರಂಥವು ಪ್ರಸಿದ್ಧವಾಗಿದೆ. ಈ ಗ್ರಂಥದಲ್ಲಿ ಸಾತವಾಹನ ಕಾಲದಲ್ಲಿಯ ಜನಜೀವನದ ಮಾಹಿತಿ ದೊರೆಯುತ್ತದೆ.

ಸಾತವಾಹನರ ಕಾಲದಲ್ಲಿ ಭಾರತೀಯ ವ್ಯಾಪಾರವು ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿತು. ಮಹಾರಾಷ್ಟ್ರದಲ್ಲಿಯ ಪೈಠಣ, ತೇರ, ಭೋಕರದನ, ಕೊಲ್ಹಾಪೂರ ಈ ಸ್ಥಳಗಳಿಗೆ ವ್ಯಾಪಾರದ ಕೇಂದ್ರಗಳೆಂದು ವಿಶೇಷ ಮಹತ್ವ ಪ್ರಾಪ್ತವಾಯಿತು. ಈ ಕಾಲದಲ್ಲಿ ಅನೇಕ ಕಲಾವಸ್ತುಗಳ ಉತ್ಪಾದನೆಯಾಗ ತೊಡಗಿತು. ರೊಮೇಮದ ವರೆಗೆ ಭಾರತದ ಸರಕುಗಳು ನಿರ್ಯಾತವಾಗುತ್ತಿದ್ದವು.

ಕೆಲವು ಸಾತವಾಹನರ ನಾಣ್ಯಗಳ ಮೇಲೆ ಹಡಗಿನ ಚಿತ್ರಗಳಿವೆ. ಮಹಾರಾಷ್ಟ್ರದಲ್ಲಿಯ ಅಜಂತಾ, ನಾಶಿಕ, ಕಾರ್ಲೆ, ಭಾಜೆ, ಕಾನ್ಹೇರಿ ಮತ್ತು ಜುನ್ನರಗಳಲ್ಲಿಯ ಕೆಲವು ಗುಹೆಗಳು ಸಾತವಾಹನರ ಕಾಲದಲ್ಲಿ ನಿರ್ಮಾಣವಾಗಿವೆ.



**ಹಡಗಿನ ಚಿತ್ರ ವಿರುವ ಸಾತವಾಹನದ ನಾಣ್ಯ**



**ಕಾರ್ಲೆಯಲ್ಲಿಯ ಚೈತ್ಯಗೃಹ**

## ೯.೩ ವಾಕಾಟಕ ರಾಜಮನೆತನ

ಕ್ರಿಸ್ತಶಕದ ಮೂರನೆಯ ಶತಮಾನದ ಆರಂಭದಲ್ಲಿ ಸಾತವಾಹನರ ಆಡಳಿತವು ಕ್ಷೀಣವಾಯಿತು. ಆ ನಂತರ ಉದಯವಾದ ರಾಜಮನೆತನಗಳಲ್ಲಿ ವಾಕಾಟಕ ರಾಜಮನೆತನವು ಬಲಾಢ್ಯವಾಗಿತ್ತು. ವಾಕಾಟಕ ರಾಜಮನೆತನದ ಸಂಸ್ಥಾಪಕನ ಹೆಸರು ವಿಂಧ್ಯಶಕ್ತಿ. ವಿಂಧ್ಯಶಕ್ತಿಯ ನಂತರ ಮೊದಲನೆಯ ಪ್ರವರಸೇನನು ರಾಜನಾದನು. ಪ್ರವರಸೇನನ ನಂತರ ವಾಕಾಟಕರ ರಾಜ್ಯವು ವಿಭಿಜಿಸಲ್ಪಟ್ಟಿತು. ಅದರಲ್ಲಿ ಎರಡು ಪ್ರಮುಖ ಶಾಖೆಗಳಿದ್ದವು. ಮೊದಲನೆಯ ಶಾಖೆಯ ರಾಜಧಾನಿ ನಂದೀವರ್ಧನ (ನಾಗಪೂರ ಹತ್ತಿರ) ಎಂಬಲ್ಲಿ ಇತ್ತು. ಎರಡನೆಯ ಶಾಖೆಯ ರಾಜಧಾನಿ ವತ್ಸಗುಲ್ಮ ಎಂದರೆ ಈಗಿನ ವಾಶೀಮ (ಜಿಲ್ಲಾ- ವಾಶೀಮ) ಎಂಬಲ್ಲಿ ಇತ್ತು. ವಿಂಧ್ಯಶಕ್ತಿಯ ಮಗನಾದ ಮೊದಲನೆಯ ಪ್ರವರಸೇನನು ವಾಕಾಟಕ ಸಾಮ್ರಾಜ್ಯದ ವಿಸ್ತಾರ ಮಾಡಿದನು. ಅವನ ಆಳ್ವಿಕೆಯಲ್ಲಿ ವಾಕಾಟಕರ ಸಾಮ್ರಾಜ್ಯವು ಉತ್ತರಕ್ಕೆ ಮಾಳವಾ ಹಾಗೂ ಗುಜರಾತದಿಂದ ಹಿಡಿದು ದಕ್ಷಿಣಕ್ಕೆ ಕೊಲ್ಹಾಪೂರದ ವರೆಗೆ ಹಬ್ಬಿತ್ತು. ಆ ಕಾಲದಲ್ಲಿ ಕೊಲ್ಹಾಪೂರದ ಹೆಸರು 'ಕುಂತಲ' ಎಂದು ಇತ್ತು. ಗುಪ್ತ ಸಾಮ್ರಾಟ ಎರಡನೆಯ ಚಂದ್ರಗುಪ್ತನ ಮಗಳು ಪ್ರಭಾವತಿ ಇವಳ ವಿವಾಹವು ವಾಕಾಟಕ ರಾಜನಾದ ಎರಡನೆಯ ರುದ್ರಸೇನನ ಜೊತೆ ಆಗಿತ್ತೆಂಬುದನ್ನು ನಾವು ಈ ಮೊದಲೇ ತಿಳಿದಿದ್ದೇವೆ. ವಾಕಾಟಕ ರಾಜನಾದ ಹರಿಷೇಣನ ಆಸ್ಥಾನದಲ್ಲಿ ವರಾಹದೇವ ಎಂಬ ಹೆಸರಿನ ಮಂತ್ರಿ ಇದ್ದನು. ಅವನು ಬೌದ್ಧ ಧರ್ಮದ ಅನುಯಾಯಿಯಾಗಿದ್ದನು. ಅಜಂತಾದಲ್ಲಿಯ ೧೬ನೇ ಅನುಕ್ರಮ ಸಂಖ್ಯೆಯ ಗುಹೆಯನ್ನು



**ಅಜಂತಾದಲ್ಲಿಯ ಒಂದು ಗುಹೆ**

ಅವನು ಕೊರೆಯಿಸಿದ್ದನು. ಅಜಂತಾದ ಇತರ ಕೆಲವು ಗುಹೆಗಳಲ್ಲಿಯ ಅಗೆಯುವ ಕಾರ್ಯ ಅದರಂತೆ ಆ ಗುಹೆಗಳನ್ನು ಚಿತ್ರಗಳಿಂದ ಸುಶೋಭಿತಗೊಳಿಸುವ ಕಾರ್ಯವು ಹರಿಷೇಣನ ಆಡಳಿತಾವಧಿಯಲ್ಲಿ ಆಯಿತು. ವಾಕಾಟಕ ರಾಜನಾದ ಎರಡನೆಯ ಪ್ರವರಸೇನ ಇವನು



**ಅಜಂತಾದಲ್ಲಿಯ ಬೋಧಿಸತ್ವ ಪದ್ಮಪಾಣಿ**

‘ಮಹಾರಾಷ್ಟ್ರೀ’. ಎಂಬ ಪ್ರಾಕೃತ ಭಾಷೆಯಲ್ಲಿ ‘ಸೇತುಬಂಧ’ ಎಂಬ ಗ್ರಂಥವನ್ನು ರಚಿಸಿದನು. ಅಲ್ಲದೆ ಕಾಳಿದಾಸನ ‘ಮೇಘದೂತ’ ಎಂಬ ಕಾವ್ಯವೂ ಇದೇ ಕಾಲದಲ್ಲಿಯದಾಗಿದೆ.

### ೯.೪ ಚಾಲುಕ್ಯ ರಾಜಮನೆತನ

ಕರ್ನಾಟಕದಲ್ಲಿಯ ಚಾಲುಕ್ಯ ರಾಜಮನೆತನದ ಆಡಳಿತವು ಬಲಶಾಲಿಯಾಗಿತ್ತು. ವಾಕಾಟಕರ ನಂತರ ಪ್ರಬಲವಾದ ಆಡಳಿತಗಳಲ್ಲಿ ಕದಂಬ, ಕಲಚೂರಿ ಮುಂತಾದ ಆಡಳಿತಗಳ ಸಮಾವೇಶವಾಗಿತ್ತು. ಅವರೆಲ್ಲರ ಮೇಲೆ ಚಾಲುಕ್ಯ ರಾಜರು ವರ್ಚಸ್ಸನ್ನು ಪ್ರಸ್ಥಾಪಿಸಿದರು. ಒಂದನೆಯ ಪುಲಿಕೇಶಿಯು ಕ್ರಿಸ್ತಶಕ ಆರನೆಯ ಶತಮಾನದಲ್ಲಿ ಚಾಲುಕ್ಯರ ರಾಜ್ಯವನ್ನು ಸ್ಥಾಪಿಸಿದನು. ಕರ್ನಾಟಕದಲ್ಲಿಯ ಬಾದಾಮಿಯು ಅವನ ರಾಜಧಾನಿಯಾಗಿತ್ತು. ಬಾದಾಮಿಯ ಪ್ರಾಚೀನ ಹೆಸರು ‘ವಾತಾಪಿ’ ಯಾಗಿತ್ತು. ಚಾಲುಕ್ಯರ ರಾಜನಾದ ಎರಡನೆಯ ಪುಲಿಕೇಶಿಯು ಸಾಮ್ರಾಟ ಹರ್ಷವರ್ಧನನ ಆಕ್ರಮಣವನ್ನು ಹಿಮ್ಮೆಟ್ಟಿಸಿದ್ದನು. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿಯ ಪ್ರಸಿದ್ಧ ದೇವಾಲಯಗಳು ಚಾಲುಕ್ಯ ರಾಜರ ಕಾಲದಲ್ಲಿ ಕಟ್ಟಲ್ಪಟ್ಟವು.



ಪಟ್ಟದಕಲ್ಲಿನಲ್ಲಿರುವ ದೇವಾಲಯ

### ೯.೫ ಪಲ್ಲವ ರಾಜಮನೆತನ

ಪಲ್ಲವ ರಾಜಪ್ರಭುತ್ವವು ದಕ್ಷಿಣ ಭಾರತದಲ್ಲಿಯ ಒಂದು ಪ್ರಬಲ ರಾಜಪ್ರಭುತ್ವವಾಗಿತ್ತು. ತಮಿಳುನಾಡಿನಲ್ಲಿಯ



ಮಹಾಬಲಿಪುರಂ ನಲ್ಲಿಯ ರಥ ಮಂದಿರಗಳು

ಕಾಂಚಿಪುರಂ ಇದು ಅವರ ರಾಜಧಾನಿಯಾಗಿತ್ತು. ಮಹೇಂದ್ರವರ್ಮನ ಇವನು ಕರ್ತವ್ಯದಕ್ಷ ಪಲ್ಲವ ರಾಜನಾಗಿದ್ದನು. ಅವನು ಪಲ್ಲವ ರಾಜ್ಯದ ವಿಸ್ತಾರ ಮಾಡಿದನು. ಅವನು ಸ್ವತ: ನಾಟಕಕಾರನಾಗಿದ್ದನು. ಮಹೇಂದ್ರವರ್ಮನನ ಮಗ ನರಸಿಂಹವರ್ಮನನು ಚಾಲುಕ್ಯರ ರಾಜನಾದ ಎರಡನೆಯ ಪುಲಿಕೇಶಿಯ ಆಕ್ರಮಣವನ್ನು ಹಿಮ್ಮೆಟ್ಟಿಸಿದನು. ಅವನ ಆಡಳಿತದ ಕಾಲದಲ್ಲಿ ಮಹಾಬಲಿಪುರಂ ನಲ್ಲಿಯ ರಥ ಮಂದಿರಗಳು ಕೊರೆಯಲ್ಪಟ್ಟವು. ಈ ರಥ ಮಂದಿರಗಳನ್ನು ಅಖಂಡ ಶಿಲೆಯಲ್ಲಿ ಕೊರೆಯಲಾಗಿದೆ.

ಪಲ್ಲವ ರಾಜರು ನೌಕಾಪಡೆಯು ಪ್ರಬಲ ಹಾಗೂ ಸುಸಜ್ಜಿತವಾಗಿತ್ತು. ಅವರ ಕಾಲದಲ್ಲಿ ಭಾರತವು ಆಗ್ನೇಯ ಏಷ್ಯದ ದೇಶಗಳೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿತ್ತು. ದೇಶಾಂತರ್ಗತ ಮತ್ತು ಹೊರ ದೇಶಗಳೊಂದಿಗಿನ ವ್ಯಾಪಾರವು ಊರ್ಜಿತಾವಸ್ಥೆಯಲ್ಲಿತ್ತು. ಯುವಾನ ಚ್ವಾಂಗನು ಕಾಂಚಿಗೆ ಭೇಟಿ ನೀಡಿದ್ದನು. ಅವರ ರಾಜ್ಯದಲ್ಲಿ ಸರ್ವಧರ್ಮೀಯರನ್ನು ಸಹಿಷ್ಣುತೆಯಿಂದ ಹಾಗೂ ನ್ಯಾಯಯುತವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಎಂದು ಅವನು ಹೇಳಿದ್ದಾನೆ.

### ೯.೬ ರಾಷ್ಟ್ರಕೂಟ ರಾಜಮನೆತನ

ರಾಷ್ಟ್ರಕೂಟ ರಾಜಮನೆತನದ ಉತ್ಕರ್ಷದ ಕಾಲದಲ್ಲಿ ಅವರ ರಾಜ್ಯವು ವಿಂಧ್ಯ ಪರ್ವತವನ್ನು ಹಿಡಿದು ದ ಕ್ಷಿಣಕ್ಕೆ ಕನ್ಯಾಕುಮಾರಿಯ ವರೆಗೆ ಹಬ್ಬಿತ್ತು. ದಂತಿದುರ್ಗ ಎಂಬ ರಾಜನು ಅವರ ರಾಜ್ಯವನ್ನು ಮೊಟ್ಟಮೊದಲು ಮಹಾರಾಷ್ಟ್ರದಲ್ಲಿ ಸ್ಥಾಪಿಸಿದನು. ಒಂದನೆಯ ಕೃಷ್ಣರಾಜನು ಎಲ್ಲೋರಾದ ಸುಪ್ರಸಿದ್ಧ ಕೈಲಾಸ ಮಂದಿರವನ್ನು ಕೊರೆಯಿಸಿದನು.

ಇಲ್ಲಿಯ ವರೆಗೆ ನಾವು ಪ್ರಾಚೀನ ಭಾರತದಲ್ಲಿಯ ವಿವಿಧ ರಾಜಕೀಯ ಆಡಳಿತಗಳ ಬಗ್ಗೆ ಮಾಹಿತಿಯನ್ನು ಪಡೆದೆವು. ಮುಂದಿನ ಪಾಠದಲ್ಲಿ ನಾವು ಪ್ರಾಚೀನ ಭಾರತದಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ವಿಷಯವಾಗಿ ಮಾಹಿತಿ ಪಡೆಯೋಣ.



**ಎಲ್ಲೋರಾದ ಕೈಲಾಸ ಗುಹೆಗಳು**

## ನಿಮಗೆ ಗೊತ್ತಿದೆಯೇ ?

**ಪೆರಿಪ್ಲಸ್ ಆಫ್ ದ ಎರಿಥ್ರಿಯನ್ ಸೀ**

ಪೆರಿಪ್ಲಸ್ ಎಂದರೆ ಮಾಹಿತಿ ಪುಸ್ತಕ. ಎರಿಥ್ರಿಯನ್ ಸೀ ಎಂದರೆ ಕೆಂಪು ಸಮುದ್ರ. ಗ್ರೀಕ ಜನತೆಯ ದೃಷ್ಟಿಯಲ್ಲಿ ಹಿಂದೂ ಮಹಾಸಾಗರ ಮತ್ತು ಇರಾಣದ ಆಖಾತ ಇವು ಕೆಂಪು ಸಮುದ್ರದ ಭಾಗವೇ ಆಗಿದ್ದವು. 'ಪೆರಪ್ಲಸ್ ಆಫ್ ದ ಎರಿಥ್ರಿಯನ್ ಸೀ' ಎಂದರೆ ಕೆಂಪು ಸಮುದ್ರದ ಮಾಹಿತಿ ಪುಸ್ತಕ. ಇದು ಸಾಮಾನ್ಯವಾಗಿ ಕ್ರಿಸ್ತಶಕ ಒಂದನೆಯ ಶತಮಾನದಲ್ಲಿಯ ಪುಸ್ತಕವಾಗಿದೆ. ಈ ಪುಸ್ತಕವನ್ನು ಬರೆದ ನಾವಿಕನು ಇಜಿಪ್ತದ ರಹವಾಸಿಯಾಗಿದ್ದನು. ಭಾರತದ ಸಮುದ್ರತೀರ, ಇರಾಣದ ಆಖಾತ ಹಾಗೂ ಈಜಿಪ್ಟ್ ಈ ಪ್ರದೇಶಗಳ ಮಧ್ಯದಲ್ಲಿ ನಡೆಯುವ ವ್ಯಾಪಾರದ ಮಾಹಿತಿ ಪೆರಿಪ್ಲಸ್‌ದಲ್ಲಿ ದೊರೆಯುತ್ತದೆ. ಬ್ಯಾರಿಗಾಝಾ ಅಂದರೆ ಭಡೋಚ್, ನಾಲಾ- ಸೋಪಾರಾ, ಕಲ್ಯಾಣ, ಮುಝಿರೀಸ್ ಇತ್ಯಾದಿ ಭಾರತೀಯ ಬಂದರಗಳ ಉಲ್ಲೇಖವು ಪೆರಿಪ್ಲಸ್‌ದಲ್ಲಿ ಇದೆ. ಮುಝಿರೀಸ್ ಇದು ಕೇರಳದಲ್ಲಿಯ ಕೋಚಿನದ ಹತ್ತಿರದಲ್ಲಿರುವ ಪ್ರಾಚೀನ ಬಂದರವಾಗಿತ್ತು. ಇಂದು ಅದು ಅಸ್ತಿತ್ವದಲ್ಲಿಲ್ಲ.

## ಅಭ್ಯಾಸ

೧. **ಗುರುತಿಸಿರಿ ನೋಡೋಣ.**

(೧) ಸಾತವಾಹನ ರಾಜರು ತಮ್ಮ ಹೆಸರಿನ ಮೊದಲು ಯಾರ ಹೆಸರನ್ನು ಬರೆಯುತ್ತಿದ್ದರು -

(೨) ಕೊಲ್ಹಾಪೂರದ ಪ್ರಾಚೀನ ಕಾಲದಲ್ಲಿಯ ಹೆಸರು -

೨. **ಪಾಠದಲ್ಲಿಯ ನಕಾಶೆಯ ನಿರೀಕ್ಷಣೆ ಮಾಡಿ ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಪಲ್ಲವ | ಕಾಂಚಿ |
|---|---|
| ---- | ಐಹೊಳೆ, ಬಾದಾಮಿ, ಪಟ್ಟದಕಲ್ಲು |
| ಸಾತವಾಹನ | ---- |

೩. **ಕೆಳಗಿನ ರಾಜಪ್ರಭುತ್ವ ಹಾಗೂ ರಾಜಧಾನಿ ಇವುಗಳನ್ನು ವರ್ಗೀಕರಿಸಿರಿ. ಸಾತವಾಹನ, ಪಾಂಡ್ಯ, ಚಾಲುಕ್ಯ, ವಾಕಾಟಕ, ಪಲ್ಲವ ಮದುರಾಯಿ, ಪ್ರತಿಷ್ಠಾನ, ಕಾಂಚೀಪುರಂ, ವಾತಾಪಿ.**

| ಅ.ಕ್ರ. | ರಾಜ ಪ್ರಭುತ್ವ | ರಾಜಧಾನಿ |
|---|---|---|
| ೧. | | |
| ೨. | | |
| ೩. | | |
| ೪. | | |

೪. **ಪಾಠದಲ್ಲಿಯ ಯಾವುದೇ ಮೂರು ಚಿತ್ರಗಳ ನಿರೀಕ್ಷಣೆ ಮಾಡಿ ನಿಮಗೆ ದೊರೆಯುವ ಮಾಹಿತಿಯನ್ನು ನಿಮ್ಮ ಶಬ್ದಗಳಲ್ಲಿ ಬರೆಯಿರಿ.**

೫. **ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ದಕ್ಷಿಣದಲ್ಲಿಯ ಪ್ರಾಚೀನ ರಾಜಪ್ರಭುತ್ವಗಳು ಯಾವವು?

(೨) ಮೌರ್ಯ ಸಾಮ್ರಾಜ್ಯದ ಅವನತಿಯ ನಂತರ ಯಾವ ಪ್ರದೇಶಗಳಲ್ಲಿಯ ಸ್ಥಳೀಯ ರಾಜರು ಸ್ವತಂತ್ರರಾದರು?

೬. **ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(೧) ಮಹೇಂದ್ರವರ್ಮನನ ಕಾರ್ಯಗಳನ್ನು ಬರೆಯಿರಿ.

(೨) ತ್ರಿಸಮುದ್ರತೋಯಪೀತವಾಹನ ಎಂದರೇನು? ಸ್ಪಷ್ಟಪಡಿಸಿರಿ.

(೩) ಮುಝಿರೀಸ್ ಬಂದರದ ಮೂಲಕ ಯಾವ ವಸ್ತುಗಳು ನಿರ್ಯಾತವಾಗುತ್ತಿದ್ದವು?

**ಉಪಕ್ರಮ**

ಪಾಠದಲ್ಲಿ ಬಂದ ಚಿತ್ರಗಳನ್ನು ಸಂಗ್ರಹಿಸಿ ಅವುಗಳನ್ನು ಕುರಿತು ಮಾಹಿತಿಯನ್ನು ದೊರಕಿಸಿರಿ. ಶಾಲೆಯಲ್ಲಿ ಅವುಗಳ ಪ್ರದರ್ಶನವನ್ನು ಏರ್ಪಡಿಸಿರಿ.

* * *

BTSN5X

# ೧೦. ಪ್ರಾಚೀನ ಭಾರತ: ಸಾಂಸ್ಕೃತಿಕ

೧೦.೧ ಭಾಷೆ ಮತ್ತು ಸಾಹಿತ್ಯ
೧೦.೨ ಜನಜೀವನ
೧೦.೩ ವಿಜ್ಞಾನ
೧೦.೪ ಶಿಕ್ಷಣದ ಕೇಂದ್ರಗಳು
೧೦.೫ ವಾಸ್ತುಶಿಲ್ಪ ಮತ್ತು ಕಲೆ

## ೧೦.೧ ಭಾಷೆ ಮತ್ತು ಸಾಹಿತ್ಯ

ಪ್ರಾಚೀನ ಭಾರತದಲ್ಲಿ ಸಾಹಿತ್ಯ ನಿರ್ಮಿತಿಯ ಅಖಂಡ ಪರಂಪರೆ ಇತ್ತು. ಸಂಸ್ಕೃತ, ಅರ್ಧಮಾಗಧಿ, ಪಾಲಿ ಹಾಗೂ ತಮಿಳು ಭಾಷೆಗಳ ಮುಖಾಂತರ ಈ ಸಾಹಿತ್ಯ ನಿರ್ಮಿತಿಯಾಯಿತು. ಅದರಲ್ಲಿ ಧಾರ್ಮಿಕ ಸಾಹಿತ್ಯ, ವ್ಯಾಕರಣ ಗ್ರಂಥ, ಮಹಾಕಾವ್ಯ, ನಾಟಕ, ಕಥಾ ಸಾಹಿತ್ಯ ಇತ್ಯಾದಿ ಅನೇಕ ಪ್ರಕಾರದ ಲೇಖನಗಳ ಸಮಾವೇಶವಾಗುತ್ತದೆ.

**ಸಂಘಮ ಸಾಹಿತ್ಯ :** ಸಂಘಮ ಎಂದರೆ ವಿದ್ವನ್ಮಣಿಗಳಾದ ಸಾಹಿತಿಗಳ ಸಭೆ. ಈ ಸಭೆಗಳಲ್ಲಿ ಸಂಗ್ರಹಿತವಾದ ಸಾಹಿತ್ಯವು 'ಸಂಘಮ ಸಾಹಿತ್ಯ'ವೆಂದು ಗುರುತಿಸಲ್ಪಡುತ್ತದೆ. ಇದು ತಮಿಳು ಭಾಷೆಯಲ್ಲಿಯ ಅತ್ಯಂತ ಪ್ರಾಚೀನ ಸಾಹಿತ್ಯವಾಗಿದೆ. ಈ ಸಾಹಿತ್ಯದಲ್ಲಿ 'ಸಿಲಪ್ಪಧಿಕರಮ್' ಮತ್ತು 'ಮಣಿಮೇಖಲೈ' ಈ ಎರಡು ಮಹಾಕಾವ್ಯಗಳು ಪ್ರಸಿದ್ಧವಾಗಿವೆ. ಸಂಘಮ ಸಾಹಿತ್ಯದಿಂದ ದಕ್ಷಿಣ ಭಾರತದಲ್ಲಿಯ ಪ್ರಾಚೀನ ಕಾಲದ ರಾಜಕೀಯ ಮತ್ತು ಸಾಮಾಜಿಕ ಜೀವನದ ಮಾಹಿತಿ ದೊರೆಯುತ್ತದೆ.

**ಧಾರ್ಮಿಕ ಸಾಹಿತ್ಯ:** ಇದರಲ್ಲಿ ಆಗಮಗ್ರಂಥ, ತಿಪಿಟಕ ಹಾಗೂ ಭಗವದ್ಗೀತೆ ಈ ಗ್ರಂಥಗಳು ಮಹತ್ವದ್ದಾಗಿವೆ.

'ಜೈನ ಆಗಮಗ್ರಂಥ'ಗಳು ಅರ್ಧಮಾಗಧಿ, ಶೌರಸೇನಿ ಮತ್ತು ಮಹಾರಾಷ್ಟ್ರೀ ಮುಂತಾದ ಪ್ರಾಕೃತ ಭಾಷೆಗಳಲ್ಲಿ ಬರೆಯಲ್ಪಟ್ಟಿವೆ. ವರ್ಧಮಾನ ಮಹಾವೀರರ ಉಪದೇಶಗಳನ್ನು ಆಗಮ ಗ್ರಂಥಗಳಲ್ಲಿ ಸಂಗ್ರಹಿಲಾಗಿದೆ. ಮಹಾಪುರಾಣ, ಚರಿತ್ರೆ, ಕತೆ ಇತ್ಯಾದಿ ವಾಙ್ಮಯವು ಅಪಭ್ರಂಶ ಭಾಷೆಯಲ್ಲಿದೆ. ಸಿದ್ಧಸೇನ ದಿವಾಕರನು 'ಸಮ್ಮಯಿಸುತ್ತ' ಎಂಬ ನ್ಯಾಯಶಾಸ್ತ್ರದ ಮೇಲಿನ ಪ್ರಾಕೃತ ಗ್ರಂಥವನ್ನು ಬರೆದನು. ವಿಮಲಸುರಿ ಇವನು 'ಪಉಮಚರಿಯ' ಎಂಬ ಪ್ರಾಕೃತ ಕಾವ್ಯದಲ್ಲಿ ರಾಮಕಥೆಯನ್ನು ಬರೆದಿದ್ದಾನೆ. ಹರಿಭದ್ರಸುರಿಯವರ 'ಸಮರಾಇಚ್ಚಕಹಾ' ಮತ್ತು ಉದ್ಯೋತನಸುರಿಯವರ 'ಕುವಲಯಮಾಲಾಕಹಾ' ಎಂಬ ಗ್ರಂಥಗಳೂ ವಿಶೇಷ ಪ್ರಸಿದ್ಧವಾಗಿವೆ.



**ನಿಮಗೆ ಗೊತ್ತಿದೆಯೇ ?**

ಉತ್ತರ ಭಾರತದಿಂದ ಹಿಡಿದು ಮಹಾರಾಷ್ಟ್ರದ ವರೆಗಿನ ಪ್ರದೇಶಗಳಲ್ಲಿ ಪ್ರಚಲಿತವಾಗಿರುವ ಬಹುತಾಂಶ ಭಾಷೆಗಳು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಿಂದ ವಿಕಸಿತವಾಗಿವೆ ಎಂದು ನಂಬಲಾಗುತ್ತದೆ. ಪ್ರಾಕೃತ ಈ ಶಬ್ದವು 'ಪ್ರಕೃತ' ಶಬ್ದದಿಂದ ರೂಪುಗೊಂಡಿದೆ. ಪ್ರಕೃತ ಎಂದರೆ ನೈಸರ್ಗಿಕ ಪ್ರಾಕೃತ ಭಾಷೆಗಳು ಜನರ ದೈನಂದಿನ ವ್ಯವಹಾರದಲ್ಲಿರುವ ಭಾಷೆಯಾಗಿದ್ದವು. ಪ್ರಾಕೃತ ಭಾಷೆಗಳನ್ನು ಪೈಶಾಚಿ, ಶೌರಸೇನಿ, ಮಾಗಧಿ ಹಾಗೂ ಮಾಹಾರಾಷ್ಟ್ರೀ ಎಂಬ ನಾಲ್ಕು ಗುಂಪುಗಳಲ್ಲಿ ವಿಭಾಗಿಸಲಾಗುತ್ತದೆ. ಮಾಹಾರಾಷ್ಟ್ರೀ ಭಾಷೆಯಿಂದ ಮರಾಠಿ ವಿಕಸಿತವಾಯಿತು. ಈ ರೀತಿ ಪ್ರಾಕೃತ ಭಾಷೆಗಳಿಂದ ಮರಾಠಿ ಯಂತಹ ಆಧುನಿಕ ಭಾಷೆಗಳ ವಿಕಾಸವಾಗುವ ಪ್ರಕ್ರಿಯೆಯಲ್ಲಿ ಈ ಭಾಷೆಗಳ ಮೂಲರೂಪದಲ್ಲಿ ಬದಲಾವಣೆಗಳಾದವು. ಅವುಗಳಿಗೆ 'ಅಪಭ್ರಂಶ ಭಾಷೆಗಳು' ಎನ್ನಲಾಯಿತು. ಅಪಭ್ರಂಶ ಭಾಷೆಗಳಿಂದ ಆಧುನಿಕ ಭಾಷೆಗಳು ವಿಕಸಿತವಾದವು.

ತಿಪಿಟಕದಲ್ಲಿ ಮೂರು ಪಿಟಕಗಳಿವೆ. ಪಿಟಕ ಎಂದರೆ ಪೆಟ್ಟಿಗೆ. ಇಲ್ಲಿ ಅದರ ಅರ್ಥ 'ವಿಭಾಗ' ಎಂದಾಗುತ್ತದೆ. ತಿಪಿಟಕವನ್ನು ಪಾಲಿ ಭಾಷೆಯಲ್ಲಿ ಬರೆಯಲಾಗಿದೆ. ಮೂರು ಬೇರೆ ಬೇರೆ ಪ್ರಕಾರದ ಸಾಹಿತ್ಯ ಇದರಲ್ಲಿ ಇದೆ. ೧. **'ಸುತ್ತಪಿಟಕ'**: ಇದರಲ್ಲಿ ಗೌತಮ ಬುದ್ಧರ ಉಪದೇಶದ ವಚನಗಳನ್ನು ಒಂದುಗೂಡಿಸಲಾಗಿದೆ. ಈ ವಚನಗಳಿಗೆ 'ಸೂಕ್ತಗಳು' ಎನ್ನುತ್ತಾರೆ. ೨. **'ವಿನಯಪಿಟಕ'**: ಇಲ್ಲಿ 'ವಿನಯ' ಈ ಶಬ್ದದ ಅರ್ಥ 'ನಿಯಮ' ಎಂದು ಇದೆ. ಇದರಲ್ಲಿ ಬೌದ್ಧ ಸಂಘದಲ್ಲಿ ಭಿಖ್ಖು ಹಾಗೂ ಭಿಖ್ಖುಣಿ ಇವರು ದೈನಂದಿನ ಜೀವನದಲ್ಲಿ ಹೇಗೆ ವರ್ತಿಸಬೇಕು ಎಂಬುದರ ನಿಯಮಗಳನ್ನು ಕೊಡಲಾಗಿದೆ. ೩. **'ಅಭಿಧಮ್ಮಪಿಟಕ'**: ಇದರಲ್ಲಿ ಬೌದ್ಧ ಧರ್ಮದ ತತ್ವಜ್ಞಾನವನ್ನು ತಿಳಿಸಿ ಹೇಳಲಾಗಿದೆ. ತಿಪಿಟಕದ ಸ್ಪಷ್ಟೀಕರಣವನ್ನು ಮಾಡುವ 'ಅಠ್ಠಕಥಾ' (ಅರ್ಥಕಥಾ) ಎಂಬ ಹೆಸರಿನ ಗ್ರಂಥವು ಪ್ರಸಿದ್ಧವಿದೆ. ವಿದುಷಿಯರು ಸ್ವಂತದ ಅನುಭವಗಳನ್ನು ವಿವರಿಸುವ ಗಾಥಾ ರಚಿಸಿದರು. ಅವುಗಳನ್ನು 'ಥೆರೀಗಾಥಾ' ಎಂಬ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಈ ಗ್ರಂಥವು ಪಾಲೀಭಾಷೆಯಲ್ಲಿ ಇದೆ.

ಹಿಂದೂ ಧರ್ಮದ ಪವಿತ್ರ ಗ್ರಂಥವಾದ 'ಭಗವದ್ಗೀತಾ' ಇದು ಮಹಾಭಾರತದ್ದೇ ಒಂದು ಭಾಗವಾಗಿದೆ. ಪ್ರತಿಫಲದ

ಅಪೇಕ್ಷೆಯನ್ನು ಮಾಡದೇ ಪ್ರತಿಯೊಬ್ಬನು ತನ್ನ ಕರ್ತವ್ಯವನ್ನು ಮಾಡಬೇಕು. ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಪರಮೇಶ್ವರನ ಭಕ್ತಿಯ ಮಾರ್ಗವು ಸರ್ವರಿಗೆ ಮುಕ್ತವಾಗಿದೆ ಎಂದು ಇದರಲ್ಲಿ ಹೇಳಲಾಗಿದೆ.

ಕ್ರಿಸ್ತಶಕ ಎಂಟನೆಯ ಶತಮಾನದಲ್ಲಿ ಆದ್ಯ ಶಂಕರಾಚಾರ್ಯರು ಆಗಿಹೋದರು. ಜ್ಞಾನ ಮತ್ತು ವೈರಾಗ್ಯ ಈ ಸಂಗತಿಗಳಿಗೆ ಅವರು ಮಹತ್ವ ನೀಡಿದರು. 'ಉಪನಿಷತ್ತುಗಳು', 'ಬ್ರಹ್ಮಸೂತ್ರಗಳು' ಹಾಗೂ 'ಭಗವದ್ಗೀತೆ' ಈ ಗ್ರಂಥಗಳಿಗೆ ಅವರು ಭಾಷ್ಯವನ್ನು ಬರೆದು ಅವುಗಳ ಅರ್ಥವನ್ನು ಸ್ಪಷ್ಟಪಡಿಸಿದರು. ಅವರು ಭಾರತದ ನಾಲ್ಕು ದಿಕ್ಕುಗಳಿಗೆ ಬದ್ರಿನಾಥ, ದ್ವಾರಕಾ, ಜಗನ್ನಾಥಪುರಿ ಹಾಗೂ ಶೃಂಗೇರಿ ಎಂಬಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದ್ದಾರೆ.



ಆದ್ಯ ಶಂಕರಾಚಾರ್ಯರು

ಅರ್ಥಶಾಸ್ತ್ರ ಎಂಬ ಗ್ರಂಥವನ್ನು ಕೌಟಿಲ್ಯನು ಬರೆದನು. ಉತ್ತಮ ರಾಜ್ಯಾಡಳಿತ ವ್ಯವಸ್ಥೆ ಹೇಗಿರಬೇಕು ಎಂಬುದರ ಸವಿಸ್ತಾರ ಚರ್ಚೆಯನ್ನು ಅವನು ಈ ಗ್ರಂಥದಲ್ಲಿ ಮಾಡಿದ್ದಾನೆ.

**ವ್ಯಾಕರಣ ಗ್ರಂಥ :** 'ಪಾಣಿನಿ' ಎಂಬ ವೈಯಾಕರಣಿಯು ಬರೆದ 'ಅಷ್ಟಾಧ್ಯಾಯಿ' ಈ ಗ್ರಂಥವನ್ನು ಸಂಸ್ಕೃತ ವ್ಯಾಕರಣದ ಪ್ರಮಾಣ ಗ್ರಂಥವೆಂದು ನಂಬಲಾಗುತ್ತದೆ. ಪತಂಜಲಿಯು 'ಮಹಾಭಾಷ್ಯ' ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ಪಾಣಿನಿಯ 'ಅಷ್ಟಾಧ್ಯಾಯಿ' ಗ್ರಂಥದಲ್ಲಿಯ ಸೂತ್ರಗಳ ಸ್ಪಷ್ಟೀಕರಣ ಮಾಡಲಾಗಿದೆ.



**ನಿಮಗೆ ಗೊತ್ತಿದೆಯೇ ?**

ಅರ್ಥಶಾಸ್ತ್ರ : ಅರ್ಥಶಾಸ್ತ್ರ ಎಂಬ ಗ್ರಂಥವನ್ನು ಕೌಟಿಲ್ಯನು ಬರೆದನು. ಈ ಗ್ರಂಥದಲ್ಲಿ ರಾಜನ ಕರ್ತವ್ಯಗಳು, ಸಚಿವರನ್ನು ಆಯ್ಕೆ ಮಾಡುವ ಮಾನದಂಡ, ಸಂರಕ್ಷಣದ ವ್ಯವಸ್ಥೆ, ದುರ್ಗಗಳ ಪ್ರಕಾರಗಳು, ಸೈನ್ಯದ ರಚನೆ, ಗೂಢಚಾರರ ಯೋಜನೆ, ಖಜಾನೆಯ ಹಾಗೂ ದಾಖಲೆಪತ್ರಗಳ ವ್ಯವಸ್ಥೆ, ನ್ಯಾಯದಾನ ಪದ್ಧತಿ, ಕಳವಿನ ತನಿಖೆ, ಶಿಕ್ಷೆಯ ಪ್ರಕಾರಗಳು ಮುಂತಾದ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

**ಆರ್ಷ ಮತ್ತು ಅಭಿಜಾತ ಮಹಾಕಾವ್ಯಗಳು :** 'ರಾಮಾಯಣ' ಹಾಗೂ 'ಮಹಾಭಾರತ' ಇವೆರಡೂ ಪ್ರಾಚೀನ ಭಾರತದಲ್ಲಿಯ ಆರ್ಷ ಮಹಾಕಾವ್ಯಗಳಾಗಿವೆ. ಆರ್ಷ ಎಂದರೆ ಋಷಿಗಳಿಂದ ರಚಿಸಲ್ಪಟ್ಟದ್ದು. 'ರಾಮಾಯಣ' ಈ ಮಹಾಕಾವ್ಯವನ್ನು 'ವಾಲ್ಮೀಕಿ' ಋಷಿಗಳು ರಚಿಸಿದರು. ರಾಮಾಯಣದ ಕಥೆಯ ನಾಯಕ ಶ್ರೀರಾಮ. 'ಮಹಾಭಾರತ' ಈ ಮಹಾಕಾವ್ಯವನ್ನು ವ್ಯಾಸ ಋಷಿಗಳು ರಚಿಸಿದರು. ಕೌರವರ ಮತ್ತು ಪಾಂಡವರ ನಡುವಿನ ಯುದ್ಧ ಇದು ಮಹಾಭಾರತದ ವಿಷಯವಾಗಿದೆ. ಈ ಮಹಾಕಾವ್ಯದಲ್ಲಿ ಶ್ರೀಕೃಷ್ಣನ ಚರಿತ್ರೆಯ ವರ್ಣನೆಯಿದೆ. ಮಹಾಭಾರತದಲ್ಲಿ ವಿವಿಧ ಮಾನವೀ ಭಾವನೆಗಳ ಹಾಗೂ ಅವುಗಳ ಪರಿಣಾಮಗಳ ವ್ಯಾಪಕ ದರ್ಶನವಾಗುತ್ತದೆ.

ಭಾಷೆ, ಸಾಹಿತ್ಯ ಮತ್ತು ಕಲೆ ಇವುಗಳ ಪರಂಪರೆಯಲ್ಲಿಯ ಯಾವುದೊಂದು ಕಾಲಖಂಡವು ಹೇಗಿರುತ್ತದೆಂದರೆ ಮುಂಬರುವ ಕಾಲದಲ್ಲಿಯೂ ಅದರ ಗೌರವವು ಅಬಾಧಿತವಾಗಿ ಉಳಿಯುತ್ತದೆ. ಇಂಥ ಕಾಲಖಂಡದಲ್ಲಿ ನಿರ್ಮಾಣವಾದ ಸಾಹಿತ್ಯ, ಕಲೆ, ಇತ್ಯಾದಿಗಳು ಅಭಿಜಾತವೆಂದು ಗುರುತಿಸಲ್ಪಡುತ್ತವೆ. ಅಭಿಜಾತ ಸಂಸ್ಕೃತ ಭಾಷೆಯಲ್ಲಿಯ ಕಾಳಿದಾಸನ 'ರಘುವಂಶ' ಹಾಗೂ 'ಕುಮಾರ ಸಂಭವ' ಅದರಂತೆ ಭಾರವಿಯ 'ಕಿರಾತಾರ್ಜುನೀಯ' ಹಾಗೂ ಮಾಘನ 'ಶಿಶುಪಾಲವಧ' ಈ ಪ್ರಾಚೀನ ಕಾಲಖಂಡದಲ್ಲಿಯ ಮಹಾಕಾವ್ಯಗಳು ವಿಖ್ಯಾತವಾಗಿವೆ.

**ನಾಟಕ :** ಗಾಯನ, ವಾದನ ಹಾಗೂ ನೃತ್ಯಗಳ ಆಧಾರದಿಂದ ಯಾವುದೊಂದು ಕಥೆಯನ್ನು ಸಾದರಪಡಿಸುವ ಭಾರತೀಯ ಪರಂಪರೆ ತುಂಬಾ ಪ್ರಾಚೀನವಾಗಿದೆ. ಭರತಮುನಿಗಳು ಬರೆದ 'ನಾಟ್ಯಶಾಸ್ತ್ರ' ಎಂಬ ಗ್ರಂಥದಲ್ಲಿ ಈ ಕಲೆಗಳ ವಿಷಯವಾಗಿ ಸವಿಸ್ತಾರ ಚರ್ಚೆಯನ್ನು ಮಾಡಲಾಗಿದೆ. ಈ ಕಲೆಗಳಿಗೆ ಸಂವಾದವನ್ನು ಸೇರಿಸಿ ಸಾದರಪಡಿಸುವ ಕಲೆಯೇ ನಾಟಕ. ಪ್ರಾಚೀನ ಸಂಸ್ಕೃತ ನಾಟಕಗಳಲ್ಲಿ ಭಾಸ ಎಂಬ ನಾಟಕಕಾರನ

'ಸ್ವಪ್ನವಾಸವದತ್ತ', ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ಗಳಂತಹ ಅನೇಕ ನಾಟಕಗಳು ಸುಪ್ರಸಿದ್ಧವಾಗಿವೆ.

**ಕಥಾಸಾಹಿತ್ಯ :** ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಮನರಂಜನೆಯ ಮೂಲಕ ಶಿಕ್ಷಣವನ್ನು ನೀಡುವ ಸಲುವಾಗಿ ಕಥಾಸಾಹಿತ್ಯದ ಉಪಯೋಗ ಮಾಡಲಾಗುತ್ತಿತ್ತು. ಗುಣಾಢ್ಯರ 'ಪೈಶಾಚಿ' ಭಾಷೆಯಲ್ಲಿಯ 'ಬೃಹತ್‌ಕಥಾ' ಈ ಗ್ರಂಥವು ಪ್ರಸಿದ್ಧವಾಗಿದೆ. ವಿಷ್ಣುಶರ್ಮ ಎಂಬ ಹೆಸರಿನ ವಿದ್ವಾಂಸನು ರಚಿಸಿದ 'ಪಂಚತಂತ್ರ' ಎಂಬ ಗ್ರಂಥವು ಕಥಾಹಿತ್ಯದ ಉತ್ತಮ ಮಾದರಿಯಾಗಿದೆ. ಅನೇಕ ಭಾಷೆಗಳಲ್ಲಿ ಈ ಗ್ರಂಥವನ್ನು ಭಾಷಾಂತರ ಮಾಡಲಾಗಿದೆ. ಬೌದ್ಧ ಜಾತಕ ಕಥೆಗಳೂ ಪ್ರಸಿದ್ಧವಾಗಿವೆ.



**ಮಾಡಿ ನೋಡಿರಿ.**

ಪಂತಂತ್ರದಲ್ಲಿಯ ಯಾವುದೊಂದು ಕಥೆಯನ್ನು ದೊರಕಿಸಿ ಅದರ ನಾಟಕೀಕರಣ ಮಾಡಿರಿ.

## ೧೦.೨ ಜನಜೀವನ

ಪ್ರಾಚೀನ ಭಾರತದಲ್ಲಿಯ ಸಾಹಿತ್ಯದಿಂದ ಆ ಕಾಲದ ಜನಜೀವನದ ಮಾಹಿತಿ ದೊರೆಯುತ್ತದೆ. ಪ್ರಾಚೀನ ಭಾರತದಲ್ಲಿ ದೇಶಾಂತರ್ಗತ ಹಾಗೂ ದೂರದ ದೇಶಗಳೊಂದಿಗಿನ ವ್ಯಾಪಾರದಿಂದಾಗಿ ಎಲ್ಲೆಡೆ ಸಮೃದ್ಧಿ ನೆಲೆಸಿತ್ತು. ಸಮಾಜವು ವಿವಿಧ ಜಾತಿಗಳಲ್ಲಿ ವಿಭಾಗಿಸಲ್ಪಟ್ಟಿತ್ತು. ಬೇರೆ ಬೇರೆ ಕುಶಲಕರ್ಮಿಗಳ ಹಾಗೂ ವ್ಯಾಪಾರಿಗಳ ಸಂಘಟನೆಗಳು ಇದ್ದವು. ಅವುಗಳಿಗೆ 'ಶ್ರೇಣಿ' ಎನ್ನುತ್ತಿದ್ದರು. ಜಲಮಾರ್ಗ ಹಾಗೂ ಭೂಮಾರ್ಗಗಳಿಂದ ವ್ಯಾಪಾರ ನಡೆಯುತ್ತಿತ್ತು. ನುಣುಪಾದ ಬಟ್ಟೆ, ಹಸ್ತಿದಂತ, ಅಮೂಲ್ಯ ರತ್ನಗಳು, ಮಸಾಲೆಯ ಪದಾರ್ಥಗಳು, ಉತ್ಕೃಷ್ಟವಾಗಿ ತಯಾರಿಸಿದ ಮಣ್ಣಿನ ಪಾತ್ರೆಗಳು ಇತ್ಯಾದಿ ಭಾರತೀಯ ವಸ್ತುಗಳಿಗೆ ವಿದೇಶಗಳಲ್ಲಿ ತುಂಬಾ ಬೇಡಿಕೆ ಇರುತ್ತಿತ್ತು. ಅಕ್ಕಿ, ಗೋಧಿ, ಬಾರ್ಲಿ, ಚನ್ನಂಗಿ ಇವು ಮುಖ್ಯ ಬೆಳೆಗಳಾಗಿದ್ದವು. ಜನರ ಆಹಾರದಲ್ಲಿ ಈ ಧಾನ್ಯಗಳಿಂದ ತಯಾರಿಸಿದ ವಿವಿಧ ಪದಾರ್ಥಗಳು ಅದರಂತೆ ಮಾಂಸ, ಮೀನು, ಹಾಲು, ತುಪ್ಪ ಹಾಗೂ ಹಣ್ಣುಗಳ ಸಮಾವೇಶವಿರುತ್ತಿತ್ತು. ಜನರು ಪ್ರಾಮುಖ್ಯವಾಗಿ ನೂಲಿನ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಅದೇ ರೀತಿ ರೇಶ್ಮೆ ಹಾಗೂ ಉಣ್ಣೆಯ ಬಟ್ಟೆಗಳನ್ನೂ ಬಳಸುತ್ತಿದ್ದರು. ಅವು ಸಾಮಾನ್ಯವಾಗಿ ಇಂದಿನ ಧೋತರ, ಉತ್ತರೀಯ, ಮುಂಡಾಸು, ಸೀರೆ ಈ ಪ್ರಕಾರದ ಬಟ್ಟೆಗಳಿದ್ದವು. ಕುಷಾಣರ ಕಾಲದಲ್ಲಿ ಭಾರತೀಯರಿಗೆ ಬಟ್ಟೆ ಹೊಲಿಯುವ ಪದ್ಧತಿಯ ಪರಿಚಯವಾಯಿತು.

## ೧೦.೩ ವಿಜ್ಞಾನ

**ವೈದ್ಯಕೀಯ ಶಾಸ್ತ್ರ:** ಭಾರತೀಯ ವೈದ್ಯಕೀಯ ಶಾಸ್ತ್ರಕ್ಕೆ 'ಆಯುರ್ವೇದ' ಎಂದು ಕರೆಯಲಾಗುತ್ತದೆ. ಆಯುರ್ವೇದಕ್ಕೆ ತುಂಬಾ ಪ್ರಾಚೀನ ಪರಂಪರೆ ಇದೆ. ಆಯುರ್ವೇದದದಲ್ಲಿ ರೋಗದ ಲಕ್ಷಣಗಳು, ರೋಗದ ನಿದಾನ ಹಾಗೂ ರೋಗದ ಮೇಲಿನ ಉಪಚಾರ ಈ ಸಂಗತಿಗಳ ವಿಚಾರ ಮಾಡಲಾಗಿದೆ. ಅದರ ಜೊತೆಗೆ ರೋಗವು ಆಗಬಾರದೆನ್ನುವುದಕ್ಕಾಗಿ ಏನು ಮಾಡಬೇಕು ಎಂಬುದರ ವಿಚಾರವನ್ನೂ ಮಾಡಲಾಗಿದೆ. ಬಿಂಬಿಸಾರನ ಆಸ್ಥಾನದಲ್ಲಿ ಜೀವಕ ಎಂಬ ಪ್ರಸಿದ್ಧ ವೈದ್ಯನಿದ್ದನು. 'ಚರಕ ಸಂಹಿತಾ' ಎಂಬ ಗ್ರಂಥದಲ್ಲಿ ವೈದ್ಯಕೀಯ ಚಿಕಿತ್ಸಾ ಶಾಸ್ತ್ರ ಮತ್ತು ಔಷಧ ಶಾಸ್ತ್ರಗಳ ಸವಿಸ್ತಾರ ಮಾಹಿತಿಯನ್ನು ನೀಡಲಾಗಿದೆ. ಈ ಗ್ರಂಥವನ್ನು ಚರಕನು ಬರೆದಿದ್ದಾನೆ. ಸುಶ್ರುತ ಎಂಬ ಶಸ್ತ್ರಚಿಕಿತ್ಸಕನು ಬರೆದ 'ಸುಶ್ರುತ ಸಂಹಿತಾ' ಎಂಬ ಗ್ರಂಥದಲ್ಲಿ ವಿವಿಧ ರೋಗಗಳ ನಿದಾನ ಮತ್ತು ಅವುಗಳ ಮೇಲಿನ ಉಪಾಯಗಳ ಮಾಹಿತಿ ಇದೆ.ಈ ಗ್ರಂಥದ ವೈಶಿಷ್ಟ್ಯವೇನೆಂದರೆ ಇದರಲ್ಲಿ ವಿವಿಧ ಕಾರಣಗಳಿಂದ ಆಗುವ ಗಾಯಗಳು, ಅಸ್ಥಿಭಂಗ, ಅವುಗಳ ಪ್ರಕಾರಗಳು ಹಾಗೂ ಅವುಗಳ ಮೇಲಿನ ಶಸ್ತ್ರಕ್ರಿಯೆಯ ಪ್ರಕಾರಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಅರಬೀ ಭಾಷೆಯಲ್ಲಿ ಸುಶ್ರುತ ಸಂಹಿತೆಯ ಭಾಷಾಂತರವಾಗಿತ್ತು. ಅದರ ಹೆಸರು 'ಕಿತಾಬ-ಇ-ಸುಸುದ' ಎಂದು ಇತ್ತು. ವಾಗ್ಭಟನು ವೈದ್ಯಕೀಯ ಶಾಸ್ತ್ರದ ಮೇಲೆ ಅನೇಕ ಗ್ರಂಥಗಳನ್ನು ಬರೆದನು. ಅವುಗಳಲ್ಲಿ 'ಅಷ್ಟಾಂಗ ಸಂಗ್ರಹ' ಮತ್ತು 'ಅಷ್ಟಾಂಗ ಹೃದಯ ಸಂಹಿತಾ' ಇವು ಪ್ರಮುಖ ಗ್ರಂಥಗಳಾಗಿವೆ. ಬೌದ್ಧ ಭಿಕ್ಕುವಾದ ಸಿದ್ಧನಾಗಾರ್ಜುನನು ಬರೆದ 'ರಸರತ್ನಾಕರ' ಎಂಬ ಗ್ರಂಥದಲ್ಲಿ ರಸಾಯನಗಳು ಹಾಗೂ ಧಾತುಗಳ ವಿಷಯದ ಮಾಹಿತಿ ಇದೆ.

**ಗಣಿತ ಮತ್ತು ಖಗೋಲಶಾಸ್ತ್ರ :** ಪ್ರಾಚೀನ ಭಾರತೀಯರು ಗಣಿತ ಮತ್ತು ಖಗೋಲಶಾಸ್ತ್ರಗಳ ಆಳವಾದ ಅಭ್ಯಾಸ ಮಾಡಿದರು. ೧ ರಿಂದ ೯ ಹಾಗೂ '೦' (ಸೊನ್ನೆ) ಈ ಅಂಕಿಗಳ ಬಳಕೆಯನ್ನು ಪ್ರಪ್ರಥಮವಾಗಿ ಭಾರತೀಯರು ಮಾಡಿದರು. ಏಕಂ, ದಹಂ,ಹೀಗೆ ಸ್ಥಾನಕ್ಕನುಸಾರವಾಗಿ ಅಂಕಗಳ ಬೆಲೆ ಬದಲಾಗುತ್ತದೆಂಬುದು ಪ್ರಾಚೀನ ಭಾರತೀಯರಿಗೆ ಗೊತ್ತಿತ್ತು. ಆರ್ಯಭಟ್ಟ ಎಂಬ ಶಾಸ್ತ್ರಜ್ಞನು 'ಆರ್ಯಭಟೀಯ' ಎಂಬ ಗ್ರಂಥವನ್ನು ಬರೆದಿದ್ದನು. ಅವನು ಗಣಿತ ಕ್ರಿಯೆಗಳ ಅನೇಕ ಸೂತ್ರಗಳನ್ನು ನೀಡಿದ್ದಾನೆ. ಆರ್ಯಭಟ್ಟನು ಖಗೋಲಶಾಸ್ತ್ರಜ್ಞನೂ ಆಗಿದ್ದನು. ಪೃಥ್ವಿಯು ಸೂರ್ಯನ ಸುತ್ತಲೂ ತಿರುಗುತ್ತದೆ ಎಂದು ಅವನು ಹೇಳಿದನು. ಕ್ರಿಸ್ತಶಕ ಆರನೆಯ ಶತಮಾನದಲ್ಲಿ ಆಗಿಹೋದ ವರಾಹಮಿಹಿರನು 'ಪಂಚಸಿದ್ಧಾಂತಿಕಾ' ಎಂಬ ಗ್ರಂಥವನ್ನು ಬರೆದನು. ಅದರಲ್ಲಿ ಭಾರತೀಯ ಖಗೋಲಶಾಸ್ತ್ರದ ಸಿದ್ಧಾಂತದ ಜೊತೆಗೆ ಗ್ರೀಕ, ರೋಮನ್, ಇಜಿಪ್ತ ಈ ಸಂಸ್ಕೃತಿಗಳಲ್ಲಿಯ ಖಗೋಲಶಾಸ್ತ್ರದ ಸಿದ್ಧಾಂತದ ವಿಚಾರವನ್ನೂ

ಮಾಡಲಾಗಿದೆ. ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಆಗಿಹೋದ ಬ್ರಹ್ಮಗುಪ್ತ ಎಂಬ ಗಣಿತಜ್ಞನು ಬರೆದ ಗ್ರಂಥವನ್ನು ಅರಬೀ ಭಾಷೆಯಲ್ಲಿ ಭಾಷಾಂತರ ಮಾಡಲಾಯಿತು.

**ನಿಮಗೆ ಗೊತ್ತಿದೆಯೇ ?**

**ಕಣಾದ:**

ಕಣಾದನು 'ವೈಶೇಷಿಕ ದರ್ಶನ' ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ಪ್ರಾಮುಖ್ಯವಾಗಿ ಅಣುಪರಮಾಣುಗಳ ವಿಚಾರವನ್ನು ಅವನು ಮಾಡಿದ್ದಾನೆ. ಕಣಾದನ ಅಭಿಪ್ರಾಯದಂತೆ ಈ ವಿಶ್ವವು ಅಸಂಖ್ಯ ವಸ್ತುಗಳಿಂದ ತುಂಬಿದೆ. ಈ ವಸ್ತುಗಳೆಂದರೆ ಅಣುಗಳು ಪಡೆದ ಬೇರೆ ಬೇರೆ ಸ್ವರೂಪ. ಈ ಸ್ವರೂಪಗಳು ಬದಲಾಗುತ್ತವೆ. ಆದರೆ ಅಣು ಮಾತ್ರ ಅಕ್ಷಯವಾಗಿ ಉಳಿಯುತ್ತವೆ.

## ೧೦.೪ ಶೈಕ್ಷಣಿಕ ಕೇಂದ್ರಗಳು

ಪ್ರಾಚೀನ ಭಾರತದಲ್ಲಿ ಅನೇಕ ಉನ್ನತ ಶೈಕ್ಷಣಿಕ ಕೇಂದ್ರಗಳಿದ್ದವು. ಶಿಕ್ಷಣವನ್ನು ಪಡೆಯುವ ಸಲುವಾಗಿ ವಿದೇಶಗಳಿಂದಲೂ ವಿದ್ಯಾರ್ಥಿಗಳು ಇಲ್ಲಿ ಬರುತ್ತಿದ್ದರು.

**ತಕ್ಷಶಿಲಾ ವಿಶ್ವವಿದ್ಯಾಲಯ :** ತಕ್ಷಶಿಲಾ ಇದು ಪ್ರಾಚೀನ ಭಾರತದ ವ್ಯಾಪಾರ ಮಾರ್ಗದಲ್ಲಿಯ ಮಹತ್ವದ ನಗರವಾಗಿತ್ತು. ಈಗ ಈ ಸ್ಥಳವು ಪಾಕಿಸ್ತಾನದಲ್ಲಿದೆ. ಅಲ್ಲಿ ದೊರೆತ ಪುರಾತತ್ವ ಪುರಾವೆಯ ಆಧಾರದಿಂದ ಇದು ಕ್ರಿಸ್ತಶಕ ಪೂರ್ವ ಆರನೆಯ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿರಬಹುದು ಎಂದು ಕಾಣುತ್ತದೆ. ಗೌತಮ ಬುದ್ಧರ ಸಮಾಕಾಲೀನನಾದ ಜೀವಕ ಎಂಬ ಹೆಸರಿನ ವೈದ್ಯನು ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಕಲಿತಿದ್ದನು. ಕ್ರಿ.ಶ.ಪೂ. ನಾಲ್ಕನೆಯ ಶತಮಾನದಲ್ಲಿ ತಕ್ಷಶಿಲಾ ವಿಶ್ವವಿದ್ಯಾಲಯದ ಕೀರ್ತಿಯು ಎಲ್ಲೆಡೆ ಹರಡಿತ್ತು. ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕನಾದ ಚಂದ್ರಗುಪ್ತ ಮೌರ್ಯನ ಶಿಕ್ಷಣವು ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಆಗಿತ್ತು. ವೈಯಾಕರಣಿಯಾದ ಪಾಣಿನಿ, ವೈದ್ಯನಾದ ಚರಕ ಇವರೂ ಕೂಡ ತಕ್ಷಶಿಲಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದರು. ಸಿಕಂದರನ ಜೊತೆ ಬಂದ ಗ್ರೀಕ ಇತಿಹಾಸಕಾರರೂ ಕೂಡ ತಕ್ಷಶಿಲೆಯ ವರ್ಣನೆ ಮಾಡಿದ್ದಾರೆ. ಗ್ರೀಸ್‌ನಲ್ಲಿ ಎಲ್ಲಿಯೂ ಇಂಥ ವಿಶ್ವ ವಿದ್ಯಾಲಯವು ಅಸ್ತಿತ್ವದಲ್ಲಿರಲಿಲ್ಲ, ಎಂದು ಅವನು ಬರೆದಿಟ್ಟಿದ್ದಾನೆ. ಚೀನಾದ ಬೌದ್ಧ ಭಿಖ್ಖು ಫಾಹಿಯಾನನು ಕ್ರಿ.ಶ. ೪೦೦ರ ಸುಮಾರು ಭಾರತಕ್ಕೆ ಬಂದಿದ್ದನು. ಈ ಸಮಯದಲ್ಲಿ ಅವನು ತಕ್ಷಶಿಲಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದನು. ಈ ವಿಶ್ವವಿದ್ಯಾಲಯದಲ್ಲಿ ವೈದಿಕ ವಾಙ್ಮಯ, ಬೌದ್ಧ ತತ್ವಜ್ಞಾನ, ಅರ್ಥಶಾಸ್ತ್ರ, ತರ್ಕಶಾಸ್ತ್ರ ಇತ್ಯಾದಿ ವಿವಿಧ ವಿಷಯಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು.

**ವಾರಾಣಸಿ :** ವರಣಾ ಮತ್ತು ಅಸಿ ಇವು ಗಂಗಾನದಿಯ ಎರಡು ಉಪನದಿಗಳಾಗಿವೆ.ಈ ಎರಡು ನದಿಗಳ ನಡುವೆ ನೆಲೆಗೊಂಡ ನಗರಕ್ಕೆ ವಾರಾಣಸಿ ಎಂಬ ಹೆಸರು ದೊರಕಿತು. ವಾರಾಣಸಿಯಲ್ಲಿ ವೇದಗಳ ಆದರಂತೆ ಜೈನ ಮತ್ತು ಬೌದ್ಧ ತತ್ವಜ್ಞಾನಗಳ ಶಿಕ್ಷಣವನ್ನು ನೀಡುವ ಕೇಂದ್ರಗಳು ಪ್ರಾಚೀನ ಕಾಲದಿಂದಲೂ ಇದ್ದವು.

**ವಲಭಿ :** ಗುಜರಾತದ ಸೌರಾಷ್ಟ್ರದಲ್ಲಿ ವಲಭಿ ಎಂಬ ಹೆಸರಿನ ಪ್ರಾಚೀನ ನಗರವಿತ್ತು. ಕ್ರಿಸ್ತಶಕ ಐದರಿಂದ ಎಂಟನೆಯ ಶತಮಾನದ ವರೆಗೆ ಅದು ಜೈನ ಮತ್ತು ಬೌದ್ಧ ತತ್ವಜ್ಞಾನದ ಶಿಕ್ಷಣದ ಮಹತ್ವದ ಕೇಂದ್ರವಾಗಿತ್ತು. ಯುವಾನ್ ಚ್ವಾಂಗ ಹಾಗೂ ಇತ್ಸಿಂಗ ಈ ಚೀನಿ ಬೌದ್ಧ ಬಿಕ್ಕುಗಳು ಸಲಭಿಗೆ ಭೇಟಿ ನೀಡಿದ್ದರು.

**ನಾಲಂದಾ ವಿಶ್ವವಿದ್ಯಾಲಯ:** ಇಂದಿನ ಬಿಹಾರದಲ್ಲಿಯ ಪಾಟಣಾ ನಗರದ ಹತ್ತಿರ ಪ್ರಾಚೀನ ನಾಲಂದಾ ವಿಶ್ವವಿದ್ಯಾಲಯದ ಅವಶೇಷಗಳಿವೆ. ಸಾಮ್ರಾಟ ಹರ್ಷವರ್ಧನನು ಈ ವಿಶ್ವವಿದ್ಯಾಲಯಕ್ಕೆ ಉದಾರಹಸ್ತದಿಂದ ದೇಣಿಗೆಗಳನ್ನು ನೀಡಿದ್ದನು. ಯುವಾನ್ ಚ್ವಾಂಗ ಹಾಗೂ ಇತ್ಸಿಂಗ ಇವರು ಮಾಡಿದ ವರ್ಣನೆಯ ಪ್ರಕಾರ ನಾಲಂದಾ ವಿಶ್ವವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳ ವಸತಿಯ ಸೌಕರ್ಯವಿತ್ತು. ಅಲ್ಲಿಯ ಗ್ರಂಥಾಲಯದಲ್ಲಿ ಸಾವಿರಾರು ಗ್ರಂಥಗಳಿದ್ದವು. ವಿಶ್ವವಿದ್ಯಾಲಯದಲ್ಲಿ ಪ್ರವೇಶವನ್ನು ಪಡೆಯುವ ಸಲುವಾಗಿ ವಿದ್ಯಾರ್ಥಿಗಳು ಪ್ರವೇಶದ್ವಾರದ ಹತ್ತಿರ ಪರೀಕ್ಷೆ ಕೊಡಬೇಕಾಗುತ್ತಿತ್ತು.




ನಾಲಂದಾ ಮಹಾವಿಹಾರದ ಮುದ್ರೆ

**ವಿಕ್ರಮಶಿಲಾ ವಿಶ್ವವಿದ್ಯಾಲಯ :** ವಿಕ್ರಮಶಿಲಾ ವಿಶ್ವವಿದ್ಯಾಲಯವು ಇಂದಿನ ಬಿಹಾರದಲ್ಲಿಯ ಭಾಗಲಪೂರ

ಹತ್ತಿರ ಇತ್ತು. ಕ್ರಿಸ್ತಶಕ ಎಂಟನೆಯ ಶತಮಾನದಲ್ಲಿ ಧರ್ಮಪಾಲ ಎಂಬ ರಾಜನು ಅದರ ಸ್ಥಾಪನೆ ಮಾಡಿದನು. ಅಲ್ಲಿ ಆರು ವಿಹಾರಗಳಿದ್ದವು. ಪ್ರತಿಯೊಂದು ವಿಹಾರದ ಪ್ರವೇಶದ್ವಾರವು ಸ್ವತಂತ್ರವಾಗಿತ್ತು.

**ಕಾಂಚಿ :** ಪಲ್ಲವ ರಾಜಮನೆತನದ ಕಾಲದಲ್ಲಿ (ಕ್ರಿ.ಶ. ೬ನೆಯ ಶತಮಾನ) ಇಂದಿನ ತಮಿಳುನಾಡಿನಲ್ಲಿಯ ಕಾಂಚಿ ನಗರವು ಮಹತ್ವದ ಶೈಕ್ಷಣಿಕ ಕೇಂದ್ರವಾಗಿತ್ತು. ಅಲ್ಲಿ ವೈದಿಕ, ಜೈನ ಹಾಗೂ ಬೌದ್ಧ ಗ್ರಂಥಗಳ ಅಧ್ಯಯನ ಹಾಗೂ ಅಧ್ಯಾಪನ ಮಾಡಲಾಗುತ್ತಿತ್ತು.



ಸಾಂಚಿ ಸ್ತೂಪ

## ೧೦.೫ ವಾಸ್ತುಶಿಲ್ಪ ಮತ್ತು ಕಲೆ :

ಮೌರ್ಯ ಮತ್ತು ಗುಪ್ತ ಕಾಲದಲ್ಲಿ ಭಾರತೀಯ ವಾಸ್ತುಶಿಲ್ಪ ಕಲೆಯ ವಿಕಾಸವಾಯಿತು. ಅಲ್ಲದೆ ಅದು ಊರ್ಜಿತಾವಸ್ಥೆಯನ್ನು ತಲುಪಿತು. ಸಾಮ್ರಾಟ ಅಶೋಕನು ಅಲ್ಲಲ್ಲಿ ನಿಲ್ಲಿಸಿದ ಕಲ್ಲಿನ ಸ್ತಂಭಗಳು ಭಾರತೀಯ ಶಿಲ್ಪಕಲೆಯ ಉತ್ತಮ ಉದಾಹರಣೆಗಳಾಗಿವೆ. ಸಾಂಚಿ ಎಂಬಲ್ಲಿಯ ಸ್ತೂಪ ಹಾಗೂ (ಉದಯಗಿರಿ, ಖಂಡಗಿರಿ) ಕಾರ್ಲೆ, ನಾಶಿಕ, ಅಜಂತಾ, ಎಲ್ಲೋರಾ ಇತ್ಯಾದಿ ಸ್ಥಳಗಳಲ್ಲಿಯ ಗುಹೆಗಳಿಂದ ಅದೇ ಪರಂಪರೆಯು ಅಧಿಕಾಧಿಕ ವಿಕಸಿತವಾಗುತ್ತ ಹೋಯಿತು ಎಂಬುದು ಕಾಣುತ್ತದೆ. ಗುಪ್ತಕಾಲದಲ್ಲಿ ಭಾರತೀಯ ಮೂರ್ತಿ ಕಲೆಯ ವಿಕಾಸವಾಯಿತು. ದಕ್ಷಿಣ ಭಾರತದಲ್ಲಿ ಚಾಲುಕ್ಯ ಮತ್ತು ಪಲ್ಲವರ ರಾಜ್ಯಾಡಳಿತೆಯ ಕಾಲದಲ್ಲಿ ಮಂದಿರ ವಾಸ್ತುಶಿಲ್ಪದ ವಿಕಾಸವಾಯಿತು. ಮಹಾಬಲಿಪುರಂನಲ್ಲಿಯ ಮಂದಿರಗಳು ಇದಕ್ಕೆ ಸಾಕ್ಷಿಯಾಗಿವೆ. ಪಲ್ಲವ ರಾಜ್ಯಾಡಳಿತೆಯ ಕಾಲದಲ್ಲಿ ದೇವತೆಗಳ ಕಂಚಿನ ಮೂರ್ತಿಗಳ ನಿರ್ಮಾಣ ಕಾರ್ಯ ಆರಂಭವಾಗಿತ್ತು. ದಿಲ್ಲಿಯ ಹತ್ತಿರವಿರುವ ಮೆಹರೌಲಿ ಎಂಬಲ್ಲಿ ಇರುವ ಗುಪ್ತರಕಾಲದ ಲೋಹಸ್ತಂಭದ ಆಧಾರದಿಂದ ಪ್ರಾಚೀನ ಭಾರತೀಯರ ಲೋಹಶಾಸ್ತ್ರದ ಜ್ಞಾನವು ಎಷ್ಟು ಪ್ರಗತಿಪರವಾಗಿತ್ತೆಂಬುದು ತಿಳಿಯುತ್ತದೆ.

ಪ್ರಾಚೀನ ಭಾರತೀಯ ಸಂಸ್ಕೃತಿಯು ಅತ್ಯಂತ ಸಮೃದ್ಧ ಹಾಗೂ ಪ್ರಗತಿಪರವಾಗಿತ್ತೆಂಬುದನ್ನು ನಾವು ನೋಡಿದೆವು. ಮುಂದಿನ ಪಾಠದಲ್ಲಿ ನಾವು ಜಗತ್ತಿನಲ್ಲಿಯ ಇತರ ಸಂಸ್ಕೃತಿಗಳೊಂದಿಗಿನ ಭಾರತೀಯ ಸಂಸ್ಕೃತಿಯ ಸಂಬಂಧ ಹಾಗೂ ಅದರಿಂದ ಉಂಟಾದ ಪ್ರಭಾವ ಇವುಗಳ ಪರಿಚಯ ಮಾಡಿಕೊಳ್ಳುವವರಿದ್ದೇವೆ.



ನಟರಾಜನ ಕಂಚಿನ ಮೂರ್ತಿ



ಮೆಹರೌಲಿಯಲ್ಲಿಯ ಲೋಹಸ್ತಂಭ

## ಅಭ್ಯಾಸ

೧. **ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**
   (೧) ಪ್ರಾಚೀನ ಭಾರತದಲ್ಲಿಯ ವಿಶ್ವವಿದ್ಯಾಲಯಗಳ ಪಟ್ಟಿ ತಯಾರಿಸಿರಿ.
   (೨) ಯಾವ ಯಾವ ಪ್ರಾಚೀನ ಭಾರತೀಯ ವಸ್ತುಗಳಿಗೆ ದೇಶಗಳಲ್ಲಿ ಬೇಡಿಕೆ ಇರುತ್ತಿತ್ತು ಎಂಬುದರ ಪಟ್ಟಿ ತಯಾರಿಸಿರಿ.

೨. **ಹೆಸರು ಬರೆಯಿರಿ.**
   ಪ್ರಾಚೀನ ಭಾರತದಲ್ಲಿಯ ಮಹಾಕಾವ್ಯಗಳು ............

೩. **ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ತುಂಬಿರಿ.**
   (೧) ರಾಮಾಯಣ ಈ ಮಾಹಾಕಾವ್ಯವನ್ನು ............. ಋಷಿಗಳು ರಚಿಸಿದರು.
   (೨) ಭಾರತೀಯ ವೈದ್ಯಕೀಯ ಶಾಸ್ತ್ರಕ್ಕೆ ............ ಎಂದು ಕರೆಯಲಾಗುತ್ತದೆ.
   (೩) ............. ವಿಶ್ವವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳ ವಸತಿಯ ಸೌಕರ್ಯವಿತ್ತು.

೪. **ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**
   (೧) ತಿಪಿಟಕ ಎಂದರೇನೆಂಬುದನ್ನು ಸ್ಪಷ್ಟಪಡಿಸಿರಿ.
   (೨) ಭಗವದ್ಗೀತೆಯಲ್ಲಿ ಯಾವ ಸಂದೇಶವನ್ನು ನೀಡಲಾಗಿದೆ?
   (೩) ಆಯುರ್ವೇದದಲ್ಲಿ ಯಾವ ಸಂಗತಿಗಳ ವಿಚಾರ ಮಾಡಲಾಗಿದೆ ?
   (೪) ಸಂಘಮ ಸಾಹಿತ್ಯ ಎಂದರೇನು ?

೫. **ಚರ್ಚೆ ಮಾಡಿರಿ :**
   ಮೌರ್ಯ ಹಾಗೂ ಗುಪ್ತ ಕಾಲದಲ್ಲಿಯ ವಾಸ್ತುಶಿಲ್ಪ ಮತ್ತು ಕಲೆ.

೬. **ನೀವು ಏನು ಮಾಡಬಲ್ಲಿರಿ ?**
   (೧) ಆಯುರ್ವೇದದ ಉಪಚಾರ ಈ ವಿಷಯದ ಮಾಹಿತಿ ಸಂಗ್ರಹಿಸಿ ನೀವು ನಿಮ್ಮ ದೈನಂದಿನ ಜೀವನದಲ್ಲಿ ಅದರ ಉಪಯೋಗವನ್ನು ಹೇಗೆ ಮಾಡುವಿರಿ ?
   (೨) ನಿಮ್ಮ ಪಠ್ಯಪುಸ್ತಕದಲ್ಲಿಯ ಸಾಂಚಿಸ್ತೂಪವನ್ನು ನಿರೀಕ್ಷಿಸಿರಿ ಮತ್ತು ಅದಕ್ಕೆ ಸಂಬಂಧಿತವಾದ ಹೆಚ್ಚಿನ ಮಾಹಿತಿಯನ್ನು ಪಡೆಯಿರಿ.

೭. **ಕೆಳಗಿನ ಪ್ರಸಂಗದಲ್ಲಿ ನೀವು ಏನು ಮಾಡುವಿರಿ ?**
   **ನೀವು ಪ್ರವಾಸಕ್ಕೆ ಹೋದಾಗ ನಿಮ್ಮ ಗೆಳೆಯನು/ಗೆಳತಿಯು ಅಲ್ಲಿಯ ಐತಿಹಾಸಿಕ ಸ್ಮಾರಕದ ಮೇಲೆ ತನ್ನ ಹೆಸರನ್ನು ಬರೆಯುತ್ತಿದ್ದಾನೆ/ಬರೆಯುತ್ತಿದ್ದಾಳೆ.**

**ಉಪಕ್ರಮ**
   (೧) ನಿಮ್ಮ ಪರಿಸರದಲ್ಲಿ ಯಾವ ಯಾವ ವೈಶಿಷ್ಟ್ಯಪೂರ್ಣ ಕಟ್ಟಡಗಳಿವೆಯೆಂಬುದರ ವಿಷಯದ ಮಾಹಿತಿಯನ್ನು ಮನೆಯಲ್ಲಿಯ ವ್ಯಕ್ತಿಗಳಿಂದ ತಿಳಿದುಕೊಳ್ಳಿರಿ.
   (೨) ನಿಮ್ಮ ಹತ್ತಿರದ ಪರಿಸರದಲ್ಲಿಯ ಐತಿಹಾಸಿಕ ಸ್ಮಾರಕಗಳಿಗೆ, ಕಟ್ಟಡಗಳಿಗೆ ಭೇಟಿ ನೀಡಿ ಅದರಿಂದ ನಿಮಗೆ ಯಾವ ಇತಿಹಾಸ ತಿಳಿಯುತ್ತದೆಂಬುದನ್ನು ಬರೆದಿಡಿರಿ.

* * *



ನಾಶಿಕದಲ್ಲಿಯ ಗುಹೆಗಳು

BU2J7K

# ೧೧. ಪ್ರಾಚೀನ ಭಾರತ ಮತ್ತು ಜಗತ್ತು

**೧೧.೧ ಭಾರತ ಮತ್ತು ಪಾಶ್ಚಾತ್ಯ ದೇಶಗಳು**
**೧೧.೨ ಭಾರತ ಮತ್ತು ಏಷ್ಯ ಖಂಡದ ಇತರ ದೇಶಗಳು**

## ೧೧.೧ ಭಾರತ ಮತ್ತು ಪಾಶ್ಚಾತ್ಯ ದೇಶಗಳು

ಹರಪ್ಪಾ ಸಂಸ್ಕೃತಿಯ ಜನರು ಪಾಶ್ಚಾತ್ಯ ದೇಶಗಳೊಂದಿಗೆ ವ್ಯಾಪಾರಿ ಸಂಬಂಧವನ್ನು ಸ್ಥಾಪಿಸಿದ್ದರು. ಆಗಿನಿಂದಲೇ ಬಾಹ್ಯ ಜಗತ್ತಿನ ಜೊತೆಗೆ ಭಾರತದ ಆರ್ಥಿಕ ಮತ್ತು ಸಾಂಸ್ಕೃತಿಕ ಕೊಡು ಕೊಳ್ಳುವಿಕೆ ನಡೆದಿತ್ತು. ಅಫಗಾನಿಸ್ತಾನ ಮತ್ತು ಮಧ್ಯ ಏಷ್ಯದಲ್ಲಿಯ ಅನೇಕ ದೇಶಗಳಲ್ಲಿ ಬೌದ್ಧ ಧರ್ಮದ ಪ್ರಸಾರವಾಗಿತ್ತು. ಇರಾಣ ಸಾಮ್ರಾಜ್ಯದ ಕಾಲದಲ್ಲಿಯೂ ಪಶ್ಚಿಮದ ಕಡೆಯ ದೇಶಗಳೊಡನೆ ಭಾರತದ ಸಂಬಂಧವು ಬೆಳೆದು ಬಂದಿತ್ತು. ಆ ಕಾಲದ ಗ್ರೀಕ ಇತಿಹಾಸಕಾರರಲ್ಲಿ ಭಾರತದ ಬಗ್ಗೆ ಕುತೂಹಲ ಹೆಚ್ಚಿತ್ತು. ಭಾರತದ ವಿಷಯದ ಅವರ ಲೇಖನದಿಂದ ಪಾಶ್ಚಾತ್ಯ ದೇಶಗಳಿಗೆ ಭಾರತದ ಪರಿಚಯವಾಯಿತು. ಮುಂದೆ ಸಿಕಂದರನು ಯಾವ ಮಾರ್ಗದಿಂದ ಭಾರತಕ್ಕೆ ಬಂದನೋ, ಆ ಮಾರ್ಗವು ಭಾರತ ಮತ್ತು ಪಾಶ್ಚಾತ್ಯ ದೇಶಗಳ ನಡುವಿನ ವ್ಯಾಪಾರಕ್ಕಾಗಿ ಮುಕ್ತವಾಯಿತು. ಗ್ರೀಕ ಶಿಲ್ಪಕಲೆಯ ಪ್ರಭಾವದಿಂದ ಕುಶಾಣರ ಕಾಲದಲ್ಲಿ ಭಾರತದಲ್ಲಿ ಒಂದು ಹೊಸ ಕಲಾಶೈಲಿ ಉದಯವಾಯಿತು. ಅದಕ್ಕೆ 'ಗಾಂಧಾರ ಕಲೆ' ಎಂದು ಕರೆಯುತ್ತಾರೆ. ಗಾಂಧಾರ ಕಲಾಶೈಲಿಯಲ್ಲಿ ಪ್ರಾಮುಖ್ಯವಾಗಿ ಗೌತಮ ಬುದ್ಧರ ಮೂರ್ತಿಗಳು ಕೆತ್ತಲ್ಪಟ್ಟವು. ಈ ಮೂರ್ತಿಗಳು ಪ್ರಾಮುಖ್ಯವಾಗಿ ಅಫಗಾನಿಸ್ತಾನದಲ್ಲಿಯ ಗಾಂಧಾರ ಪ್ರದೇಶದಲ್ಲಿ ದೊರೆತವು. ಆದ್ದರಿಂದ ಆ ಶೈಲಿಗೆ 'ಗಾಂಧಾರ ಶೈಲಿ' ಎಂದು ಕರೆಯಲಾಗುತ್ತದೆ. ಈ ಶೈಲಿಯಲ್ಲಿಯ ಮೂರ್ತಿಗಳ ಮುಖಲಕ್ಷಣಗಳು ಗ್ರೀಕ ಮುಖಲಕ್ಷಣಗಳ ಜೊತೆ ಹೋಲಿಕೆಯಾಗುತ್ತವೆ. ಭಾರತದಲ್ಲಿ ಆರಂಭದ ನಾಣ್ಯಗಳು ಕೂಡ ಗ್ರೀಕ ನಾಣ್ಯಗಳನ್ನು ಹೋಲುತ್ತಿದ್ದವು.



**ಪ್ಯಾರಿಸ್‌ನ ಸಂಗ್ರಹಾಲಯದಲ್ಲಿಯ ಗೌತಮ ಬುದ್ಧರ ಮೂರ್ತಿ - ಗಾಂಧಾರಶೈಲಿ**




**ಅಫಗಾನಿಸ್ತಾನದ ಹಡ್ಡಾ ಎಂಬಲ್ಲಿಯ ಸ್ತೂಪದ ಮೇಲಿನ ಗಾಂಧಾರ ಶೈಲಿಯ ಶಿಲ್ಪ, ಗ್ರೀಕ ಜನರ ವೇಷಭೂಷಣ, ಆ್ಯಂಫೋರಾ (ಒಂದು ಪ್ರಕಾರದ ಕೊಡ) ಮತ್ತು ವಾದ್ಯಗಳು**

ಕ್ರಿಸ್ತಶಕ ಒಂದನೆಯ ಹಾಗೂ ಎರಡನೆಯ ಶತಮಾನದ ಕಾಲದಲ್ಲಿ ಭಾರತ ಮತ್ತು ರೋಮಗಳ ನಡುವಿನ ವ್ಯಾಪಾರವು ಊರ್ಜಿತಾವಸ್ಥೆಯನ್ನು ತಲುಪಿತ್ತು. ಈ ವ್ಯಾಪಾರದಲ್ಲಿ ದಕ್ಷಿಣ ಭಾರತದಲ್ಲಿಯ ಬಂದರಗಳದ್ದು ಸಿಂಹಪಾಲು. ಮಹಾರಾಷ್ಟ್ರದ ಕೊಲ್ಹಾಪೂರದಲ್ಲಿಯ ಉತ್ಖನನದಲ್ಲಿ ಕಂಚಿನ ಕೆಲವು ವಸ್ತುಗಳು ದೊರಕಿವೆ. ಅವು ರೋಮನ್ ರಚನೆಯ ವಸ್ತುಗಳಾಗಿವೆ.




**ಅರಿಕಾಮೇಡೂ ಎಂಬಲ್ಲಿ ದೊರೆತ ರೋಮನ್ ಸಾಮ್ರಾಟ ಆಗಸ್ಟಸ್‌ನ ಬಂಗಾರದ ನಾಣ್ಯ**

ತಮಿಳುನಾಡಿನಲ್ಲಿಯ ಅರಿಕಾಮೇಡೂ ಎಂಬಲ್ಲಿಯ ಉತ್ಖನನದಲ್ಲಿಯೂ ರೋಮನ್ ರಚನೆಯ ಅನೇಕ ವಸ್ತುಗಳು ದೊರಕಿವೆ. ಎರಡೂ ಸ್ಥಳಗಳು ಭಾರತ ಮತ್ತು ರೋಮಗಳ ನಡುವಿನ ವ್ಯಾಪಾರದ ಮಹತ್ವದ ಕೇಂದ್ರಗಳಾಗಿದ್ದವು. ಇಂಥ ಅನೇಕ ವ್ಯಾಪಾರದ ಕೇಂದ್ರಗಳ ಉಲ್ಲೇಖವು ಆ ಕಾಲದ ಸಾಹಿತ್ಯದಲ್ಲಿ ಸಿಗುತ್ತದೆ. ಈ ವ್ಯಾಪಾರದಲ್ಲಿ ಇಜಿಪ್ಟದಲ್ಲಿಯ




ಅಲೆಕ್ಝಾಂಡ್ರಿಯಾ ಎಂಬ ಬಂದರವು ಮಹತ್ವದ್ದಾಗಿತ್ತು. ಭಾರತೀಯ ಸರಕುಗಳನ್ನು ಅರಬ್ ವ್ಯಾಪಾರಿಗಳು ಅಲೆಕ್ಝಾಂಡ್ರಿಯಾ ವರೆಗೆ ಒಯ್ಯುತ್ತಿದ್ದರು. ಅಲ್ಲಿಂದ ಆ ಸರಕುಗಳನ್ನು ಯುರೋಪಿಯನ್ ದೇಶಗಳಿಗೆ ಕಳುಹಿಸಲಾಗುತ್ತಿತ್ತು. ಅರಬ್ ವ್ಯಾಪಾರಿಗಳು ಭಾರತೀಯ ಸರಕುಗಳ ಜೊತೆ ಭಾರತೀಯ ತತ್ವಜ್ಞಾನ ಹಾಗೂ ವಿಜ್ಞಾನವನ್ನು ಯುರೋಪದ ವರೆಗೆ ಮುಟ್ಟಿಸಿದರು. ಗಣಿತದಲ್ಲಿಯ 'ಸೊನ್ನೆ' ಈ ಕಲ್ಪನೆಯು ಭಾರತವು ಸಂಪೂರ್ಣ ಜಗತ್ತಿಗೆ ನೀಡಿದ ಒಂದು ಮಹಾನ್ ಕೊಡುಗೆಯಾಗಿದೆ. ಅರಬರು ಈ ಕಲ್ಪನೆಯ ಪರಿಚಯವನ್ನು ಯುರೋಪಿಗೆ ಮಾಡಿಕೊಟ್ಟರು.

### ೧೧.೨ ಭಾರತ ಮತ್ತು ಏಷ್ಯ ಖಂಡದ ಇತರ ದೇಶಗಳು

ಏಷ್ಯದಲ್ಲಿಯ ಅನೇಕ ದೇಶಗಳ ಮೇಲೆ ಪ್ರಾಚೀನ ಭಾರತೀಯ ಸಂಸ್ಕೃತಿಯ ವಿಶೇಷ ಪ್ರಭಾವ ಉಂಟಾಗಿತ್ತು.

**ಶ್ರೀಲಂಕಾ :** ಸಾಮ್ರಾಟ ಅಶೋಕನು ತನ್ನ ಮಗನಾದ ಮಹೇಂದ್ರ ಮತ್ತು ಮಗಳಾದ ಸಂಘಮಿತ್ರೆಯರನ್ನು ಬೌದ್ಧ ಧರ್ಮವನ್ನು ಪ್ರಸಾರ ಮಾಡುವುದಕ್ಕಾಗಿ ಶ್ರೀಲಂಕಾಕ್ಕೆ ಕಳುಹಿಸಿದ್ದನು. ಶ್ರೀಲಂಕಾದ ಬೌದ್ಧಗ್ರಂಥ 'ಮಹಾವಂಸ'ದಲ್ಲಿ ಅವರಿಬ್ಬರ ಹೆಸರಿನ ಉಲ್ಲೇಖವಿದೆ. ಸಂಘಮಿತ್ರೆಯು ತನ್ನ ಜೊತೆಗೆ ಬೋಧಿವೃಕ್ಷದ ಶಾಖೆಯನ್ನು ಒಯ್ದಿದ್ದಳು.



ಸಿಗಿರಿಯಾ ಗುಹೆಯಲ್ಲಿಯ ಭಿತ್ತಿಚಿತ್ರ

ಶ್ರೀಲಂಕಾದ ಅನುರಾಧಪೂರ ಎಂಬಲ್ಲಿ ಇರುವ ಬೋಧಿವೃಕ್ಷವು ಇದೇ ಶಾಖೆಯಿಂದ ವೃದ್ಧಿಂಗತವಾಗಿದೆ ಎಂದು ಅಲ್ಲಿಯ ಪರಂಪರೆಗನುಸಾರವಾಗಿ ನಂಬಲಾಗುತ್ತದೆ.

ಶ್ರೀಲಂಕಾದಲ್ಲಿಯ ಮುತ್ತು ಮತ್ತು ಇತರ ಬೆಲೆಬಾಳುವ ವಸ್ತುಗಳಿಗೆ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಬೇಡಿಕೆಯಿತ್ತು. ಅಲ್ಲಿಯ ಸಿಗಿರಿಯಾ ಎಂಬಲ್ಲಿ ಕ್ರಿಸ್ತಶಕ ಐದನೆಯ ಶತಮಾನದಲ್ಲಿ ಕಶ್ಯಪ ಎಂಬ ಹೆಸರಿನ ರಾಜನು ಗುಹೆಯನ್ನು ಕೊರೆಯಿಸಿದ್ದನು. ಆ ಗುಹೆಯಲ್ಲಿಯ ಭಿತ್ತಿಚಿತ್ರಗಳ ಶೈಲಿಯು ಅಜಂತಾದ ಚಿತ್ರಶೈಲಿಯನ್ನು ಹೋಲುತ್ತದೆ. ಶ್ರೀಲಂಕಾದಲ್ಲಿಯ 'ಮಹಾವಂಸ' ಮತ್ತು 'ದೀಪವಂಸ' ಎಂಬ ಗ್ರಂಥಗಳು ಭಾರತ ಮತ್ತು ಶ್ರೀಲಂಕಾಗಳ ನಡುವಿನ ಪರಸ್ಪರ ಸಂಬಂಧದ ಮಾಹಿತಿ ನೀಡುತ್ತವೆ. ಈ ಗ್ರಂಥಗಳು ಪಾಲಿಭಾಷೆಯಲ್ಲಿ ಬರೆಯಲ್ಪಟ್ಟಿವೆ.

**ಚೀನ ಮತ್ತು ಇತರ ದೇಶಗಳು :** ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಚೀನ ಇವುಗಳ ನಡುವೆ ವ್ಯಾಪಾರಿ ಹಾಗೂ ಸಾಂಸ್ಕೃತಿಕ ಸಂಬಂಧವಿತ್ತು. ಸಾಮ್ರಾಟ ಹರ್ಷವರ್ಧನನು ಚೀನಾದ ಆಸ್ಥಾನಕ್ಕೆ ರಾಯಭಾರಿಯನ್ನು ಕಳಿಸಿದ್ದನು. ಚೀನಾದಲ್ಲಿ ಉತ್ಪಾದಿತವಾಗುವ ರೇಶ್ಮೆ ಬಟ್ಟೆಗೆ ಭಾರತದಲ್ಲಿ 'ಚೀನಾಂಶುಕ' ಎಂಬ ಹೆಸರು ಇತ್ತು. ಚೀನಾಂಶುಕಕ್ಕೆ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಬೇಡಿಕೆಯಿತ್ತು. ಪ್ರಾಚೀನ ಭಾರತದಲ್ಲಿಯ ವ್ಯಾಪಾರಿಗಳು ಈ ಚೀನಾಂಶುಕವನ್ನು ಪಾಶ್ಚಾತ್ಯ ದೇಶಗಳಿಗೆ ಕಳಿಸುತ್ತಿದ್ದರು. ಈ ವ್ಯಾಪಾರವು ಭೂಮಾರ್ಗದಿಂದ ನಡೆಯುತ್ತಿತ್ತು. ಆ ಮಾರ್ಗಕ್ಕೆ 'ರೇಶ್ಮೆಮಾರ್ಗ' ಎಂದೂ ಕರೆಯುತ್ತಾರೆ. ಭಾರತದಲ್ಲಿಯ ಕೆಲವು ಪ್ರಾಚೀನ ಸ್ಥಳಗಳು ಈ ರೇಶ್ಮೆ ಮಾರ್ಗದಿಂದ ಜೋಡಿಸಲ್ಪಟ್ಟಿದ್ದವು. ಅವುಗಳಲ್ಲಿ ಮಹಾರಾಷ್ಟ್ರದಲ್ಲಿಯ ಮುಂಬಯಿ ಹತ್ತಿರದಲ್ಲಿರುವ ನಾಲಾ-ಸೋಪಾರಾ ಒಂದಾಗಿತ್ತು. ಭಾರತಕ್ಕೆ ಬಂದ ಫಾಹಿಯಾನ ಹಾಗೂ ಯುವಾನ್ ಚ್ವಾಂಗ್ ಈ ಬೌದ್ಧ ಭಿಕ್ಕುಗಳೂ ರೇಶ್ಮೆ ಮಾರ್ಗದಿಂದಲೇ ಭಾರತಕ್ಕೆ ಬಂದರು.

ಕ್ರಿಸ್ತಶಕ ಒಂದನೆಯ ಶತಮಾನದಲ್ಲಿಯ ಚೀನಿ ಸಾಮ್ರಾಟನಾದ 'ಮಿಂಗ' ಇವನ ಆಮಂತ್ರಣದ ಮೇರೆಗೆ ಧರ್ಮರಕ್ಷಕ ಹಾಗೂ ಕಶ್ಯಪ ಮಾತಂಗ ಈ ಬೌದ್ಧ ಭಿಕ್ಕುಗಳು ಚೀನಾಕ್ಕೆ ಹೋದರು. ಅವರು ಅನೇಕ ಭಾರತೀಯ ಬೌದ್ಧ ಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರ ಮಾಡಿದರು. ಅದರ ನಂತರ ಚೀನಾದಲ್ಲಿ ಬೌದ್ಧ ಧರ್ಮದ ಪ್ರಸಾರಕ್ಕೆ ಚಾಲನೆ ದೊರೆಯಿತು. ಬೌದ್ಧ ಧರ್ಮವು ಜಪಾನ, ಕೋರಿಯಾ, ವ್ಹಿಯೆಟ್‌ನಾಮ ಈ ದೇಶಗಳಲ್ಲಿಯೂ ತಲುಪಿತು.

**ಆಗ್ನೇಯ ಏಷ್ಯದಲ್ಲಿಯ ದೇಶಗಳು :** ಕಾಂಬೋಡಿಯಾ ದೇಶದಲ್ಲಿಯ 'ಫುನಾನ' ಎಂಬ ಪ್ರಾಚೀನ ರಾಜ್ಯದ ಸ್ಥಾಪನೆಯ ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ಆಯಿತು. ಚೀನಿ ಪರಂಪರೆಯ ಆಧಾರದಿಂದ ಕೌಂಡಿಣ್ಯ ಎಂಬ ಹೆಸರಿನ ಭಾರತೀಯನು ಅದರ ಸ್ಥಾಪನೆಯನ್ನು ಮಾಡಿದನು ಎಂಬ ಮಾಹಿತಿ ದೊರೆಯುತ್ತದೆ. ಫುನಾನದ ಜನರಿಗೆ ಸಂಸ್ಕೃತ ಭಾಷೆಯ ಜ್ಞಾನವಿತ್ತು. ಆ ಕಾಲದಲ್ಲಿಯ ಒಂದು ಕೊರೆದ ಶಿಲಾಶಾಸನವು ಉಪಲಬ್ಧವಿದೆ. ಅದು ಸಂಸ್ಕೃತದಲ್ಲಿದೆ. ಆಗ್ನೇಯ ಏಷ್ಯದಲ್ಲಿ ಇತರ ದೇಶಗಳಲ್ಲಿಯೂ ಭಾರತೀಯ ವಂಶದ ಚಿಕ್ಕ ರಾಜ್ಯಗಳು ಉದಯವಾಗಿದ್ದವು. ಈ ರಾಜ್ಯಗಳಿಂದಾಗಿ ಆಗ್ನೇಯ ಏಷ್ಯದಲ್ಲಿಯೂ ಭಾರತೀಯ ಸಂಸ್ಕೃತಿಯ ಪ್ರಸಾರವಾಗುತ್ತ ಹೋಯಿತು.

ಆಗ್ನೇಯ ಏಷ್ಯದ ಕಲೆ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಭಾರತೀಯ ಸಂಸ್ಕೃತಿಯ ದಟ್ಟ ಪ್ರಭಾವವಾದುದು ಕಂಡುಬರುತ್ತದೆ. ಇಂದಿಗೂ ರಾಮಾಯಣ ಮತ್ತು ಮಹಾಭಾರತ ಕಥೆಗಳ ಮೇಲೆ ಆಧಾರಿತವಾದ ನೃತ್ಯ ಮತ್ತು ನಾಟ್ಯಗಳು ಇಂಡೋನೇಶಿಯಾದಲ್ಲಿ ಜನಪ್ರಿಯವಾಗಿವೆ. ಆಗ್ನೇಯ ಏಷ್ಯದಲ್ಲಿಯ ರಾಜ್ಯಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವು ಉತ್ತರೋತ್ತರವಾಗಿ ಹೆಚ್ಚುತ್ತ ಹೋಯಿತು. ಪ್ರಾಚೀನ ಕಾಲಖಂಡದಲ್ಲಿ ಬೌದ್ಧ ಧರ್ಮವು ಮ್ಯಾನ್ಮಾರ, ಥಾಯಲ್ಯಾಂಡ, ಇಂಡೋನೇಶಿಯಾ ಮುಂತಾದ ದೇಶಗಳನ್ನು ತಲುಪಿತು. ನಂತರದ ಕಾಲದಲ್ಲಿ ಶಿವ ಮತ್ತು ವಿಷ್ಣು ಇವರ ಮಂದಿರಗಳು ನಿರ್ಮಾಣವಾದವು.

ಈ ವರ್ಷ ನಾವು ಕ್ರಿ.ಶ.ಪೂ. ೩೦೦೦ ದಿಂದ ಕ್ರಿಸ್ತಶಕ ಎಂಟನೆಯ ಶತಮಾನದ ವರೆಗಿನ ಭಾರತದ ಇತಿಹಾಸದ ಪರಿಶೀಲನೆ ಮಾಡಿದೆವು. ಮುಂದಿನ ವರ್ಷ ನಾವು ಕ್ರಿಸ್ತಶಕ ಒಂಬತ್ತನೆಯ ಶತಮಾನದಿಂದ ಕ್ರಿಸ್ತಶಕ ಹದಿನೆಂಟನೆಯ ಶತಮಾನದ ವರೆಗಿನ ಇತಿಹಾಸದ ಅಭ್ಯಾಸ ಮಾಡುವವರಿದ್ದೇವೆ. ಕ್ರಿ.ಶ. ೯ನೇ ಶತಮಾನ ದಿಂದ ಕ್ರಿ.ಶ. ೧೮ನೇ ಶತಮಾನದ ನಡುವಿನ ಕಾಲಖಂಡದಲ್ಲಿಯ ಇತಿಹಾಸಕ್ಕೆ 'ಮಧ್ಯಯುಗೀನ ಇತಿಹಾಸ' ಎನ್ನುತ್ತಾರೆ.

## ಅಭ್ಯಾಸ

**೧. ಗುರುತಿಸಿರಿ, ನೋಡೋಣ.**

(೧) ರೋಮನ್ ರಚನೆಯ ವಸ್ತುಗಳು ದೊರಕಿದ ಸ್ಥಳಗಳು.
(೨) ಕುಶಾಣರ ಕಾಲದಲ್ಲಿ ಭಾರತದಲ್ಲಿ ಉದಯವಾದ ಒಂದು ಹೊಸ ಕಲಾಶೈಲಿ.
(೩) ಮಹಾವಂಸ ಮತ್ತು ದೀಪವಂಸ ಈ ಗ್ರಂಥಗಳ ಭಾಷೆ.
(೪) ಪ್ರಾಚೀನ ಕಾಲಖಂಡದಲ್ಲಿ ಬೌದ್ಧ ಧರ್ಮದ ಪ್ರಸಾರವಾದ ದೇಶ.

**೨. ಆಲೋಚಿಸಿರಿ ಮತ್ತು ಬರೆಯಿರಿ.**

(೧) ಆಗ್ನೇಯ ಏಷ್ಯದ ಮೇಲೆ ಭಾರತೀಯ ಸಂಸ್ಕೃತಿಯ ದಟ್ಟ ಪ್ರಭಾವವಾದುದು ಕಂಡುಬರುತ್ತದೆ.
(೨) ಚೀನಾದಲ್ಲಿ ಬೌದ್ಧ ಧರ್ಮದ ಪ್ರಸಾರಕ್ಕೆ ಚಾಲನೆ ದೊರಕಿತು.

**೩. ನೀವು ಏನು ಮಾಡಬಲ್ಲಿರಿ ?**

ನಿಮ್ಮ ನೆಚ್ಚಿನ ಅಭಿರುಚಿಗೆ ಚಾಲನೆ ದೊರಕಿದರೆ ನೀವು ಏನು ಮಾಡಬಲ್ಲಿರಿ.

**೪. ಚಿತ್ರ ವರ್ಣನೆ ಮಾಡಿರಿ.**

ನಿಮ್ಮ ಪಾಠದಲ್ಲಿಯ ಅಫಗಾನಿಸ್ತಾನದ ಹಡ್ಡಾ ಎಂಬಲ್ಲಿಯ ಸ್ತೂಪದ ಮೇಲಿನ ಗಾಂಧಾರಶೈಲಿಯ ಶಿಲ್ಪಗಳ ನಿರೀಕ್ಷಣೆ ಮಾಡಿ ಚಿತ್ರವರ್ಣನೆ ಮಾಡಿರಿ.

**೫. ಹೆಚ್ಚಿನ ಮಾಹಿತಿಯನ್ನು ಪಡೆಯಿರಿ.**

(೧) ಗಾಂಧಾರ ಶೈಲಿ (೨) ರೇಶ್ಮೆಮಾರ್ಗ

**೬. ಪಾಠದಲ್ಲಿ ಉಲ್ಲೇಖಿಸಿರುವ ಆಗ್ನೇಯ ಏಷ್ಯದಲ್ಲಿನ ದೇಶಗಳನ್ನು ನಕಾಶೆಯಲ್ಲಿ ತೋರಿಸಿರಿ.**

**ಉಪಕ್ರಮ:**

ನೀವು ಇಷ್ಟಪಟ್ಟ ಒಂದು ಕಲೆಯ ವಿಷಯದ ಮಾಹಿತಿಯನ್ನು ಸಂಗ್ರಹಿಸಿರಿ. ಅದನ್ನು ವರ್ಗದಲ್ಲಿ ಸಾದರಪಡಿಸಿರಿ.

* * *

# ನಾಗರಿಕಶಾಸ್ತ್ರ

## ನಮ್ಮ ಸ್ಥಾನಿಕ ಆಡಳಿತ

### ಅನುಕ್ರಮಣಿಕೆ


| ಪಾಠದ ಹೆಸರು | | ಪುಟ ಸಂಖ್ಯೆ |
|---|---|---|
| ೧. | ನಮ್ಮ ಸಾಮಾಜಿಕ ಜೀವನ ........................................ | ೫೯ |
| ೨. | ಸಮಾಜದಲ್ಲಿಯ ವಿವಿಧತೆ........................................ | ೬೨ |
| ೩. | ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆ ........................................ | ೬೫ |
| ೪. | ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆ........................................ | ೭೧ |
| ೫. | ಜಿಲ್ಲಾ ಆಡಳಿತ ........................................ | ೭೭ |


**ನಾಗರಿಕ ಶಾಸ್ತ್ರ ಅಧ್ಯಯನ ನಿಷ್ಪತ್ತಿ : ಆರನೆಯ ಇಯತ್ತೆ**

ಆರನೆಯ ಇಯತ್ತೆಯ ಕೊನೆಗೆ ವಿದ್ಯಾರ್ಥಿಗಳಲ್ಲಿ ಮುಂದಿನ ಅಧ್ಯಯನ ನಿಷ್ಪತ್ತಿಗಳು ವಿಕಸಿತವಾಗಬೇಕು ಎಂಬ ಅಪೇಕ್ಷೆ ಇದೆ.

| ಸೂಚಿಸಿದಂತಹ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ | |
|---|---|---|
| **ಅಧ್ಯಯನಕ್ಕಾಗಿ ಜೊತೆಗೂಡಿ/ಗುಂಪಿನಲ್ಲಿ/ವೈಯಕ್ತಿಕ ರೀತಿಯಲ್ಲಿ ಅಧ್ಯಯನಕ್ಕಾಗಿ ಸಂಧಿ ಕೊಡುವುದು ಹಾಗು ಅವುಗಳ ಮುಂದಿನ ವಿಚಾರಕ್ಕಾಗಿ ಪ್ರವರ್ತರನ್ನಾಗಿಸುವುದು.**<br>• ವಿವಿಧತೆ, ಬೇಧಭಾವ ಸರಕಾರ/ಆಡಳಿತ, ಉದರ ನಿರ್ವಹಣೆ, ಇಂತಹ ಹಲವಾರ ಸಂಕಲ್ಪನೆಗಳ ಮೇಲೆ ಆಧರಿಸಿ ಚರ್ಚೆಯಲ್ಲಿ ಭಾಗವಹಿಸುವದು.<br>• ಕುಟುಂಬ, ಶಾಲೆ, ಸಮಾಜಗಳ ಮಧ್ಯೆ ಜನತೆಗೆ ಕೊಡಮಾಡಲಾದ ಒಳ್ಳೆಯ/ಕೆಟ್ಟ ವರ್ತನೆಗಳ ನಿರೀಕ್ಷಣೆ ಮಾಡವುದು.<br>• ಆಡಳಿತಕ್ಕಾಗಿ ಸಮಾಜದಲ್ಲಿಯ ಪಾತ್ರ ಅರಿತುಕೊಂಡು, ಕೌಟುಂಬಿಕ ಘಟನೆ ದಂತಕಥೆ ಹಾಗೂ ಗ್ರಾಮಗಳಲ್ಲಿ/ನಗರಗಳಲ್ಲಿ ದಂತಕಥೆ, ಘಟನೆ.<br>• ಸುತ್ತಮುತ್ತಲಿನ ಪರಿಸರ/ಗ್ರಾಮದ ವ್ಯವಸಾಯಗಳ ಸಂದರ್ಭದಲ್ಲಿ ವ್ಯಕ್ತಿ ಅಭ್ಯಾಸ (case study) ಎಂಬುದಾಗಿ ವರ್ಣನೆ ಮಾಡುವುದು.<br>• ಪಠ್ಯಪುಸ್ತಕದ ಮೇಲೆ ಆಧರಿಸಿದಂತಹ ಅಬ್ಯಾಸದಲ್ಲಿ ಯಾವುದಾದರೊಂದು ಗ್ರಾಮ ಪಂಚಾಯತಿ ಅಥವಾ ನಗರ ಪಾಲಿಕೆ/ಮಹಾನಗರ ಪಾಲಿಕೆ ಇವುಗಳ ಪ್ರತ್ಯಕ್ಷ ಕಾರುಭಾರ ನೋಡಿಕೊಳ್ಳುವುದು, ಪ್ರತ್ಯಕ್ಷ ನಿರೀಕ್ಷಣೆ (ವಿದ್ಯಾರ್ಥಿ ಇದ್ದೆಡೆ). | 06.73H.13 | ನಮ್ಮ/ತಮ್ಮ ಸುತ್ತಮುತ್ತಲಿನಲ್ಲಿ ದೊರೆಯುವ ವಿವಿಧತೆಗಾಗಿ ನಿಕೋಪ ವೃತ್ತಿಗಳ ರಕ್ಷಿಸುವರು. |
| | 06.73H.14 | ವಿವಿಧ ಪ್ರಕಾರದ ಭೇಧಭಾವ, ಗುರುತಿಸುತ್ತಾನೆ ಹಾಗು ಆ ಬೇಧಗಳು ಸ್ವರೂಪ ಹಾಗೂ ಸ್ತೋತ್ರ ಗುರುತಿಸುವರು. |
| | 06.73H.15 | ವಿವಿಧ ಸ್ವರೂಪಗಳಲ್ಲಿ ಸಮತೆ ಹಾಗು ವಿಷಮತೆ ಇವುಗಳಲ್ಲಿಯ ಭೇದ, ಸ್ಪಷ್ಟ ಮಾಡುತ್ತಾನೆ ಹಾಗೂ ನಿಕೋಪ ಪದ್ಧತಿಯಿಂದ ಅವುಗಳನ್ನು ಎದುರಿಸುವರು. |
| | 06.73H.16 | ಆಡಳಿತದಲ್ಲಿ ಪಾತ್ರವರಿತು ವರ್ಣನೆ ಮಾಡುತ್ತಾನೆ ಮುಖ್ಯವಾಗಿ ಸ್ಥಾನಿಕ ಮಟ್ಟದಲ್ಲಿ/ಹಂತದಲ್ಲಿ. |
| | 06.73H.17 | ಆಡಳಿತದ ಭಿನ್ನ ವಿಭಿನ್ನ ಸ್ಥರಗಳಾದ ಸ್ಥಾನಿಕ, ಪ್ರಾದೇಶಿಕ ರೂಪರೇಷೆ. |
| | 06.73H.18 | ಗ್ರಾಮೀಣ ಮತ್ತು ಶಹರದ ಸ್ಥಾನಿಕ ಸರಕಾರ ಸಂಸ್ಥೆಯ ಆರೋಗ್ಯ ಮತ್ತು ಶೀರ್ಷಕ ಈ ಕ್ಷೇತ್ರದಲ್ಲಿಯ ಕಾರ್ಯ ಪ್ರಣಾಲಿಯ ವಿಶ್ಲೇಷಣೆ ಮಾಡುತ್ತಾನೆ. |
| | 06.73H.19 | ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉಪಲಬ್ಧವಿರುವ ವ್ಯವಸಾಯಗಳಿಗೆ ಕಾರಣೀಭೂತವೆನಿಸುವ ಘಟಕಗಳ ವರ್ಣನೆ ಮಾಡುತ್ತಾನೆ. |
| | 06.73H.20 | ವ್ಯಕ್ತಿ, ಕುಟುಂಬ ಮತ್ತು ಸಂಸ್ಥೆ ಇವು ಕೂಡಿಕೊಂಡು ಸಮಾಜ ಆಗುತ್ತದೆ. ಇದನ್ನು ತಿಳಿದುಕೊಳ್ಳುತ್ತಾನೆ. |
| | 06.73H.21 | ರಾಷ್ಟ್ರೀಯ ಏಕಾತ್ಮತೆಯ ಸಲುವಾಗಿ ಸರ್ವ ಧರ್ಮ ಸಮಭಾವದ ಅವಶ್ಯಕತೆ ಇರುತ್ತದೆಯೆಂದು ತಿಳಿದುಕೊಳ್ಳುತ್ತಾನೆ. |
| | 06.73H.22 | ಸ್ಥಾನಿಕ ಸರಕಾರ ಸಂಸ್ಥೆ ಇದು ಪ್ರಜಾಪ್ರಭುತ್ವದ ತಳಹದಿಯಾಗಿದೆಯೆಂದು ಗುರುತಿಸುತ್ತಾನೆ. |
| | 06.73H.23 | ಸಾರ್ವಜನಿಕ ಸಮಸ್ಯೆ ಬಿಡಿಸುವ ಸಲುವಾಗಿ ಪ್ರತಿಯೊಬ್ಬರ ಸಹಭಾಗ ಮಹತ್ವದ್ದಾಗಿರುತ್ತದೆಯೆಂದು ಸ್ಪಷ್ಟಪಡಿಸುತ್ತಾನೆ. |
| | 06.73H.24 | ಜಿಲ್ಲಾ ಆಡಳಿತದ ಮಾಹಿತಿ ದೊರಕಿಸಿಕೊಳ್ಳುತ್ತಾನೆ. |

# ೧. ನಮ್ಮ ಸಾಮಾಜಿಕ ಜೀವನ

೧.೧ ಮನುಷ್ಯನಿಗೆ ಸಮಾಜದ ಅವಶ್ಯಕತೆ ಏಕೆ ಉಂಟಾಯಿತು ?
೧.೨ ಮನುಷ್ಯನಲ್ಲಿಯ ಸಮಾಜಶೀಲತೆ
೧.೩ ನಮ್ಮ ವಿಕಾಸ
೧.೪ ಸಮಾಜವೆಂದರೇನು ?

ಐದನೆಯ ಇಯತ್ತೆಯ ಪಠ್ಯಪುಸ್ತಕದಲ್ಲಿ ಮಾನವನ ಉತ್ಕ್ರಾಂತಿ ಹೇಗೆ ಆಯಿತೆಂಬುದನ್ನು ನೀವು ಕಲಿತಿದ್ದೀರಿ. ಇಂದಿನ ನಮ್ಮ ಸಾಮಾಜಿಕ ಜೀವನವು ಸಾವಿರಾರು ವರ್ಷಗಳ ಉತ್ಕ್ರಾಂತಿಯಿಂದ ರೂಪುಗೊಂಡಿದೆ. ಮನುಷ್ಯನು ಸಂಚಾರಿ ಅವಸ್ಥೆಯಿಂದ ಸ್ಥಿರ ಸಮಾಜ ಜೀವನದ ಕಡೆಗೆ ಮುನ್ನಡೆದಿದ್ದಾನೆ.



ಇನ್ನು ಐವತ್ತು ವರ್ಷಗಳ ನಂತರದ ಸಮಾಜ ಹೇಗೆ ಇರಬಹುದು ಎಂಬುದರ ಬಗೆಗೆ ಚರ್ಚೆ ಮಾಡಿರಿ.

## ೧.೧ ಮನುಷ್ಯನಿಗೆ ಸಮಾಜದ ಅವಶ್ಯಕತೆ ಏಕೆ ಉಂಟಾಯಿತು ?

ವ್ಯಕ್ತಿಯ ಹಾಗೂ ಸಮಾಜದ ವಿಕಾಸಕ್ಕಾಗಿ ಸ್ಥಿರ ಮತ್ತು ಸುರಕ್ಷಿತ ಸಾಮೂಹಿಕ ಜೀವನವು ಅವಶ್ಯಕವಾಗಿದೆ. ಸಂಚಾರಿ ಅವಸ್ಥೆಯಲ್ಲಿಯ ಮನುಷ್ಯನಿಗೆ ಈ ಸ್ಥೈರ್ಯ ಹಾಗೂ ಸುರಕ್ಷತೆ ಇರಲಿಲ್ಲ. ಸಮೂಹದಲ್ಲಿ ಇರುವುದರಿಂದ ಸುರಕ್ಷತೆ ದೊರೆಯುತ್ತದೆ ಎಂಬುದರ ಅರಿವಾದುದರಿಂದ ಮನುಷ್ಯನು ಸಂಘಟಿತವಾಗಿ ವಾಸಿಸತೊಡಗಿದನು. ಇದು ಸಮಾಜ ನಿರ್ಮಿತಿಯ ಹಿಂದಿನ ಒಂದು ಮುಖ್ಯ ಪ್ರೇರಣೆಯಾಗಿದೆ. ಸಮಾಜದಲ್ಲಿಯ ದೈನಂದಿನ ವ್ಯವಹಾರಗಳು ಸುಗಮವಾಗಿ ಸಾಗುವ ಸಲುವಾಗಿ ಮನುಷ್ಯನಿಗೆ ನಿಯಮಗಳ ಅವಶ್ಯಕತೆ ಉಂಟಾಯಿತು. ಅದರಿಂದ ರೂಢಿ, ಪರಂಪರೆ, ನೀತಿಮೌಲ್ಯಗಳು, ನಿಯಮ ಹಾಗೂ ಕಾಯ್ದೆಗಳು ಅಸ್ತಿತ್ವದಲ್ಲಿ ಬಂದವು. ಅದರಿಂದಾಗಿ ಮನುಷ್ಯನ ಸಾಮಾಜಿಕ ಜೀವನವು ಅಧಿಕ ಸಂಘಟಿತ ಹಾಗೂ ಸ್ಥಿರವಾಯಿತು.

## ೧.೨ ಮನುಷ್ಯನಲ್ಲಿಯ ಸಮಾಜಶೀಲತೆ

ಮನುಷ್ಯನು ಸ್ವಭಾವತ: ಸಮಾಜಶೀಲನಾಗಿದ್ದಾನೆ. ನಮ್ಮೆಲ್ಲರಿಗೆ ಪರಸ್ಪರರ ಜೊತೆಯಾಗಿ ಎಲ್ಲರ ಸಂಗಡ ಹಾಗೂ ಎಲ್ಲರ ಮಧ್ಯ ಇರಲು ಇಷ್ಟವಾಗುತ್ತದೆ. ಎಲ್ಲರ ಸಂಗಡ ಇರುವುದು ಆನಂದದ ಸಂಗತಿಯಾಗಿದ್ದಂತೆ ಅದು ನಮ್ಮ ಅವಶ್ಯಕತೆಯೂ ಆಗಿದೆ.

ನಮ್ಮ ಅನೇಕ ಅವಶ್ಯಕತೆಗಳು ಇರುತ್ತವೆ. ಅನ್ನ, ಬಟ್ಟೆ, ವಸತಿ ಇವು ನಮ್ಮ ಶಾರೀರಿಕ ಅವಶ್ಯಕತೆಗಳಾಗಿವೆ. ಅವು ಪೂರ್ಣವಾದ ಮೇಲೆ ಮನುಷ್ಯನಿಗೆ ಸ್ಥೈರ್ಯ ಲಭಿಸುತ್ತದೆ. ಆದರೆ ಮನುಷ್ಯನಿಗೆ ಅಷ್ಟೇ ಸಾಕಾಗಿಲ್ಲ. ನಮ್ಮ ಕೆಲವು ಭಾವನಾತ್ಮಕ ಹಾಗೂ ಮಾನಸಿಕ ಅವಶ್ಯಕತೆಗಳೂ ಇರುತ್ತವೆ. ಉದಾಹರಣೆಗಾಗಿ ಸುರಕ್ಷಿತ ವೆನಿಸುವುದು ನಮ್ಮ ಭಾವನಾತ್ಮಕ ಅವಶ್ಯಕತೆಯಾಗಿದೆ. ನಮಗೆ ಆನಂದವಾದರೆ ಅದನ್ನು ಯಾರಿಗಾದರೂ ಹೇಳಬೇಕೆನಿಸುತ್ತದೆ. ದುಃಖವಾದರೆ ನಮ್ಮ ಜೊತೆ ಯಾರಾದರೂ ಇರಬೇಕು ಎನ್ನಿಸುತ್ತದೆ. ನಮ್ಮ ಕುಟುಂಬದ ಜನರು, ಸಂಬಂಧಿಕರು ಹಾಗೂ ಗೆಳೆಯ-ಗೆಳತಿಯರು ಮುಂತಾದವರ ಸಹವಾಸ ನಮಗೆ ಇಷ್ಟವಾಗುತ್ತದೆ. ಇದರಿಂದ ನಮ್ಮ ಸಮಾಜಶೀಲತೆ ಕಂಡುಬರುತ್ತದೆ.



**ಮಾತನಾಡಿರಿ ಹಾಗೂ ಬರೆಯಿರಿ.**

ಚಿತ್ರಕಲೆಯ ಸ್ಪರ್ಧೆಯಲ್ಲಿ ನಿಮಗೆ ಪ್ರಥಮ ಬಹುಮಾನ ದೊರಕಿದೆ. ಅದನ್ನು ನಿಮ್ಮ ಹತ್ತಿರವೇ ಇಡುವಿರೋ ಅಥವಾ ನಿಮ್ಮ ಸ್ನೇಹಿತರಿಗೆ ತೋರಿಸುವಿರೋ? ಅವರು ನಿಮಗೆ ಯಾವ ರೀತಿ ಪ್ರತಿಕ್ರಿಯೆ ತೋರಿಸಬೇಕು ಎಂದು ನೀವು ಅಪೇಕ್ಷಿಸುವಿರಿ? ಅವರ ಪ್ರತಿಕ್ರಿಯೆಯ ನಂತರ ನಿಮಗೆ ಹೇಗೆ ಅನಿಸಿತು?

- ಪ್ರಶಂಸೆ ಮಾಡಿದ್ದರಿಂದ ತುಂಬಾ ಖುಷಿ ಎನಿಸಿತು.
- ಉತ್ತಮ ಚಿತ್ರಗಳನ್ನು ತೆಗೆಯಲು ಹುಮ್ಮಸ್ಸು ಬಂದಿತು.
- ಮತ್ತೆ ಏನು ಅನಿಸಿತು ಎಂಬುದರ ಬಗ್ಗೆ ಬರೆಯಿರಿ.

ಅನ್ನ, ಬಟ್ಟೆ, ವಸತಿ, ಶಿಕ್ಷಣ ಮತ್ತು ಆರೋಗ್ಯ ಇವು ನಮ್ಮ ಮೂಲಭೂತ ಅವಶ್ಯಕತೆಗಳಾಗಿವೆಯೆಂಬುದು ನಿಮಗೆ ಗೊತ್ತಿದೆ. ಸಮಾಜದಲ್ಲಿಯ ವ್ಯಕ್ತಿಗಳ ಶ್ರಮ ಮತ್ತು ಅವರ ಕೌಶಲ್ಯಗಳಿಂದಾಗಿ ವಸ್ತುಗಳು ತಯಾರಾಗುತ್ತವೆ. ಶಿಕ್ಷಣ ಮತ್ತು ಆರೋಗ್ಯದ ಸೇವೆ-ಸೌಕರ್ಯಗಳಿಂದಾಗಿ ನಾವು ಗೌರವದಿಂದ ಜೀವನ ನಡೆಸಬಹುದು. ಈ ಎಲ್ಲ ಸಂಗತಿಗಳು ನಮಗೆ ಸಮಾಜದಲ್ಲಿ ಲಭ್ಯವಾಗುತ್ತವೆ. ಬೇರೆ ಬೇರೆ ಉದ್ಯೋಗ ಹಾಗೂ ವ್ಯವಸಾಯಗಳಿಂದ ನಮ್ಮ ಅವಶ್ಯಕತೆಗಳ ಪೂರ್ಣವಾಗುತ್ತವೆ. ಉದಾಹರಣೆಗಾಗಿ, ನಮಗೆ ಅಭ್ಯಾಸ ಮಾಡಲು ಪುಸ್ತಕ ಬೇಕಾಗುತ್ತದೆ. ಪುಸ್ತಕ ತಯಾರಾಗಲು ಕಾಗದ ಬೇಕಾಗುತ್ತದೆ. ಇದರಿಂದಾಗಿ ಕಾಗದ ನಿರ್ಮಿತಿ, ಮುದ್ರಣ ಹಾಗೂ ಪುಸ್ತಕ ಬೈಂಡಿಂಗ್ ಇತ್ಯಾದಿ ಉದ್ಯೋಗಗಳ ವಿಕಾಸವಾಗುತ್ತದೆ. ಅನೇಕ ವ್ಯಕ್ತಿಗಳು ಅದರಲ್ಲಿ ಭಾಗವಹಿಸುತ್ತಾರೆ. ಸಮಾಜದಲ್ಲಿಯ ವಿವಿಧ ಉದ್ಯೋಗಗಳ ಮೂಲಕ ನಮ್ಮ ಅವಶ್ಯಕತೆಗಳು ಪೂರ್ಣವಾಗುತ್ತವೆ. ಇವುಗಳ ಮೂಲಕವೇ ನಮ್ಮಲ್ಲಿರುವ ಸಾಮರ್ಥ್ಯ ಹಾಗೂ ಕೌಶಲ್ಯಗಳ ವಿಕಾಸವಾಗುತ್ತದೆ. ಸಮಾಜದಲ್ಲಿ ಮೂಲಭೂತ ಅವಶ್ಯಕತೆಗಳ ಪೂರ್ತತೆಯಾಗುತ್ತದೆ. ಸುರಕ್ಷೆ, ಹೊಗಳಿಕೆ, ಪ್ರಶಂಸೆ, ಆಧಾರ ಇತ್ಯಾದಿಗಳಿಗಾಗಿ ನಾವು ಪರಸ್ಪರರ ಮೇಲೆ ಅವಲಂಬಿಸಿರುತ್ತೇವೆ. ಆದ್ದರಿಂದ ನಮ್ಮ ಸಮಾಜ ಜೀವನವು ಪರಸ್ಪರಾವಲಂಬಿತವಾಗಿರುತ್ತದೆ.



**ಮಾಡಿ ನೋಡಿರಿ.**

ಮುಂಜಾನೆ ಎದ್ದಾಗಿನಿಂದ ನಮಗೆ ಯಾವ ಯಾವ ವಸ್ತುಗಳ ಅವಶ್ಯಕತೆ ಇರುತ್ತದೆಯೆಂಬುದರ ಒಂದು ಪಟ್ಟಿಯನ್ನು ತಯಾರಿಸಿರಿ. ಅವುಗಳಲ್ಲಿಯ ಕನಿಷ್ಠ ಐದು ವಸ್ತುಗಳನ್ನು ತಯಾರಿಸುವುದರಲ್ಲಿ ಹಾಗೂ ಅವುಗಳನ್ನು ನಿಮ್ಮ ವರೆಗೆ ಮುಟ್ಟಿಸುವುದರಲ್ಲಿ ಯಾರ ಯಾರ ಸಹಭಾಗವಿರುತ್ತದೆಂಬುದನ್ನು ಕಂಡುಹಿಡಿಯಿರಿ.

## ೧.೩ ನಮ್ಮ ವಿಕಾಸ

ಪ್ರತಿಯೊಬ್ಬ ಮನುಷ್ಯನಲ್ಲಿ ನಿಸರ್ಗತಃ ಕೆಲವು ಗುಣಗಳು ಹಾಗೂ ಸಾಮರ್ಥ್ಯಗಳು ಇರುತ್ತವೆ. ಅವು ಸುಪ್ತ ಅವಸ್ಥೆಯಲ್ಲಿ ಇರುತ್ತವೆ. ಅವುಗಳ ವಿಕಾಸವು ಸಮಾಜದ ಮೂಲಕ ಆಗುತ್ತದೆ. ಪರಸ್ಪರರ ಜೊತೆ ಮಾತನಾಡುವ ಸಲುವಾಗಿ ನಾವು ಭಾಷೆಯ ಆಧಾರವನ್ನು ಪಡೆಯುತ್ತೇವೆ. ಆದರೆ ಭಾಷೆಯು ನಮಗೆ ಜನ್ಮತಃ ಅವಗತವಾಗಿರುವುದಿಲ್ಲ. ನಾವು ಅದನ್ನು ಕ್ರಮೇಣವಾಗಿ ಕಲಿಯುತ್ತೇವೆ. ಮನೆಯಲ್ಲಿ ಯಾವ ಭಾಷೆಯನ್ನು ಮಾತನಾಡಲಾಗುತ್ತದೆಯೋ ಆ ಭಾಷೆಯನ್ನು ನಾವು ಆರಂಭದಲ್ಲಿ ಕಲಿಯುತ್ತೇವೆ. ನಮ್ಮ ನೆರೆ ಹೊರೆಯಲ್ಲಿ ಬೇರೆ ಭಾಷೆಯನ್ನು ಮಾತನಾಡುವ ಜನರು ಇದ್ದರೆ ಆ ಭಾಷೆಯ ಪರಿಚಯವೂ ನಮಗೆ ಆಗುತ್ತದೆ. ಶಾಲೆಯಲ್ಲಿ ಬೇರೆ ಬೇರೆ ಭಾಷೆಗಳನ್ನು ಕಲಿಯುವ ಅವಕಾಶ ದೊರೆಯುತ್ತದೆ.

ನಮ್ಮಲ್ಲಿ ಸ್ವತಂತ್ರ ವಿಚಾರ ಮಾಡುವ ಸಾಮರ್ಥ್ಯವು ಇರುತ್ತದೆ. ಉದಾಹರಣೆಗಾಗಿ ವರ್ಗದಲ್ಲಿಯ ಎಲ್ಲ ವಿದ್ಯಾರ್ಥಿಗಳಿಗೆ ನಿಬಂಧ ಬರೆಯಲು ಸಮಾನ ವಿಷಯವನ್ನು ಕೊಡಲಾಗಿದ್ದರೂ ಯಾವುದೇ ಎರಡು ನಿಬಂಧಗಳು ಒಂದು ಸಮಾನವಾಗಿ ಏಕೆ ಇರುವುದಿಲ್ಲ? ಏಕೆಂದರೆ ಅವುಗಳಲ್ಲಿಯ ವಿಚಾರವು ಬೇರೆಯಾಗಿರುತ್ತದೆ. ನಮ್ಮ ಭಾವನಾತ್ಮಕ ಸಾಮರ್ಥ್ಯ ಹಾಗೂ ವಿಚಾರಶಕ್ತಿಗಳು ಸಮಾಜದ ಮೂಲಕ ಬೆಳೆಯುತ್ತವೆ. ವಿಚಾರಗಳನ್ನು ಮಂಡಿಸುವ ಹಾಗೂ ಭಾವನೆಗಳನ್ನು ವ್ಯಕ್ತಪಡಿಸುವ ಅವಕಾಶ ಸಮಾಜದಿಂದಾಗಿ ದೊರೆಯುತ್ತದೆ.


ಮನುಷ್ಯನಲ್ಲಿಯ ಕೌಶಲ್ಯಗಳ ವಿಕಾಸವು ಸಮಾಜದಿಂದ ಆಗುತ್ತದೆ. ಗಾಯಕರು, ಚಿತ್ರಕಾರರು, ಶಾಸ್ತ್ರಜ್ಞರು, ಸಾಹಸವೀರರು ಹಾಗೂ ಸಾಮಾಜಿಕ ಕಾರ್ಯವನ್ನು ಮಾಡುವ ಅನೇಕ ವ್ಯಕ್ತಿಗಳು ಸಮಾಜದ ಪ್ರೋತ್ಸಾಹ ಹಾಗೂ ಬೆಂಬಲದಿಂದಾಗಿ ತಮ್ಮಲ್ಲಿಯ ಗುಣಗಳಲ್ಲಿ ವಿಕಾಸವನ್ನು ಸಾಧಿಸುತ್ತಾರೆ. ಅವರಿಗೆ ದೊರೆಯುವ ಪ್ರೋತ್ಸಾಹವು ಅಷ್ಟೇ ಮಹತ್ವದ್ದಾಗಿರುತ್ತದೆ.

## ೧.೪ ಸಮಾಜವೆಂದರೇನು ?

ಸಮಾಜದಲ್ಲಿ ಸರ್ವ ಸ್ತ್ರೀ-ಪುರುಷರು, ಪ್ರೌಢ, ವ್ಯಕ್ತಿಗಳು, ವೃದ್ಧರು, ಸಣ್ಣ ಹುಡುಗರು-ಹುಡುಗಿಯರು ಮುಂತಾದವರ ಸಮಾವೇಶವಾಗಿರುತ್ತದೆ. ನಮ್ಮ ಕುಟುಂಬಗಳು ಸಮಾಜದ ಘಟಕಗಳಾಗಿರುತ್ತವೆ. ಸಮಾಜದಲ್ಲಿ ವಿವಿಧ ಗುಂಪುಗಳು, ಸಂಸ್ಥೆಗಳು ಹಾಗೂ ಸಂಘಟನೆಗಳು ಇರುತ್ತವೆ. ಜನರಲ್ಲಿಯ ಪರಸ್ಪರ ಸಂಬಂಧ, ಪರಸ್ಪರ ವ್ಯವಹಾರ, ಕೊಡು-ಕೊಳ್ಳುವಿಕೆ ಮುಂತಾದವುಗಳ ಸಮಾವೇಶವೂ ಸಮಾಜದಲ್ಲಿ ಆಗುತ್ತದೆ. ಜನರ ತಂಡ ಅಥವಾ ಸಂದಣಿ ಎಂದರೆ ಸಮಾಜವಲ್ಲ, ಕೆಲವು ಸಮಾನ ಉದ್ದೇಶಗಳನ್ನು ಸಾಧಿಸುವ

ಸಲುವಾಗಿ ಯಾವಾಗ ಜನರು ಒಂದೆಡೆ ಬರುತ್ತಾರೋ ಆಗ ಅವರ ಸಮಾಜ ನಿರ್ಮಾಣವಾಗುತ್ತದೆ.

ಅನ್ನ, ಬಟ್ಟೆ, ವಸತಿ, ಸುರಕ್ಷತೆಗಳಂತಹ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸಮಾಜವು ಒಂದು ಶಾಶ್ವತವಾದ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇಂಥ ವ್ಯವಸ್ಥೆ ಇರದಿದ್ದರೆ ಸಮಾಜದ ದೈನಂದಿನ ವ್ಯವಹಾರಗಳು ಆಗಲಾರವು. ಸಮಾಜದ ಅಸ್ತಿತ್ವವು ಶಾಶ್ವತವಾಗಿ ಉಳಿಯುವ ಸಲುವಾಗಿ ವ್ಯವಸ್ಥೆ ಅವಶ್ಯಕವಾಗಿದೆ. ಉದಾಹರಣೆಗಾಗಿ, ಆಹಾರದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಕೃಷಿ ಮಾಡುವುದು ಅವಶ್ಯಕವಾಗಿದೆ. ಕೃಷಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ನೆರವೇರಿಸುವ ಸಲುವಾಗಿ ವಿವಿಧ ಸಂಸ್ಥೆಗಳನ್ನು ನಿರ್ಮಿಸ ಬೇಕಾಗುತ್ತದೆ. ಕೃಷಿ ಸಲಕರಣೆಗಳನ್ನು ತಯಾರಿಸುವ ಸಲುವಾಗಿ ಕಾರ್ಖಾನೆಗಳು, ರೈತರಿಗೆ ಸಾಲ ನೀಡುವ ಸಲುವಾಗಿ ಬ್ಯಾಂಕುಗಳು, ಉತ್ಪಾದಿತ ವಸ್ತುಗಳಿಗಾಗಿ ಮಾರುಕಟ್ಟೆ ಈ ರೀತಿ ವಿಶಾಲ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇಂಥ ಅನೇಕ ವ್ಯವಸ್ಥೆಗಳ ಮೂಲಕ ಸಮಾಜವು ಸ್ಥಿರವಾಗುತ್ತದೆ.



**ನಿಮಗೆ ಗೊತ್ತಿದೆಯೇ ?**

ಜನ್ಮತ: ಸರ್ವ ಮನುಷ್ಯರು ಸಮಾನರಾಗಿದ್ದಾರೆ. ಮನುಷ್ಯನೆಂದು ಸರ್ವರ ದರ್ಜೆ ಸಮಾನವಾಗಿದೆ. ಭಾರತದ ಸಂವೀಧಾನದ ಪ್ರಕಾರ ಸರ್ವ ವ್ಯಕ್ತಿಗಳು ಕಾಯದೆಯೆ ಮುಂದೆ ಸಮಾನರಾಗಿದ್ದಾರೆ. ಸಂವಿಧಾನವು ನಮಗೆ ಸಮಾನತೆಯ ಸಂಧಿಯ ಭರವಸೆ ನೀಡಿದೆ. ಶಿಕ್ಷಣ, ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಉಪಯೋಗಿಸಿ ನಾವು ನಮ್ಮ ಪ್ರಗತಿಯನ್ನು ಸಾಧಿಸಬಹುದು.

ಮುಂದಿನ ಪಾಠದಲ್ಲಿ ನಾವು ಭಾರತೀಯ ಸಮಾಜದಲ್ಲಿಯ ವಿವಿಧತೆಯ ಪರಿಚಯ ಮಾಡಿಕೊಳ್ಳೋಣ.



## ಅಭ್ಯಾಸ

**೧. ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆಯಿರಿ.**

(೧) ಸಮಾಜದಲ್ಲಿಯ ದೈನಂದಿನ ವ್ಯವಹಾರಗಳು ಸುಗಮವಾಗಿ ಸಾಗುವ ಸಲುವಾಗಿ ಮನುಷ್ಯನಿಗೆ ............... ಅವಶ್ಯಕತೆ ಉಂಟಾಯಿತು.

(೨) ಮನುಷ್ಯನಲ್ಲಿಯ ಕೌಶಲ್ಯಗಳ ವಿಕಾಸವು ............... ಆಗುತ್ತದೆ.

(೩) ನಮ್ಮ ಕೆಲವು ಭಾವನಾತ್ಮಕ ಹಾಗೂ ........... ಅವಶ್ಯಕತೆಗಳೂ ಇರುತ್ತವೆ.

**೨. ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ನಮ್ಮ ಮೂಲಭೂತ ಅವಶ್ಯಕತೆಗಳು ಯಾವವು ?

(೨) ನಮಗೆ ಯಾರ ಸಹವಾಸ ಇಷ್ಟವಾಗುತ್ತದೆ ?

(೩) ನಮಗೆ ಸಮಾಜದಿಂದಾಗಿ ಯಾವ ಅವಕಾಶ ದೊರೆಯುತ್ತದೆ?

**೩. ನಿಮಗೆ ಏನು ಅನಿಸುತ್ತದೆ ? ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(೧) ಸಮಾಜವು ಹೇಗೆ ನಿರ್ಮಾಣವಾಗುತ್ತದೆ ?

(೨) ಸಮಾಜದಲ್ಲಿ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಏಕೆ ನಿರ್ಮಾಣ ಮಾಡಬೇಕಾಗುತ್ತದೆ ?

(೩) ಮನುಷ್ಯನ ಸಮಾಜ ಜೀವನ ಯಾವುದರಿಂದ ಅಧಿಕ ಸಂಘಟಿತ ಹಾಗೂ ಸ್ಥಿರವಾಗುತ್ತದೆ ?

(೪) ಸಮಾಜ ವ್ಯವಸ್ಥೆ ಅಸ್ತಿತ್ವದಲ್ಲಿ ಇರದಿದ್ದರೆ ಯಾವ ಅಡಚಣೆಗಳು ನಿರ್ಮಾಣವಾಗುತ್ತಿದ್ದವು ?

**೪. ಕೆಳಗಿನ ಪ್ರಸಂಗಗಳಲ್ಲಿ ನೀವು ಏನು ಮಾಡಬಲ್ಲಿರಿ ?**

(೧) ನಿಮ್ಮ ಗೆಳೆಯನು/ಗೆಳತಿಯು ಶೈಕ್ಷಣಿಕ ವಸ್ತುವನ್ನು ಮನೆಯಲ್ಲಿ ಮರೆತ ಬಂದಿದ್ದಾನೆ/ಮರೆತು ಬಂದಿದ್ದಾಳೆ.

(೨) ರಸ್ತೆಯಲ್ಲಿ ಒಬ್ಬ ದೃಷ್ಟಿಹೀನ/ದಿವ್ಯಾಂಗ ವ್ಯಕ್ತಿ ಭೇಟಿಯಾದನು.

**ಉಪಕ್ರಮ**

(೧) ಕೃಷಿ ಸಲಕರಣೆಗಳನ್ನು ತಯಾರಿಸುವ ಕುಶಲಕರ್ಮಿಗೆ ಭೇಟಿಯಾಗಿರಿ. ಈ ಕೆಲಸದಲ್ಲಿ ಅವನಿಗೆ ಯಾರ ಯಾರ ಸಹಾಯ ದೊರೆಯುತ್ತದೆಂಬುದರ ಪಟ್ಟಿಯನ್ನು ತಯಾರಿಸಿರಿ.

(೨) ಸಮೀಪದ ಬ್ಯಾಂಕಿಗೆ ಭೇಟಿ ನೀಡಿ ಆ ಬ್ಯಾಂಕು ಯಾವ ಯಾವ ಕಾರ್ಯಗಳಿಗಾಗಿ ಸಾಲ ನೀಡುತ್ತದೆಂಬುದರ ಮಾಹಿತಿ ಪಡೆಯಿರಿ.

(೩) ಮಾನವನ ಮೂಲಭೂತ ಅವಶ್ಯಕತೆಗಳು ಮತ್ತು ಹೊಸ ಅವಶ್ಯಕತೆಗಳು- ಇವುಗಳ ಪಟ್ಟಿಯನ್ನು ತಯಾರಿಸಿರಿ.

* * *

# ೨ ಸಮಾಜದಲ್ಲಿಯ ವಿವಿಧತೆ


೨.೧ ವಿವಿಧತೆಯೇ ನಮ್ಮ ಸಾಮರ್ಥ್ಯ

೨.೨ ಧರ್ಮ ನಿರಪೇಕ್ಷತೆಯ ತತ್ವಗಳು

೨.೩ ನಮ್ಮ ಪ್ರಗತಿಯಲ್ಲಿ ಸಮಾಜದ ಸಹಭಾಗ

೨.೪ ಸಮಾಜದ ನಿಯಂತ್ರಣ


ಭಾರತೀಯ ಸಮಾಜದಲ್ಲಿ ಅನೇಕ ಭಾಷೆಗಳು, ಧರ್ಮಗಳು, ಸಂಸ್ಕೃತಿಗಳು, ರೂಢಿಗಳು ಹಾಗೂ ಪರಂಪರೆಗಳು ಇವೆ. ಈ ವಿವಿಧತೆಯು ನಮ್ಮ ಸಾಂಸ್ಕೃತಿಕ ವೈಭವವಾಗಿದೆ. ಮರಾಠಿ, ಕನ್ನಡ, ತೆಲುಗು, ಬಂಗಾಲಿ, ಹಿಂದಿ, ಗುಜರಾತಿ, ಉರ್ದು ಇತ್ಯಾದಿ ಅನೇಕ ಭಾಷೆಗಳನ್ನು ಮಾತನಾಡುವ ಜನರು ನಮ್ಮ ಸುತ್ತಮುತ್ತ ಇರುತ್ತಾರೆ. ಅವರು ಬೇರೆ ಬೇರೆ ಪದ್ಧತಿಯಿಂದ ಹಬ್ಬ, ಉತ್ಸವಗಳನ್ನು ಆಚರಿಸುತ್ತಾರೆ. ಅವರ ಪೂಜೆಯ ಹಾಗೂ ಉಪಾಸನೆಯ ಪದ್ಧತಿಗಳು ಬೇರೆ ಬೇರೆಯಾಗಿರುತ್ತವೆ. ವಿವಿಧ ಐತಿಹಾಸಿಕ ಉತ್ತರದಾಯಿತ್ವವಿರುವ ಪ್ರದೇಶಗಳು ನಮ್ಮ ದೇಶದಲ್ಲಿವೆ. ಅವುಗಳಲ್ಲಿ ವಿವಿಧತೆಯ ಕೊಡು-ಕೊಳ್ಳುವಿಕೆ ಇದೆ. ನಮ್ಮ ದೇಶದಲ್ಲಿಯ ಈ ವಿವಿಧ ಸಮೂಹಗಳು ಅನೇಕ ವರ್ಷಗಳಿಂದ ಒಟ್ಟಿಗೆ ವಾಸಿಸುತ್ತಿರುವುದರಿಂದ ಅವರಲ್ಲಿ ಏಕತೆಯ ಭಾವನೆ ನಿರ್ಮಾಣವಾಗಿದೆ. ಭಾರತೀಯ ಸಮಾಜದಲ್ಲಿಯ ಏಕತೆಯ ಇದರಿಂದ ಕಂಡುಬರುತ್ತದೆ.

## ೨.೧ ವಿವಿಧತೆಯೇ ನಮ್ಮ ಸಾಮರ್ಥ್ಯ

ವಿವಿಧ ಸಮೂಹಗಳ ಜೊತೆಗೆ ವಾಸಿಸುವುದೆಂದರೆ ಸಹ ಅಸ್ತಿತ್ವವನ್ನು ಅನುಭವಿಸುವುದು. ಇಂಥ ಸಹಅಸ್ತಿತ್ವದಿಂದಾಗಿ ನಮ್ಮಲ್ಲಿ ಸಾಮಂಜಸ್ಯ ಬೆಳೆಯುತ್ತದೆ. ಅದರಿಂದಾಗಿ ಪರಸ್ಪರರ ರೂಢಿ-ಪರಂಪರೆ ಹಾಗೂ ಜೀವನ ಪದ್ಧತಿಯ ಪರಿಚಯವಾಗುತ್ತದೆ. ನಾವು ಪರಸ್ಪರರ ಜೀವನ ಪದ್ಧತಿಯನ್ನು ಗೌರವಿಸುವುದನ್ನು ಕಲಿಯುತ್ತೇವೆ. ಇತರರ ಕೆಲವು ರೂಢಿ-ಪರಂಪರೆಗಳನ್ನು ನಾವು ರೂಢಿಸಿಕೊಳ್ಳುತ್ತೇವೆ. ಇದರಿಂದ ಸಮಾಜದಲ್ಲಿ ಐಕ್ಯತೆ ಬೆಳೆಯುತ್ತದೆ. ಸಾಮಾಜಿಕ ಒಕ್ಕಟ್ಟಿನಿಂದಾಗಿ ನಾವು ಅನೇಕ ನೈಸರ್ಗಿಕ ಮತ್ತು ಸಾಮಾಜಿಕ ಸಂಕಟಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

## ೨.೨ ಧರ್ಮನಿರಪೇಕ್ಷತೆಯ ತತ್ವಗಳು

ಭಾರತೀಯ ಸಮಾಜದಲ್ಲಿ ವಿವಿಧ ಧರ್ಮಗಳ ಜನರು ವಾಸಿಸುತ್ತಾರೆ. ಅವರಲ್ಲಿ ಪರಸ್ಪರ ಸಾಮಂಜಸ್ಯ ಬೆಳೆಯಬೇಕು ಹಾಗೂ ಸರ್ವರಿಗೆ ಅವರವರ ಶ್ರದ್ಧೆಗನುಸಾರವಾಗಿ ಉಪಾಸನೆ ಮಾಡುವ ಸ್ವಾತಂತ್ರ್ಯವಿರಬೇಕು ಅದಕ್ಕಾಗಿ ನಮ್ಮ ಸಂವಿಧಾನದಲ್ಲಿ ಮಹತ್ವದ ಏರ್ಪಾಟು ಮಾಡಲಾಗಿದೆ.

ಭಾರತವು ಜಗತ್ತಿನಲ್ಲಿಯ ಒಂದು ಮಹತ್ವದ ಧರ್ಮನಿರಪೇಕ್ಷ ರಾಷ್ಟ್ರವಾಗಿದೆ. ನಮ್ಮ ದೇಶದಲ್ಲಿ ಭಾಷಿಕ ಮತ್ತು ಧಾರ್ಮಿಕ ವಿವಿಧತೆಯು ದೊಡ್ಡ ಪ್ರಮಾಣದಲ್ಲಿದೆ. ಈ ವಿವಿಧತೆಯನ್ನು ಸದೃಢವಾಗಿ ಕಾಪಾಡುವ ಸಲುವಾಗಿ ನಾವು ಧರ್ಮನಿರಪೇಕ್ಷತೆಯ ತತ್ವವನ್ನು ಸ್ವೀಕರಿಸಿದ್ದೇವೆ. ಅದಕ್ಕನುಸಾರವಾಗಿ,

- ನಮ್ಮ ದೇಶದಲ್ಲಿ ರಾಜ್ಯ ಸಂಸ್ಥೆಯು ಯಾವುದೇ ಒಂದು ಧರ್ಮದ ಸಮರ್ಥನೆ ಮಾಡಿಲ್ಲ.
- ಪ್ರತಿಯೊಬ್ಬ ವ್ಯಕ್ತಿಗೆ ತಮ್ಮ ತಮ್ಮ ಇಲ್ಲವೆ ತಾವು ಇಷ್ಟಪಟ್ಟ ಧರ್ಮದ ಉಪಾಸನೆ ಮಾಡುವ ಸ್ವಾತ್ರಂತ್ರ್ಯವಿದೆ.
- ಧರ್ಮದ ಆಧಾರದ ಮೇಲೆ ವ್ಯಕ್ತಿ-ವ್ಯಕ್ತಿಗಳಲ್ಲಿ ಭೇದಭಾವ ಮಾಡಲು ಬರುವುದಿಲ್ಲ, ಸರ್ವ ಧರ್ಮದ ಜನರನ್ನು ರಾಜ್ಯ ಸಂಸ್ಥೆಯಿಂದ ಸಮಾನವಾಗಿ ನಡೆಸಿಕೊಳ್ಳಲಾಗುತ್ತದೆ.
- ಶಿಕ್ಷಣ, ಉದ್ಯೋಗ, ಸರಕಾರಿ ನೌಕರಿಯ ಅವಕಾಶವನ್ನು ಸರ್ವರಿಗೆ ದೊರಕಿಸಿ ಕೊಡಲಾಗುತ್ತದೆ. ಅದರಲ್ಲಿ ಧರ್ಮದ ಆಧಾರದಿಂದ ಭೇದಭಾವ ಮಾಡಲಾಗುವುದಿಲ್ಲ.
- ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ರಕ್ಷಣೆ ಮಾಡುವ ಸಲುವಾಗಿ ಸಂವಿಧಾನದಲ್ಲಿ ವಿಶೇಷ ಏರ್ಪಾಟು ಮಾಡಲಾಗಿದೆ. ಅಲ್ಪಸಂಖ್ಯಾತರಿಗೆ ತಮ್ಮ ತಮ್ಮ ಭಾಷಿಕ ಮತ್ತು ಸಾಂಸ್ಕೃತಿಕ ಪರಿಚಯವನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಶಿಕ್ಷಣದ ಮುಖಾಂತರ ತಮ್ಮ ತಮ್ಮ ಸಮಾಜದ ವಿಕಾಸ ಮಾಡುವ ಸ್ವಾತಂತ್ರ್ಯವೂ ಅವರಿಗಿದೆ.
- ಧರ್ಮನಿರಪೇಕ್ಷತೆ ತತ್ವದಿಂದಾಗಿ ಭಾರತಿಯ ಸಮಾಜದಲ್ಲಿ ಧಾರ್ಮಿಕ ಸಾಮಾಂಜಸ್ಯ ಉಳಿದುಕೊಂಡು ಬಂದಿದೆ.

## ೨.೩ ನಮ್ಮ ಬೆಳವಣಿಗೆಯಲ್ಲಿ ಸಮಾಜದ ಸಹಭಾಗ

ಸಮಾಜದಲ್ಲಿ ಇದ್ದು ನಾವು ಏನನ್ನು ಕಲಿಯುತ್ತೇವೆ? ಯಾವ ಗುಣಗಳನ್ನು ರೂಢಿಸಿಕೊಳ್ಳುತ್ತೇವೆ. ನಮ್ಮ ಬೆಳವಣಿಗೆಯಲ್ಲಿ ಸಮಾಜವು ಹೇಗೆ ಸಹಾಯ ಮಾಡುತ್ತದೆಂಬುದನ್ನು ನಾವು ತಿಳಿದುಕೊಳ್ಳೋಣ.

**ಸಹಕಾರ :** ಯಾವುದೇ ಸಮಾಜವು ವ್ಯಕ್ತಿ ಮತ್ತು ಸಮೂಹಗಳಲ್ಲಿಯ ಪರಸ್ಪರ ಸಹಕಾರದ ಮೇಲೆ ಆಧರಿಸಿರುತ್ತದೆ. ವ್ಯಕ್ತಿ-ವ್ಯಕ್ತಿಗಳ ನಡುವೆ ಸಹಕಾರವಿರದಿದ್ದರೆ ಸಮಾಜವು

ಅಸ್ತಿತ್ವದಲ್ಲಿ ಇರಲಾರದು. ಪರಸ್ಪರರ ಅಡಚಣೆಗಳನ್ನು ಬಗೆಹರಿಸುವ ಸಲುವಾಗಿ ಹಾಗೂ ಪ್ರಶ್ನೆಗಳನ್ನು ಬಿಡಿಸುವ ಸಲುವಾಗಿ ಪರಸ್ಪರರಿಗೆ ಸಹಾಯ ಮಾಡುವುದು ಮತ್ತು ವಿನಿಯಮ ಮಾಡುವುದೆಂದರೆ ಸಹಕಾರ ಹೌದು. ನಮ್ಮ ಮನೆಯಲ್ಲಿಯ ವ್ಯಕ್ತಿಗಳಲ್ಲಿ ಇಂಥ ಪ್ರವೃತ್ತಿ ಇರದಿದ್ದರೆ, ನಮ್ಮ ಕುಟುಂಬವು ಸ್ಥಿರವಾಗಿ ಉಳಿಯಲಾರದು. ಅದೇ ಸ್ಥಿತಿ ಸಮಾಜದ್ದೂ ಆಗುವುದು. ಸಹಕಾರದ ಅಭಾವದಿಂದ ನಮ್ಮ ವಿಕಾಸ ನಿಂತು ಹೋಗುವುದು, ದೈನಂದಿನ ಜೀವನವೂ ಸುಸೂತ್ರವಾಗಿ ನಡೆಯಲಾರದು. ಸಹಕಾರದಿಂದಾಗಿ ಸಮಾಜದಲ್ಲಿಯ ಪರಸ್ಪರಾವಲಂಬನೆಯು ಹೆಚ್ಚು ಸದೃಢವಾಗುತ್ತದೆ. ಸಮಾಜದಲ್ಲಿಯ ಎಲ್ಲರನ್ನು ಒಟ್ಟುಗೂಡಿಸಲು ಬರುತ್ತದೆ. ಎಲ್ಲ ಘಟಕಗಳ ಜೊತೆ ಕೂಡಿಕೊಂಡು ಹೋಗುವ ಒಂದು ಪದ್ಧತಿ ಇದಾಗಿದೆ.



**ಬನ್ನಿ, ಚರ್ಚೆಮಾಡೋಣ.**

ನಮ್ಮ ಸಮಾಜದಲ್ಲಿಯ ದುರ್ಬಲ ಮತ್ತು ವಂಚಿತ ಘಟಕಗಳಿಗೆ ಮತ್ತು ಹುಡುಗಿಯರಿಗೆ ಶಿಕ್ಷಣ ಪಡೆಯಲು ಹಾಗೂ ಅವರ ವಿಕಾಸದ ಸಲುವಾಗಿ ನಾವು ಸಹಕರಿಸಬೇಕು. ಅದರ ಸಲುವಾಗಿ ಸರಕಾರವು ಇಲ್ಲಿಯ ವರೆಗೆ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆಯೆಂಬುದರ ಮಾಹಿತಿ ಪಡೆಯಿರಿ. ಈ ಘಟಕಗಳ ವಿಕಾಸಕ್ಕಾಗಿ ನೀವು ಏನು ಮಾಡಬಲ್ಲಿರಿ ಎಂಬುದರ ಬಗ್ಗೆ ವರ್ಗದಲ್ಲಿ ಚರ್ಚೆ ಮಾಡಿರಿ. ಚರ್ಚೆಯಲ್ಲಿಯ ಮಹತ್ವದ ಅಂಶಗಳನ್ನು ಇತರ ವರ್ಗದಲ್ಲಿಯ ವಿದ್ಯಾರ್ಥಿಗಳ ವರೆಗೆ ತಲುಪಿಸಿರಿ.

**ಸಹಿಷ್ಣುತೆ ಮತ್ತು ಸಮಾಂಜಸ್ಯ:** ಸಮಾಜದಲ್ಲಿ ಸಹಕಾರವಿದ್ದಂತೆ ಕೆಲವೊಮ್ಮೆ ಭಿನ್ನಾಭಿಪ್ರಾಯಗಳು, ವಾದ-ವಿವಾದಗಳು ಹಾಗೂ ಸಂಘರ್ಷಗಳು ನಿರ್ಮಾಣವಾಗುತ್ತವೆ. ವ್ಯಕ್ತಿ-ವ್ಯಕ್ತಿಗಳಲ್ಲಿಯ ಅಭಿಪ್ರಾಯಗಳು, ವಿಚಾರಗಳು ಹಾಗೂ ದೃಷ್ಟಿಕೋನಗಳಲ್ಲಿ ಹೊಂದಾಣಿಕೆಯಾಗದಿದ್ದರೆ ವಿವಾದ, ಸಂಘರ್ಷಗಳು ನಿರ್ಮಾಣವಾಗಬಹುದು. ಪರಸ್ಪರರ ವಿಷಯದಲ್ಲಿದ್ದ ಪೂರ್ವಗ್ರಹ ಇಲ್ಲವೆ ತಪ್ಪು ತಿಳುವಳಿಕೆಯೂ ಸಂಘರ್ಷದ ಕಾರಣವಾಗಬಲ್ಲದು. ದೀರ್ಘಕಾಲದ ವರೆಗೆ ಸಂಘರ್ಷವನ್ನು ಮುಂದುವರಿಸುವುದು ಯಾರ ಹಿತದ್ದೂ ಆಗಿರುವುದಿಲ್ಲ, ಹೊಂದಾಣಿಕೆ ಮತ್ತು ಒಪ್ಪಂದದ ಮೂಲಕ ಜನರು ಸಂಘರ್ಷವನ್ನು ನಿವಾರಿಸಲು ಕಲಿಯುತ್ತಾರೆ. ಪರಸ್ಪರರನ್ನು ಅರ್ಥಮಾಡಿಕೊಂಡರೆ ಹಾಗೂ ಸಹಿಷ್ಣುತೆಯನ್ನು ತೋರಿಸಿದರೆ ಸಂಘರ್ಷಗಳು ನಿವಾರಣೆಯಾಗಬಹುದು.

ಸಾಮಂಜಸ್ಯದಿಂದ ನಮಗೆ ತಿಳಿಯದೆಯೇ ನಾವು ಅನೇಕ ಸಂಗತಿಗಳನ್ನು ಕಲಿಯುತ್ತೇವೆ. ಹೊಸ ವಿಚಾರಗಳನ್ನು ಗ್ರಹಿಸುತ್ತೇವೆ. ನಮ್ಮ ಸಾಮಾಜಿಕ ಜೀವನವು ಹೆಚ್ಚಿಗೆ ಹೆಚ್ಚು ಸಮೃದ್ಧವಾಗಲು ಅದು ಸಹಾಯಕವಾಗುತ್ತದೆ. ನಮ್ಮಲ್ಲಿಯ ಸಹಿಷ್ಣುತೆ ಬೆಳೆಯುತ್ತದೆ. ಸಾಮಾಜಿಕ ಸ್ವಾಸ್ಥ್ಯ ಮತ್ತು ಶಾಂತತೆಯನ್ನು ಕಾಯ್ದುಕೊಂಡು ಹೋಗುವ ಸಲುವಾಗಿ ಈ ಒಂದು ಸುಲಭವಾದ ಪದ್ಧತಿಯನ್ನು ಕಲಿಯುವ ಅವಕಾಶ ಸಮಾಜದಿಂದ ದೊರೆಯುತ್ತದೆ.



**ಮಾಡಿ ನೋಡಿರಿ.**

ನೀವೂ ಇಂಥ ಅನೇಕ ಹೊಂದಾಣಿಕೆಗಳನ್ನು ಮಾಡುತ್ತಿರಬಹುದು. ಕೆಳಗೆ ನಿಮ್ಮವೇ ಕೆಲವು ಅನುಭವಗಳಿವೆ. ಅವುಗಳಿಗೆ ಇನ್ನೂ ಕೆಲವು ಅನುಭವಗಳನ್ನು ಸೇರಿಸಿರಿ.

(ಅ) ಸಭಾಗೃಹವು ಪ್ರೇಕ್ಷಕರಿಂದ ತುಂಬಿ ಹೋಗಿದೆ. ಕುಳಿತುಕೊಳ್ಳಲು ಬೆಂಚ್ ಹುಡುಕುತ್ತಿರುವ ಒಬ್ಬ ವ್ಯಕ್ತಿಯನ್ನು ನೀವು ನಿಮ್ಮ ಬೆಂಚಿನ ಮೇಲಿನ ಸ್ವಲ್ಪ ಜಾಗದಲ್ಲಿ ಕೂಡಿಸಿಕೊಳ್ಳುತ್ತೀರಿ.

(ಬ) ನಿಮಗೆ ಗಿಯರ್ ಇರುವ ಸೈಕಲ್ ಬೇಕಾಗಿದೆ. ಆದರೆ ನಿಮ್ಮ ಅಕ್ಕನ ಫೀಯನ್ನು ತುಂಬಬೇಕಾಗಿದೆ. ನೀವು ನಿಮ್ಮ ಹಟವನ್ನು ಬದಿಗಿರಿಸುತ್ತೀರಿ.


(ಕ) ಹೊಲದ ಒಡ್ಡಿನ ವಿಷಯವಾಗಿ ನೆರೆ ಹೊಲದವನ ಜೊತೆದ ನಡೆದಿರುವ ನಿಮ್ಮ ಕುಟುಂಬದ ವಿವಾದವನ್ನು ಕೋರ್ಟಿಗೆ ಹೋಗದೆ ನೀವು ಬಗೆಹರಿಸಿದಿರಿ. ನೆರೆಹೊಲದ ಸೋಪಾನನು ಈಗ ನಿಮ್ಮ ಒಳ್ಳೆಯ ಗೆಳೆಯನಾಗಿದ್ದಾನೆ.

**ವಿವಿಧ ಪಾತ್ರಗಳನ್ನು ನಿರ್ವಹಿಸುವ ಅವಕಾಶ:** ಸಮಾಜದಲ್ಲಿ ನಮ್ಮ ಪಾಲಿಗೆ ಅನೇಕ ಪಾತ್ರಗಳು ಬರುತ್ತವೆ. ಒಬ್ಬನೇ ವ್ಯಕ್ತಿಯು ಅನೇಕ ಪಾತ್ರಗಳನ್ನು ನಿರ್ವಹಿಸುತ್ತಿರುತ್ತಾನೆ. ಪ್ರತಿಯೊಂದು ಪಾತ್ರಕ್ಕೆ ಕೆಲವು ಜವಾಬ್ದಾರಿಗಳು ಹಾಗೂ ಕರ್ತವ್ಯಗಳು ಇರುತ್ತವೆ. ಕುಟುಂಬದಲ್ಲಿ ಹಾಗೂ ಹೊರಗಡೆ ನಾವು ಈ ಪಾತ್ರಗಳ ಮೂಲಕ ಅನೇಕ ಜನರೊಡನೆ ಜೋಡಿಸಲ್ಪಡುತ್ತೇವೆ. ನಮ್ಮ ಪಾತ್ರಗಳಲ್ಲಿ ಅನೇಕ ಸಲ ಬದಲಾವಣೆಗಳಾಗುತ್ತಿರುತ್ತವೆ.



**ಮಾಡಿ ನೋಡಿರಿ.**

ವಿವಿಧ ಪಾತ್ರಗಳನ್ನು ನಿರ್ವಹಿಸುವ ಸಂಧಿ: ಇಂದಿನ ನಿಮ್ಮ ಪಾತ್ರವನ್ನು ಸ್ಪಷ್ಟಪಡಿಸುವ ಚಿತ್ರವನ್ನು ನೋಡಿರಿ. ಇಪ್ಪತ್ತು ವರ್ಷಗಳ ನಂತರ ನಿಮಗೆ ಯಾವ ಹೊಸ ಪಾತ್ರವನ್ನು ನಿರ್ವಹಿಸಬೇಕಾಗುವುದು ಎಂಬುದರ ಬಗ್ಗೆ ಚರ್ಚೆ ಮಾಡಿರಿ.




## ೨.೪ ಸಮಾಜದ ನಿಯಂತ್ರಣ

ಸಮಾಜದ ವ್ಯವಹಾರಗಳು ಸುಸೂತ್ರವಾಗಿ ನಡೆಯುವ ಸಲುವಾಗಿ ಕೆಲವು ನಿಯಮಗಳ ಅವಶ್ಯಕತೆ ಇರುತ್ತದೆ. ಮೊದಲು ಸಮಾಜದ ನಿಯಂತ್ರಣವು ಬಹುಮಟ್ಟಿಗೆ ರೂಢಿ-ಪರಂಪರೆಗಳ ಮುಖಾಂತರ ಆಗುತ್ತಿತ್ತು. ಆದರೆ ಆಧುನಿಕ ಸಮಾಜದ ನಿಯಂತ್ರಣವನ್ನು ರೂಢಿ-ಪರಂಪರೆಗಳ ಜೊತೆಗೆ ಕಾಯದೆಗಳ ಮೂಲಕವೂ ಮಾಡಲಾಗುತ್ತದೆ. ರೂಢಿ-ಪರಂಪರೆ, ಸಂಕೇತ ಇತ್ಯಾದಿಗಳಿಗಿಂತ ಕಾಯದೆಯ ಸ್ವರೂಪವು ಭಿನ್ನವಾಗಿರುತ್ತದೆ. ಈ ಸರ್ವ ಸಂಗತಿಗಳ ಆಧಾರದಿಂದ ನಮ್ಮ ಸಮಾಜದ ನಿಯಂತ್ರಣವನ್ನು ಅನೇಕ ಸಂಸ್ಥೆ ಹಾಗೂ ಸಂಘಟನೆಗಳು ಮಾಡುತ್ತವೆ. ಸ್ಥಾನಿಕ ಮಟ್ಟದಲ್ಲಿರುವ ಸರಕಾರದ ಸಂಸ್ಥೆಗಳೂ ಸಮಾಜ ನಿಯಂತ್ರಣದ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ.



## ಅಭ್ಯಾಸ

**೧. ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆಯಿರಿ.**

(೧) ವಿವಿಧ ಸಮೂಹಗಳ ಜೊತೆಗೆ ವಾಸಿಸುವುದೆಂದರೆ ............ ಅನುಭವಿಸುವುದು.

(೨) ಭಾರತವು ಜಗತ್ತಿನನಲ್ಲಿಯ ಒಂದು ಮಹತ್ವದ ............ ರಾಷ್ಟ್ರವಾಗಿದೆ.

(೩) ಸಹಕಾರದಿಂದಾಗಿ ಸಮಾಜದಲ್ಲಿಯ .............. ಹೆಚ್ಚು ಸದೃಢವಾಗುತ್ತದೆ.

**೨. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಸಹಕಾರವೆಂದರೇನು ?

(೨) ನಾವು ಧರ್ಮ ನಿರಪೇಕ್ಷತೆಯ ತತ್ವವನ್ನು ಏಕೆ ಸ್ವೀಕರಿಸಿದ್ದೇವೆ?

**೩. ಕೆಳಗಿನ ಪ್ರಶ್ನೆಗಳಿಗೆ ೨ ರಿಂದ ೩ ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(೧) ಭಾರತೀಯ ಸಮಾಜದಲ್ಲಿಯ ಏಕತೆಯು ಯಾವುದರಿಂದ ಕಂಡುಬರುತ್ತದೆ ?

(೨) ಸಮಾಜದಲ್ಲಿ ಸಂಘರ್ಷಗಳು ಯಾವಾಗ ನಿರ್ಮಾಣವಾಗುತ್ತವೆ?

(೩) ಸಹಕಾರದಿಂದ ಯಾವ ಲಾಭಗಳು ಆಗುತ್ತವೆ ?

(೪) ನಿಮ್ಮ ಎದುರಿಗೆ ಇಬ್ಬರು ಹುಡುಗರು ಜಗಳಾಡುತ್ತಿದ್ದಾರೆ, ಆಗ ನೀವು ಏನು ಮಾಡುವಿರಿ ?

(೫) ನೀವು ಶಾಲೆಯ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಯಾಗಿದ್ದೀರಿ. ನೀವು ಯಾವ ಯಾವ ಕಾರ್ಯಗಳನ್ನು ಮಾಡುವಿರಿ?

**ಉಪಕ್ರಮ**

(೧) ಶಿಕ್ಷಕರ ಸಹಾಯದಿಂದ ಶಾಲೆಯಲ್ಲಿ ಸಹಕಾರಿ ತತ್ವದ ಮೇಲೆ ಕುಮಾರ ವಸ್ತು ಭಾಂಡಾರವನ್ನು ನಡೆಸಿರಿ. ಅದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ.

(೨) ಶಾಲೆಯಲ್ಲಿ ಮತ್ತು ವರ್ಗದಲ್ಲಿ ನೀವು ಯಾವ ಯಾವ ನಿಯಮಗಳನ್ನು ಪಾಲಿಸುತ್ತೀರಿ. ಅವುಗಳ ಕೋಷ್ಟಕವನ್ನು ತಯಾರಿಸಿ ವರ್ಗದಲ್ಲಿ ಅಂಟಿಸಿರಿ.

* * *

8UU7CI


# ೩. ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು

೩.೧ ಗ್ರಾಮ ಪಂಚಾಯತಿ
೩.೨ ಪಂಚಾಯತ ಸಮಿತಿ
೩.೩ ಜಿಲ್ಲಾ ಪರಿಷತ್ತು

ಸಮಾಜದ ನಿಯಂತ್ರಣ ಮಾಡುವುದರಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ನಮ್ಮ ದೇಶದಲ್ಲಿ ಈ ಸಂಸ್ಥೆಗಳ ಜೊತೆಗೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳೂ ಸಮಾಜ ನಿಯಂತ್ರಣದ ಕಾರ್ಯದಲ್ಲಿ ಭಾಗವಹಿಸುತ್ತವೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸ್ಥೂಲವಾಗಿ ಗ್ರಾಮೀಣ ಹಾಗೂ ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆ ಎಂದು ವರ್ಗೀಕರಿಸಲಾಗುತ್ತದೆ. ಈ ಪಾಠದಲ್ಲಿ ನಾವು ಗ್ರಾಮೀಣ ಭಾಗದಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವಿಷಯವಾಗಿ ತಿಳಿದುಕೊಳ್ಳೋಣ. ಗ್ರಾಮಪಂಚಾಯತಿ, ಪಂಚಾಯತ ಸಮಿತಿ ಮತ್ತು ಜಿಲ್ಲಾ ಪರಿಷತ್ತು ಈ ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಒಟ್ಟಿಗೆ 'ಪಂಚಾಯತಿ ರಾಜ್ಯ ವ್ಯವಸ್ಥೆ' ಎಂದು ಕರೆಯಲಾಗುತ್ತದೆ.



**ನಿಮಗೆ ಗೊತ್ತಿದೆಯೇ ?**




ನಮ್ಮ ದೇಶದಲ್ಲಿ ಮೂರು ಮಟ್ಟಗಳಿಂದ ರಾಜ್ಯಾಡಳಿತ ನಡೆಯುತ್ತದೆ. ಸಂಪೂರ್ಣ ದೇಶದ ರಾಜ್ಯಾಡಳಿತವನ್ನು ಕೇಂದ್ರ ಸರಕಾರ ನಡೆಸುತ್ತದೆ. ಸಂರಕ್ಷಣೆ, ವಿದೇಶ ವ್ಯವಹಾರ, ಚಲಾವಣೆಯ ನಾಣ್ಯ, ಮುಂತಾದ ವಿಷಯಗಳು ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿ ಬರುತ್ತವೆ. ಎರಡನೆಯ ಹಂತದಲ್ಲಿ ರಾಜ್ಯ ಸರಕಾರವಿರುತ್ತದೆ. ಮಹಾರಾಷ್ಟ್ರ ರಾಜ್ಯ ಸರಕಾರವು ಕಾಯದೆ, ಸುವ್ಯವಸ್ಥೆ, ಆರೋಗ್ಯ, ಶಿಕ್ಷಣ ಇವುಗಳನ್ನು ಕುರಿತು ಕಾಯದೆ ಮಾಡುತ್ತದೆ. ಮೂರನೆಯ ಹಂತದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಇರುತ್ತವೆ. ಗ್ರಾಮೀಣ ಭಾಗದಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ 'ಪಂಚಾಯತಿ ರಾಜ್ಯ ವ್ಯವಸ್ಥೆ, ಎನ್ನುತ್ತಾರೆ.

**ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು**

| ಗ್ರಾಮೀಣ | ನಗರ |
|---|---|
| ಗ್ರಾಮ ಪಂಚಾಯತಿ | ನಗರ ಪಂಚಾಯತಿ |
| ಪಂಚಾಯತ ಸಮಿತಿ | ನಗರ ಪರಿಷತ್ತು |
| ಜಿಲ್ಲಾ ಪರಿಷತ್ತು | ಮಹಾನಗರ ಪಾಲಿಕೆ |

## ೩.೧ ಗ್ರಾಮಪಂಚಾಯತಿ

ಪ್ರತಿಯೊಂದು ಗ್ರಾಮದ ಆಡಳಿತವನ್ನು ಗ್ರಾಮಪಂಚಾಯತಿ ನೋಡಿಕೊಳ್ಳುತ್ತದೆ. ಐದು ನೂರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚು ಗ್ರಾಮಗಳಿಗಾಗಿ ಒಂದೇ ಗ್ರಾಪಂಚಾಯತಿ ಇರುತ್ತದೆ. ಇದಕ್ಕೆ 'ಮಂಡಲ ಪಂಚಾಯತಿ' ಎನ್ನುತ್ತಾರೆ. ನೀರಿನ ಪೂರೈಕೆ, ದೀಪದ ವ್ಯವಸ್ಥೆ, ಜನನ-ಮರಣ, ವಿವಾಹಗಳ ದಾಖಲೆಯನ್ನಿಡುವುದು ಇತ್ಯಾದಿ ಕಾರ್ಯಗಳನ್ನು ಗ್ರಾಮಪಂಚಾಯತಿ ಮಾಡುತ್ತದೆ.

### ಗ್ರಾಮಪಂಚಾಯತಿಯ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು:

**ಸರಪಂಚ:** ಗ್ರಾಮಪಂಚಾಯತಿಯ ಚುನಾವಣೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಆರಿಸಿಬಂದ ಸದಸ್ಯರು ತಮ್ಮಲ್ಲಿಯ ಒಬ್ಬರನ್ನು ಸರಪಂಚ ಮತ್ತು ಒಬ್ಬರನ್ನು ಉಪಸರಪಂಚರೆಂದು ಆಯ್ಕೆ ಮಾಡುತ್ತಾರೆ.ಗ್ರಾಮಪಂಚಾಯತಿಯ ಸಭೆಗಳು ಸರಪಂಚನ ಅಧ್ಯಕ್ಷತೆಯಲ್ಲಿ ನಡೆಯುತ್ತವೆ. ಗ್ರಾಮದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಸರಪಂಚನದಾಗಿರುತ್ತದೆ. ಯೋಗ್ಯ ಪದ್ಧತಿಯಿಂದ ಆಡಳಿತವನ್ನು ನಡೆಸದ ಸರಪಂಚನ ವಿರುದ್ಧ ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಲು ಬರುತ್ತದೆ. ಸರಪಂಚನು ಉಪಸ್ಥಿತನಿರದಿದ್ದಾಗ ಗ್ರಾಮಪಂಚಾಯತಿಯ ಕಾರ್ಯಕಲಾಪಗಳನ್ನು ಉಪಸರಪಂಚನು ನೋಡಿಕೊಳ್ಳುತ್ತಾನೆ.

**ಗ್ರಾಮಸೇವಕ:** ಗ್ರಾಮಸೇವಕನು ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿರುತ್ತಾನೆ. ಅವನ ನೇಮಕವನ್ನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯಕಾರಿ ಅಧಿಕಾರಗಳು ಮಾಡುತ್ತಾರೆ. ಗ್ರಾಮಪಂಚಾಯತಿಯ ದೈನಂದಿನ ಕಾರ್ಯಕಲಾಪಗಳನ್ನು ನೋಡಿಕೊಳ್ಳುವುದು, ಗ್ರಾಮಪಂಚಾಯತಿಯ ಅಭಿವೃದ್ಧಿ ಯೋಜನೆಗಳನ್ನು ಗ್ರಾಮಸ್ಥರಿಗೆ ತಿಳಿಸಿಹೇಳುವುದು ಮುಂತಾದ ಕಾರ್ಯಗಳನ್ನು ಗ್ರಾಮಸೇವಕನು ಮಾಡುತ್ತಾನೆ.


**ಗ್ರಾಮಸಭೆ:** ಗ್ರಾಮೀಣ ಭಾಗದಲ್ಲಿ ಅಥವಾ ಗ್ರಾಮದಲ್ಲಿ ವಾಸಿಸುವ ಮತದಾರರ ಸಭೆ ಎಂದರೆ ಗ್ರಾಮಸಭೆ. ಗ್ರಾಮಸಭೆಯು ಸ್ಥಾನಿಕ ಮಟ್ಟದಲ್ಲಿಯ ಜನರ ಅತ್ಯಂತ ಮಹತ್ವದ ಸಂಘಟನೆಯಾಗಿದೆ.


ಪ್ರತಿಯೊಂದು ಆರ್ಥಿಕ ವರ್ಷದಲ್ಲಿ ಗ್ರಾಮಸಭೆಯ ಕನಿಷ್ಠ ಆರು ಸಭೆಗಳಾಗಬೇಕೆಂಬುದು ಬಂಧನಕಾರಕವಾಗಿದೆ. ಗ್ರಾಮಸಭೆಯನ್ನು ಕರೆಯುವ ಜವಾಬ್ದಾರಿಯು ಸರಪಂಚನ ಮೇಲೆ ಇರುತ್ತದೆ. ಪ್ರತಿಯೊಂದು ಆರ್ಥಿಕ ವರ್ಷದ ಮೊದಲನೆಯ ಸಭೆಯಲ್ಲಿ ಗ್ರಾಮಪಂಚಾಯತಿಯು ಸಾದರಪಡಿಸಿದ ವಾರ್ಷಿಕ ವರದಿ ಮತ್ತು ಜಮಾಖರ್ಚಿನ ಮೇಲೆ


ಗ್ರಾಮಸಭೆಯು ಚರ್ಚೆ ಮಾಡುತ್ತದೆ. ಗ್ರಾಮಸಭೆಯ ಸೂಚನೆಗಳನ್ನು ಗ್ರಾಮಪಂಚಾಯತಿಗೆ ತಿಳಿಸಲಾಗುತ್ತದೆ. ಗ್ರಾಮಪಂಚಾಯತಿಯ ಅಭಿವೃದ್ಧಿ ಯೋಜನೆ ಗಳಿಗೆ ಗ್ರಾಮಸಭೆಯು ಮಾನ್ಯತೆ ನೀಡುತ್ತದೆ. ಸರಕಾರದ ಯೋಜನೆಗಳ ಲಾಭ ಪಡೆಯಲು ಯಾವ ವ್ಯಕ್ತಿಗಳು ಅರ್ಹರಾಗಿದ್ದಾರೆಂಬುದನ್ನು ನಿರ್ಧರಿಸುವ ಅಧಿಕಾರವು ಗ್ರಾಮಸಭೆಗೆ ಇರುತ್ತದೆ.

**ಗ್ರಾಮಸಭೆಯಲ್ಲಿ ಮಹಿಳೆಯರ ಸಹಭಾಗ:** ಗ್ರಾಮ ಸಭೆಗಿಂತ ಮೊದಲು ಊರಲ್ಲಿಯ ಮಹಿಳೆಯರ ಸಭೆ ನಡೆಯುತ್ತದೆ. ಅದರಲ್ಲಿ ಮಹಿಳೆಯರು ಸ್ವತಂತ್ರವಾಗಿ ವಿವಿಧ ಪ್ರಶ್ನೆಗಳ ಮೇಲೆ ಚರ್ಚೆ ಮಾಡುತ್ತಾರೆ. ಕುಡಿಯುವ ನೀರು, ಮದ್ಯಪಾನ ನಿಷೇಧ, ರೋಜಗಾರು, ಇಂಧನ, ಆರೋಗ್ಯ ಇತ್ಯಾದಿ ಸಮಸ್ಯೆಗಳನ್ನು ಕುರಿತು ಮಹಿಳೆಯರು ಗ್ರಾಮಸಭೆಯಲ್ಲಿ ಆಸಕ್ತಿಯಿಂದ ಮಾತನಾಡುತ್ತಾರೆ. ಅವಶ್ಯಕ ಬದಲಾವಣೆಗಳನ್ನು ಮಾಡಲು ಉಪಾಯಗಳನ್ನೂ ಸೂಚಿಸುತ್ತಾರೆ.

**ಗ್ರಾಮಪಂಚಾಯತಿಯ ಉತ್ಪನ್ನದ ಸಾಧನಗಳು:** ಗ್ರಾಮದ ವಿಕಾಸದ ಸಲುವಾಗಿ ಗ್ರಮಪಂಚಾಯತಿಯು ಅನೇಕ ಯೋಜನೆ ಹಾಗೂ ಉಪಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಅದಕ್ಕಾಗಿ ಗ್ರಾಮಪಂಚಾಯತಿಗೆ ಹಣದ ಅವಶ್ಯಕತೆ ಇರುತ್ತದೆ. ವಿವಿಧ ತೆರಿಗೆಗಳನ್ನು ಹೇರಿ ಗ್ರಾಮಪಂಚಾಯತಿಯು ಉತ್ಪನ್ನವನ್ನು ಪಡೆಯುತ್ತದೆ.








## ೩.೨ ಪಂಚಾಯತ ಸಮಿತಿ

ಒಂದು ತಾಲೂಕಿನಲ್ಲಿಯ ಸರ್ವ ಗ್ರಾಮಗಳಿಂದ ಕೂಡಿದ ಒಂದು ಕ್ಷೇತ್ರ ಅಭಿವೃದ್ಧಿ ವಿಭಾಗ ಇರುತ್ತದೆ. ಕ್ಷೇತ್ರಾಭಿವೃದ್ಧಿ ವಿಭಾಗದ ಆಡಳಿತವನ್ನು ನೋಡಿಕೊಳ್ಳುವ ಸಂಸ್ಥೆಯೇ ಪಂಚಾಯತ ಸಮಿತಿ. ಪಂಚಾಯತ ಸಮಿತಿಯು ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ಜೋಡಿಸುವ ಕೊಂಡಿಯಾಗಿರುತ್ತದೆ.

**ಪಂಚಾಯತ ಸಮಿತಿಯ ಪದಾಧಿಕಾರಿಗಳು:** ಪಂಚಾಯತ ಸಮಿತಿಯ ಚುನಾವಣೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಆರಿಸಿಬಂದ ಪ್ರತಿನಿಧಿಗಳು ತಮ್ಮಲ್ಲಿಯ ಒಬ್ಬನನ್ನು ಸಭಾಪತಿಯೆಂದು ಹಾಗೂ ಇನ್ನೊಬ್ಬನನ್ನು ಉಪಸಭಾಪತಿಯೆಂದು ಆಯ್ಕೆ ಮಾಡುತ್ತಾರೆ. ಪಂಚಾಯತ ಸಮಿತಿಯ ಸಭೆಗಳನ್ನು ಕರೆಯುವುದು ಮತ್ತು ಸಭೆಗಳ ಕಾರ್ಯಕಲಾಪಗಳನ್ನು ನಡೆಸುವ ಜವಾಬ್ದಾರಿ ಸಭಾಪತಿಯದಾಗಿರುತ್ತದೆ. ಸಭಾಪತಿಯ ಅನುಪಸ್ಥಿತಿಯಲ್ಲಿ ಉಪಸಭಾಪತಿಯು ಕಾರ್ಯಕಲಾಪಗಳನ್ನು ನೋಡಿಕೊಳ್ಳುತ್ತಾನೆ.

**ಪಂಚಾಯತ ಸಮಿತಿಯ ಕಾರ್ಯಗಳು**




ಕ್ಷೇತ್ರಾಭಿವೃದ್ಧಿ ವಿಭಾಗದಲ್ಲಿ ಆವ ಕಾರ್ಯಗಳನ್ನು ಮಾಡಬೇಕಾಗಿದೆಯೋ ಈ ಯೋಜನೆಗಳ ರೂಪರೇಷೆಯನ್ನು ಪಂಚಾಯತ ಸಮಿತಿಯು ತಯಾರಿಸುತ್ತದೆ. ಪ್ರತಿ ತಿಂಗಳು ಪಂಚಾಯತ ಸಿಮಿತಿಯ ಕನಿಷ್ಟಒಂದಾದರೂ ಸಭೆ ನಡೆಯುವುದು ಅವಶ್ಯಕವಿರುತ್ತದೆ.

ಪಂಚಾಯತ ಸಮಿತಿಗೆ ಜಿಲ್ಲಾ ನಿಧಿಯಿಂದ ಕೆಲವೊಂದು ಮೊತ್ತ ಸಿಗುತ್ತದೆ. ಕ್ಷೇತ್ರಾಭಿವೃದ್ಧಿ ವಿಭಾಗದಲ್ಲಿ ಮಾಡಲಾಗುವ ಅಭಿವೃದ್ಧಿ ಯೋಜನೆಗಳಿಗಾಗಿ ಪಂಚಾಯತ ಸಮಿತಿಗೆ ರಾಜ್ಯ ಸರಕಾರದಿಂದಲೂ ಅನುದಾನ ದೊರೆಯುತ್ತದೆ.

## ೩.೩ ಜಿಲ್ಲಾ ಪರಿಷತ್ತು

ಪ್ರತಿಯೊಂದು ಜಿಲ್ಲೆಗೆ ಒಂದು ಜಿಲ್ಲಾ ಪರಿಷತ್ತು ಇರುತ್ತದೆ. ಮಹಾರಾಷ್ಟ್ರದಲ್ಲಿ ಈಗ ೩೬ ಜಿಲ್ಲೆಗಳಿವೆ. ಆದರೆ ಜಿಲ್ಲಾ ಪರಿಷತ್ತುಗಳು ಮಾತ್ರ ೩೪ ಇವೆ. ಏಕೆಂದರೆ ಮುಂಬಯಿ (ನಗರ) ಜಿಲ್ಲೆಮತ್ತು ಮುಂಬಯಿ ಉಪನಗರ ಜಿಲ್ಲೆ ಇವು ಗ್ರಾಮೀಣ ಜನರ ವಸತಿಯ ಭಾಗವಾಗಿಲ್ಲ, ಆದ್ದರಿಂದ ಆ ಜಿಲ್ಲೆಗಳಿಗೆ ಜಿಲ್ಲಾ ಪರಿಷತ್ತು ಇಲ್ಲ.

**ಜಿಲ್ಲಾ ಪರಿಷತ್ತಿನ ಪದಾಧಿಕಾರಿಗಳು:** ಜಿಲ್ಲಾ ಪರಷತ್ತಿನ ಚುನಾವಣೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಆರಿಸಿಬಂದ ಪ್ರತಿನಿಧಿಗಳು ತಮ್ಮಲ್ಲಿಯ ಒಬ್ಬನನ್ನು ಅಧ್ಯಕ್ಷನೆಂದು ಹಾಗೂ ಇನ್ನೊಬ್ಬನನ್ನು ಉಪಾಧ್ಯಕ್ಷನೆಂದು ಆಯ್ಕೆ ಮಾಡುತ್ತಾರೆ.

ಜಿಲ್ಲಾ ಪರಿಷತ್ತಿನ ಸಭೆಗಳ ಅಧ್ಯಕ್ಷ ಸ್ಥಾನವು ಜಿಲ್ಲಾ ಪರಿಷತ್ತಿನ ಅಧ್ಯಕ್ಷನ ಕಡೆಗೆ ಇರುತ್ತದೆ. ಸಭೆಗಳ ಕಾರ್ಯಕಲಾಪಗಳು ಅವನ ನಿಯಂತ್ರಣದಲ್ಲಿ ನಡೆಯುತ್ತವೆ. ಜಿಲ್ಲಾ ಪರಿಷತ್ತಿನ ಆರ್ಥಿಕ ವ್ಯವಹಾರಗಳ ಮೇಲೆ ಅಧ್ಯಕ್ಷನ ನಿಯಂತ್ರಣವಿರುತ್ತದೆ.

ಜಿಲ್ಲಾ ಪರಿಷತ್ತಿನ ನಿಧಿಯೊಳಗಿಂದ ಅವಶ್ಯಕವಾದ ಹಣವನ್ನು ಖರ್ಚು ಮಾಡುವ ಅಧಿಕಾರವು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಿಗೆ ಇರುತ್ತದೆ. ಅಧ್ಯಕ್ಷನ ಅನುಪಸ್ಥಿತಿಯಲ್ಲಿ ಈ ಎಲ್ಲ ಕಾರ್ಯಗಳನ್ನು ಉಪಾಧ್ಯಕ್ಷನು ನೋಡಿ ಕೊಳ್ಳುತ್ತಾನೆ.

**ನಿಮಗೆ ಗೊತ್ತಿದೆಯೇ ?**

**ಜಿಲ್ಲಾ ಪರಿಷತ್ತಿನ ಆಡಳಿತ ಹೇಗೆ ನಡೆಯುತ್ತದೆ ?**

ಜಿಲ್ಲಾ ಪರಿಷತ್ತಿನ ಆಡಳಿತವನ್ನು ವಿವಿಧ ಸಮಿತಿಗಳ ಮುಖಾಂತರ ನಡೆಸಲಾಗುತ್ತದೆ. ಹಣಕಾಸು ಸಮಿತಿ, ಕೃಷಿ ಸಮಿತಿ, ಶಿಕ್ಷಣ ಸಮಿತಿ, ಆರೋಗ್ಯ ಸಮಿತಿ, ಜಲ ಸಂವರ್ಧನೆ ಹಾಗೂ ಸ್ವಚ್ಛತಾ ಸಮಿತಿ ಇತ್ಯಾದಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಮಹಿಳೆಯರ ಹಾಗೂ ಮಕ್ಕಳ ಪ್ರಶ್ನೆಗಳ ಬಗ್ಗೆ ವಿಚಾರ ಮಾಡುತ್ತದೆ.


**ಮುಖ್ಯ ಕಾರ್ಯಕಾರಿ ಅಧಿಕಾರಿ:** ಜಿಲ್ಲಾ ಪರಿಷತ್ತು ತೆಗೆದುಕೊಂಡ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ ಕಾರ್ಯವನ್ನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯಕಾರಿ ಅಧಿಕಾರಿಯು ಮಾಡುತ್ತಾನೆ. ಅವನ ನೇಮಕವನ್ನು ರಾಜ್ಯ ಸರಕಾರ ಮಾಡುತ್ತದೆ.




## ನೀವು ಏನು ಮಾಡಬಲ್ಲಿರಿ?

ಊಹಿಸಿರಿ, ನೀವು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯಕಾರಿ ಅಧಿಕಾರಿಯಾಗಿದ್ದೀರಿ. ನಿಮ್ಮ ಜಿಲ್ಲೆಯಲ್ಲಿ ನೀವು ಯಾವ ಅಭಿವೃದ್ಧಿ ಕಾರ್ಯಗಳಿಗೆ ಪ್ರಾಧಾನ್ಯ ನೀಡುವಿರಿ ?

### ಜಿಲ್ಲಾ ಪರಿಷತ್ತಿನ ಕಾರ್ಯಗಳು :



ಶಿಕ್ಷಣ ವಿಷಯಕ ಸೌಲಭ್ಯಗಳು




ಆರೋಗ್ಯ ವಿಷಯಕ ಸೌಲಭ್ಯಗಳು



ನೀರಿನ ಪೂರೈಕೆ




ಬೀಜಗಳ ಪೂರೈಕೆ



ದೀಪದ ವ್ಯವಸ್ಥೆ



ಊರಿನ ಪರಿಸರದಲ್ಲಿ ಗಿಡಗಳನ್ನು ನೆಡುವುದು

### ಏನು ಮಾಡಬಲ್ಲಿರಿ?

ದಿನೇಶ ಮತ್ತು ನಯನಾಗೆ ಕೆಳಗಿನ ಸಂಗತಿಗಳನ್ನು ಪಡೆಯಲು ಎಲ್ಲಿಗೆ ಹೋಗಲು ಹೇಳುವಿರಿ ?

- ಪುಟ್ಟ ತಮ್ಮ ಹಾಗೂ ತಂಗಿಯರಿಗೆ ಲಸಿಕೆ ಹಾಕುವ ಸಲುವಾಗಿ ............. .
- ತಂದೆಯ ಜೊತೆ ೭/೧೨ ಪಹಣಿ ಪತ್ರಿಕೆ ತರುವ ಸಲುವಾಗಿ ........... .
- ಹೊಸ ಗೊಬ್ಬರದ ಬಳಕೆಯನ್ನು ಕುರಿತು ಮಾಹಿತಿ ಪಡೆಯಲು .......... .
- ಅಶುದ್ಧ ನೀರಿನ ಪೂರೈಕೆಯ ವಿರುದ್ಧ ತಕರಾರು ಮಾಡುವ ಸಲುವಾಗಿ ............ .
- ಜನನ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ............ .
- ಆದಾಯದ/ಜಾತಿಯ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ............ .

### ನಿಮಗೆ ಗೊತ್ತಿದೆಯೇ ?

೧೯೯೨ ರಲ್ಲಿ ೭೩ನೇ ಹಾಗೂ ೭೪ನೇ ಸಂವಿಧಾನ ತಿದ್ದುಪಡಿಯಾಯಿತು. ಈ ತಿದ್ದುಪಡಿಯಿಂದ ಗ್ರಾಮೀಣ ಮತ್ತು ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸಂವಿಧಾನದಲ್ಲಿ ಸ್ಥಾನ ದೊರಕಿತು. ಪರಿಸರದ ಅಭಿವೃದ್ಧಿಯನ್ನು ದಕ್ಷತೆಯಿಂದ ಮಾಡುವ ಸಲುವಾಗಿ ಅವುಗಳ ಅಧಿಕಾರದ ವ್ಯಾಪ್ತಿಯನ್ನು ಹೆಚ್ಚಿಸಲಾಯಿತು. ಅವುಗಳ ಅಧಿಕಾರ ಕ್ಷೇತ್ರದಲ್ಲಿಯ ವಿಷಯಗಳನ್ನು ಹೆಚ್ಚಿಸಲಾಯಿತು. ಪರಿಣಾಮಕಾರಕ ರೀತಿಯಿಂದ ಕಾರ್ಯ ನಿರ್ವಹಿಸಬೇಕೆಂದು ಅವುಗಳ ಆರ್ಥಿಕ ಉತ್ಪನ್ನದ ಸಾಧನಗಳಲ್ಲಿ ಹೆಚ್ಚಳ ಮಾಡಲಾಯಿತು.

**ಪಂಚಾಯತಿ ರಾಜ್ಯ ವ್ಯವಸ್ಥೆ - ಒಂದು ದೃಷ್ಟಿಕ್ಷೇಪ**

ಅಧ್ಯಕ್ಷ ← ಜಿಲ್ಲಾ ಪರಿಷತ್ತು → ಮುಖ್ಯ ಕಾರ್ಯಕಾರಿ ಅಧಿಕಾರಿ

ಸಭಾಪತಿ ← ಪಂಚಾಯತ ಸಮಿತಿ → ಕ್ಷೇತ್ರ ಅಭಿವೃದ್ಧಿ ಅಧಿಕಾರಿ

ಸರಪಂಚ ← ಗ್ರಾಮ ಪಂಚಾಯತಿ → ಗ್ರಾಮ ಸೇವಕ

↓ ಚುನಾವಣೆಯ ಮುಖಾಂತರ ಆಯ್ಕೆಯಾಗುತ್ತಾರೆ.

↓ ರಾಜ್ಯ ಸರಕಾರದ ಕಡೆಯಿಂದ ನೇಮಕವಾಗುತ್ತಾರೆ.

### ನಿಮಗೆ ಗೊತ್ತಿದೆಯೇ ?

**ಚುನಾವಣೆಯಲ್ಲಿ ಯಾರಿಗೆ ಸ್ಪರ್ಧಿಸಲು ಬರುತ್ತದೆ ?**

ಗ್ರಾಮ ಪಂಚಾಯತಿ, ಪಂಚಾಯತ ಸಮಿತಿ ಮತ್ತು ಜಿಲ್ಲಾ ಪರಿಷತ್ತು ಈ ಮೂರೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಆಯ್ಕೆಯಾಗಬೇಕಾದರೆ ಕೆಲವು ಅರ್ಹತೆಗಳನ್ನು ಪೂರ್ಣ ಮಾಡಬೇಕಾಗುತ್ತದೆ. ಉದಾ. ಚುನಾವಣೆಯಲ್ಲಿ ಸ್ಪರ್ಧಿಸುವ ವ್ಯಕ್ತಿಯು ಭಾರತದ ನಾಗರಿಕನಾಗಿರಬೇಕು. ಅವನ ವಯಸ್ಸು ೨೧ ವರ್ಷ ಪೂರ್ಣವಾಗಿರಬೇಕು. ಸ್ಥಾನಿಕ ಮತದಾರ ಪಟ್ಟಿಯಲ್ಲಿ ಆ ವ್ಯಕ್ತಿಯ ಹೆಸರು ಇರಬೇಕು. ಅರ್ಹತೆಯ ಈ ಷರತ್ತುಗಳು ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಅನ್ವಯಿಸುತ್ತವೆ.

## ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು- ಗ್ರಾಮೀಣ

| ಗ್ರಾಮ ಪಂಚಾಯತಿ | ಪಂಚಾಯತ ಸಮಿತಿ | ಜಿಲ್ಲಾ ಪರಿಷತ್ತು |
| --- | --- | --- |
| **ಸದಸ್ಯರ ಸಂಖ್ಯೆ** | | |
| ಕನಿಷ್ಠ ೭<br>ಗರಿಷ್ಠ ೧೭ | ಕನಿಷ್ಠ ೧೫<br>ಗರಿಷ್ಠ ೪೫ | ಕನಿಷ್ಠ ೫೦<br>ಗರಿಷ್ಠ ೭೫ |
| **ಪದಾಧಿಕಾರಿಗಳು** | | |
| ಸರಪಂಚ<br>ಉಪಸರಪಂಚ | ಸಭಾಪತಿ<br>ಉಪಸಭಾಪತಿ | ಅಧ್ಯಕ್ಷ<br>ಉಪಾಧ್ಯಕ್ಷ |
| **ಅಧಿಕಾರಿಗಳು** | | |
| ಗ್ರಾಮ ಸೇವಕ | ಕ್ಷೇತ್ರ ಅಭಿವೃದ್ಧಿ ಅಧಿಕಾರಿ | ಮುಖ್ಯ ಕಾರ್ಯಕಾರಿ ಅಧಿಕಾರಿ |



### ಅಭ್ಯಾಸ

**೧. ಯೋಗ್ಯ ಪರ್ಯಾಯದ ಮುಂದೆ (✓) ಹೀಗೆ ಗುರುತು ಹಾಕಿರಿ.**

(೧) ಪ್ರತಿಯೊಂದು ಗ್ರಾಮದ ಸ್ಥಾನಿಕ ಆಡಳಿತವನ್ನು ......... ನೋಡಿಕೊಳ್ಳುತ್ತದೆ.
ಗ್ರಾಮಪಂಚಾಯತಿ ☐ ಪಂಚಾಯತ ಸಮಿತಿ ☐ ಜಿಲ್ಲಾ ಪರಿಷತ್ತು ☐

(೨) ಪ್ರತಿಯೊಂದು ಆರ್ಥಿಕ ವರ್ಷದಲ್ಲಿ ಗ್ರಾಮಸಭೆಯ ಕನಿಷ್ಠ ............. ಸಭೆಗಳಾಗಬೇಕೆಂದು ಬಂಧನಕಾರಕವಾಗಿದೆ.
ನಾಲ್ಕು ☐ ಐದು ☐ ಆರು ☐

(೩) ಮಹಾರಾಷ್ಟ್ರದಲ್ಲಿ ಈಗ ........... ಜಿಲ್ಲೆಗಳಿವೆ.
೩೪ ☐ ೩೫ ☐ ೩೬ ☐

**೨. ಪಟ್ಟಿಯನ್ನು ತಯಾರಿಸಿರಿ.**

ಪಂಚಾಯತ ಸಮಿತಿಯ ಕಾರ್ಯಗಳು.

**೩. ನಿಮಗೆ ಏನು ಅನಿಸುತ್ತದೆಂಬುದನ್ನು ಹೇಳಿರಿ.**

(೧) ಗ್ರಾಮ ಪಂಚಾಯತಿಯು ವಿವಿಧ ತೆರಿಗೆಗಳನ್ನು ಹೇರುತ್ತದೆ.

(೨) ಮಹಾರಾಷ್ಟ್ರದಲ್ಲಿಯ ಒಟ್ಟು ಜಿಲ್ಲೆಯ ಸಂಖ್ಯೆಗಳಿಗಿಂತ ಜಿಲ್ಲಾ ಪರಿಷತ್ತುಗಳ ಸಂಖ್ಯೆ ಕಡಿಮೆ ಇದೆ.

**೪. ಕೋಷ್ಟಕವನ್ನು ಪೂರ್ಣ ಮಾಡಿರಿ.**

ನನ್ನ ತಾಲೂಕು, ನನ್ನ ಪಂಚಾಯತ ಸಮಿತಿ

(೧) ತಾಲೂಕಿನ ಹೆಸರು ................ .

(೨) ಪಂಚಾಯತ ಸಮಿತಿಯ ಸಭಾಪತಿಯ ಹೆಸರು ......

(೩) ಪಂಚಾಯತ ಸಮಿತಿಯ ಉಪಸಭಾಪತಿಯ ಹೆಸರು ........... .

(೪) ಕ್ಷೇತ್ರ ಅಭಿವೃದ್ಧಿ ಅಧಿಕಾರಿಯ ಹೆಸರು ........... .

(೫) ಕ್ಷೇತ್ರ ಶಿಕ್ಷಣಾಧಿಕಾರಿಯ ಹೆಸರು ........... .

**೫. ಸ್ವಲ್ಪದರಲ್ಲಿ ಮಾಹಿತಿ ಬರೆಯಿರಿ.**

(೧) ಸರಪಂಚ

(೨) ಮುಖ್ಯ ಕಾರ್ಯಕಾರಿ ಅಧಿಕಾರಿ

**ಉಪಕ್ರಮ :**

(೧) ಅಭಿರೂಪ ಗ್ರಾಮಸಭೆಯನ್ನು ಏರ್ಪಡಿಸಿ ಸರಪಂಚ, ಸದಸ್ಯರು, ನಾಗರಿಕರು ಮತ್ತು ಗ್ರಾಮ ಸೇವಕರ ಪಾತ್ರಗಳನ್ನು ಅಭಿನಯಿಸಿರಿ.

(೨) ಬಾಲಸಂಸತ್ತಿನ ರಚನೆಯನ್ನು ಸ್ಪಷ್ಟಪಡಿಸುವ ಕೋಷ್ಟಕವನ್ನು ತಯಾರಿಸಿರಿ. ವರ್ಗದಲ್ಲಿ ಎಲ್ಲರಿಗೂ ಕಾಣುವ ಸ್ಥಳದಲ್ಲಿ ಅದನ್ನು ಅಂಟಿಸಿರಿ.

(೩) ನಿಮ್ಮ ಪರಿಸರದಲ್ಲಿಯ ಇಲ್ಲವೆ ನಗರದ ಸಮೀಪದ ಜಿಲ್ಲಾ ಪರಿಷತ್ತಿನ ಯೋಜನೆಗಳ ಮಾಹಿತಿಯನ್ನು ಪಡೆಯಿರಿ.

8V43E6

* * *

# ೪. ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು

೪.೧ ನಗರ ಪಂಚಾಯತಿ

೪.೨ ನಗರ ಪರಿಷತ್ತು

೪.೩ ಮಹಾನಗರ ಪಾಲಿಕೆ

ಹಿಂದಿನ ಪಾಠದಲ್ಲಿ ನಾವು ಗ್ರಾಮೀಣ ಭಾಗದಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸ್ವರೂಪವನ್ನು ನೋಡಿದೆವು. ಈ ಪಾಠದಲ್ಲಿ ನಾವು ನಗರ ಭಾಗದಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸ್ವರೂಪವನ್ನು ತಿಳಿದುಕೊಳ್ಳುವವರಿದ್ದೇವೆ. ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ನಗರ ಪಂಚಾಯತಿ, ನಗರ ಪರಿಷತ್ತು ಮತ್ತು ಮಹಾನಗರ ಪಾಲಿಕೆಗಳ ಸಮಾವೇಶವಾಗುತ್ತದೆ.

ನಮ್ಮ ದೇಶದಲ್ಲಿ ನಗರಗಳ ಸಂಖ್ಯೆಯು ಹೆಚ್ಚು ಇದೆ. ನಗರಗಳು ಶೀಘ್ರಗತಿಯಿಂದ ಬೆಳೆಯುತ್ತಿವೆ. ಗ್ರಾಮಗಳು ಸಣ್ಣ ನಗರಗಳಾಗುತ್ತಿವೆ. ಸಣ್ಣ ನಗರಗಳು-ನಗರಗಳಾಗುತ್ತಿವೆ. ನಗರಗಳು ಮಹಾನಗರಗಳಾಗುತ್ತಿವೆ. ನಗರದ ನೆರೆಹೊರೆಯಲ್ಲಿರುವ ಗ್ರಾಮೀಣ ಭಾಗದ ಸ್ವರೂಪವೂ ಬದಲಾಗುತ್ತಿದೆ.



**ಬನ್ನಿ, ಚರ್ಚೆ ಮಾಡಿರಿ.**

ನಗರಗಳನ್ನು ಕಾಡುವ ಪ್ರಮುಖ ಪ್ರಶ್ನೆಗಳು ಯಾವವು ?

ನಗರದಲ್ಲಿಯ ಸಂಬಂಧಿಕರ ಕಡೆಗೆ ದೀಪಾವಳಿಯ ಸೂಟಿಯನ್ನು ಆನಂದದಲ್ಲಿ ಕಳೆದ ರೇಶ್ಮಾ ಅಲ್ಲಿಯ ಕೆಲವು ಪ್ರಸಂಗಗಳ ವಿಷಯವಾಗಿ ವಿಚಾರ ಮಾಡತೊಡಗಿದಳು. ರೇಶ್ಮಾಳಂತೆ ಈ ಪ್ರಸಂಗದ ಬಗ್ಗೆ ನೀವು ವಿಚಾರ ಮಾಡಿರಿ ಹಾಗೂ ಎರಡು ಪರಿಚ್ಛೇದಗಳಲ್ಲಿ ಅದನ್ನು ಬರೆಯಿರಿ.

- ಅಂಬ್ಯುಲನ್ಸದ ಸೈರನ್ ಜೋರಾಗಿ ಶಬ್ದ ಮಾಡುತ್ತಿತ್ತು. ಅದಕೆ ಮುಕ್ತ ದಾರಿ ಸಿಗುತ್ತಿರಲಿಲ್ಲ.
- ನೀರು ಕಡಿತದ ನಿರ್ಣಯದಿಂದಾಗಿ ನೀರಿನ ಟ್ಯಾಂಕರ ಮುಂದೆ ಗದ್ದಲವಿತ್ತು.
- ಉದ್ಯಾನದಲ್ಲಿ ಚಿಕ್ಕಮಕ್ಕಳು ಮತ್ತು ಹಿರಿಯ ನಾಗರಿಕರಿಗಾಗಿ ಸೌಕರ್ಯಗಳನ್ನು ಮಾಡಲಾಗುತ್ತಿತ್ತು.

**ನಗರಗಳಲ್ಲಿಯ ಸೌಕರ್ಯಗಳು ಮತ್ತು ಸಮಸ್ಯೆಗಳು**

| | |
|---|---|
| ೧. ಉದ್ಯೋಗ, ವ್ಯವಸಾಯಗಳ ಅವಕಾಶ | ೧. ಮನೆಯ ಸಮಸ್ಯೆ |
| ೨. ಬೆಳೆಯುತ್ತಿರುವ ಸೇವಾ ಕ್ಷೇತ್ರ | ೨. ಸ್ಥಳದ ಅಭಾವ |
| ೩. ದೊಡ್ಡ ಪ್ರಮಾಣದಲ್ಲಿ ರೋಜಗಾರು | ೩. ಸಾರಿಗೆಯ ವಾಹನಗಳ ದಟ್ಟಣೆ |
| ೪. ಮನರಂಜನೆ, ಕಲೆ, ಸಾಹಿತ್ಯ ಇತ್ಯಾದಿ ಸೌಕರ್ಯಗಳು ಉಪಲಬ್ದ | ೪. ಕಸದ ವಿಲೇವಾರಿ ಸಮಸ್ಯೆ |
| | ೫. ಹೆಚ್ಚುತ್ತಿರುವ ಅಪರಾಧ |
| | ೬. ಕೊಳೆಗೇರಿಗಳಲ್ಲಿ ಬೃಹತ್ ಪ್ರಮಾಣದಲ್ಲಿ ಜನಸಂಖ್ಯೆ |

## ೪.೧ ನಗರ ಪಂಚಾಯತಿ

ನಗರದಲ್ಲಿ ರೂಪಾಂತರವಾಗುವ ಸ್ಥಿತಿಯಲ್ಲಿ ಯಾವ ಊರುಗಳು ಇರುತ್ತವೆಯೋ ಅಲ್ಲಿ ನಗರ ಪಂಚಾಯತಿ ಇರುತ್ತದೆ. ಪೂರ್ಣತ: ಹಳ್ಳಿಯೂ ಅಲ್ಲ ಮತ್ತು ನಗರವೂ ಅಲ್ಲ, ಇಂಥ ಕೆಲವು ಸ್ಥಳಗಳನ್ನು ನಾವು ಕಾಣುತ್ತೇವೆ. ಅಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಯೆಂದರೆ ನಗರ ಪಂಚಾಯತಿ ಹೌದು. ಇತರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಂತೆ ನಗರ ಪಂಚಾಯತಿಗೆ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಆರಿಸಿ ಬಂದ ಪ್ರತಿನಿಧಿಗಳು ತಮ್ಮಲ್ಲಿಯ ಒಬ್ಬನನ್ನು ಅಧ್ಯಕ್ಷನೆಂದು ಹಾಗೂ ಇನ್ನೊಬ್ಬನನ್ನು ಉಪಾಧ್ಯಕ್ಷನೆಂದು ಆಯ್ಕೆ ಮಾಡುತ್ತಾರೆ.

* ಎಲ್ಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಕೆಲವು ಅವಶ್ಯಕ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಅದಕ್ಕನುಸಾರವಾಗಿ ನಗರ ಪಂಚಾಯತಿಯ ಅವಶ್ಯಕ ಕಾರ್ಯಗಳು ಯಾವವು ಎಂದು ನಿಮಗೆ ಅನಿಸುತ್ತದೆ ?


### ೪.೨ ನಗರ ಪರಿಷತ್ತು

ಸಣ್ಣ ನಗರಗಳಿಗಾಗಿ ನಗರ ಪರಿಷತ್ತು ಎಂಬ ಸ್ಥಾನಿಕ ಸ್ವರಾಜ್ಯ ಸಂಸ್ಥೆಯನ್ನು ನಿರ್ಮಿಸಲಾಗುತ್ತದೆ. ನಗರ ಪರಿಷತ್ತಿನ ಚುನಾವಣೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಆರಿಸಿಬಂದ ಪ್ರತಿನಿಧಿಗಳು ನಗರ ಸೇವಕರೆಂದು ಕಾರ್ಯ ಮಾಡುತ್ತಾರೆ. ಅವರು ತಮ್ಮಲ್ಲಿಯ ಒಬ್ಬರನ್ನು ಅಧ್ಯಕ್ಷರೆಂದು ಆಯ್ಕೆ ಮಾಡುತ್ತಾರೆ. ಅವರನ್ನು ನಗರಾಧ್ಯಕ್ಷರೆಂದು ಕರೆಯುತ್ತಾರೆ.

ನಗರ ಪರಿಷತ್ತಿನ ಸರ್ವ ಸಭೆಗಳ ಅಧ್ಯಕ್ಷ ಸ್ಥಾನವನ್ನು ನಗರಾಧ್ಯಕ್ಷನು ಅಲಂಕರಿಸುತ್ತಾನೆ. ಅಲ್ಲಿಯ ಕಾರ್ಯ-ಕಲಾಪಗಳನ್ನು ನಿಯಂತ್ರಿಸುತ್ತಾನೆ. ನಗರ ಪರಿಷತ್ತಿನ ಆರ್ಥಿಕ ವ್ಯವಹಾರಗಳ ಮೇಲೆ ನಗರಾಧ್ಯಕ್ಷನು ಲಕ್ಷ್ಯವಿಡುತ್ತಾನೆ. ನಗರಾಧ್ಯಕ್ಷನ ಅನುಪಸ್ಥಿತಿಯಲ್ಲಿ ಉಪನಗರಾಧ್ಯಕ್ಷನು ನಗರ ಪರಿಷತ್ತಿನ ಕಾರ್ಯಗಳನ್ನು ನೋಡಿಕೊಳ್ಳುತ್ತಾನೆ.

ನಗರ ಪರಿಷತ್ತಿಗೆ ಕೆಲವು ಕಾರ್ಯಗಳನ್ನು ಮಾಡುವುದು ಬಂಧನಕಾರಕವಾಗಿರುತ್ತದೆ. ಅವು ಅವಶ್ಯಕ ಕಾರ್ಯಗಳೆಂದು ಗುರುತಿಸಲ್ಪಡುತ್ತವೆ. ಉದಾಹರಣೆಗಾಗಿ; ಸಾರ್ವಜನಿಕ ರಸ್ತೆಗಳ ಮೇಲೆ ದೀಪದ ವ್ಯವಸ್ಥೆ ಮಾಡುವುದು. ನೀರಿನ ಪೂರೈಕೆ, ಸಾರ್ವಜನಿಕ ಸ್ವಚ್ಛತೆ ಹಾಗೂ ಕೊಳಚೆ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡುವುದು, ಜನನ-ಮರಣ, ವಿವಾಹಗಳ ದಾಖಲೆಯನ್ನಿಡುವುದು ಇತ್ಯಾದಿ.

ಇವಲ್ಲದೆ ನಗರ ಪರಿಷತ್ತು ಜನತೆಗೆ ಅಧಿಕ ಸೇವಾ-ಸೌಲಭ್ಯಗಳು ದೊರೆಯಬೇಕೆಂದು ಇತರ ಕೆಲವು ಕಾರ್ಯಗಳನ್ನು ಮಾಡುತ್ತದೆ. ಅವುಗಳಿಗೆ 'ನಗರ ಪರಿಷತ್ತಿನ ಐಚ್ಛಿಕ ಕಾರ್ಯಗಳು' ಎನ್ನುತ್ತಾರೆ. ಸಾರ್ವಜನಿಕ ರಸ್ತೆಗಳ ಯೋಜನೆಯನ್ನು ತಯಾರಿಸುವುದು ಮತ್ತು ಅದಕ್ಕಾಗಿ ಭೂಸಂಪಾದನೆ ಮಾಡುವುದು ಅಂದರೆ ಅದನ್ನು ದೊರಕಿಸುವುದು, ಕೊಳೆಗೇರಿಗಳ ಸುಧಾರಣೆ ಮಾಡುವುದು, ಸಾರ್ವಜನಿಕ ಉದ್ಯಾನ ಹಾಗೂ ಹೂದೋಟಗಳನ್ನು ನಿರ್ಮಿಸುವುದು, ದನಕರುಗಳಿಗಾಗಿ ಸುರಕ್ಷಿತ ಆಶ್ರಯವನ್ನು ಉಪಲಬ್ಧ ಮಾಡಿಕೊಡುವುದು ಮುಂತಾದವುಗಳು ನಗರ ಪರಿಷತ್ತಿನ ಐಚ್ಛಿಕ ಕಾರ್ಯಗಳಾಗಿವೆ.




**ನಿಮಗೆ ಗೊತ್ತಿದೆಯೇ ?**

ಪ್ರತಿಯೊಂದು ನಗರ ಪರಿಷತ್ತಿಗೆ ಒಬ್ಬ ಮುಖ್ಯಾಧಿಕಾರಿ ಇರುತ್ತಾನೆ. ನಗರ ಪರಿಷತ್ತು ತೆಗೆದುಕೊಂಡ ನಿರ್ಣಯಗಳನ್ನು ಅವನು ಜಾರಿಗೊಳಿಸುತ್ತಾನೆ. ಅವನಿಗೆ ಸಹಾಯ ಮಾಡಲು ಅನೇಕ ಅಧಿಕಾರಿಗಳು ಇರುತ್ತಾರೆ.

* ನೀವು ಇಂಥ ಅಧಿಕಾರಿಯಾಗಲು ಇಷ್ಟಪಡುವಿರಾ? ನೀವು ಆರೋಗ್ಯಾಧಿಕಾರಿಯಾದರೆ ಯಾವ ಕಾರ್ಯಗಳನ್ನು ಮಾಡುವಿರಿ ?

**ನಗರ ಪರಿಷತ್ತಿನ ಉತ್ಪನ್ನದ ಸಾಧನಗಳು**






**ನೀವು ಏನು ಮಾಡಬಲ್ಲಿರಿ ?**

೧. ಕಸವನ್ನು ಒಯ್ಯುವವನಿಗೆ ನಿಮ್ಮ ಮನೆಯಲ್ಲಿಯ ಕಸವನ್ನು ಕೊಡುವಾಗ .......

೨. ನೀರಿನ ಪೈಪು ಒಡೆದುದರಿಂದ ರಸ್ತೆಯಲ್ಲಿ ನೀರು ನಿಂತಿದೆ ..........

೩. 'ಪಾನಿಪುರಿ' ತಯಾರಿಸಲು ಅಶುದ್ಧ ನೀರನ್ನು ಉಪಯೋಗಿಸಲಾಗುತ್ತದೆಂಬುದು ನಿಮಗೆ ತಿಳಿದಿದೆ .........

೪. ಸೇತುವೆಯ ಮೇಲಿಂದ ಅನೇಕ ಜನರು ನದಿಯಲ್ಲಿ ನೈರ್ಮಲ್ಯದ ಪ್ಲ್ಯಾಸ್ಟಿಕ್ ಚೀಲಗಳನ್ನು ಎಸೆಯುತ್ತಿದ್ದಾರೆ .........

೫. ನಗರ ಪರಿಷತ್ತಿನ ಕೊಳೆಗೇರಿ ಸುಧಾರಣಾ ಕಾರ್ಯಕ್ರಮವು ವರ್ತಮಾನ ಪತ್ರದಲ್ಲಿ ಪ್ರಸಿದ್ಧವಾಗಿದೆ. ಆದರೆ ಅದರಲ್ಲಿಯ ಒಂದು ವಿಶಿಷ್ಟ ಕೃತಿ ನಿಮಗೆ ಅಯೋಗ್ಯವೆನಿಸುತ್ತದೆ ......

**ನಗರ ಪರಿಷತ್ತಿನ ವತಿಯಿಂದ ಮನವಿ**

ಡೆಂಗ್ಯೂದ ಪ್ರಸಾರವನ್ನು ತಡೆಯುವ ಸಲುವಾಗಿ ಸೊಳ್ಳೆಗಳ ಉತ್ಪತ್ತಿಯನ್ನು ನಿಲ್ಲಿಸಿರಿ. ಅದಕ್ಕಾಗಿ ಇಷ್ಟನ್ನು ಮಾಡಿರಿ.

೧. ಹಳೆಯ ಟೈರು, ತೆಂಗಿನ ಪರಟೆ, ಹಳೆಯ ಖಾಲಿ ಡಬ್ಬಿಗಳನ್ನು ಮಾಳಿಗೆಯ ಮೇಲೆ ಅಥವಾ ಸುತ್ತಮುತ್ತ ಕಾಯ್ದಿರಿಸಬೇಡಿರಿ.

೨. ಜ್ವರ ಕಡಿಮೆಯಾಗದಿದ್ದರೆ ತಕ್ಷಣ ವೈದ್ಯಕೀಯ ನೆರವು ಪಡೆಯಿರಿ.

೩. ಪರಿಸರವನ್ನು ಸ್ವಚ್ಛವಾಗಿಡಿರಿ.

* ನಿಮ್ಮ ಮನೆಯಲ್ಲಿ ಮತ್ತು ಪರಿಸರದಲ್ಲಿ ಈ ಮನವಿಯ ಆಧಾರದಿಂದ ನೀವು ಏನು ಮಾಡಬಲ್ಲಿರಿ ?

## ೪.೩ ಮಹಾನಗರಪಾಲಿಕೆ

ದೊಡ್ಡ ನಗರಗಳಲ್ಲಿ ನಾಗರಿಕರಿಗೆ ವಿವಿಧ ಸೇವೆಗಳನ್ನು ಒದಗಿಸುವ ಸ್ಥಾನಿಕ ಸ್ವರಾಜ್ಯ ಸಂಸ್ಥೆಗೆ 'ಮಹಾನಗರಪಾಲಿಕೆ' ಎನ್ನುತ್ತಾರೆ. ಮಹಾರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಮುಂಬಯಿಯಲ್ಲಿ ಮಹಾನಗರ ಪಾಲಿಕೆಯ ಸ್ಥಾಪನೆ ಮಾಡಲಾಯಿತು.

**ಶೋಧಿಸಿದರೆ ಮತ್ತಷ್ಟು ತಿಳಿಯುವುದು....**

ನಮ್ಮ ಮಹಾರಾಷ್ಟ್ರದಲ್ಲಿ ಎಷ್ಟು ನಗರಗಳ ಆಡಳಿತವನ್ನು ಮಹಾನಗರಪಾಲಿಕೆ ನೋಡಿಕೊಳ್ಳುತ್ತದೆ?

ನಿಮ್ಮ ನಗರದ ಮಹಾನಗರಪಾಲಿಕೆಯು ಯಾವಾಗ ಅಸ್ತಿತ್ವದಲ್ಲಿ ಬಂದಿತು ?

ನಗರದ ಜನಸಂಖ್ಯೆಯ ಪ್ರಮಾಣದಲ್ಲಿ ಮಹಾನಗರ ಪಾಲಿಕೆಯ ಒಟ್ಟು ಸದಸ್ಯರ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ. ಮಹಾನಗರ ಪಾಲಿಕೆಯ ಚುನಾವಣೆಗಳು ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಆರಿಸಿ ಬಂದ ಪ್ರತಿನಿಧಿಗಳು ನಗರ ಸೇವಕರಿರುತ್ತಾರೆ. ಅವರು ತಮ್ಮಲ್ಲಿಯ ಒಬ್ಬನನ್ನು ಮಹಾಪೌರನೆಂದು, ಇನ್ನೊಬ್ಬನನ್ನು ಉಪಮಹಾಪೌರನೆಂದು ಆಯ್ಕೆ ಮಾಡುತ್ತಾರೆ. ಮಹಾಪೌರನು ನಗರದ ಪ್ರಥಮ ನಾಗರಿಕನಾಗಿರುತ್ತಾನೆ. ಅವನು ಮಹಾನಗರಪಾಲಿಕೆಯ ಸಭೆಗಳ ಅಧ್ಯಕ್ಷನಾಗಿರುತ್ತಾನೆ. ಮಹಾನಗರಪಾಲಿಕೆಯ ಸರ್ವಸಾಧಾರಣ ಸಭೆಯಲ್ಲಿ ನಗರದ ಅನೇಕ ಪ್ರಶ್ನೆಗಳನ್ನು ಕುರಿತು ಚರ್ಚೆಯಾಗುತ್ತದೆ. ನಗರದ ಅಭಿವೃದ್ಧಿಯ ವಿಷಯವಾಗಿ ಅನೇಕ ಮಹತ್ವದ ನಿರ್ಣಯಗಳನ್ನು ಅಲ್ಲಿ ತೆಗೆದುಕೊಳ್ಳಲಾಗುತ್ತದೆ.

**ಮಹಾನಗರಪಾಲಿಕೆಯ ಸಮಿತಿಗಳು:** ಮಹಾನಗರ ಪಾಲಿಕೆಯ ಆಡಳಿತವು ಸಮಿತಿಗಳ ಮುಖಾಂತರ ನಡೆಯುತ್ತದೆ. ಶಿಕ್ಷಣ ಸಮಿತಿ, ಆರೋಗ್ಯ ಸಮಿತಿ, ಸಾರಿಗೆ ಸಮಿತಿ ಇವು ಅವುಗಳಲ್ಲಿಯ ಕೆಲವು ಮಹತ್ವದ ಸಮಿತಿಗಳಾಗಿವೆ.

**ಮಹಾನಗರಪಾಲಿಕೆಯ ಆಡಳಿತ :** ಮಹಾನಗರ ಪಾಲಿಕೆಯ ಆಯುಕ್ತನು ಮಹಾನಗರಪಾಲಿಕೆಯ ಆಡಳಿತದ ಪ್ರಮುಖನಾಗಿರುತ್ತಾನೆ. ಮಹಾನಗರ ಪಾಲಿಕೆಯು ಕೈಕೊಂಡ ಎಲ್ಲ ನಿರ್ಣಯಗಳನ್ನು ಅವನು ಜಾರಿಗೆ ತರುತ್ತಾನೆ. ಉದಾ. ಯಾವುದೊಂದು ಮಹಾನಗರಪಾಲಿಕೆಯು ಪ್ಲಾಸ್ಟಿಕ್ ಚೀಲಗಳ ಉಪಯೋಗವನ್ನು ನಿರ್ಬಂಧಿಸುವ ನಿರ್ಣಯವನ್ನು ತೆಗೆದುಕೊಂಡಿದ್ದರೆ ಅದನ್ನು ಪ್ರತ್ಯಕ್ಷ ಜಾರಿಗೊಳಿಸುವ ಕಾರ್ಯವನ್ನು ಮಹಾನಗರಪಾಲಿಕೆಯ ಆಯುಕ್ತನು ಮಾಡುತ್ತಾನೆ. ಮಹಾನಗರಪಾಲಿಕೆಯ ವಾರ್ಷಿಕ ಮುಂಗಡಪತ್ರವನ್ನು ಅವನು ತಯಾರಿಸುತ್ತಾನೆ. ಮಹಾನಗರಪಾಲಿಕೆಯ ಸರ್ವಸಾಧಾರಣ ಸಭೆಯಲ್ಲಿ ಅವನು ಉಪಸ್ಥಿತನಿರುತ್ತಾನೆ.



**ಮಾಡಿ ನೋಡಿರಿ.**

ನಿಮ್ಮ ವರ್ಗದ ಒಂದು ಶಿಕ್ಷಣ ಸಮಿತಿಯನ್ನು ತಯಾರಿಸಿರಿ. ಹುಡುಗರು ಹಾಗೂ ಹುಡುಗಿಯರ ಸಮಾನ ಪ್ರತಿನಿಧಿತ್ವವಿರುವ ಈ ಸಮಿತಿಯು ಕೆಳಗಿನ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡಬೇಕು ಹಾಗೂ ಅದರ ವರದಿಯನ್ನು ತಯಾರಿಸಬೇಕು.

(ಅ) ವರ್ಗದ ಕೋಣೆಯಲ್ಲಿಯ ಸೌಕರ್ಯಗಳು
(ಆ) ವರ್ಗದಲ್ಲಿ ಚಿಕ್ಕ ಗ್ರಂಥಾಲಯ ನಿರ್ಮಿತಿಯ ಸೂಚನೆ
(ಕ) ಕ್ರೀಡಾಸ್ಪರ್ಧೆಗಳ ಏರ್ಪಾಡು




**ನಿಮಗೆ ಗೊತ್ತಿದೆಯೇ ?**

ಒಟ್ಟು ಜನಸಂಖ್ಯೆಯಲ್ಲಿ ಸ್ತ್ರೀಯರ ಪ್ರಮಾಣವು ಬಹುಮಟ್ಟಿಗೆ ಪುರುಷರ ಅರ್ಧದಷ್ಟು ಇದೆ. ಆದರೆ ರಾಜ್ಯಾಡಳಿತದಲ್ಲಿ ಸ್ತ್ರೀಯರು ಅಪರೂಪವಾಗಿ ಕಾಣಿಸುತ್ತಾರೆ. ತಮ್ಮ ಮನೆಗೆಲಸಗಳಲ್ಲಿ ಸ್ತ್ರೀಯರು ಆಹಾರ, ಇಂಧನ, ನೀರು ಇತ್ಯಾದಿ ಅನೇಕ ಮಹತ್ವದ ವಿಷಯಗಳನ್ನು ಅವರು ದಿನಾಲು ಬಳಸುತ್ತಾರೆ. ಆದರೆ ಈ ವಿಷಯದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿ ಅವರ ಪಾಲು ಇರುವುದಿಲ್ಲ. ಮಹಿಳೆಯು ಮನೆಯ ನೀರಿನ ಬಗ್ಗೆ ಕಾಳಜಿ ವಹಿಸುತ್ತಾಳೆ, ಆದರೆ ನೀರಿನ ಸಮಸ್ಯೆಯಲ್ಲಿ ಅವಳ ಸಹಭಾಗವಿರುವುದಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಪ್ರತಿಶತ ಐವತ್ತರಷ್ಟು ಕಾಯ್ದಿಟ್ಟ ಸ್ಥಾನಗಳಿಂದಾಗಿ ಇಂಥ ಮಹತ್ವದ ಸಮಸ್ಯೆಗಳನ್ನು ಬಗೆಹರಿಸುವ ಅವಕಾಶವು ಮಹಿಳೆಯರಿಗೆ ದೊರಕಿದೆ.

ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಮಹಾನಗರ ಪಾಲಿಕೆಯ ಕಾರ್ಯಗಳನ್ನು ಶೋಧಿಸಿ ಅವುಗಳ ಒಂದು ಸೂಚಿಯನ್ನು ತಯಾರಿಸಿರಿ.

- ನೀರಿನ ಪೂರೈಕೆ
- ಪೋಲೀಸ
- ರೈಲಿನ ವೇಳಾಪತ್ರಿಕೆ ನಿರ್ಧರಿಸುವುದು
- ಪರ್ಯಾ-ವರಯ ರಕ್ಷಣ
- ದೇಶದ ಗಡಿಗಳ ರಕ್ಷಣೆ
- ರಸ್ತೆಯ ಮೇಲಿನ ದೀಪ
- ಅನಧಿಕೃತ ಕಟ್ಟಡಗಳನ್ನು ಕೆಡಹುವುದು
- ಜನನ-ಮರಣ, ವಿವಾಹ ದಾಖಲೆ
- ಅಗ್ನಿಶಾಮಕ ಸೇವೆ
- ಅಪಾಯಕರ ಕಟ್ಟಡಗಳ ಬಗ್ಗೆ ಸೂಚನೆ
- ಪ್ರಾಥಮಿಕ ಶಿಕ್ಷಣ
- ಕಟ್ಟಡ ಕಟ್ಟಲು ಪರವಾನಿಗೆ
- ನಗರದಲ್ಲಿಯ ಸಾರ್ವಜನಿಕ ಸಾರಿಗೆ




**ಮಹಾನಗರಪಾಲಿಕೆಯ ಉತ್ಪನ್ನದ ಸಾಧನಗಳು**

↓

- → ಮನೆಯ ಮೇಲಿನ ಕರ
- → ಆಸ್ತಿಯ ಮೇಲಿನ ಕರ
- → ನೀರಿನ ಕರ
- → ವ್ಯವಸಾಯ ಕರ
- → ಮನರಂಜನೆಯ ಕರ
- → ಸಾಲವನ್ನು ಪಡೆಯುವುದು
- → ರಾಜ್ಯ ಸರಕಾರದ ಅನುದಾನ

**ಇದನ್ನು ಓದಿದ ಮೇಲೆ ನಿಮಗೆ ಏನು ಅನಿಸುತ್ತದೆ ?**

- ನಿಮ್ಮ ನಗರದಲ್ಲಿ ಮೆಟ್ರೋ ಆರಂಭವಾಗಲಿದೆ.
- ಇಪ್ಪತ್ನಾಲ್ಕು ಅಂತಸ್ತಿನ ಕಟ್ಟಡದ ನಿರ್ಮಾಣಕ್ಕೆ ಪರವಾನಿಗೆ ದೊರೆತಿದೆ.
- ಪ್ರತಿಯೊಂದು ವಾರ್ಡಿನಲ್ಲಿ ಉದ್ಯಾನ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ ಮಾಡುವುದಿದೆ.
- ಉದ್ಯಾನಗಳಿಗಾಗಿ ಹಾಗೂ ವಾಹನಗಳನ್ನು ತೊಳೆಯುವ ಸಲುವಾಗಿ ಶುದ್ಧ ನೀರಿನ ಬಳಕೆ ಮಾಡುವವರ ಮೇಲೆ ಕ್ರಮ ಕೈಕೊಳ್ಳಲಾಗುವುದು.
- ಹಸಿ ಕಸವನ್ನು ಪರಿಸರದಲ್ಲಿಯೇ ಜೀರ್ಣ-ಗೊಳಿಸುವಂತೆ ನಿರ್ಬಂಧನೆ ಹಾಕಲಾಗಿದೆ.
- ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳ ನಿರ್ಮಾಣ ಮಾಡುವುದಿದೆ.

**ಮಹಾನಗರಪಾಲಿಕೆಯ ಹೀಗೆ ಏಕೆ ಮಾಡಿತು ?**

- ಮಹಾನಗರಪಾಲಿಕೆಯು ಗುಡ್ಡಗಳ ಮೇಲೆ ಗಿಡಗಳನ್ನು ಕಡಿದು ಕಟ್ಟಡಗಳನ್ನು ಕಟ್ಟಲು ಪರವಾನಿಗೆಯನ್ನು ಕೊಡಲಿಲ್ಲ.
- ಡೆಂಗ್ಯೂ, ಸ್ವಾಯಿನ ಫ್ಲೂ, ಕೊರೊನಾ ಗಳಂತಹ ರೋಗಗಳನ್ನು ನಿಯಂತ್ರಿಸಲು ಅನೇಕ ಉಪಾಯ ಯೋಜನೆಗಳನ್ನು ಮಾಡಿತು.
- ಅಗ್ನಿಶಾಮಕ ವ್ಯವಸ್ಥೆಯನ್ನು ಆಧುನೀಕರಿಸಲಾಗಿದೆ.
- ಕಾಯಿಪಲ್ಯೆ ಬಜಾರಿನಲ್ಲಿ ತೂಕದ ಕಲ್ಲು ಮತ್ತು ತಕ್ಕಡಿಗಳನ್ನು ಪರೀಕ್ಷಿಸಲಾಯಿತು.

**ಏನು ಮಾಡಬಲ್ಲಿರಿ ?**

ನಿಮ್ಮ ಪರಿಸರದಲ್ಲಿಯ ನಗರ ಪರಿಷತ್ತು ಇಲ್ಲವೆ ಮಹಾನಗರಪಾಲಿಕೆಯ ಆಸ್ಪತ್ರೆಗಳು ಎಲ್ಲಿ ಇವೆಯೆಂಬುದನ್ನು ಶೋಧಿಸಿರಿ. ಈ ಆಸ್ಪತ್ರೆಯಲ್ಲಿ ಯಾವ ಸೌಕರ್ಯಗಳು ಇವೆ ? ಆಸ್ಪತ್ರೆಯಲ್ಲಿ ಉಪಚಾರ ಪಡೆಯಲು ಏನು ಮಾಡಬೇಕಾಗುತ್ತದೆ ?

**ಸ್ಥಾನಿಕ ಸ್ವರಾಜ್ಯ ಸಂಸ್ಥೆ- ನಗರ**

| ನಗರ ಪಂಚಾಯತಿ | ನಗರ ಪರಿಷತ್ತು | ಮಹಾನಗರಪಾಲಿಕೆ |
|---|---|---|
| **ಸದಸ್ಯರ ಸಂಖ್ಯೆ** | | |
| ಕನಿಷ್ಟ ೯<br>ಗರಿಷ್ಠ ೧೫ | ಕನಿಷ್ಟ ೧೭<br>ಗರಿಷ್ಠ ೩೮ | ಜನಸಂಖ್ಯೆಯ ಪ್ರಮಾಣದಲ್ಲಿ ಒಟ್ಟು ಸದಸ್ಯರ ಸಂಖ್ಯೆ ನಿಶ್ಚಿತವಾಗುತ್ತದೆ. |
| **ಪದಾಧಿಕಾರಿಗಳು** | | |
| ಅಧ್ಯಕ್ಷ<br>ಉಪಾಧ್ಯಕ್ಷ | ನಗರಾಧ್ಯಕ್ಷ<br>ಉಪನಗರಾಧ್ಯಕ್ಷ | ಮಹಾಪೌರ<br>ಉಪಮಹಾಪೌರ |
| **ಅಧಿಕಾರಿಗಳು** | | |
| ಕಾರ್ಯಕಾರಿ ಅಧಿಕಾರಿ | ಮುಖ್ಯಾಧಿಕಾರಿ | ಆಯುಕ್ತ |



**ನಿಮಗೆ ಗೊತ್ತಿದೆಯೇ ?**

**ಮೀಸಲಾತಿ ಎಂದರೇನು ? ಅದು ಏಕೆ ಅವಶ್ಯಕವಾಗಿದೆ ?**

ಗ್ರಾಮಪಂಚಾಯಿತಿ, ಪಂಚಾಯತ ಸಮಿತಿ ಮತ್ತು ಜಿಲ್ಲಾ ಪರಿಷತ್ತು, ನಗರ ಪಂಚಾಯತ, ನಗರ ಪರಿಷತ್ತು ಮತ್ತು ಮಹಾನಗರಪಾಲಿಕೆಗಳಲ್ಲಿ ಎಷ್ಟು ಸ್ಥಾನಗಳನ್ನು ಜನರು ಆಯ್ಕೆ ಮಾಡಬೇಕಾಗುತ್ತದೆಯೋ ಅವುಗಳಲ್ಲಿಯ ಕೆಲವು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ನಾಗರಿಕರಲ್ಲಿಯ ಹಿಂದುಳಿದ ವರ್ಗಗಳಿಗಾಗಿ ಕಾಯ್ದಿಡಲಾಗಿರುತ್ತದೆ. ಈ ಸ್ಥಾನಗಳಿಗೆ ಆ ಆ ವರ್ಗದಲ್ಲಿಯ ಜನರೇ ಆಯ್ಕೆಯಾಗುತ್ತಾರೆ. ಇದಕ್ಕೇ ಸ್ಥಾನಗಳ 'ಮೀಸಲಾತಿ' ಎನ್ನುತ್ತಾರೆ. ಅದರಂತೆ ಒಟ್ಟು ಸ್ಥಾನಗಳಲ್ಲಿ ಅರ್ಧದಷ್ಟು ಸ್ಥಾನಗಳು ಮಹಿಳೆಯರಿಗಾಗಿ ಕಾಯ್ದಿರಿಸಲಾಗುತ್ತದೆ.

ಸಮಾಜದಲ್ಲಿಯ ವಂಚಿತ ಘಟಕಗಳಿಗೆ ಮತ್ತು ಮಹಿಳೆಯರಿಗೆ ಊರಿನ ಇಲ್ಲವೆ ನಗರದ ಆಡಳಿತದಲ್ಲಿ ಭಾಗವಹಿಸಲು ಬರಬೇಕು, ನಿರ್ಣಯಗಳಲ್ಲಿ ಸಹಭಾಗಿಯಾಗಲು ಅವಕಾಶವಿರಬೇಕು. ಅದಕ್ಕಾಗಿ ಮೀಸಲಾತಿ ಅವಶ್ಯಕವಾಗಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೆ ಸಹಭಾಗಿಯಾಗುವ ಅವಕಾಶವಿರುವುದು ಅವಶ್ಯಕವಾಗಿರುತ್ತದೆ.

## ಅಭ್ಯಾಸ

**೧. ಕೊಟ್ಟ ಪರ್ಯಾಯಗಳಿಂದ ಯೋಗ್ಯ ಪರ್ಯಾಯವನ್ನು ಗುರುತಿಸಿರಿ ಮತ್ತು ಬರೆಯಿರಿ.**

(೧) ಮಹಾರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಮಹಾನಗರ ಪಾಲಿಕೆಯನ್ನು ಸ್ಥಾಪನೆ ಮಾಡಲಾಯಿತು. ಆ ನಗರದ ಹೆಸರು ..........

(ನಾಗಪೂರ, ಮುಂಬಯಿ, ಲಾತೂರ)

(೨) ನಗರದಲ್ಲಿ ರೂಪಾಂತರವಾಗುವ ಸ್ಥಿತಿಯಲ್ಲಿ ಯಾವ ಊರುಗಳು ಇರುತ್ತವೆಯೋ ಅಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತದೆ .............

(ನಗರ ಪರಿಷತ್ತು, ಮಹಾನಗರಪಾಲಿಕೆ, ನಗರ ಪಂಚಾಯತಿ)

(೩) ನಗರ ಪರಿಷತ್ತಿನ ಆರ್ಥಿಕ ವ್ಯವಹಾರಗಳ ಮೇಲೆ ಲಕ್ಷ್ಯವಿಡುತ್ತಾನೆ.

(ಮುಖ್ಯಾಧಿಕಾರಿ, ಕಾರ್ಯಕಾರಿ ಅಧಿಕಾರಿ, ಆಯುಕ್ತ)

**೨. ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(೧) ನಗರಗಳಲ್ಲಿ ಯಾವ ಯಾವ ಸಮಸ್ಯೆಗಳು ಕಂಡುಬರುತ್ತವೆ?

(೨) ಮಹಾನಗರಪಾಲಿಕೆಯ ವಿವಿಧ ಸಮಿತಿಗಳ ಹೆಸರು ಬರೆಯಿರಿ.

**೩. ಕೆಳಗಿನ ಅಂಶಗಳ ಆಧಾರದಿಂದ ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ವಿಷಯವಾಗಿ ಮಾಹಿತಿಯನ್ನು ನೀಡುವ ಕೋಷ್ಟಕವನ್ನು ತಯಾರಿಸಿರಿ.**

**೪. ಹೇಳಿ, ನೋಡೋಣ.**

(೧) ನಗರ ಪರಿಷತ್ತಿನ ಆವಶ್ಯಕ ಕಾರ್ಯಗಳಲ್ಲಿ ಯಾವ ಯಾವ ಕಾರ್ಯಗಳ ಸಮಾವೇಶವಾಗುತ್ತದೆ ?

(೨) ನಗರ ಪಂಚಾಯತಿಯ ಯಾವ ಸ್ಥಳದಲ್ಲಿ ಇರುತ್ತದೆ ?


**೫. ನಿಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ನಗರ ಪರಿಷತ್ತು, ನಗರ ಪಂಚಾಯತಿ ಮತ್ತು ಮಹಾನಗರಪಾಲಿಕೆಗಳು ಆಡಳಿತ ನಡೆಸುತ್ತವೆ ? ಅವುಗಳ ಹೆಸರುಗಳ ಪಟ್ಟಿ ತಯಾರಿಸಿರಿ.**

**ಉಪಕ್ರಮ:**

(೧) ಸಾಂಕ್ರಾಮಿಕ ರೋಗಗಳ ಪ್ರಸಾರವಾಗಬಾರದೆಂದು ಆರೋಗ್ಯ ಜಾಗೃತಿಯನ್ನು ಕುರಿತು ಘೋಷಣೆಗಳನ್ನು ತಯಾರಿಸಿರಿ ಮತ್ತು ಅವುಗಳನ್ನು ವರ್ಗದಲ್ಲಿ ಅಂಟಿಸಿರಿ.

(೨) ನಿಮ್ಮ ಪರಿಸರದಲ್ಲಿಯ ಮಹಾನಗರಪಾಲಿಕೆಗೆ ಭೇಟಿ ನೀಡಿರಿ. ಅಲ್ಲಿ ಯಾವ ಹೊಸ ಉಪಕ್ರಮಗಳನ್ನು ಕೈಕೊಳ್ಳಲಾಗಿದೆ ಯೆಂಬುದರ ಮಾಹಿತಿಯನ್ನು ಪಡೆಯಿರಿ. ಅದರಲ್ಲಿ ನೀವು ಯಾವ ಕೊಡುಗೆಯನ್ನು ನೀಡಬಹುದು ಎಂಬುದರ ಬಗ್ಗೆ ವರ್ಗದಲ್ಲಿ ಚರ್ಚೆ ಮಾಡಿರಿ.

| ಅಂಶಗಳು | ನಗರ ಪಂಚಾಯತಿ | ನಗರ ಪರಿಷತ್ತು | ಮಹಾನಗರಪಾಲಿಕೆ |
|---|---|---|---|
| ಪದಾಧಿಕಾರಿಗಳು | | | |
| ಸದಸ್ಯರ ಸಂಖ್ಯೆ | | | |
| ಅಧಿಕಾರಿಗಳು | | | |



ಆಸ್ಪತ್ರೆ


* * *

# ೫. ಜಿಲ್ಲಾ ಆಡಳಿತ

**೫.೧ ಜಿಲ್ಲಾಧಿಕಾರಿ**

**೫.೨ ಜಿಲ್ಲಾ ಪೊಲೀಸ ಪ್ರಮುಖ**

**೫.೩ ಜಿಲ್ಲಾ ನ್ಯಾಯಾಲಯ**




ಇಂಥ ಪ್ರಶ್ನೆಗಳು ನಿಮಗೂ ಬಿದ್ದಿರಬಹುದಲ್ಲವೇ? ಜಿಲ್ಲಾ ಪರಿಷತ್ತು ಪಂಚಾಯತಿ ರಾಜ್ಯ ವ್ಯವಸ್ಥೆಯ ಅಂದರೆ ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಒಂದು ಘಟನವಾಗಿದೆ. ಆದರೆ ನದಮ್ಮ ಮಹಾರಾಷ್ಟ್ರದಲ್ಲಿ ಜಿಲ್ಲೆಯ ಆಡಳಿತವನ್ನು ಜಿಲ್ಲಾ ಪರಿಷತ್ತಿನ ಜೊತೆಗೆ ಜಿಲ್ಲಾಧಿಕಾರಿಗಳ ಕಡೆಯಿಂದಲೂ ನಡೆಸಲಾಗುತ್ತದೆ. ಕೇಂದ್ರಸರಕಾರ ಮತ್ತು ರಾಜ್ಯ ಸರಕಾರಗಳು ಈ ಆಡಳಿತದಲ್ಲಿ ಭಾಗವಹಿಸುತ್ತವೆ.

## ೫.೧ ಜಿಲ್ಲಾಧಿಕಾರಿಗಳು

ಜಿಲ್ಲಾಧಿಕಾರಿಯು ಜಿಲ್ಲೆಯ ಆಡಳಿತದ ಪ್ರಮುಖನಾಗಿರುತ್ತಾನೆ. ಅವನ ನೇಮಕವನ್ನು ರಾಜ್ಯ ಸರಕಾರವು ಮಾಡುತ್ತದೆ. ಜಿಲ್ಲಾಧಿಕಾರಿಯು ಭೂಕಂದಾಯವನ್ನು ಸಂಗ್ರಹಿಸುವುದರಿಂದ ಹಿಡಿದು ಜಿಲ್ಲೆಯಲ್ಲಿ ಕಾಯದೆ ಮತ್ತು ಸುವ್ಯವಸ್ಥೆಯನ್ನು ರಕ್ಷಿಸುವುದರ ತನಕ ಅನೇಕ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಕೆಳಗಿನ ಕೋಷ್ಟಕದ ಆಧಾರದಿಂದ ನಾವು ಅದನ್ನು ತಿಳಿದುಕೊಳ್ಳೋಣ.

| ಜಿಲ್ಲಾಧಿಕಾರಿ ↓ | | | |
|---|---|---|---|
| **ಕೃಷಿ** | **ಕಾಯದ ಮತ್ತು ಸುವ್ಯವಸ್ಥೆ** | **ಚುನಾವಣಾ ಅಧಿಕಾರಿ** | **ಆಪತ್ತು ವ್ಯವಸ್ಥಾಪನೆ** |
| • ಭೂಕಂದಾಯ ಸಂಗ್ರಹಿಸುವುದು. | • ಜಿಲ್ಲೆಯಲ್ಲಿ ಶಾಂತತೆಯನ್ನು ಕಾಪಾಡುವುದು. | • ಯೋಗ್ಯ ರೀತಿಯಿಂದ ಚುನಾವಣೆಗಳನ್ನು ನಡೆಸುವುದು. | • ಆಪತ್ತುಗಳ ಕಾಲದಲ್ಲಿ ಶೀಘ್ರ ನಿರ್ಣಯ ಕೈಕೊಂಡು ಹಾನಿಯನ್ನು ತಡೆಯುವುದು. |
| • ಕೃಷಿಗೆ ಸಂಬಂಧಿಸಿದ ಕಾಯ್ದೆಗಳನ್ನು ಜಾರಿಗೆ ತರುವುದು. | • ಸಾಮಾಜಿಕ ನೆಮ್ಮದಿಯನ್ನು ಕಾಪಾಡುವುದು. | • ಚುನಾವಣೆಯ ಸಂದರ್ಭದಲ್ಲಿ ಅವಶ್ಯಕ ನಿರ್ಣಯ ತೆಗೆದುಕೊಳ್ಳುವುದು. | • ಆಪತ್ತು ವ್ಯವಸ್ಥಾಪನೆಯ ಅಧಿಕಾರಿ ವರ್ಗಕ್ಕೆ ಆದೇಶ ನೀಡುವುದು. |
| • ಬರಗಾಲ ಹಾಗೂ ಮೇವಿನ ಕೊರತೆಗಳ ಮೇಲೆ ಉಪಾಯ ಯೋಜನೆ ಮಾಡುವುದು. | • ಸಭಾ ನಿರ್ಬಂಧ ಸಂಚಾರ ನಿರ್ಬಂಧ ಜಾರಿಗೊಳಿಸುವುದು. | • ಸುಧಾರಿತ ಮತದಾರರ ಪಟ್ಟಿಗಳನ್ನು ತಯಾರಿಸುವುದು. | • ಆಪತ್ತಿನಲ್ಲಿ ಸಿಲುಕಿದವರ ಪುನರ್ವಸತಿ ಮಾಡುವುದು. |

**ನಿಮಗೆ ಗೊತ್ತಿದೆಯೇ ?**


**ಸಾಮಾಜಿಕ ನೆಮ್ಮದಿಯನ್ನು ಕಾಪಾಡುವುದು ಏಕೆ ಮಹತ್ವದ್ದಾಗಿರುತ್ತದೆ ?**

ಸಮಾಜದಲ್ಲಿರುವ ಭಿನ್ನಾಭಿಪ್ರಾಯಗಳು, ತಂಟೆಗಳು ಹಾಗೂ ಸಂಘರ್ಷಗಳ ನಿವಾರಣೆ ಶಾಂತತೆಯ ಮಾರ್ಗದಿಂದ ಆಗಬೇಕು. ಆದರೆ ಕೆಲವೊಮ್ಮೆ ಹೀಗೆ ಆಗದೇ ಅಶಾಂತತೆ ನಿರ್ಮಾಣವಾಗುತ್ತದೆ. ಅದರಿಂದ ಹಿಂಸಾತ್ಮಕ ಘಟಕನೆಗಳುಸಂಭವಿಸಿದರೆಸಮಾಜದನೆಮ್ಮದಿಕೆಟ್ಟುಹೋಗುತ್ತದೆ. ಅದರಿಂದಾಗಿನಮ್ಮಪ್ರಗತಿಗೆಬಾಧೆಯುಂಟಾಗುತ್ತದೆ. ಸಾರ್ವಜನಿಕ ಆಸ್ತಿಗೆ ಹಾನಿ ತಗಲುತ್ತದೆ.ಹೀಗೆ ಆಗಬಾರದೆಂದು ಜಿಲ್ಲಾಧಿಕಾರಿಯು ಪ್ರಯತ್ನ ಮಾಡುತ್ತಾನೆ. ಆದರೆ ನಾಗರಿಕರು ಕೂಡ ಸಾಮಾಜಿಕ ನೆಮ್ಮದಿಯನ್ನು ಕಾಪಾಡುವ ಸಲುವಾಗಿ ಪ್ರಯತ್ನಮಾಡಬೇಕು.

**ತಹಸಿಲ್ದಾರ:** ಪ್ರತಿಯೊಂದು ತಾಲೂಕಿಗೆ ಒಬ್ಬ ತಹಸೀಲ್ದಾರನು ಇರುತ್ತಾನೆ. ತಹಸೀಲ್ದಾರನು ತಾಲೂಕಾ ಡಂಡಾಧಿಕಾರಿಯಾದುದರಿಂದ ತಂಟೆಗಳಲ್ಲಿ ತೀರ್ಪುಗಳನ್ನು ನೀಡುತ್ತಾನೆ. ತಾಲೂಕಿನಲ್ಲಿ ಶಾಂತತೆ ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ತಹಸೀಲ್ದಾರನ ದಾಗಿರುತ್ತದೆ.

### ೫.೨ ಜಿಲ್ಲಾ ಪೋಲೀಸ ಪ್ರಮುಖ

ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಜಿಲ್ಲೆಯ ಸ್ಥಳದಲ್ಲಿ ಒಬ್ಬ ಪೋಲೀಸ ಅಧೀಕ್ಷಕನು ಇರುತ್ತಾನೆ. ಅವನು ಆ ಜಿಲ್ಲೆಯ ಪ್ರಮುಖ ಪೋಲೀಸ ಅಧಿಕಾರಿಯಾಗಿರುತ್ತಾನೆ. ಜಿಲ್ಲೆಯಲ್ಲಿ ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಜಿಲ್ಲಾ ಪೋಲೀಸ ಪ್ರಮುಖನು ಜಿಲ್ಲಾಧಿಕಾರಿಗೆ ಸಹಾಯ ಮಾಡುತ್ತಾನೆ. ನಗರದಲ್ಲಿ ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಪೋಲೀಸ ಆಯುಕ್ತರ ಮೇಲಿರುತ್ತವೆ.



**ಪೋಲೀಸ ಅಧೀಕ್ಷಕನು ಪೋಲೀಸ ದಳದ ನಿರೀಕ್ಷಣೆ ಮಾಡುವಾಗ**

**ಜಿಲ್ಲಾ ಆಡಳಿತ**

- ಜಿಲ್ಲಾಧಿಕಾರಿ
  - ಉಪಜಿಲ್ಲಾಧಿಕಾರಿ
    - ತಹಸೀಲ್ದಾರ
      - ತಲಾಟಿ
        - ಪೋಲೀಸ ಪಾಟೀಲ
- ಪೋಲೀಸ ಅಧೀಕ್ಷಕ
  - ಪೋಲೀಸ ಉಪಅಧೀಕ್ಷಕ
    - ಪೋಲೀಸ ನಿರೀಕ್ಷಕ
      - ಸಹಾಯಕ ಪೋಲೀಸ ನಿರೀಕ್ಷಕ

### ೫.೩ ಜಿಲ್ಲಾ ನ್ಯಾಯಾಲಯ


ತಮ್ಮ ಅಧಿಕಾರ ಕ್ಷೇತ್ರದಲ್ಲಿಯ ತಂಟೆಗಳನ್ನು ಬಿಡಿಸುವುದು, ತಂಟೆಯಲ್ಲಿ ತೀರ್ಪು ನೀಡುವುದು ಹಾಗೂ ಸಂಘರ್ಷವನ್ನು ಯೋಗ್ಯ ಸಮಯದಲ್ಲಿಯೇ ನಿವಾರಿಸುವುದು ಇತ್ಯಾದಿ ಕಾರ್ಯಗಳನ್ನು ಜಿಲ್ಲಾ ಮಟ್ಟದಲ್ಲಿಯ ನ್ಯಾಯಾಲಯಗಳು ಮಾಡಬೇಕಾಗುತ್ತದೆ.

ಭಾರತದ ಸಂವಿಧಾನವು ಸ್ವತಂತ್ರ ನ್ಯಾಯ ವ್ಯವಸ್ಥೆಯ ನಿರ್ಮಿತಿ ಮಾಡಿದೆ. ನ್ಯಾಯ ವ್ಯವಸ್ಥೆಯ ಅಗ್ರಭಾಗದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವಿದೆ. ಅದರ ಕೆಳಗೆ ಉಚ್ಚನ್ಯಾಯಯಾಲಯಗಳಿರುತ್ತವೆ. ಹಾಗೂ ಅದರ ಕೆಳಗೆ ಕನಿಷ್ಟ ನ್ಯಾಯಾಲಯಗಳಿರುತ್ತವೆ. ಅವುಗಳಲ್ಲಿ ಜಿಲ್ಲಾ ನ್ಯಾಯಾಲಯ, ತಾಲೂಕಾ ನ್ಯಾಯಾಲಯ ಹಾಗೂ ಕಂದಾಯ ನ್ಯಾಯಾಲಯಗಳ ಸಮಾವೇಶವಾಗುತ್ತದೆ.



**ನ್ಯಾಯಾಲಯದ ಕಾರ್ಯಕಲಾಪಗಳು**

ಜಿಲ್ಲಾ ಮಟ್ಟದಲ್ಲಿ ಇರುವ ನ್ಯಾಯಾಲಯಗಳಿಗೆ 'ಜಿಲ್ಲಾ ನ್ಯಾಯಾಲಯ' ಎನ್ನುತ್ತಾರೆ. ಅದರಲ್ಲಿ ಒಬ್ಬ ಮುಖ್ಯ ಜಿಲ್ಲಾ ನ್ಯಾಯಾಧೀಶರು ಹಾಗೂ ಇತರ ಕೆಲವು ನ್ಯಾಯಾಧೀಶರು ಇರುತ್ತಾರೆ. ಜಿಲ್ಲೆಯಲ್ಲಿಯ ಬೇರೆ ಬೇರೆ ಮೊಕದ್ದಮೆಗಳ ವಿಚಾರಣೆ ಹಾಗೂ ನಂತರ ಅಂತಿಮ ತೀರ್ಪು ನೀಡುವ ಕಾರ್ಯವನ್ನು ಜಿಲ್ಲಾ ನ್ಯಾಯಾಲಯದಲ್ಲಿಯ ನ್ಯಾಯಾಧೀಶರು ಮಾಡುತ್ತಾರೆ. ತಾಲೂಕಾ ನ್ಯಾಯಾಲಯವು ನೀಡಿದ ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಮಾಡಲು ಬರುತ್ತದೆ.




### ಆಪತ್ತು ವ್ಯವಸ್ಥಾಪನೆ :

ನಮಗೆ ಬೇರೆ ಬೇರೆ ಆಪತ್ತುಗಳನ್ನು ಎದುರಿಸಬೇಕಾಗುತ್ತದೆ. ಮಹಾಪೂರ, ಬೆಂಕಿ, ಚಂಡಮಾರುತ, ಭಯಂಕರ ಮಳೆ, ಆಣೆಕಲ್ಲು ಸುರಿಯುವಿಕೆ, ಭೂಕಂಪ, ಭೂಖುಸಿತ ಇತ್ಯಾದಿ ನೈಸರ್ಗಿಕ ಆಪತ್ತುಗಳ ಜೊತೆ ದಂಗೆ, ಆಣೆಕಟ್ಟುಯ ಒಡೆಯುವುದು, ಬಾಂಬ್ ಸ್ಫೋಟ, ಸಾಂಕ್ರಾಮಿಕ ರೋಗಗಳು ಮುಂತಾದ ಆಪತ್ತುಗಳನ್ನು ಎದುರಿಸಬೇಕಾಗುತ್ತದೆ. ಇಂಥ ಆಪತ್ತುಗಳಿಂದಾಗಿ ದೊಡ್ಡ ಪ್ರಮಾಣದಲ್ಲಿ ಜನರು ಸ್ಥಳಾಂತರ ಮಾಡಬೇಕಾಗುತ್ತದೆ. ಅಲ್ಲದೆ ಜೀವಿತ ಮತ್ತು ವಿತ್ತಹಾನಿಯಾಗುತ್ತದೆ. ಆದರಿಂದಾಗಿ ಪುನರ್ವಸತಿಯ ಪ್ರಶ್ನೆ ಮಹತ್ವದ್ದಾಗುತ್ತದೆ. ಆಪತ್ತುಗಳನ್ನು ಸುವ್ಯವಸ್ಥಿತ ಹಾಗೂ ಶಾಸ್ತ್ರೀಯ ಪದ್ಧತಿಯಿಂದ ಎದುರಿಸುವ ಪದ್ಧತಿಗೆ 'ಆಪತ್ತು ವ್ಯವಸ್ಥಾಪನೆ', ಎನ್ನುತ್ತಾರೆ. ಆಪತ್ತು ವ್ಯವಸ್ಥಾಪನೆಯಲ್ಲಿ ಸಂಪೂರ್ಣ ಜಿಲ್ಲಾ ಆಡಳಿತವು ತೊಡಗಿರುತ್ತದೆ. ತಂತ್ರಜ್ಞಾನದಲ್ಲಿಯ ಪ್ರಗತಿಯಿಂದಾಗಿ ಅನೇಕ ಆಪತ್ತುಗಳ ಪೂರ್ವ ಸೂಚನೆ ದೊರೆಯಬಲ್ಲದು. ಉದಾಹರ್ಣೆಗಾಗಿ, ಮಹಾಪೂರದ, ಚಂಡಮಾರುತದ ಪೂರ್ವ ಸೂಚನೆಯನ್ನು ನೀಡುವ ವ್ಯವಸ್ಥೆ ವಿಕಸಿತವಾಗಿದೆ. ಈ ವ್ಯವಸ್ಥೆಯಿಂದ ಗಂಡಾಂತರದ ಸೂಚನೆ ದೊರಯುತ್ತದೆ.



**ಇದನ್ನು ಯಾವಾಗಲೂ ನೆನಪಿನಲ್ಲಿಡಿರಿ.**

ಆಪತ್ತಿಯ ಕಾಲದಲ್ಲಿ ಜಾಗರೂಕರಾಗಿರುವುದು ಅವಶ್ಯಕವಾಗಿದೆ. ಆಪತ್ತನ್ನು ಎದುರಿಸುವ ಸಲುವಾಗಿ ವ್ಯಕ್ತಿಗಳ ಮತ್ತು ವಿವಿಧ ವ್ಯವಸ್ಥೆಗಳ ನೆರವಿನ ಅವಶ್ಯಕತೆ ಇರುತ್ತದೆ. ಅವರನ್ನು ತ್ವರಿತವಾಗಿ ಸಂಪರ್ಕಿಸಲು ಬರಬೇಕೆನ್ನುವ ಸಲುವಾಗಿ ನಮ್ಮ ಮನೆಯಲ್ಲಿ ಎಲ್ಲರಿಗೂ ಕಾಣಿಸುವ ಸ್ಥಳದಲ್ಲಿ ಆಸ್ಪತ್ರೆ, ಪೋಲೀಸ, ಅಗ್ನಿಶಾಮಕ ದಳ, ಬ್ಲಡ್ ಬ್ಯಾಂಕ್ ಇತ್ಯಾದಿಗಳ ದೂರಧ್ವನಿ ಕ್ರಮಾಂಕವನ್ನು ಬರೆದಿಡಬೇಕು. ನಿಮ್ಮ ಗೆಳೆಯರಿಗೂ ಹಾಗೆ ಮಾಡುವಂತೆ ಹೇಳಬೇಕು.



**ನಿಮಗೆ ಗೊತ್ತಿದೆಯೇ ?**

ಮಹಾರಾಷ್ಟ್ರದಲ್ಲಿ ಅನೇಕ ಅಧಿಕಾರಿಗಳು ಆಡಳಿತದಲ್ಲಿ ಸುಧಾರಣೆಗಳನ್ನು ಮಾಡುವ ಸಲುವಾಗಿ ಪ್ರಯೋಗಗಳನ್ನು ಮಾಡಿದರು. ಅವರ ಈ ಪ್ರಯೋಗಗಳಿಂದಾಗಿ ನಾಗರಿಕರಿಗೆ ದೊರೆಯುವ ಸೇವೆಯಲ್ಲಿ ಸುಧಾರಣೆಗಳಾದವು. ಇದರ ಪರಿಣಾಮವಾಗಿ ಆಡಳಿತದ ಬಗ್ಗೆ ನಾಗರಿಕರ ಅಭಿಪ್ರಾಯವು ಒಳ್ಳೆಯದಾಗಲು ಸಹಾಯಕವಾಯಿತು. ಆದರಿಂದಾಗಿ ಆಡಳಿತದ ವಿಷಯವಾಗಿ ನಾಗರಿಕರ ಪ್ರತಿಕ್ರಿಯೆ ಹಾಗೂ ಸರಕಾರದಲ್ಲಿಯ ಅವರ ಸಹಭಾಗ ಬೆಳೆಯಿತು.

**(ಅ) ಲಖೀನಾ ಪ್ಯಾಟರ್ನ್:** ಆಡಳಿತವು ದಕ್ಷವಾಗಬೇಕು. ನಾಗರಿಕರಿಗೆ ಉತ್ತಮ ದರ್ಜೆಯ ಸಾರ್ವಜನಿಕ ಸೇವೆ ದೊರೆಯಬೇಕು ಎಂಬ ಉದ್ದೇಶದಿಂದ ಅಹಮದನಗರ ಜಿಲ್ಲೆಯ ಆಗಿನ ಜಿಲ್ಲಾಧಿಕಾರಿಗಳಾದ ಶ್ರೀ ಅನಿಲಕುಮಾರ ಲಖೀನಾ ಇವರು ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು. ಅವು 'ಲಖೀನಾ ಪ್ಯಾಟರ್ನ್' ಎಂದು ಗುರುತಿಸಲಾಗುತ್ತವೆ. ಕಾರ್ಯ ಪದ್ಧತಿಯ ಪ್ರಮಾಣೀಕರಣ, ನಿಯಮಗಳನ್ನು ಸುಲಭ ಭಾಷೆಯಲ್ಲಿ ಜನರಿಗೆ ತಿಳಿಯುವಂತೆ ಸಾದರಪಡಿಸುವುದು ಇತ್ಯಾದಿ ಆಡಳಿತಾತ್ಮಕ ಬದಲಾವಣೆಗಳನ್ನು ಮಾಡಲಾಯಿತು. ಜನರ ಕೆಲಸಗಳು ಒಂದೇ ಛತ್ರದ ಕೆಳಗೆ ಆಗಬೇಕೆಂದು ಅವರು ಏಕ-ಗವಾಕ್ಷಿ ಯೋಜನೆಯನ್ನು ಆರಂಭಿಸಿದರು.

**(ಬ) ದಳವಿ ಪ್ಯಾಟರ್ನ್ :** ಪುಣೆ ಜಿಲ್ಲೆಯ ಆಗಿನ ಜಿಲ್ಲಾಧಿಕಾರಿಯಾದ ಶ್ರೀ ಚಂದ್ರಕಾಂತ ದಳವಿಯವರು ಮಾಡಿದ ಆಡಳಿತಾತ್ಮಕ ಸುಧಾರಣೆಗಳು 'ದಳವಿ ಪ್ಯಾಟರ್ನ್' ಎಂದು ಗುರುತಿಸಲಾಗುತ್ತವೆ. ಟೇಬಲ್ಲಿನ ಮೇಲೆ

ಕಾಗದಪತ್ರಗಳ ಹಾಗೂ ಫೈಲುಗಳ ರಾಶಿಯನ್ನು ಮಾಡಿ ಇಡುವುದಕ್ಕಿಂತ ಅದೇ ದಿನ ಅವುಗಳ ಬಗ್ಗೆ ನಿರ್ಣಯ ಕೈಕೊಳ್ಳುವುದು, ಯಾವುದೇ ನಿರ್ಣಯವನ್ನು ಶೀಘ್ರಗತಿಯಿಂದ ತೆಗೆದುಕೊಳ್ಳುವುದು, ಈ ಸುಧಾರಣೆಗಳ ಉದ್ದೇಶವಾಗಿತ್ತು. ಈ ಪ್ಯಾಟರ್ನ್ ಝೀರೋ ಪೆಂಡನ್ಸಿ (ಶೂನ್ಯ ವಿಳಂಬ) ಎಂದು ಗುರುತಿಸಲಾಗುತ್ತದೆ. ನಿರ್ಣಯದಲ್ಲಾಗುವ ವಿಳಂಬವನ್ನು ಇದರಿಂದ ತಪ್ಪಿಸಲು ಸಾಧ್ಯವಾಯಿತು. ಆಡಳಿತವು ಚುರುಕಾಗಲು ಅದು ಸಹಾಯಕವಾಯಿತು.

**(ಕ) ಚಹಾಂದೆ ಪ್ಯಾಟರ್ನ್:** ನಾಶಿಕದ ಆಗಿನ ವಿಭಾಗೀಯ ಆಯುಕ್ತರಾದ ಡಾ. ಸಂಜಯ ಚಹಾಂದೆ ಯವರು ಮಾಡಿದ ಆಡಳಿತಾತ್ಮಕ ಸುಧಾರಣೆಗಳನ್ನು'ಚಹಾಂದೆ ಪ್ಯಾಟರ್ನ್' ಎಂದು ಗುರುತಿಸಲಾಗುತ್ತದೆ. ಆಡಳಿತ ಮತ್ತು ಸಾಮಾನ್ಯ ಜನತೆಗಳಲ್ಲಿಯ ಅಂತರವು ಕಡಿಮೆಯಾಗಬೇಕು, ಜನರ ವಿಷಯವಾಗಿ ಇರುವ ಆಡಳಿತದ ಜವಾಬ್ದಾರಿ ಹೆಚ್ಚಬೇಕು, ಜನರ ಸಹಭಾಗದಿಂದ ಅಭಿವೃದ್ಧಿ ಕಾರ್ಯಗಳ ಪ್ರಾಧಾನ್ಯ ನಿರ್ಧರಿಸಬೇಕು ಎಂಬುದರ ಸಲುವಾಗಿ ಅವರು 'ಗ್ರಾಮಸ್ಥ ದಿನ' ಯೋಜನೆಯನ್ನು ಹಮ್ಮಿಕೊಂಡರು. ಆಡಳಿತಾಧಿಕಾರಿಗಳು ಮತ್ತು ನೌಕರವರ್ಗದವರು ಒಂದು ದಿನ ಊರೊಳಗೆ ಹೋಗಿ ಜನರೊಡನೆ ನೇರ ಸಂವಾದ ಸಾಧಿಸಬೇಕು ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬುದರ ಸಲುವಾಗಿ ಗ್ರಾಮಸ್ಥ ದಿನವನ್ನು ಏರ್ಪಡಿಸಲಾಗುತ್ತದೆ.



## ಅಭ್ಯಾಸ

**೧. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(೧) ಜಿಲ್ಲೆಯ ಆಡಳಿತದ ಪ್ರಮುಖನು ಯಾರು ?
(೨) ತಹಸೀಲ್ದಾರನ ಮೇಲೆ ಯಾವ ಜವಾಬ್ದಾರಿ ಇರುತ್ತದೆ ?
(೩) ನ್ಯಾಯ ವ್ಯವಸ್ಥೆಯ ಅಗ್ರ ಭಾಗದಲ್ಲಿ ಯಾವ ನ್ಯಾಯಾಲಯವಿರುತ್ತದೆ ?
(೪) ಯಾವ ಯಾವ ಆಪತ್ತುಗಳ ಪೂರ್ವ ಸೂಚನೆ ನಮಗೆ ದೊರೆಯಬಲ್ಲದು ?

**೨. ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| (ಅ) ಜಿಲ್ಲಾಧಿಕಾರಿ | (೧) ತಾಲೂಕಾ ದಂಡಾಧಿಕಾರಿ |
| (ಆ) ಜಿಲ್ಲಾ ನ್ಯಾಯಾಲಯ | (೨) ಕಾಯದೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು |
| (ಇ) ತಹಸೀಲ್ದಾರ | (೩) ತಂಟೆಗಳನ್ನು ಬಿಡಿಸುವುದು |

**೩. ಕೆಳಗಿನ ವಿಷಯಗಳ ಮೇಲೆ ಚರ್ಚೆ ಮಾಡಿರಿ.**

(೧) ಆಪತ್ತು ವ್ಯವಸ್ಥಾಪನೆ
(೨) ಜಿಲ್ಲಾಧಿಕಾರಿಗಳ ಕಾರ್ಯಗಳು

**೪. ನಿಮಗೆ ಕೆಳಗಿನವರಲ್ಲಿ ಯಾರು ಆಗಬೇಕೆನಿಸುತ್ತದೆ ಮತ್ತು ಏಕೆ ಎಂಬುದನ್ನು ಹೇಳಿರಿ.**

(೧) ಜಿಲ್ಲಾಧಿಕಾರಿ
(೨) ಜಿಲ್ಲಾ ಪೋಲೀಸ ಪ್ರಮುಖ
(೩) ನ್ಯಾಯಾಧೀಶ

**ಉಪಕ್ರಮ :**


(೧) ನಿಮ್ಮ ಸಮೀಪದ ಪೋಲೀಸ ಠಾಣೆಗೆ ಭೇಟಿ ನೀಡಿ ಅಲ್ಲಿಯ ಕಾರ್ಯಕಲಾಪಗಳ ಬಗ್ಗೆ ಮಾಹಿತಿ ಪಡೆಯಿರಿ.
(೨) ವಿವಿಧ ಆಪತ್ತುಗಳು, ಅದರ ಬಗ್ಗೆ ವಹಿಸುವ ದಕ್ಷತೆ ಮತ್ತು ಮಹತ್ವದ ದೂರಧ್ವನಿ ಕ್ರಮಾಂಕ ಇವುಗಳ ಕೋಷ್ಟಕವನ್ನು ತಯಾರಿಸಿರಿ. ವರ್ಗದ ಕೋಣೆಯಲ್ಲಿ ಎಲ್ಲರಿಗೂ ಕಾಣುವಂತೆ ಅಂಟಿಸಿರಿ.
(೩) ಹೊಸ ವರ್ಷದ ನಿಮಿತ್ತ ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ ಪ್ರಮುಖ ಹಾಗೂ ಜಿಲ್ಲಾ ಮುಖ್ಯ ನ್ಯಾಯಾಧೀಶರಿಗೆ ಶುಭಾಶಯ ಪತ್ರ ಕಳಿಸಿರಿ.


* * *


BVLUHG

# छत्रपती शिवाजी महाराज स्मृतिग्रंथ

- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.







- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಗ್ರಾಮಸಭೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

इतिहास व नागरिकशास्त्र इ. ६ वी (कन्नड माध्यम)

₹ 37.00